ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಪಶ್ಚಿಮ ಘಟ್ಟ ಪ್ರದೇಶದ ಪುಟ್ಟ
ಊರು ಬಾಳೆ ಸುತ್ತಲಿನ ಕಾಡು-
ಮೇಡು ಸುತ್ತಾಡಿ ಕಪ್ಪೆಗಳ ಜೀವನ
ಕ್ರಮ ಅಭ್ಯಸಿಸಿದ ಛಾಯಾಗ್ರಾಹಕರ
ಪುಟ್ಟ-ಪುಟ್ಟ ಟಿಪ್ಪಣಿಗಳ ಗುಚ್ಛ
'ಮಂಡೂಕೋಪನಿಷತ್'

'ನಳಿನ್ ನೇತೃತ್ವದಲ್ಲಿ ಮುಂದಿನ ಚುನಾವಣೆ' 4

ಗಡಿ ಸಂಘರ್ಷ: ಅಸ್ಸಾಂ, ಮಿಜೋರಾಂ ನಡುವೆ ಸಮನ್ಸ್ ಮೇಲಾಟ

ಎನ್‌ಕೌಂಟರ್‌ಗೆ ಉಗ್ರ ಬಲಿ 7

ಅಸ್ಸಾಂ ಮುಖ್ಯಮಂತ್ರಿ ವಿರುದ್ಧ ಪ್ರಕರಣ 7

ಪಶ್ಚಿಮ ಘಟ್ಟದ ಹಲವು ತಾಲ್ಲೂಕುಗಳಲ್ಲಿ ಭೂಕುಸಿತ: ಆತಂಕದಲ್ಲಿ ಜೀವನ

ಧರೆ ಕುಸಿದು ತಲ್ಲಣಿಸಿದ ಬದುಕು

• ಸದಾಶಿವ ಎಂ.ಎಸ್

ಕಾರವಾರ: ಕಣ್ಣು ಹಾಯಿಸಿದಷ್ಟೂ ದೂರ ಬೆಟ್ಟಗಳ ಸಾಲಿನಲ್ಲಿ ಕಾಣುವ ಹಚ್ಚ ಹಸಿರ ವನರಾಶಿ. ದೂರದಲ್ಲಿ ಕಾಳಿ ನದಿ ನೀರಿನ ಓಟವನ್ನು ತಡೆಯಲು ಅಡ್ಡಲಾಗಿ ನಿಂತಿರುವ ಕೊಡಸಳ್ಳಿ ಜಲಾಶಯ. ಇಂಥ ಪ್ರಕೃತಿ ಸೌಂದರ್ಯವನ್ನು ಸವಿಯಲು ಕಳಚೆಯಲ್ಲಿ ಈಗ ಯಾರೂ ಇಲ್ಲ. ಈ ಪುಟ್ಟ ಹಳ್ಳಿ ನಾಗರಿಕ ಪ್ರಪಂಚದ ಸಂಪರ್ಕ ಕಳಚಿಕೊಂಡಿದೆ.

ಜುಲೈ 22 ಮತ್ತು 23ರ ಭೂಕುಸಿತ ಸ್ಥಳೀಯರ ಜೀವನಾಧಾರವನ್ನೇ ಕಸಿದುಕೊಂಡಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ಮಳೆಗಾಲದಲ್ಲೂ ರಸ್ತೆಗಳು ಕುಸಿಯುತ್ತವೆ. ಸಂಚಾರ ಸ್ಥಗಿತವಾಗುತ್ತದೆ. ಕೆಲ-ತಿಂಗಳುಗಳವರೆಗೆ ಜೀವನ ಅಘೋಷಿತ ಲಾಕ್‌ಡೌನ್ ಅನುಭವಿಸುತ್ತದೆ. ಆದರೆ ಈ ವರ್ಷ ಮಾತ್ರ ಊರಿಗೆ ಊರೇ ನೆಲ ಸಮವಾಗಿದೆ. ತೋಟ, ಬೆಟ್ಟ ಎಲ್ಲವೂ ಇಳಿಜಾರಿನಿಂದಾಚೆ ಜಾರಿ ಹೋಗಿವೆ.

ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿ ಗ್ರಾಮ ಪಂಚಾಯಿತಿಯ ಕಳಚೆ, ತಳಕೇಬೈಲ್, ಅರಬೈಲ್, ಹೆಗ್ಗಾರ, ಕೋಮಾರಕುಂಬ್ರಿ, ದಬ್ಬೇಸಾಲ್, ಡಬ್ಗುಳಿ, ತಾರಗಾರ, ಬೀಗಾರ್, ಬಾಗಿನಕಟ್ಟ ಮೊದಲಾದ ಕಡೆ ಸಂಭವಿಸಿದ ಭೂಕುಸಿತ ಇಲ್ಲಿನ ಚಿತ್ರಣವನ್ನೇ ಸಂಪೂರ್ಣ ಬದಲಿಸಿದೆ. ಅತಿಥಿ ಸತ್ಕಾರಕ್ಕೆ ಹೆಸರಾಗಿರುವ ಕಳಚೆ ಪ್ರದೇಶಕ್ಕೆ 'ಪ್ರಜಾವಾಣಿ' ಪ್ರತಿನಿಧಿ ಭೇಟಿ ನೀಡಿದಾಗ ಎಲ್ಲರ ಮುಖಗಳಲ್ಲೂ ದುಗುಡ, ಆತಂಕ ಮನೆಮಾಡಿದ್ದವು.

ಕಳಚೆ ಭಾಗದ 19 ಮಜಿರೆಗಳ ಉದ್ದಕ್ಕೂ ಚಿರೆಕಲ್ಲು ಮಿಶ್ರಿತ ಕೆಂಪು ಮಣ್ಣು ಮತ್ತು ಮ್ಯಾಂಗನೀಸ್ ಅಂಶವಿರುವ ಕಪ್ಪು ಮಣ್ಣಿನ ರಾಡಿಯೇ ದುರಂತವನ್ನು ವಿವರಿಸುತ್ತಿತ್ತು. ಸಣ್ಣದಾಗಿ ಹರಿಯುತ್ತಿದ್ದ ತೊರೆಗಳು ಈಗ ಹತ್ತಾರು ಅಡಿಗಳಷ್ಟು ವಿಶಾಲ ಕಣಿವೆಗಳಾಗಿವೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಒಳನೋಟ

ಭೂಕುಸಿತ: ಆಹ್ವಾನಿಸಿದ ಆಪತ್ತು

ಪ್ರತಿಕ್ರಿಯಿಸಿ: 9606038256
feedback@prajavani.co.in

ಗುಡ್ಡಗಳು ಕುಸಿಯಲು ಅತಿಯಾದ ಮಳೆಯೊಂದೇ ಕಾರಣವಲ್ಲ. ಪ್ರಕೃತಿಯಲ್ಲಿ ಮಾನವನ ಅತಿಯಾದ ಹಸ್ತಕ್ಷೇಪವೂ ಕಾರಣ

ಡಾ.ಜಿ.ವಿ.ಹೆಗಡೆ, ನಿವೃತ್ತ ಹಿರಿಯ ವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ

ಬೇಸಿಗೆಯಲ್ಲೂ ಮಳೆಯಾಗಿದ್ದು ದುರಂತಕ್ಕೆ ಪೂರಕವಾಯಿತೇ ಎಂಬುದನ್ನು ಅಧ್ಯಯನ ಮಾಡಬೇಕಿದೆ. ಏಕಬೆಳೆ ಪದ್ಧತಿಯಿಂದಲೂ ತೊಂದರೆಯಾಗಿರುವ ಸಾಧ್ಯತೆ ಇದೆ

ಶಿವಾನಂದ ಕಳವೆ, ಪರಿಸರ ಬರಹಗಾರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಭೂಕುಸಿತಕ್ಕೆ ಒಳಗಾಗಿ ರಸ್ತೆ ಸಂಪರ್ಕ ಕಡಿದುಕೊಂಡಿರುವ ಯಲ್ಲಾಪುರ ತಾಲ್ಲೂಕಿನ ಕಳಚೆಯಲ್ಲಿ ರೋಗಿಯೊಬ್ಬರನ್ನು ಜೋಳಿಗೆಯಲ್ಲಿ ಹೊತ್ತುಕೊಂಡು ಬರುತ್ತಿರುವುದು ಪ್ರಜಾವಾಣಿ ಚಿತ್ರ: ದಿಲೀಪ ರೇವಣಕರ್

ಪಟ್ಟಿಯಲ್ಲಿ ಏಳು ಜಿಲ್ಲೆಗಳು

ಇಸ್ರೊ ಅಂಗಸಂಸ್ಥೆಯಾದ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್ (ಎನ್.ಆರ್.ಎಸ್.ಸಿ) ಮತ್ತು ಭಾರತೀಯ ಭೂಗರ್ಭ ಸರ್ವೇಕ್ಷಣಾ ಸಂಸ್ಥೆ (ಜಿ.ಎಸ್.ಐ), ಪಶ್ಚಿಮಘಟ್ಟದಲ್ಲಿ ಈವರೆಗೆ ಆಗಿರುವ ಭೂ ಕುಸಿತಗಳ ಸಮಗ್ರ ಅಧ್ಯಯನ ಮಾಡಿವೆ. ಅದನ್ನು ಆಧರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿವೆ. ಕೊಡಗು, ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ ಮತ್ತು ಉತ್ತರ ಕನ್ನಡದಲ್ಲಿ ಭೂ ಕುಸಿತ ಆಗಬಹುದು ಎಂದು ವರದಿಯಲ್ಲಿ ತಿಳಿಸಿವೆ.

ಭವಿಷ್ಯದಲ್ಲಿ ಭೂ ಕುಸಿತ ಆಗಬಹುದಾದ ರಾಜ್ಯದ 23 ತಾಲ್ಲೂಕುಗಳನ್ನು ಗುರುತಿಸಲಾಗಿದೆ. ಉತ್ತರ ಕನ್ನಡದಲ್ಲಿ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಸಿದ್ದಾಪುರ, ಶಿರಸಿ, ಯಲ್ಲಾಪುರ ಮತ್ತು ಜೊಯಿಡಾ ತಾಲ್ಲೂಕುಗಳು ಪಟ್ಟಿಯಲ್ಲಿವೆ. ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅವರ ಅಧ್ಯಕ್ಷತೆಯಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ರಚಿಸಿದ ಭೂಕುಸಿತ ಅಧ್ಯಯನ ಸಮಿತಿಯ ವರದಿಯಲ್ಲಿ ಇದರ ಉಲ್ಲೇಖವಿದೆ.

'ಜಲ ಎಂಜಿನಿಯರಿಂಗ್ ಗೊತ್ತಿರಲಿ'

'ಮಲೆನಾಡಿನಲ್ಲಿ ಮಣ್ಣಿನ ರಚನೆ ಇತರ ಪ್ರದೇಶಗಳಿಗಿಂತ ವಿಭಿನ್ನವಾಗಿದೆ. ಹಾಗಾಗಿ, ಇಲ್ಲಿ ರಸ್ತೆಗಳ ನಿರ್ಮಾಣ ಮಾಡುವವರು ಜಲ ಎಂಜಿನಿಯರಿಂಗ್ ತಿಳಿದಿರಬೇಕು' ಎಂದು ಪರಿಸರ ಬರಹಗಾರ ಶಿವಾನಂದ ಕಳವೆ ಹೇಳುತ್ತಾರೆ.

'ಘಟ್ಟ ಪ್ರದೇಶದಲ್ಲಿ ಮಳೆಗಾಲದ 114ರಿಂದ 118 ದಿನಗಳಲ್ಲಿ 90 ಲಕ್ಷದಿಂದ 1.25 ಕೋಟಿ ಲೀಟರ್ ನೀರು ಬೀಳುತ್ತದೆ. ಅವುಗಳನ್ನು ಮರಗಳೇ ತಡೆದು ನಿಲ್ಲಿಸುತ್ತವೆ. ಆಯಾ ಭಾಗದ ನೀರು ಅಲ್ಲೇ ಇಂಗುತ್ತದೆ. ಆದರೆ, ರಸ್ತೆಗಳ ಬಳಿ ಕಾಂಕ್ರೀಟ್ ಚರಂಡಿಗಳನ್ನು ನಿರ್ಮಿಸಿ ಕಿಲೋಮೀಟರ್‌ಗಟ್ಟಲೆ ದೂರ ನೀರು ಸಾಗಿಸಲಾಗುತ್ತದೆ. ಕಳಚೆಯ ಮೇಲಿನ ಗುಡ್ಡದಲ್ಲಿ ಹೀಗೇ ಆಗಿದೆ. ಈಗ ಅಲ್ಲಿ ನೀರಿನ ಸೆಲೆ ಸುಮಾರು 40 ಅಡಿಗಳಷ್ಟು ಕೆಳಗೆ ಹೋಗಿದೆ' ಎಂದು ಅವರು ವಿಶ್ಲೇಷಿಸುತ್ತಾರೆ.

ಕೋವಿಡ್: ಕಠಿಣ ನಿರ್ಬಂಧ ಹೇರದಿದ್ದರೆ ಕಷ್ಟ– ಕೇಂದ್ರ

ಕರ್ನಾಟಕವೂ ಸೇರಿದಂತೆ 10 ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಕರ್ನಾಟಕವೂ ಸೇರಿದಂತೆ ಹತ್ತು ರಾಜ್ಯಗಳ 46 ಜಿಲ್ಲೆಗಳಲ್ಲಿ ಕೋವಿಡ್-19 ಪಾಸಿಟಿವಿಟಿ ದರ ಶೇ 10ಕ್ಕಿಂತ ಹೆಚ್ಚು ಇದ್ದು, ಜನರ ಓಡಾಟ ಮತ್ತು ಜನಸಂದಣಿ ಸೇರುವುದನ್ನು ತಡೆಯಲು ಆ ಪ್ರದೇಶಗಳಲ್ಲಿ ಕಠಿಣ ನಿರ್ಬಂಧ ಅಗತ್ಯವಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

46 ಜಿಲ್ಲೆಗಳಲ್ಲಿ ಶೇ 10ಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾ-ಗುತ್ತಿದ್ದರೆ, ಇನ್ನೂ 53 ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ 5ರಿಂದ ಶೇ 10ರಷ್ಟಿದೆ. ಹೀಗಾಗಿ ರಾಜ್ಯಗಳು ಕೋವಿಡ್ ಪತ್ತೆ ಪರೀಕ್ಷೆಗಳನ್ನು ಚುರುಕುಗೊಳಿಸಬೇಕು ಎಂದು ಕೇಂದ್ರ ತಿಳಿಸಿದೆ.

ಈ ಹಂತದಲ್ಲಿ ಯಾವುದೇ ನಿರ್ಬಂಧಗಳನ್ನು ವಿಧಿಸದಿದ್ದಲ್ಲಿ, ಪರಿಸ್ಥಿತಿಯು ಗಂಭೀರವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಒತ್ತಿ ಹೇಳಿದೆ. ಕೇರಳ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಒಡಿಶಾ, ಅಸ್ಸಾಂ, ಮಿಜೋರಾಂ, ಮೇಘಾಲಯ, ಆಂಧ್ರ ಪ್ರದೇಶ ಮತ್ತು ಮಣಿಪುರದಲ್ಲಿ ಕೋವಿಡ್ ಪರಿಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಶನಿವಾರ ಉನ್ನತ ಮಟ್ಟದ ಸಭೆ ನಡೆಸಿದರು. ದೈನಂದಿನ ಕೋವಿಡ್ ಪ್ರಕರಣಗಳಲ್ಲಿ ಏರಿಕೆಯಾಗುತ್ತಿರುವ ಈ ರಾಜ್ಯಗಳಲ್ಲಿ ಆರೋಗ್ಯ ಅಧಿಕಾರಿಗಳ ಕಣ್ಗಾವಲು, ನಿಯಂತ್ರಣ ಮತ್ತು ನಿರ್ವಹಣೆಗೆ ತೆಗೆದುಕೊಂಡ ಕ್ರಮಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು.

'ಈ ರಾಜ್ಯಗಳಲ್ಲಿ ಶೇ 80ಕ್ಕಿಂತಲೂ ಹೆಚ್ಚು ಸಕ್ರಿಯ ಪ್ರಕರಣಗಳು, ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವ ಜನರಲ್ಲಿ ವರದಿಯಾಗಿವೆ. ಇವರಿಂದ ಮನೆಯವರಿಗೆ ಸೋಂಕು ಹರಡದಂತೆ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡುವ ಅಗತ್ಯವಿದೆ' ಎಂದು ಸಚಿವಾಲಯ ತಿಳಿಸಿದೆ.

5ನೇ ಪುಟ ನೋಡಿ

ಗಡಿ ಕಟ್ಟೆಚ್ಚರ: ಬೊಮ್ಮಾಯಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಆತಂಕಕಾರಿ ಮಟ್ಟದಲ್ಲಿ ಏರುತ್ತಿರುವ ಬೆನ್ನಲ್ಲೇ, ಅಂತರ ರಾಜ್ಯ ಗಡಿಯಲ್ಲಿರುವ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.



ಬಸವರಾಜ ಬೊಮ್ಮಾಯಿ

ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ಗಡಿ ಜಿಲ್ಲೆಗಳು ಹಾಗೂ ಕೋವಿಡ್ ಪ್ರಕರಣಗಳ ಏರಿಕೆ ಕಂಡುಬಂದಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಶನಿವಾರ ಸಂಜೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ಅವರು, ಕೋವಿಡ್ ನಿಯಂತ್ರಣಕ್ಕೆ ಅಗತ್ಯವಿರುವ ಎಲ್ಲ ಬಿಗಿ ಕ್ರಮಗಳನ್ನೂ ಕೈಗೊಳ್ಳುವಂತೆ ಸೂಚಿಸಿದರು.

5ನೇ ಪುಟ ನೋಡಿ

ರಾಜ್ಯ ಪ್ರವೇಶಕ್ಕೆ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ

ಬೆಂಗಳೂರು: ನೆರೆಯ ಕೇರಳ ಹಾಗೂ ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವವರು ಲಸಿಕೆ ಪಡೆದಿದ್ದರೂ ಪ್ರಯಾಣಕ್ಕೂ ಮೊದಲಿನ 72 ಗಂಟೆಗಳ ಅವಧಿಯಲ್ಲಿ ನಡೆಸಲಾದ ಕೋವಿಡ್ ಆರ್‌ಟಿ-ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಪಡೆದುಕೊಂಡಿದೆ. ರಾಜ್ಯ ಪ್ರವೇಶಿಸುವವರಿಗೆ ಗಡಿಯಲ್ಲಿ ಲಸಿಕೆ ಪಡೆದ ಪ್ರಮಾಣ ಪತ್ರವಿದ್ದರೂ ಸದ್ಯ ಅವಕಾಶ ನೀಡಲಾಗುತ್ತಿತ್ತು. ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿ ಹಾಗೂ ಲಸಿಕಾ ಪ್ರಮಾಣ ಪತ್ರ ಹೊಂದಿರದವರ ಮಾದರಿಗಳನ್ನು ಸಂಗ್ರಹಿಸಲಾಗುತ್ತಿತ್ತು. ಇದರಿಂದಾಗಿ ರಾಜ್ಯದಲ್ಲಿಯೂ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಳ್ಳುವ ಸಾಧ್ಯತೆ ಬಗ್ಗೆ ತಜ್ಞರು ಎಚ್ಚರಿಸಿದ್ದರು. ಹೀಗಾಗಿ, ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದಿದ್ದರೂ ಸೋಂಕು ಇಲ್ಲ ಎಂಬುದನ್ನು ದೃಢಪಡಿಸುವ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಅದು 72 ಗಂಟೆಗಳು ಮೀರಿರಬಾರದು ಎಂದು ತಿಳಿಸಲಾಗಿದೆ.

5ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

29,05,124 ▲
ಒಟ್ಟು ಸೋಂಕಿತರು
(29,03,137 ನಿನ್ನೆಯ ವಿವರ)

23,796 ▲
ಸಕ್ರಿಯ ಪ್ರಕರಣಗಳು

28,44,742 ▲
ಗುಣಮುಖರಾದವರು

36,562 ▲
ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,987	▲
ಗುಣಮುಖ	1,632	▲
ಸಾವು	37	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇನ್ನೊಮ್ಮೆ ಸಮಾಲೋಚನೆ ಬಳಿಕ ಸಂಪುಟ ವಿಸ್ತರಣೆ

• ಸಿದ್ದಯ್ಯ ಹಿರೇಮಠ

ನವದೆಹಲಿ: ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಇನ್ನೂ ಅಂತಿಮ ತೀರ್ಮಾನ ಕೈಗೊಳ್ಳದ ಬಿಜೆಪಿ ವರಿಷ್ಠರು, ಮುಖ್ಯಮಂತ್ರಿಯೊಂದಿಗೆ ಇನ್ನೊಂದು ಸುತ್ತಿನ ಸಮಾಲೋಚನೆ ನಡೆಸಿದ ಬಳಿಕ ಸಂಪುಟ ಸೇರುವವರ ಪಟ್ಟಿಯನ್ನು ಅಂತಿಮಗೊಳಿಸಲು ನಿರ್ಧರಿಸಿದ್ದಾರೆ.

ಶುಕ್ರವಾರ ಪ್ರಮುಖರೊಂದಿಗಿನ ಭೇಟಿಯ ವೇಳೆ ಸಂಪುಟ ವಿಸ್ತರಣೆ ಬಗ್ಗೆ ಪ್ರಸ್ತಾಪಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 21 ಜನ ಪ್ರಮುಖರ ಪಟ್ಟಿಯೊಂದನ್ನು ನೀಡಿ ಮೊದಲ ಹಂತದಲ್ಲಿ ಸಂಪುಟಕ್ಕೆ ಸೇರ್ಪಡೆ ಮಾಡುವಂತೆ ಕೋರಿದರು ಎನ್ನಲಾಗಿದೆ. ಆದರೆ, ಆ ಪಟ್ಟಿಗೆ ಒಪ್ಪಿಗೆ ದೊರೆತಿಲ್ಲ.

2ನೇ ಪುಟ ನೋಡಿ

ಒಳ ಪುಟಗಳು

ಕೇರಳ ಗಡಿ: ಕಟ್ಟೆಚ್ಚರ, ಹೆಚ್ಚಿದ ತಪಾಸಣೆ 5

ರಾಜ್ಯಕ್ಕೆ ₹ 800 ಕೋಟಿ ಪ್ಯಾಕೇಜ್ ಭರವಸೆ 5

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ವೈದ್ಯ ಮಿತ್ರ ಕಥಾ ಸಾಗರ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

PES UNIVERSITY

50 FEET RING ROAD
HANUMANTHANAGAR
ADMISSIONS 2021

COMMERCE
@ PES UNIVERSITY
B.Com - Day
B.Com - Evening
M.Com

SALIENT FEATURES
Scholarships - 40% Tuition Fee Waiver for Top 20%. Over ₹30 Crores in Merit Scholarships given to students.
Preparation for CA/CIMA competitive exams - Built into the curriculum
Mandatory Professional Certifications
Flexible Curriculum Major/ Minor Concept
Pre-Placement Training

080-10-728728
admissions@pes.edu
www.pes.edu/programs

PHARMACY
@ PES UNIVERSITY
B.Pharm
M.Pharm
Pharm.D.
Ph.D Doctoral Programs

PES POLYTECHNIC
Computer Science
Electronics & Comm.
Automobile
Mechanical
Optional: DCET Coaching
100% Placements for all eligible aspirants

PES PU COLLEGE
Science
(PCMB / PCME / PCMCs)
Optional: CET/JEE/NEET Coaching
Commerce
(BASM / GEBA / SBACs)
Optional: Tally Training/Certificate



2800 + ಸಂತುಷ್ಟ ಪರಿವಾರಗಳು

ಜಾಣ ನಿರ್ಧಾರ ಕೈಗೊಂಡಿವೆ

ಪ್ರೆಸ್ಟೀಜ್ ಜಿಂದಾಲ್ ಸಿಟಿ ಯೋಜನೆಯಲ್ಲಿ ನಿಮ್ಮ ಕನಸಿನ ಮನೆ ಬುಕ್ ಮಾಡಿ, ನೀವೂ ಅವರನ್ನು ಸೇರಿಕೊಳ್ಳಿ

ಈಗಲೇ ಬುಕ್ ಮಾಡಿ ಪಡೆಯಿರಿ
50:50 ಸೀಮಿತ ಅವಧಿಯ ಆಫರ್

ಬುಕ್ಕಿಂಗ್ ಸಮಯದಲ್ಲಿ 50% ಪಾವತಿಸಿ
ಇನ್ನುಳಿದ 50% ಸ್ವಾಧೀನತೆ ಸಮಯದಲ್ಲಿ
ಫೇಸ್ 1 ಪೂರ್ಣಗೊಳ್ಳುವ ಹಂತದಲ್ಲಿದೆ
ಫೇಸ್ 2 – ಡಿಸೆಂಬರ್ 2022

PRESTIGE JINDAL CITY
MARK OF GREAT LIVING
TUMKUR ROAD

NEW TOWER LAUNCHED

ಯೋಜನೆಯ ಪಕ್ಕದಲ್ಲಿಯೇ ಮೆಟ್ರೊ ನಿಲ್ದಾಣವಿದೆ | ವಿಶಾಲವಾಗಿ 32 ಎಕರೆಗಳಲ್ಲಿ ಹರಡಿಕೊಂಡಿದೆ
ಕ್ಲಬ್‌ಹೌಸ್ ಜೊತೆಗೆ 30+ ಸೌಲಭ್ಯಗಳು

1, 2, 3 & 4 ಬಿಹೆಚ್‌ಕೆ ಆರಂಭಿಕ ಬೆಲೆ ರೂ. 45 ಲಕ್ಷ**

**ತೆರಿಗೆಗಳು/ಹೆಚ್ಚುವರಿ ಶುಲ್ಕಗಳು ಪ್ರತ್ಯೇಕ
ಕಾರ್ಪೆಟ್ ಏರಿಯಾ ವಿವರಗಳಿಗೆ ದಯವಿಟ್ಟು ಬ್ರೋಷರ್ ಪರಿಶೀಲಿಸಿ.

ಸಂಪರ್ಕಿಸಿ: 84950 84950

A Prestige Group & SR Jindal Group Joint Venture
www.prestigeconstructions.com

*T&C Apply

MEMBER OF CREDAI

ನಗರ ಜಿಲ್ಲೆಯ ವಿವಿಧೆಡೆ ಒತ್ತುವರಿಯಾಗಿದ್ದ ಸರ್ಕಾರಿ ಜಾಗ ಮರುವಶ • ಜಿಲ್ಲಾಡಳಿತದ ಬಿರುಸಿನ ಕಾರ್ಯಾಚರಣೆ

55 ಕೆರೆಗಳ 135 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಆನೇಕಲ್ ತಾಲ್ಲೂಕಿನ ನಾಯಕನಹಳ್ಳಿ ಕೆರೆ ಒತ್ತುವರಿಯನ್ನು ಶನಿವಾರ ತೆರವುಗೊಳಿಸಲಾಯಿತು (ಎಡಚಿತ್ರ) ಎಲೆಕ್ಟ್ರಾನಿಕ್ಸ್ ಸಿಟಿ ಸಮೀಪದ ಹುಲಿಮಂಗಲ ಗ್ರಾಮದ ಬಳಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್ ತೆರವುಗೊಳಿಸಿರುವುದು

ಬೆಂಗಳೂರು: ಕೈಕೊಂಡರಹಳ್ಳಿ ಕೆರೆಯ ಬಫರ್ ವಲಯದಲ್ಲಿ ನಿರ್ಮಿಸಿದ್ದ ಬಹುಮಹಡಿ ಕಟ್ಟಡ ನೆಲಸಮಕ್ಕೆ ರಾಷ್ಟ್ರೀಯ ಹಸಿರು ನ್ಯಾಯಪೀಠ (ಎನ್‌ಜಿಟಿ) ಆದೇಶ ನೀಡಿದ ಬೆನ್ನಲ್ಲೇ, ಬೆಂಗಳೂರಿನಲ್ಲಿ ಬೇರೆ ಬೇರೆ ಕೆರೆಗಳ ಜಾಗದ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಗರ ಜಿಲ್ಲಾಡಳಿತ ಚುರುಕುಗೊಳಿಸಿದೆ. ಜಿಲ್ಲೆಯ ವಿವಿಧ ಕಡೆಗಳಲ್ಲಿ ಶನಿವಾರ ಒತ್ತುವರಿ ತೆರವಿಗೆ ಇಳಿದ ಜೆಸಿಬಿಗಳು ಘರ್ಜಿಸಿದವು. ಒತ್ತುವರಿ ಮಾಡಿದ್ದ 55 ಕೆರೆಗಳ 135 ಎಕರೆ 30 ಗುಂಟೆ ಜಾಗವನ್ನು ಅಧಿಕಾರಿಗಳು ವಶಕ್ಕೆ ಪಡೆದರು.

ಬೆಂಗಳೂರು ಉತ್ತರ, ಬೆಂಗಳೂರು ಪೂರ್ವ, ಬೆಂಗಳೂರು ದಕ್ಷಿಣ, ಆನೇಕಲ್ ಮತ್ತು ಯಲಹಂಕ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಸೂಚನೆಯಂತೆ ತಹಶೀಲ್ದಾರ್‌ಗಳ ನೇತೃತ್ವದಲ್ಲಿ ಕಾರ್ಯ ಚರಣೆ ನಡೆಸಲಾಗಿದೆ. ಆನೇಕಲ್ ತಾಲ್ಲೂಕಿನ ವಿವಿಧೆಡೆ ಒತ್ತುವರಿಯಾಗಿದ್ದ ಸುಮಾರು ₹15 ಕೋಟಿ ಮೌಲ್ಯದ 4 ಎಕರೆ 29 ಗುಂಟೆ ಸರ್ಕಾರಿ ಜಾಗವನ್ನು ವಶಕ್ಕೆ ಪಡೆಯಲಾಗಿದೆ.

ನಗರ ಜಿಲ್ಲೆಯಲ್ಲಿ ಒಟ್ಟು 837 ಕೆರೆಗಳಿದ್ದು, ಅವುಗಳ ಸಮಗ್ರ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಗಡಿ ಗುರುತಿಸುವ ಕಾರ್ಯವನ್ನು ಜಿಲ್ಲಾಡಳಿತ ನಡೆಸುತ್ತಿದೆ. ಅದರ ಭಾಗವಾಗಿ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಜಿಲ್ಲಾಡಳಿತದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉತ್ತರ ತಾಲ್ಲೂಕಿನಲ್ಲಿ 6 ಕೆರೆಗಳಲ್ಲಿ 29 ಎಕರೆ 19 ಗುಂಟೆ, ಪೂರ್ವ ತಾಲ್ಲೂಕಿನ 10 ಕೆರೆಗಳಲ್ಲಿ 39 ಎಕರೆ 5 ಗುಂಟೆ, ಆನೇಕಲ್ ತಾಲ್ಲೂಕಿನ 12 ಕೆರೆಗಳಲ್ಲಿ 18 ಎಕರೆ 23 ಗುಂಟೆ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ನಗರ ಜಿಲ್ಲಾಡಳಿತದ ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ತಾಲ್ಲೂಕಿನ 10 ಕೆರೆಗಳಲ್ಲಿ 2 ಎಕರೆ 12 ಗುಂಟೆ, ಯಲಹಂಕ ತಾಲ್ಲೂಕಿನ 20 ಕೆರೆಗಳಲ್ಲಿನ 51 ಎಕರೆ 39 ಗುಂಟೆ ಜಾಗವನ್ನು ಒತ್ತುವರಿದಾರರಿಂದ ಬಿಡಿಸಲಾಗಿದೆ ಎಂದು ವಿವರಿಸಿದ್ದಾರೆ.

ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಮನೆ, ಗುಡಿಸಲು ಕಳೆದುಕೊಂಡವರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲವೆಡೆ ಮಾತಿನ ಚಕಮಕಿಯೂ ನಡೆಯಿತು. ಪೊಲೀಸರ ನೆರವು ಪಡೆದು ಅಧಿಕಾರಿಗಳು ಮುನ್ನಡೆಸಿದರು.

ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಗೋಮಾಳ ತೆರವು

ಕೆರೆ ಮಾತ್ರವಲ್ಲದೇ ಇತರೆಡೆ ಸರ್ಕಾರಿ ಜಾಗ ಒತ್ತುವರಿಯನ್ನೂ ಜಿಲ್ಲಾಡಳಿತದಿಂದ ತೆರವುಗೊಳಿಸಲಾಯಿತು. ಎಲೆಕ್ಟ್ರಾನಿಕ್ ಸಿಟಿ ಪ್ರದೇಶ ಹುಲಿಮಂಗಲ ಮುಖ್ಯ ರಸ್ತೆಯಲ್ಲಿ 4 ಎಕರೆ 35 ಗುಂಟೆ ಸರ್ಕಾರಿ ಗೋಮಾಳದಲ್ಲಿ ನಿರ್ಮಿಸಿದ್ದ ಅಂಗಡಿ ಮತ್ತು ವಿವಿಧ ಕಟ್ಟಡಗಳನ್ನು ಅಧಿಕಾರಿಗಳು ಜೆಸಿಬಿ ಮೂಲಕ ನೆಲಸಮ ಮಾಡಿಸಿದರು. ಈ ಆಸ್ತಿಯ ಒಟ್ಟು ಮೌಲ್ಯ ₹15 ಕೋಟಿ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸರ್ಕಾರಿ ಜಾಗದಲ್ಲೇ ನಿರ್ಮಿಸಿದ್ದ ರಿಯಲ್ ಎಸ್ಟೇಟ್ ಕಚೇರಿಯನ್ನೂ ತೆರವುಗೊಳಿಸಲಾಯಿತು. ಇದಕ್ಕೆ ಕೆಲವರು ಅಡ್ಡಿಪಡಿಸಿದರೂ ಕಾರ್ಯಾಚರಣೆ ಯಶಸ್ವಿಗೊಳಿಸಲಾಯಿತು ಎಂದು ತಿಳಿಸಿದರು.

ಎಲ್ಲೆಲ್ಲಿ ಕಾರ್ಯಾಚರಣೆ

ಯಲಹಂಕ ತಾಲ್ಲೂಕಿನ ಹೆಸರುಘಟ್ಟ, ಜಾಲ, ಚೊಕ್ಕನಹಳ್ಳಿ, ಆನೇಕಲ್ ತಾಲ್ಲೂಕಿನ ಕಸಬಾ ಹೋಬಳಿ, ಅತ್ತಿಬೆಲೆ, ಜಿಗಣಿ, ಸರ್ಜಾಪುರ, ಹುಲಿಮಂಗಲ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ ವ್ಯಾಪ್ತಿಯ ಕಣಿಮಿಣಕೆ, ಉತ್ತರಹಳ್ಳಿಯ ಅಗರ, ನಟ್ಟಿಗೆರೆ, ವಸಂತಪುರ, ಗಬ್ಬಾಳ, ತಾವರೆಕೆರೆ, ಬ್ಯಾಲಾಳು, ಬೇಗೂರು. ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ವ್ಯಾಪ್ತಿ, ವರ್ತೂರು ಮತ್ತು ಬಿದರಹಳ್ಳಿ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.

14 ಸಾವಿರ ಮೀ. ಉದ್ದದ ಆಪ್ಟಿಕಲ್ ಫೈಬರ್ ಕಿತ್ತ ಪಾಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದಲ್ಲಿ ಅನಧಿಕೃತವಾಗಿ ಅಳವಡಿಸಿದ್ದ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು (ಒಎಫ್‌ಸಿ) ತೆಗೆಯಿಸಲು ಹಾಗೂ ಪಾದಚಾರಿ ಮಾರ್ಗದ ಒತ್ತುವರಿ ತೆರವಿಗೆ ಬಿಬಿಎಂಪಿ ಅಧಿಕಾರಿಗಳು ಶನಿವಾರ ವಿಶೇಷ ಕಾರ್ಯಾಚರಣೆ ನಡೆಸಿದರು. ಒಟ್ಟು 14,060 ಮೀ. ಉದ್ದದ ಕೇಬಲ್‌ಗಳನ್ನು ಒಂದೇ ದಿನ ತೆರವುಗೊಳಿಸಲಾಗಿದೆ.

ಅನಧಿಕೃತವಾಗಿ ಅಳವಡಿಸಲಾಗಿದ್ದ ಕೇಬಲ್‌ಗಳಿಂದ ಪಾದಚಾರಿ ಮಾರ್ಗಗಳಲ್ಲಿ ಸಂಚರಿಸುವವರಿಗೆ ಅಡ್ಡಿ ಉಂಟಾಗುತ್ತಿತ್ತು. ಹೈಕೋರ್ಟ್ ಆದೇಶ ಹಾಗೂ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ನಿರ್ದೇಶನದ ಮೇರೆಗೆ ಬಿಬಿಎಂಪಿ ಅಧಿಕಾರಿಗಳು ಇಂತಹ ಕೇಬಲ್ ತೆರವುಗೊಳಿಸಲು ಕ್ರಮಕೈಗೊಂಡಿದ್ದರು.

ಹೂಡಿ, ಮಾರತ್ತಹಳ್ಳಿ, ಮಹದೇವಪುರ ಹಾಗೂ ಎಚ್‌.ಎ.ಎಲ್ ಉಪವಿಭಾಗಗಳ ವ್ಯಾಪ್ತಿಯ ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಮರಗಳ ಮೇಲೆ ಹಾಗೂ ವಿದ್ಯುತ್ ಕಂಬಗಳ ಮೇಲೆ ನೇತಾಡುತ್ತಿರುವ ಕೇಬಲ್‌ಗಳನ್ನು ತೆರವುಗೊಳಿಸಲಾಯಿತು. ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದ 15 ಮಳಿಗೆಗಳನ್ನು ಕೂಡಾ ತೆರವುಗೊಳಿಸಲಾಯಿತು.

‘ಅನಧಿಕೃತವಾಗಿ ಕೇಬಲ್ ಅಳವಡಿಸದಂತೆ ಪದೇ ಪದೇ ಎಚ್ಚರಿಕೆ ನಿಡಿದರೂ ಈ ಪರಿಪಾಟ ಮುಂದುವರಿಯುತ್ತಲೇ ಇದೆ. ಇನ್ನು ಪಾದಚಾರಿ ಮಾರ್ಗಗಳಲ್ಲಿ ಕೇಬಲ್‌ಗಳನ್ನು ಅಳವಡಿಸಿದರೆ, ಅಂತಹ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲಿದ್ದೇವೆ’ ಎಂದು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಆರ್‌.ಎಲ್‌.ಪರಮೇಶ್ವರಯ್ಯ ತಿಳಿಸಿದರು. .

‘ಪಾದಚಾರಿ ಮಾರ್ಗವು ಸಾರ್ವಜನಿಕರ ಬಳಿಕೆಗೆ ಇರುವಂತಹದ್ದು. ಅಲ್ಲಿ ಪಾದಚಾರಿಗಳ ಓಡಾಟಕ್ಕೆ ಅಡ್ಡಿಪಡಿಸುವ ಯಾವುದೇ ಚಟುವಟಿಕೆಗೆ ಆಸ್ಪದ ಇಲ್ಲ. ಇನ್ನು ಮುಂದೆಯೂ ಯಾರಾದರೂ ಪಾದಚಾರಿ ಮಾರ್ಗ ಒತ್ತುವರಿ ಮಾಡಿದರೆ, ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಿದ್ದೇವೆ. ವಲಯದ ಇತರ ಉಪ ವಿಭಾಗಗಳಲ್ಲೂ ಈ ಕಾರ್ಯಾಚರಣೆ ನಡೆಸಲಿದ್ದೇವೆ’ ಎಂದು ತಿಳಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತರ ಕಚೇರಿ ಎದುರು ಗಿರಿಜಾ ಅವರು ಶನಿವಾರ ಪ್ರತಿಭಟನೆ ನಡೆಸಿದರು

‘ನಿರೂಪಕರನ್ನು ಬದಲಿಸಿ’

ಬೆಂಗಳೂರು: ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಈ ಬಾರಿ ನಡೆಯಲಿರುವ ಸ್ವಾತಂತ್ರ್ಯೋತ್ಸವಕ್ಕೆ ಬೇರೆ ನಿರೂಪಕರಿಗೂ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿ, ದೂರದರ್ಶನದ ರಂಗಭೂಮಿ ಕಲಾವಿದೆ ವಿ. ಗಿರಿಜಾ ಶನಿವಾರ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಮುಖ್ಯ ಆಯುಕ್ತರ ಕಚೇರಿ ಎದುರು ಏಕಾಂಗಿಯಾಗಿ ಧರಣಿ ಕುಳಿತಿದ್ದ ಅವರು, ‘ಈ ಕಾರ್ಯಕ್ರಮಗಳಲ್ಲಿ ಹತ್ತು ವರ್ಷಗಳಿಂದ ನಿರೂಪಕರನ್ನು ಬದಲಾವಣೆ ಮಾಡಿಯೇ ಇಲ್ಲ. ಕೆಲವೇ ನಿರೂಪಕರಿಗೆ ನಿರಂತರವಾಗಿ ಈ ಕಾರ್ಯಕ್ರಮದ ನಿರೂಪಣೆಯ ಅವಕಾಶ ಕಲ್ಪಿಸಲಾಗುತ್ತಿದೆ. ಈ ಬಾರಿಯೂ ಅವರಿಗೇ ಅವಕಾಶ ನೀಡಲಾಗಿದೆ’ ಎಂದು ಅವರು ದೂರಿದರು.

‘ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾಧಿಕಾರಿ ಸೇರಿದಂತೆ, ಈ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೂ ಈ ಸಂಬಂಧ ದೂರು ನೀಡಿದ್ದೇನೆ. ಹಲವು ವರ್ಷಗಳಿಂದ ಓಡಾಡುತ್ತಿದ್ದೇನೆ. ಆದರೂ ನನ್ನ ಮನವಿ ಪುರಸ್ಕರಿಸಿಲ್ಲ’ ಎಂದು ಆರೋಪಿಸಿದರು.

‘ಮುಂದಿನ ವರ್ಷ ಮೇ ಒಳಗೆ ಮಲ್ಲೇಶ್ವರ ಮಾರುಕಟ್ಟೆ ಸಜ್ಜು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮಲ್ಲೇಶ್ವರ ಮಾರುಕಟ್ಟೆ ನಿರ್ಮಾಣ ಯೋಜನೆಯನ್ನು 2022ರ ಮೇ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಕ್ಷೇತ್ರದ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವತಿಯಿಂದ ಕೈಗೆತ್ತಿಕೊಳ್ಳಲಾದ ವಿವಿಧ ಯೋಜನೆಗಳ ಕುರಿತು ಶನಿವಾರ ಅವರು ಪ್ರಗತಿ ಪರಿಶೀಲನೆ ನಡೆಸಿದರು.

‘ಮಲ್ಲೇಶ್ವರ ಪ್ರದೇಶದ ಜನರಿಗೆ ಈ ಮಾರುಕಟ್ಟೆ ಬಹಳ ಪ್ರಾಮುಖ್ಯವಾದುದು. ಕಾರಣಾಂತರಗಳಿಂದ ಯೋಜನೆ ಅನುಷ್ಠಾನ ವಿಳಂಬವಾಗಿದೆ. ಅತ್ಯಂತ ವೈಜ್ಞಾನಿಕವಾಗಿ ಇದರ ಮರುವಿನ್ಯಾಸ ರೂಪಿಸಲಾಗುತ್ತಿದೆ. ಈ ಮಾರುಕಟ್ಟೆ ಸಂಕೀರ್ಣದ ತಳ ಮಹಡಿ ಮತ್ತು ಐದನೇ ಮಹಡಿಗಳಲ್ಲಿ ವಾಹನ ನಿಲುಗಡೆಗೂ ವ್ಯವಸ್ಥೆ ಮಾಡಲಾಗುತ್ತಿದೆ. ಒಟ್ಟು 421 ಕಾರುಗಳು ಮತ್ತು 350 ದ್ವಿಚಕ್ರ ವಾಹನಗಳನ್ನು ನಿಲ್ಲಿಸುವಷ್ಟು ಸೌಕರ್ಯ ಇಲ್ಲಿ ಲಭ್ಯವಾಗಲಿದೆ’ ಎಂದು ಅವರು ವಿವರಿಸಿದರು.

ಬಿಡಿಎ ಸಂಕೀರ್ಣ ಪುನರುಜ್ಜೀವನ: ಸದಾಶಿವನಗರದಲ್ಲಿ ಆಯಕಟ್ಟಿನ ಜಾಗದಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣವು 1958ರಲ್ಲಿ ನಿರ್ಮಾಣವಾಗಿದೆ. ಈ ಕಟ್ಟಡದಲ್ಲಿ ಸದ್ಯಕ್ಕೆ 21 ಮಳಿಗೆಗಳಿವೆ. ಅವುಗಳಿಂದ ತಿಂಗಳಿಗೆ ಕೇವಲ ₹ 5 ಲಕ್ಷ ವರಮಾನ ಬರುತ್ತಿದೆ.

‘ನಗರದ ಹೃದಯ ಭಾಗದಲ್ಲಿರುವ ಈ ಜಾಗದಿಂದ ಪ್ರಾಧಿಕಾರಕ್ಕೆ ಇನ್ನೂ ಹೆಚ್ಚಿನ ವರಮಾನ ಬರುವಂತಾಗಬೇಕು’ ಎಂದು ಅಶ್ವತ್ಥನಾರಾಯಣ ಸಲಹೆ ನೀಡಿದರು.

‘ಈ ವಾಣಿಜ್ಯ ಸಂಕೀರ್ಣವನ್ನು ತೆರವುಗೊಳಿಸಲಿದ್ದೇವೆ. ಇಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಅತ್ಯಾಧುನಿಕ ಮಾದರಿಯ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡಲಾಗುತ್ತದೆ’ ಎಂದು ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್ ತಿಳಿಸಿದರು.

‘ಈ ಕಟ್ಟಡದ ಅಭಿವೃದ್ಧಿಗೆ ಈ ಹಿಂದೆಯೂ ಪ್ರಯತ್ನಗಳು ನಡೆದಿದ್ದವು. ಈ ಬಗ್ಗೆ ಖಾಸಗಿ ಸಂಸ್ಥೆಗಳ ಜೊತೆ ಒಪ್ಪಂದವೂ ನಡೆದಿತ್ತು. ಕಾರಣಾಂತರಗಳಿಂದಾಗಿ ಅದು ಜಾರಿಗೆ ಬರಲಿಲ್ಲ. ಈಗ ಹೊಸದಾಗಿ ಯೋಜನೆಯನ್ನು ರೂಪಿಸಲಾಗುತ್ತಿದೆ. ಈ ಪಿಪಿಪಿ ಯೋಜನೆ ಅನುಷ್ಠಾನಕ್ಕೆ ಇಂದಿನ ಅಗತ್ಯಗಳಿಗೆ ಅನುಗುಣವಾಗಿ ಹೊಸ ಷರತ್ತುಗಳನ್ನು ರೂಪಿಸಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದರು.

ಬಿಡಿಎ ಆಯುಕ್ತ ರಾಜೇಶ್ ಗೌಡ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಅನುಭವಗಳಿಂದ ಸಾಹಿತ್ಯ ರಚನೆ ಸಾಕಾರ: ಪ್ರೇಮಾ ಭಟ್

ಬೆಂಗಳೂರು: ‘ಅನುಭವದ ಜೊತೆಗೆ ಕಲ್ಪನೆಗಳಿಗೆ ಮೆರಗು ನೀಡಿ, ಸಾಹಿತ್ಯ ರಚನೆಯಲ್ಲಿ ನಾನು ತೊಡಗಿದೆ. ಇದರಿಂದಾಗಿ ಬರವಣಿಗೆ ನನ್ನ ಕೈಹಿಡಿಯಿತು’ ಎಂದು ಹಿರಿಯ ಲೇಖಕಿ ಪ್ರೇಮಾ ಭಟ್ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘ ಶನಿವಾರ ಆಯೋಜಿಸಿದ ಹಿರಿಯ ಲೇಖಕಿಯರ ಸಾಹಿತ್ಯ ಮಂಥನ ಆನ್‌ಲೈನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನನ್ನ ಜೀವನಾನುಭವಗಳನ್ನು ಮಡಿಲಲ್ಲಿ ತುಂಬಿಕೊಂಡು ಸಾಹಿತ್ಯ ರಚನೆಗೆ ಇಳಿದೆ. ಆ ಅನುಭವಗಳೇ ಕಥೆ, ಕಾದಂಬರಿ ಹುಟ್ಟಿಗೆ ಕಾರಣವಾಯಿತು. ಅನುಭವದ ಜೊತೆಗೆ ಸತತ ಓದಿನಿಂದ ಮಾತ್ರ ಉತ್ತಮ ಸಾಹಿತ್ಯ ರಚನೆ ಸಾಧ್ಯ. ನಾನು ಸಾಹಿತ್ಯ ರಚನೆ ಮಾಡುತ್ತಿದ್ದ ಕಾಲದಲ್ಲಿ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳಲು ಭಯಪಡುತ್ತಿದ್ದರು. ಆದರೂ, ಕೆಲವು ಲೇಖಕಿಯರು ಅತ್ಯುತ್ತಮ ಸಾಹಿತ್ಯ ರಚಿಸಿದರು’ ಎಂದು ಹೇಳಿದರು.

‘ನಾವು ಬರೆಯುತ್ತಿದ್ದ ಕಾಲದಲ್ಲಿ ಲೇಖಕಿಯರ ಸಂಖ್ಯೆ ಕಡಿಮೆಯಿತ್ತು. ಹೀಗಾಗಿ, ಪತ್ರಿಕೆಗಳು ಕೂಡ ನನ್ನ ಹಲವು ಸಣ್ಣಕಥೆಗಳು ಹಾಗೂ ಕಾದಂಬರಿಗಳನ್ನು ಪ್ರಕಟಿಸಿದವು. ನನ್ನ ಸಾಹಿತ್ಯದ ಬೆಳವಣಿಗೆಗೆ ಪತ್ರಿಕೆಗಳೂ ಕಾರಣ. ಎಸ್‌.ಎಲ್‌. ಭೈರಪ್ಪ, ಶಿವರಾಮ ಕಾರಂತ ಸೇರಿದಂತೆ ವಿವಿಧ ಸಾಹಿತಿಗಳ ಕೃತಿಗಳನ್ನು ಓದುತ್ತಿದ್ದೆ’ ಎಂದರು.

ಪ್ರೇಮಾ ಭಟ್ ಅವರ ಸಣ್ಣಕಥೆಗಳ ಕುರಿತು ಮಾತನಾಡಿದ ಲೇಖಕಿ ಸಂಪದಾ ಕೆರಿಮನಿ, ‘ಪ್ರೇಮಾ ಅವರಿಗೆ ಸಣ್ಣಕಥೆಗಳನ್ನು ಬರೆಯುವ ತಂತ್ರಗಾರಿಕೆ ಚೆನ್ನಾಗಿ ಸಿದ್ಧಿಸಿದೆ. ಕನ್ನಡಿಗರ ಗಮನ ಸೆಳೆದಿರುವ ಅಪರೂಪದ ಕಥೆಗಾರ್ತಿ ಅವರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಪ್ರೇಮಾ ಭಟ್ ಅವರ ಕಾದಂಬರಿಗಳು ಮತ್ತು ಇತರ ಸಾಹಿತ್ಯ ಕೃತಿಗಳು’ ಎಂಬ ವಿಷಯದ ಬಗ್ಗೆ ಲೇಖಕಿ ಜಯಶ್ರೀ ರಾಜು ಮಾತನಾಡಿದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ ಇದ್ದರು.

ಪೊಲೀಸರಿಂದ ರಕ್ತದಾನ

ಬೆಂಗಳೂರು: ಕ್ಯಾನ್ಸರ್ ಪೀಡಿತ ಮಕ್ಕಳಿಗಾಗಿ ನಗರದ ಪಶ್ಚಿಮ ವಿಭಾಗದ ಪೊಲೀಸರು ಶನಿವಾರ ರಕ್ತದಾನ ಮಾಡಿದರು.

ಉಪ್ಪಾರಪೇಟೆಯಲ್ಲಿರುವ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಅವರ ಕಚೇರಿಯಲ್ಲಿ ‘ಲಯನ್ಸ್ ರಕ್ತ ನಿಧಿ’ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ 75 ಪೊಲೀಸರು ರಕ್ತ ನೀಡಿದರು.

ಕಿದ್ವಾಯಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ರಕ್ತದ ಅಗತ್ಯವಿದೆ. ಹೀಗಾಗಿ, ರಕ್ತದಾನ ಮಾಡುವಂತೆ ಆಸ್ಪತ್ರೆ ಹಾಗೂ ಲಯನ್ಸ್ ರಕ್ತ ನಿಧಿ ಅಧಿಕಾರಿಗಳು ಕೋರಿದ್ದರು. ಅದಕ್ಕೆ ಸ್ಪಂದಿಸಿದ ಪಶ್ಚಿಮ ವಿಭಾಗದ ಪೊಲೀಸರು, ಕೆಲಸದ ಒತ್ತಡದ ನಡುವೆಯೂ ರಕ್ತದಾನ ಮಾಡಿದ್ದಾರೆ. ಇವರ ಕೆಲಸಕ್ಕೆ ಕಮಿಷನರ್ ಕಮಲ್ ಪಂತ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಜನಸ್ನೇಹಿ ಪೊಲೀಸ್ ವ್ಯವಸ್ಥೆಯ ಭಾಗವಾಗಿ ಈ ಶಿಬಿರ ಆಯೋಜಿಸಲಾಗಿತ್ತು. ವಿಭಾಗದ ಪ್ರತಿಯೊಬ್ಬ ಪೊಲೀಸರು ಸ್ವಯಂಪ್ರೇರಿತವಾಗಿ ಬಂದು ರಕ್ತದಾನ ಮಾಡಿದ್ದಾರೆ’ ಎಂದು ಸಂಜೀವ್ ಪಾಟೀಲ ತಿಳಿಸಿದರು.

ಹೈದರಾಬಾದ್ ರೇಸ್

ಕಾರ್ಫೆ ಕ್ಯಾಸ್ಲ್ ಗೆಲ್ಲುವ ನಿರೀಕ್ಷೆ

ಸುಲ್ತಾನ್ ಫಿರೋಜ್ ಪ್ಲೇಟ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಾರ್ಫೆ ಕ್ಯಾಸ್ಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ರಿಂದ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

ವಿ.ಸೂ: ಕೋವಿಡ್-19 ಸೋಂಕಿಗೆ ಲಸಿಕೆ ಪಡೆದಿರುವವರಿಗೆ ಮಾತ್ರ ಬಿಟಿಸಿ ಆವರಣದಲ್ಲಿ ಪ್ರವೇಶ ಇರುತ್ತದೆ.

1ನೇ ರೇಸ್: ಕೀ ಸ್ಟೋನ್ 14, ಜೀಯಸ್ 8, ಗುರ್ಬಾಝ್ 4
2ನೇ ರೇಸ್: ಆಲ್ ಟೈಮ್ ಲೆಜೆಂಡ್ 3, ಬ್ಲೂ ವ್ಯಾಲೆಂಟೈನ್ 5, ಕೆಟಲಿನ 6
3ನೇ ರೇಸ್: ಮಂಡಾಲ ಬೇ 5, ಎಕ್ಸ್‌ಫಿನಿಟಿ 1, ದಿ ಪ್ರಾಸ್ಪೆಕ್ಟ್ 3
4ನೇ ರೇಸ್: ಶಿವಾಲಿಕ್ ಮೀಡೊ 1, ಬ್ಯಾಟ್ಲ್ ರೆಡಿ 5, ಏರ್ ಸೆಲ್ಯೂಟ್ 4
5ನೇ ರೇಸ್: ಕಾರ್ಫೆ ಕ್ಯಾಸ್ಲ್ 1, ಲೈಟ್ನಿಂಗ್ ಬೋಲ್ಟ್ 4, ವಿಕ್ಟರಿ ಪರೇಡ್ 2
6ನೇ ರೇಸ್: ಲಮ್ಹಾ 7, ಕ್ಯಾಂಪೇನಿಯಾ 5, ಬೆಸ್ಟ್ ಬಡ್ಡಿ 1
7ನೇ ರೇಸ್: ಎನ್‌.ಆರ್‌.ಐ ಟಚ್ 2, ಡ್ಯೂ ಡಿಲಿಜೆನ್ಸ್ 4, ಎಲ್ಮಿರ 1

ಉತ್ತಮ ಬೆಟ್: ಕೀ ಸ್ಟೋನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಇನ್ನೊಮ್ಮೆ ಸಮಾಲೋಚನೆ ಬಳಿಕ ಸಂಪುಟ ವಿಸ್ತರಣೆ

ಒಂದನೇ ಪುಟದಿಂದ

ಕೆಲವು ಮುಖಂಡರು ಉಪಮುಖ್ಯಮಂತ್ರಿ ಸ್ಥಾನಕ್ಕೆ ಪಟ್ಟು ಹಿಡಿದಿರುವ ಕಾರಣ, ಯಡಿಯೂರಪ್ಪ ಸಂಪುಟದಲ್ಲಿದ್ದ ಯಾರನ್ನೆಲ್ಲ ಕೈಬಿಡಬೇಕು, ಯಾರನ್ನು ಸೇರ್ಪಡೆ ಮಾಡಿಕೊಳ್ಳಬೇಕು’ ಎಂಬ ನಿರ್ಧಾರ ಕೈಗೊಳ್ಳಲಾಗಲಿಲ್ಲ.ಈ ಸಂಬಂಧ ಗೊಂದಲಗಳಿಗೆ ಆಸ್ಪದ ನೀಡದಂತೆ ಸೂಕ್ಷ್ಮವಾಗಿ ಸಂಪುಟ ವಿಸ್ತರಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂಬ ತೀರ್ಮಾನಕ್ಕೆ ಬರಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಶುಕ್ರವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಎರಡೆರಡು ಬಾರಿ ಭೇಟಿ ಮಾಡಿ ಚರ್ಚೆ ನಡೆಸಿದ ಬೊಮ್ಮಾಯಿ, ಶನಿವಾರವೂ ಈ ಸಂಬಂಧ ಮತ್ತೆ ಚರ್ಚೆ ನಡೆಸಿದರಾದರೂ, ಮಧ್ಯಾಹ್ನದೊಳಗೆ ಪಟ್ಟಿ ದೊರೆಯಬಹುದು ಎಂಬ ನಿರೀಕ್ಷೆ ಹುಸಿಯಾಗಿದ್ದರಿಂದ ಬೆಂಗಳೂರಿಗೆ ಮರಳಿದರು.

ಅನುಭವ, ಜಾತಿ ಮತ್ತು ಪ್ರಾದೇಶಿಕತೆಗೆ ಸಂಪುಟದಲ್ಲಿ ಪ್ರಾಶಸ್ತ್ಯ ದೊರೆಯಲಿದೆ. ಮಹಿಳೆಯರಿಗೆ, ಯುವಕರಿಗೂ ಆದ್ಯತೆ ನೀಡುವ ನಿಟ್ಟಿನಲ್ಲಿ ಮತ್ತೊಂದು ಸಂಭವನೀಯ ಪಟ್ಟಿ ಸಿದ್ಧಪಡಿಸಿ ಕಳುಹಿಸುವಂತೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರು ಸೂಚಿಸಿದ್ದಾರೆ ಎಂದು ಪಕ್ಷದ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಮಂತ್ರಿಯವರು ಮತ್ತೆ ದೆಹಲಿಗೆ ಬಂದು ಈ ಸಂಬಂಧ ಚರ್ಚಿಸುವ ಸಾಧ್ಯತೆಗಳೂ ಇವೆ. ಅಥವಾ, ಮಂಗಳವಾರ ಸಂಜೆಯ ವೇಳೆಗೆ ವರಿಷ್ಠರೇ ಸಂಪುಟಕ್ಕೆ ಸೇರಿಕೊಳ್ಳಲಿರುವವರ ಪಟ್ಟಿ ಸಿದ್ಧಪಡಿಸಿ ಕಳುಹಿಸಿದರೂ ಆಶ್ಚರ್ಯವಿಲ್ಲ ಎಂದು ಹೇಳಿದರು.

ಕಾಂಗ್ರೆಸ್- ಜೆಡಿಎಸ್ ತೊರೆದು ಬಂದು ಸರ್ಕಾರ ರಚನೆಗೆ ಕಾರಣ ಆದವರಿಗೆ, ಮಾನಹಾನಿಕರ ಸುದ್ದಿ ಪ್ರಸಾರ ಮಾಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವವರಿಗೆ ಹಾಗೂ ಅನಗತ್ಯ ವಿವಾದಗಳಿಗೆ ಆಸ್ಪದವಾಗುವ ಹೇಳಿಕೆ ನೀಡುವವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಕುರಿತೂ ಇನ್ನಷ್ಟೇ ಪರಾಮರ್ಶೆ ನಡೆಯಬೇಕಿದೆ ಎಂದು ತಿಳಿಸಿದರು.

ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ಪ್ರಕಟಣೆಯ ಪುಸ್ತಕಗಳಿಗೆ ಆಗಸ್ಟ್ ತಿಂಗಳಲ್ಲಿ ಶೇ 50ರಷ್ಟು ರಿಯಾಯಿತಿ ಪ್ರಕಟಿಸಿದೆ.

ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗಳು ಹಾಗೂ ಪ್ರಾಧಿಕಾರದ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಪುಸ್ತಕಗಳು ದೊರೆಯಲಿವೆ. ಆನ್‌ಲೈನ್ ವಿಳಾಸ www.kannadapustakapradhikara.comನಲ್ಲಿಯೂ ಪುಸ್ತಕಗಳು ಲಭ್ಯ ಎಂದು ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಹೋರ್ಡಿಂಗ್: ರಾಜ್ಯ ಸರ್ಕಾರದ ಆದೇಶಕ್ಕೆ ಮಾಜಿ ಮೇಯರ್‌ಗಳ ವಿರೋಧ

ಆದಾಯಕ್ಕಿಂತ ಅನಾಹುತವೇ ಹೆಚ್ಚು!

ಪ್ರಜಾವಾಣಿ ವಾರ್ತೆ

ಹೋರ್ಡಿಂಗ್ ಮಾಫಿಯಾಕ್ಕೆ ಮಣೆ 5

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಹಾಕಲು ಮತ್ತೆ ಅವಕಾಶ ನೀಡಿರುವ ರಾಜ್ಯ ಸರ್ಕಾರದ ಆದೇಶದಿಂದ ಪಾಲಿಕೆಗೆ ಆದಾಯ ಬರುವುದಕ್ಕಿಂತ ಅಪಾಯವೇ ಹೆಚ್ಚು ಎಂದು ಒಕ್ಕೊರಲ ದನಿಯಲ್ಲಿ ಹೇಳುತ್ತಾರೆ ಮಾಜಿ ಮೇಯರ್‌ಗಳು. ರಾಜ್ಯ ಸರ್ಕಾರದ ಆದೇಶಕ್ಕೆ ಅಚ್ಚರಿ ವ್ಯಕ್ತಪಡಿಸುವ ಅವರು, ಆದೇಶವನ್ನು ವಾಪಸ್ ಪಡೆಯುವುದೇ ಸೂಕ್ತ ಎಂದು ಸಲಹೆಯನ್ನೂ ನೀಡುತ್ತಾರೆ.

‘ನಾನು 2000ನೇ ವರ್ಷದಲ್ಲಿ ಮೇಯರ್ ಆಗಿದ್ದಾಗ, ಜಯರಾಜ್ ಬಿಬಿಎಂಪಿ ಆಯುಕ್ತರಾಗಿದ್ದರು. ಹೋರ್ಡಿಂಗ್ ಹಾಕುವುದಕ್ಕೆ ಅವಕಾಶ ಇರಬೇಕೆ, ಬೇಡವೇ ಎಂದು ತೀರ್ಮಾನಿಸಲು ನಂದನ್ ನಿಲೇಕಣಿಯವರ ನೇತೃತ್ವದಲ್ಲಿ ಬೆಂಗಳೂರು ಅಭಿವೃದ್ಧಿ ಕಾರ್ಯಪಡೆ ರಚಿಸಲಾಗಿತ್ತು. ಹೋರ್ಡಿಂಗ್ ಹಾಕುವುದು ಬೇಡ ಎಂದು ಕಾರ್ಯಪಡೆ ಶಿಫಾರಸು ಮಾಡಿದ್ದರು’ ಎಂದು ಮಾಜಿ ಮೇಯರ್ ರಾಮಚಂದ್ರಪ್ಪ ಹೇಳಿದರು.

‘ಹೋರ್ಡಿಂಗ್ ನಿರ್ಬಂಧಿಸಿದರೆ ಪಾಲಿಕೆಗೆ ಆದಾಯ ಬರುವುದಿಲ್ಲವಲ್ಲ ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಆಗ, ಬಸ್ ತಂಗುದಾಣಗಳಲ್ಲಿ ಮಾತ್ರ ಜಾಹೀರಾತು ಹಾಕಲು ಅವಕಾಶ ನೀಡಿ, ಒಂದು ನಿಲ್ದಾಣಕ್ಕೆ ₹24 ಸಾವಿರ ನೆಲದ ಬಾಡಿಗೆ ನಿಗದಿ ಮಾಡಬೇಕು ಎಂದು ಕಾರ್ಯಪಡೆ ಸಲಹೆ ನೀಡಿತು. 2000ನೇ ವರ್ಷದಲ್ಲಿಯೇ ₹1 ಕೋಟಿ ಆದಾಯ ಇದರಿಂದ ಬಂದಿತ್ತು’ ಎಂದು ಅವರು ತಿಳಿಸಿದರು.

ರಾಮಚಂದ್ರಪ್ಪ

‘ಕ್ರಮೇಣ ಎಲ್ಲ ಕಡೆಗೆ ಹೋರ್ಡಿಂಗ್ ಹಾಕಲು ಅವಕಾಶ ನೀಡುತ್ತಾ ಬರಲಾಯಿತು. ಹೋರ್ಡಿಂಗ್‌ಗಳ ಹಾವಳಿ ಹೆಚ್ಚಾಗಿದ್ದರಿಂದ ಕಾಂಗ್ರೆಸ್ ಮೇಯರ್‌ಗಳಿದ್ದಾಗಲೇ ನಿರ್ಬಂಧಿಸಲಾಗಿತ್ತು’ ಎಂದು ಹೇಳಿದರು.

‘ಬಿಬಿಎಂಪಿಯಲ್ಲಿ ಸ್ಥಳೀಯ ಸರ್ಕಾರ ಅಸ್ತಿತ್ವದಲ್ಲೇ ಇಲ್ಲದ ಸಂದರ್ಭದಲ್ಲಿ ಮತ್ತೆ ಹೋರ್ಡಿಂಗ್‌ಗೆ ಅವಕಾಶ ನೀಡಲಾಗಿದೆ. ಜನಪ್ರತಿನಿಧಿಗಳು ಇರದ ವೇಳೆ, ಬಿಬಿಎಂಪಿಯಲ್ಲಿ ಯಾವಾಗಲೂ ಇಂತಹ ತೀರ್ಮಾನ ಕೈಗೊಳ್ಳಲಾಗುತ್ತದೆ. 2007ರಿಂದ 2010ರ ಅವಧಿಯಲ್ಲಿಯೂ ಇಂಥದ್ದೇ ಸಂದರ್ಭವಿತ್ತು. ಆಗ, ವಾಣಿಜ್ಯ ಬ್ಯಾಂಕ್‌ಗಳಿಂದ ಸಾವಿರಾರು ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳಲಾಗಿತ್ತು’ ಎಂದು ಅವರು ನೆನಪಿಸಿಕೊಂಡರು.

‘ನಿರೀಕ್ಷೆಗಿಂತ ₹62 ಕೋಟಿ ಕಡಿಮೆ’

‘ಹೋರ್ಡಿಂಗ್‌ಗೆ ಅವಕಾಶ ನೀಡುವುದರಿಂದ ಪಾಲಿಕೆಗೆ ಎಷ್ಟು ಆದಾಯ ಬರುತ್ತದೆ ಎಂಬುದನ್ನು ಪರಿಶೀಲಿಸಿದ ನಂತರ ಈ ಬಗ್ಗೆ ತೀರ್ಮಾನಿಸಲು ಯೋಚಿಸಲಾಗಿತ್ತು. ಅಧಿಕೃತವಾಗಿ ಹಾಕಿರುವ ಹೋರ್ಡಿಂಗ್‌ಗಳಿಂದಲೇ ₹180 ಕೋಟಿ ಆದಾಯ ನಿರೀಕ್ಷಿಸಿದ್ದೆವು. ಆದರೆ, ಬಂದಿದ್ದು ₹118 ಕೋಟಿ ಮಾತ್ರ’ ಎಂದು ಮಾಜಿ ಮೇಯರ್ ಜಿ. ಪದ್ಮಾವತಿ ಹೇಳಿದರು.

ಜಿ.ಪದ್ಮಾವತಿ

‘ಖಾಸಗಿಯವರು ಹೆಚ್ಚು ಲಾಭ ಮಾಡಿಕೊಳ್ಳುತ್ತಾರೆಯೇ ವಿನಾ ಬಿಬಿಎಂಪಿಗೆ ಇದರಿಂದ ಹೆಚ್ಚು ಪ್ರಯೋಜನ ಆಗುವುದಿಲ್ಲ’ ಎಂದೂ ಅವರು ಹೇಳಿದರು.

ಸರ್ವಾನುಮತದ ತೀರ್ಮಾನ: ‘ನಾನು ಮೇಯರ್ ಆಗಿದ್ದಾಗ, ಹೋರ್ಡಿಂಗ್ ನಿಷೇಧಿಸುವ ಬಗ್ಗೆ ಸುದೀರ್ಘ ಚರ್ಚೆ ನಡೆದಿತ್ತು. ಸದಸ್ಯರೆಲ್ಲರ ಸಲಹೆಯ ನಂತರ, ಸರ್ವಾನುಮತದ ತೀರ್ಮಾನ ತೆಗೆದುಕೊಂಡು ಹೋರ್ಡಿಂಗ್ ಹಾಕುವುದನ್ನು ನಿರ್ಬಂಧಿಸಲಾಗಿತ್ತು’ ಎಂದು ಮಾಜಿ ಮೇಯರ್ ಗಂಗಾಂಬಿಕೆ ಹೇಳಿದರು.

ಗಂಗಾಂಬಿಕೆ

‘ಈ ರೀತಿಯ ಜಾಹೀರಾತುಗಳಿಂದ ಪಾಲಿಕೆಗೆ ಆದಾಯಕ್ಕಿಂತ ನಷ್ಟವೇ ಜಾಸ್ತಿ. ಅಪಘಾತಗಳು ಸಂಭವಿಸುವ ಸಾಧ್ಯತೆಯೂ ಇರುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.

ಬೇರೆ ಮಾರ್ಗಗಳಿವೆ: ‘ದೂರದರ್ಶನ, ದಿನಪತ್ರಿಕೆಗಳು, ಸಾಮಾಜಿಕ ಮಾಧ್ಯಮಗಳು ಸೇರಿದಂತೆ ಜಾಹೀರಾತು ನೀಡಲು ಹಲವು ಮಾರ್ಗಗಳು ಇವೆ. ಹೋರ್ಡಿಂಗ್ ಮೂಲಕವೇ ಜಾಹೀರಾತು ನೀಡಬೇಕು ಎಂಬುದೇನೂ ಇಲ್ಲ. ಹೋರ್ಡಿಂಗ್‌ಗೆ ಅವಕಾಶ ನೀಡಿದರೆ, ಖಾಸಗಿ ಕಂಪನಿಗಳಿಗಿಂತ ರಾಜಕಾರಣಿಗಳ ಜಾಹೀರಾತು ಫಲಕಗಳೇ ಹೆಚ್ಚಾಗಿರುತ್ತವೆ’ ಎಂದು ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ಅಭಿಪ್ರಾಯಪಟ್ಟರು.



ಕಟ್ಟೆ ಸತ್ಯನಾರಾಯಣ

‘ಇದೇ ಕ್ಷೇತ್ರವನ್ನು ನಂಬಿದವರಿಗೆ ಉದ್ಯೋಗ ನಷ್ಟವಾಗುತ್ತದೆ ಎಂಬ ವಾದವೂ ಸರಿಯಲ್ಲ. ಈ ಹಿಂದೆ, ಹೋರ್ಡಿಂಗ್ ನಿಷೇಧಿಸಿದ್ದಾಗ ಅವರೆಲ್ಲ ಬೇರೆ ಮಾರ್ಗ ಕಂಡುಕೊಂಡಿದ್ದರು. ಈಗಲೂ ಬೇರೆ ವೃತ್ತಿಯಲ್ಲಿ ಅವರು ತೊಡಗಿಕೊಂಡಿದ್ದಾರೆ’ ಎಂದರು.

‘ಹೋರ್ಡಿಂಗ್‌ಗೆ ಅವಕಾಶ ನೀಡಿದರೆ, ಗುತ್ತಿಗೆದಾರರು ಮತ್ತು ಕೆಲವು ಅಧಿಕಾರಿಗಳಿಗೆ ಸಹಾಯವಾಗುತ್ತದೆಯೇ ವಿನಾ, ಬಿಬಿಎಂಪಿಗೆ ಆರ್ಥಿಕವಾಗಿ ನಷ್ಟವೇ ಆಗುತ್ತದೆ’ ಎಂದೂ ಅವರು ಅಭಿಪ್ರಾಯಪಟ್ಟರು.

ನೆಲದ ಬಾಡಿಗೆಯೂ ಬರುವುದಿಲ್ಲ: ‘ಸರ್ಕಾರದ ಹೊಸ ಜಾಹೀರಾತು ನೀತಿಯಲ್ಲಿ ಯಾವ, ಯಾವ ಅಂಶಗಳು ಇವೆ ಎಂಬುದನ್ನು ಇನ್ನೂ ನೋಡಿಲ್ಲ. ಆದರೆ, ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆ ಆಗುತ್ತದೆ ಎನ್ನುವುದು ಸತ್ಯ. ಅಲ್ಲದೆ, ಹೋರ್ಡಿಂಗ್‌ಗಳನ್ನು ಸಾಮಾನ್ಯವಾಗಿ ಖಾಸಗಿ ಕಟ್ಟಡಗಳ ಮೇಲೆಯೇ ಹೆಚ್ಚಾಗಿ ಹಾಕಲಾಗಿರುತ್ತದೆ. ಇದರಿಂದ ಬಿಬಿಎಂಪಿಗೆ ನೆಲದ ಬಾಡಿಗೆಯೂ ಬರುವುದಿಲ್ಲ’ ಎಂದು ಮಾಜಿ ಮೇಯರ್ ಗೌತಮ್ ಕುಮಾರ್ ಜೈನ್ ಹೇಳಿದರು.

ಎಂ. ಗೌತಮ್ ಕುಮಾರ್

ಸೋಮಶೇಖರ್ ವರದಿಗೆ ಅಮಿತ್ ಶಾ ಮೆಚ್ಚುಗೆ

ಬೆಂಗಳೂರು: ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯ ಆರಂಭಿಸುವ ಮುನ್ನ ರಾಜ್ಯದಲ್ಲಿನ ಸಹಕಾರ ಕ್ಷೇತ್ರದ ಕುರಿತು ಹಿಂದಿನ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಸಲ್ಲಿಸಿದ್ದ ವರದಿಗೆ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



ಎಸ್‌.ಟಿ. ಸೋಮಶೇಖರ್

ನೂತನ ಸಹಕಾರ ಸಚಿವಾಲಯ ಸ್ಥಾಪನೆಗೆ ಸಿದ್ಧತೆ ನಡೆದಿರುವಾಗಲೇ ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆ, ಅಭಿವೃದ್ಧಿ ಮತ್ತು ಅನುಕೂಲಗಳ ಕುರಿತು ಸೋಮಶೇಖರ್ ವಿಸ್ತೃತ ವರದಿ ಸಲ್ಲಿಸಿದ್ದರು. ವರದಿಯನ್ನು ಪರಿಶೀಲಿಸಿದ ಬಳಿಕ ಪತ್ರ ಬರೆದಿರುವ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು, ಮೆಚ್ಚುಗೆ ಸೂಚಿಸಿದ್ದಾರೆ.

‘ನಿಮ್ಮ ವರದಿಯನ್ನು ನಾನು ಓದಿದ್ದೇನೆ. ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವರದಿಯಲ್ಲಿ ಉಲ್ಲೇಖಿಸಿರುವ ವಿಚಾರಗಳ ಕುರಿತು ತಿಳಿದು ಸಂತೋಷವಾಯಿತು. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಬಳಿಯಲ್ಲೂ ಚರ್ಚಿಸಿರುವೆ’ ಎಂದು ಅಮಿತ್ ಶಾ ಪತ್ರದಲ್ಲಿ ತಿಳಿಸಿದ್ದಾರೆ.

‘ಸಹಕಾರದ ಮೂಲಕ ಅಭಿವೃದ್ಧಿಯ ಪರ್ವ ಕಾಣುವಂತಾಗಬೇಕು ಎಂಬ ನಿಮ್ಮ ಆಶಯವನ್ನು ನಾನೂ ಬೆಂಬಲಿಸುತ್ತೇನೆ. ಅದಕ್ಕೆ ಪೂರಕವಾಗಿ ನೂತನ ಸಹಕಾರ ಸಚಿವಾಲಯ ಕೆಲಸ ಮಾಡಲಿದೆ’ ಎಂದು ಭರವಸೆ ನೀಡಿದ್ದಾರೆ.

ಮೇಕೆದಾಟು ಯೋಜನೆ ತಕ್ಷಣ ಆರಂಭಿಸಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಪಾಲಿನ ನೀರು ಬಳಸಿಕೊಳ್ಳುವ ಮೇಕೆದಾಟು ಯೋಜನೆ ಅನುಷ್ಠಾನ ಮಾಡಬಾರದು ಎಂದು ಯಾವ ಆದೇಶವೂ ಇಲ್ಲ. ಹೀಗಾಗಿ ಈ ಯೋಜನೆಯನ್ನು ಸರ್ಕಾರ ತಕ್ಷಣ ಆರಂಭಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಶಿವಕುಮಾರ್

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ವಿದ್ಯುತ್ ಉತ್ಪಾದನೆ ಹಾಗೂ ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಇದಾಗಿದೆ. ಈ ಯೋಜನೆಯಿಂದ ಒಂದು ಎಕರೆಯೂ ನೀರಾವರಿ ಆಗುವುದಿಲ್ಲ. ತಮಿಳುನಾಡಿನ ಬಿಜೆಪಿ, ಡಿಎಂಕೆ ಅಥವಾ ಬೇರೆ ಪಕ್ಷಗಳು ಏನಾದರೂ ಮಾಡಿಕೊಳ್ಳಲಿ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಹಿಂದೆ ನೀರಾವರಿ ಸಚಿವರಾಗಿದ್ದವರು. ಅವರಿಗೆ ಈ ಯೋಜನೆಯ ಅರಿವಿದೆ’ ಎಂದರು.

‘ಯೋಜನೆಗೆ ಪರಿಸರ ಇಲಾಖೆ ಅನುಮತಿ ಸಿಕ್ಕಿದೆ. ಹೀಗಾಗಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಇತರ ಇಲಾಖೆಗಳ ಅನುಮತಿ ಪಡೆದು, ಆದಷ್ಟು ಬೇಗ ಗುದ್ದಲಿ ಪೂಜೆ ಮಾಡಿ, ಕೆಲಸ ಆರಂಭಿಸಲಿ. ಬೇರೆಯವರ ಮೇಲೆ ದೂರುತ್ತಾ ಕೂರುವುದಲ್ಲ. ಕೆಲಸ ಆರಂಭಿಸಬೇಡಿ ಎಂದು ಯಾವುದಾದರೂ ಆದೇಶ ಇದೆಯೇ’ ಎಂದು ಪ್ರಶ್ನಿಸಿದ ಶಿವಕುಮಾರ್, ‘ನೀವು ಕೆಲಸ ಆರಂಭಿಸಿ. ನಿಮಗೆ ಬೇಕಾದ ಎಲ್ಲ ರೀತಿಯ ಸಹಕಾರ ನಾವು ನೀಡುತ್ತೇವೆ. ಸರ್ಕಾರ ಯಾಕೆ ಇಚ್ಛಾಶಕ್ತಿ ತೋರುತ್ತಿಲ್ಲ ಎನ್ನುವುದು ಗೊತ್ತಿಲ್ಲ’ ಎಂದರು.

ಮನೆಗೆ ಬಂದು ಗಂಟಲು ದ್ರವ ಸಂಗ್ರಹಿಸಿ ನೆರವಾದ ಸ್ನೇಹಿತ

‘ಗೆಳೆತನವನ್ನು ಗೆಲ್ಲಿಸಿದ ಕೋವಿಡ್ ಪರೀಕ್ಷೆ’

● ವರುಣ್ ಗಜಾನನ ಹೆಗಡೆ

ಬೆಂಗಳೂರು: ‘ಜ್ವರದ ತೀವ್ರತೆಗೆ ಮನೆಯಿಂದ ಹೊರಗಡೆ ಹೋಗುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಪತ್ನಿಗೆ ಕೂಡ ಜ್ವರ ಬಂದಾಗ ದಿಕ್ಕು ತೋಚಲಿಲ್ಲ. ಆ ವೇಳೆ ಮನೆಗೆ ಬಂದ ಸ್ನೇಹಿತ, ಕೋವಿಡ್ ಪರೀಕ್ಷೆಗೆ ಗಂಟಲು ದ್ರವ ಸಂಗ್ರಹಿಸಿ, ಧೈರ್ಯ ತುಂಬಿದ. ಇದರಿಂದಾಗಿ ನಮ್ಮ ಸ್ನೇಹ ಇನ್ನಷ್ಟು ಗಟ್ಟಿಗೊಳ್ಳುವ ಜೊತೆಗೆ ಕೋವಿಡ್ ಜಯಿಸಲು ಸಾಧ್ಯವಾಯಿತು.’

ಹರೀಶ್ ಹಾಗಲವಾಡಿ

ಇದು ಹನುಮಂತನಗರದ ಹರೀಶ್ ಹಾಗಲವಾಡಿ ಅವರ ಮನದಾಳದ ಮಾತುಗಳು. ವಿಜಯನಗರ ಟೋಲ್ ಗೇಟ್ ಬಳಿ ಇರುವ ಎಎಸ್‌ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ಕಳೆದ ಏಪ್ರಿಲ್‌ನಲ್ಲಿ ಕೋವಿಡ್ ಪೀಡಿತರಾಗಿದ್ದರು. ಪತ್ನಿಗೆ ಕೂಡ ಕೊರೊನಾ ಸೋಂಕು ತಗುಲಿತ್ತು. ಮನೆಯಲ್ಲಿ ಬೇರೆ ಸದಸ್ಯರು ಇರದ ಕಾರಣ ಅವರು ಆತಂಕಕ್ಕೆ ಒಳಗಾಗಿದ್ದರು. ಈ ವೇಳೆ ಅವರಿಗೆ ಸ್ನೇಹಿತರಾದ ಮೈಲಾರಿ ಮತ್ತು ಪ್ರಶಾಂತ್ ನೆರವಾಗಿದ್ದರು. ಇವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶುಶ್ರೂಷಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ.

‘ಜ್ವರ, ತಲೆನೋವು ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಕೂಡಲೇ ನಾನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ, ಕೋವಿಡ್ ಪರೀಕ್ಷೆಗೆ ಗಂಟಲ ದ್ರವದ ಮಾದರಿ ನೀಡಿದೆ. ಎರಡು ದಿನಗಳ ಬಳಿಕ ಜ್ವರ ಹೆಚ್ಚಾಯಿತು. ಪತ್ನಿಗೆ ಕೂಡ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಆ ವೇಳೆ ಆಸ್ಪತ್ರೆಗೆ ಹೋಗುವ ಅಥವಾ ಕರೆದೊಯ್ಯುವ ಸ್ಥಿತಿಯಲ್ಲಿ ನಾನು ಇರಲಿಲ್ಲ. ಈ ವಿಷಯವನ್ನು ಸ್ನೇಹಿತರಿಗೆ ತಿಳಿಸಿದೆ. ಬಿಡುವಿಲ್ಲದ ಕೆಲಸದ ನಡುವೆಯೂ ಅವರು ಮನೆಗೆ ಬಂದು, ಕೋವಿಡ್ ಪರೀಕ್ಷೆಗೆ ಪತ್ನಿಯ ಗಂಟಲ ದ್ರವವನ್ನು ಸಂಗ್ರಹಿಸಿದರು’ ಎಂದು ಹರೀಶ್ ತಿಳಿಸಿದರು.

‘ಮೂರು ದಿನಗಳ ಬಳಿಕ ಪರೀಕ್ಷಾ ವರದಿಯಲ್ಲಿ ನಾನು ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿತು. ಪತ್ನಿಗೆ ಕೂಡ ಸೋಂಕು ತಗಲಿರುವುದು ಖಚಿತವಾಯಿತು. ಆ ವೇಳೆ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದಿತ್ತು. ಏನು ಮಾಡಬೇಕೆಂದು ತೋಚದೆ ಕಂಗಾಲಾಗಿದ್ದೆ. ಆ ದಿನಗಳಲ್ಲಿ ಸ್ನೇಹಿತರ ಮಾರ್ಗದರ್ಶನವೇ ಕೋವಿಡ್ ಎದುರಿಸಲು ನೆರವಾಯಿತು’ ಎಂದು ವಿವರಿಸಿದರು.

‘ಯಾವ ರೀತಿಯಲ್ಲಿ ಆರೈಕೆ ಮಾಡಿಕೊಳ್ಳಬೇಕು? ಆಹಾರ ವಿಧಾನ ಹೇಗಿರಬೇಕು? ರೋಗನಿರೋಧಕ ಶಕ್ತಿ ವೃದ್ಧಿಗೆ ಯಾವೆಲ್ಲ ಆಹಾರವನ್ನು ಸೇವಿಸಬೇಕು ಎಂಬ ಮಾರ್ಗದರ್ಶನ ಅವರಿಂದಲೇ ದೊರೆಯಿತು. ಪ್ರತಿನಿತ್ಯ ದೂರವಾಣಿ ಕರೆ ಮಾಡಿ, ಆರೋಗ್ಯ ವಿಚಾರಿಸುತ್ತಿದ್ದರು. ಅವರ ಮಾತುಗಳು ನಮಗೆ ಆತ್ಮವಿಶ್ವಾಸ ಹೆಚ್ಚಿಸುತ್ತಿದ್ದವು. ಇದರಿಂದ ಬೇಗ ಚೇತರಿಸಿಕೊಳ್ಳಲು ಸಾಧ್ಯವಾಯಿತು. ದೀರ್ಘಕಾಲಿನ ನಮ್ಮ ಸ್ನೇಹ ಇನ್ನಷ್ಟು ಗಟ್ಟಿಯಾಯಿತು’ ಎಂದು ಹೇಳಿದರು.

ಬಿಜೆಪಿ ಬ್ಯಾನರ್‌ನಲ್ಲಿ ಬಿಎಸ್‌ವೈ ಫೋಟೊ ನಾಪತ್ತೆ!

ಬೆಂಗಳೂರು: ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ಬೆನ್ನಲ್ಲೇ ಬಿಜೆಪಿಯ ಬ್ಯಾನರ್‌ಗಳಿಂದಲೂ ಅವರ ಫೋಟೊ ತೆರವಾಗಿದೆ!

ಯಶವಂತಪುರ ಮಂಡಲ ಮಹಿಳಾ ಮೋರ್ಚಾ ಹಾಗೂ ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಶನಿವಾರ ನಡೆದಿವೆ. ಎರಡೂ ಸಭೆಗಳ ವೇದಿಕೆಯಲ್ಲಿ ಅಳವಡಿಸಿದ್ದ ಬ್ಯಾನರ್‌ಗಳಲ್ಲಿ ಯಡಿಯೂರಪ್ಪ ಅವರ ಭಾವಚಿತ್ರವೇ ಇರಲಿಲ್ಲ.

ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಡಿ.ವಿ. ಸದಾನಂದ ಗೌಡ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಹಲವರ ಭಾವಚಿತ್ರಗಳನ್ನು ಬ್ಯಾನರ್‌ನಲ್ಲಿ ಹಾಕಲಾಗಿತ್ತು. ಆದರೆ, ಯಡಿಯೂರಪ್ಪ ಅವರ ಭಾವಚಿತ್ರವನ್ನು ಕೈಬಿಡಲಾಗಿತ್ತು.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಐದು ದಿನ ಕಳೆಯುವಷ್ಟರಲ್ಲೇ ಯಡಿಯೂರಪ್ಪ ಅವರ ಫೋಟೋವನ್ನು ಪಕ್ಷದ ಬ್ಯಾನರ್‌ನಿಂದಲೂ ಕೈಬಿಟ್ಟಿರುವ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಬಿಜೆಪಿ ಮುಖಂಡರ ನಿರ್ಧಾರಕ್ಕೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಹಾಯಧನಕ್ಕೆ ಅರ್ಜಿ ಆಹ್ವಾನ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ತೋಟಗಾರಿಕೆ ಇಲಾಖೆಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಹಾಯಧನಕ್ಕೆ ರೈತರಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತರು ಅರ್ಹ ದಾಖಲೆಗಳೊಂದಿಗೆ ಆಗಸ್ಟ್ 10ರೊಳಗೆ ಅರ್ಜಿ ಸಲ್ಲಿಸುವಂತೆ ಇಲಾಖೆ ಪ್ರಕಟಣೆ ತಿಳಿಸಿದೆ. **ಸಂಪರ್ಕ:** 9901754339

SSM Public School — A PES Group of Institution — www.ssm.school

IF TEACHING IS YOUR PASSION, JOIN US

SSM INVITES APPLICATIONS FROM OUTSTANDING TEACHERS WITH EXPERIENCE & PROVEN RECORD FOR FOLLOWING CBSE APPROVED PROGRAMS

PRE-PRIMARY
Montessori or Nursery Trained Graduate teachers for all subjects.

PRIMARY
Trained Graduate Teachers with experience in teaching all subjects.

SECONDARY
Trained Graduate / Post Graduate Teachers to teach English, Mathematics & Social Science.

Also invited application for:
QUALIFIED MUSIC & PHYSICAL EDUCATION TEACHERS

Interested applicants may send their Resume to:
ssmpublicschool1967@gmail.com
Alternatively, it may be sent by post, or handed over in person, to the Principal at the following address:
SSM School, No 1, Chennamana Tank Bed, Opp to Thyagarajnagar Corporation Office, Banashankari 2nd Stage, Bangalore-560 028.
+91 80 26764054 / 26770369

Karnataka Golf Association
No.1, Golf Avenue, Kodihalli, Bengaluru - 560 008.

NOTICE

Notice is hereby given under Rule 19.7 of the Karnataka Golf Association read with 11 (3) of Karnataka Societies Registration Act 1960 of a Special General Meeting of the Members of Karnataka Golf Association to be held at the KGA Club House on **Wednesday** the **1st September 2021** at **3.00 PM** to consider and pass certain resolutions circulated to all Members individually.
Notice is hereby given that the 45th Annual General Meeting of the Karnataka Golf Association will be held at the KGA Club House on **Wednesday** the **1st September 2021** at **6.00 PM**.
Due to the pandemic, elections could not be held in 2020 and in accordance with rule 19.6.7 the same stand postponed to the 46th Annual General Meeting.

Date: 01.08.2021.
Place: Bengaluru.
Sd/-
Prithvi Raj Urs
Hon. Secretary

ಕೈಮಗ್ಗ ಮತ್ತು ಜವಳಿ ಇಲಾಖೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಕೋವಿಡ್–19 2ನೇ ಅಲೆಯ ಸಂಕಷ್ಟದ ಪ್ರಯುಕ್ತ

ಪವರ್ ಲೂಮ್ ನೇಕಾರರಿಗೆ

ಆರ್ಥಿಕ ಬೆಂಬಲ

- ಕೋವಿಡ್–19 2ನೇ ಅಲೆಯ ಸಂಕಷ್ಟದ ಪ್ರಯುಕ್ತ ರಾಜ್ಯದ ವಿದ್ಯುತ್ ಮಗ್ಗ ನೇಕಾರ/ಕೆಲಸಗಾರರಿಗೆ ತಲಾ ₹ 3,000/–ಗಳ ಆರ್ಥಿಕ ಬೆಂಬಲ.
- ನೋಂದಾಯಿತ ಅರ್ಹ 51,569 ಫಲಾನುಭವಿಗಳಿಗೆ ದಿನಾಂಕ: 16.07.2021 ರವರೆಗೆ ಆಧಾರ್ ಸಂಖ್ಯೆ ಆಧಾರಿತ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮೂಲಕ ₹ 15.47 ಕೋಟಿಗಳನ್ನು ವಿತರಿಸಲಾಗಿದೆ.
- ಅರ್ಜಿ ಸಲ್ಲಿಸದ ಅರ್ಹ ಫಲಾನುಭವಿಗಳು ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ಕಛೇರಿಗಳಿಂದ ಆನ್‌ಲೈನ್‌ನಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ದಿನಾಂಕ: 10.08.2021ರೊಳಗೆ ಅರ್ಜಿಯನ್ನು ಸಲ್ಲಿಸಬಹುದು.
- ಸಲ್ಲಿಸಬೇಕಾದ ದಾಖಲಾತಿಗಳು :– ■ ಆಧಾರ್ ಕಾರ್ಡ್ & ಸಮ್ಮತಿ ಪತ್ರ ■ ವಿದ್ಯುತ್ ಮಗ್ಗ ಘಟಕ / ಪೂರಕ ಚಟುವಟಿಕೆಯಲ್ಲಿನ ಆರ್.ಆರ್.ಸಂಖ್ಯೆ/ಬಿಲ್ ಪ್ರತಿ ■ ಘಟಕದ ಮಾಲೀಕರಿಂದ ನೇಕಾರ / ಕೆಲಸಗಾರರ ವಿವರಗಳ ದೃಢೀಕರಣ ಪತ್ರ ಇತ್ಯಾದಿ.

ಹೆಚ್ಚಿನ ವಿವರ ಹಾಗೂ ನೋಂದಣಿ ಕೇಂದ್ರಗಳ ಮಾಹಿತಿಗಾಗಿ:–
ಉಪ/ಸಹಾಯಕ ನಿರ್ದೇಶಕರು, ಜಿಲ್ಲಾ ಕೈಮಗ್ಗ ಮತ್ತು ಜವಳಿ ಇಲಾಖೆಯ ಕಛೇರಿ ಹಾಗೂ ವಿಭಾಗ ಮಟ್ಟದ ಜಂಟಿ ನಿರ್ದೇಶಕರ ಕಛೇರಿಗಳನ್ನು ಸಹ ಸಂಪರ್ಕಿಸುವುದು.
ಉತ್ತರ ವಲಯ (ಬಳ್ಳಾರಿ)–08392–242073, ದಕ್ಷಿಣ ವಲಯ (ಬೆಂಗಳೂರು)–080–22860495
ಪೂರ್ವ ವಲಯ (ತುಮಕೂರು)–0816–2270653, ಪಶ್ಚಿಮ ವಲಯ (ಬೆಳಗಾವಿ)–0831–2407225

ಜವಳಿ ಅಭಿವೃದ್ಧಿ ಆಯುಕ್ತರವರ ಕಛೇರಿ ವೆಬ್‌ಸೈಟ್ : www.karnatakadht.org
ದೂರವಾಣಿ ಸಂಖ್ಯೆ : 080 23568223 ಸಂಪರ್ಕಿಸುವುದು

ಉಪೇಂದ್ರ ಪ್ರತಾಪ್ ಸಿಂಗ್, ಭಾ.ಆ.ಸೇ
ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ ಇಲಾಖೆ

ಪಂಕಜ್ ಕುಮಾರ್ ಪಾಂಡೆ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
(ಎಂ.ಎಸ್.ಎಂ.ಇ & ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಾಸಾಸಂಇ/ಕೈ.ಜ.ಇ./48/2021-22

“ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು”
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿ (ಕಿಲ್ಟ್)

ತಾಂತ್ರಿಕ ಶಿಕ್ಷಣ ಇಲಾಖೆ DTE ಹಾಗೂ AICTE ಯಿಂದ ಅನುಮೋದಿತ
(ಸರ್ಕಾರಿ ಸ್ವಾಮ್ಯದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಶಿಕ್ಷಣ ಸಂಸ್ಥೆ)

2021-22ನೇ ಸಾಲಿಗೆ ಪ್ರವೇಶ ಪ್ರಾರಂಭ

03 ವರ್ಷದ ಡಿಪ್ಲೊಮಾ ಇನ್ ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿ

- ವಿದ್ಯಾರ್ಹತೆ ಕನಿಷ್ಠ 10ನೇ ತರಗತಿ/ಪದವಿ ಪೂರ್ವ ಉತ್ತೀರ್ಣರಾಗಿರಬೇಕು.
- ಅಂತರರಾಷ್ಟ್ರೀಯ ಗುಣಮಟ್ಟದ ತಾಂತ್ರಿಕ ಪ್ರಯೋಗಾಲಯ ಹಾಗೂ ಮೂಲಭೂತ ಸೌಕರ್ಯ.
- ಅತ್ಯಾಧುನಿಕ ತಾಂತ್ರಿಕ ಸ್ಮಾರ್ಟ್ ಕ್ಲಾಸೆಸ್.
- ವಿದ್ಯಾರ್ಥಿಗಳಿಗೆ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗುವುದು.
- ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ.
- ಇತರೆ ವರ್ಗದ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ 75% ವಿನಾಯಿತಿ.
- ವ್ಯಾಯಾಮ ಶಾಲೆ, ಒಳಾಂಗಣ ಮತ್ತು ಹೊರಾಂಗಣ ಕ್ರೀಡೆ ಸೌಲಭ್ಯ.

ತ್ವರೆಮಾಡಿ ಕೇವಲ 45 ಸೀಟುಗಳು ಮಾತ್ರ ಲಭ್ಯವಿದೆ ಆದ್ಯತೆ ಮೇರೆಗೆ ಪ್ರವೇಶ

ಪ್ರವೇಶ ಪಡೆಯಲು ಸಂಪರ್ಕಿಸಿ: 8618484321, 9845214202, 9448503738
Website: www.kilt.karnataka.gov.in, e-Mail: kiltbangalore133@gmail.com
ಬಿಎಂಟಿಸಿ ಬಸ್‌ಸ್ಟಾಪ್ ಹತ್ತಿರ, ಉಲ್ಲಾಳ ಉಪನಗರ, ಬೆಂಗಳೂರು–560110

ತಾಂತ್ರಿಕ ಶಿಕ್ಷಣ ಇಲಾಖೆಯ 372 ಬೋಧಕರ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಯ 372 ಬೋಧಕರ ವರ್ಗಾವಣೆಗೆ ನಡೆಸಲಾದ ಕೌನ್ಸೆಲಿಂಗ್ ಮುಗಿದಿದ್ದು, ಈ ಬೋಧಕರಿಗೆ ಸ್ಥಳ ನಿಯೋಜನೆ ಮಾಡಿ ಆದೇಶ ಹೊರಡಿಸಲಾಗಿದೆ' ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ತಿಳಿಸಿದ್ದಾರೆ.

'ಜನಸ್ನೇಹಿ ಮತ್ತು ಪಾರದರ್ಶಕವಾಗಿ ವರ್ಗಾವಣೆ ಪ್ರಕ್ರಿಯೆ ನಡೆಸಲು ತಾಂತ್ರಿಕ ವ್ಯವಸ್ಥೆ ಬಳಸಿಕೊಂಡು ಕೌನ್ಸೆಲಿಂಗ್ ನಡೆಸಲಾಗಿದೆ. ಈ ಮೊದಲೇ ರೂಪಿಸಿದ್ದ ವರ್ಗಾವಣೆ ನೀತಿಯ ಪ್ರಕಾರ ಜುಲೈ 27ರಿಂದ 30ರವರೆಗೂ ಕೌನ್ಸೆಲಿಂಗ್ ನಡೆಸಲಾಗಿದೆ' ಎಂದಿದ್ದಾರೆ.

'ಕೌನ್ಸೆಲಿಂಗ್ ಪೂರ್ವದಲ್ಲಿ ಕಡ್ಡಾಯ ವರ್ಗಾವಣೆಗೆ ಅರ್ಹರಿದ್ದ ಶೇ 6 ಬೋಧಕರ ಪಟ್ಟಿ ಪ್ರಕಟಿಸಲಾಗಿತ್ತು. ಜತೆಗೆ, ಕೋರಿಕೆ ವರ್ಗಾವಣೆ ಕೇಳಿರುವ ಪತಿ-ಪತ್ನಿಯರ ಪ್ರಕರಣಗಳ ಶೇ 3, ಅಂಗವಿಕಲರ ಶೇ 1, ವಿಧವೆ ಅಥವಾ ಏಕಪೋಷಕ ಪ್ರಕರಣಗಳ ಶೇ 1, ಆರೋಗ್ಯ ಸೇರಿದಂತೆ ಗಂಭೀರ ಪ್ರಕರಣಗಳ ಶೇ 1 ಸೇರಿ ಎಲ್ಲ ವಲಯಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಪಟ್ಟಿ ಪ್ರಕಟಿಸಿ ಕೌನ್ಸೆಲಿಂಗ್ ನಡೆಸಲಾಗಿದೆ' ಎಂದು ಪ್ರದೀಪ್ ಹೇಳಿದ್ದಾರೆ.

'ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ 307, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ 5 ಹಾಗೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ 60 ಬೋಧಕರು ಕೌನ್ಸೆಲಿಂಗ್‌ಗೆ ಹಾಜರಾಗಿದ್ದು, ಎಲ್ಲರೂ ಸ್ಥಳ ಆಯ್ಕೆ ಮಾಡಿಕೊಂಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ನಿಯೋಜನೆ ರದ್ದು: ಸರ್ಕಾರಿ ಪಾಲಿಟೆಕ್ನಿಕ್, ಕಿರಿಯ ತಾಂತ್ರಿಕ ಶಾಲೆ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದ 317 ಬೋಧಕರ ನಿಯೋಜನೆ ಆದೇಶವನ್ನು ಹಿಂಪಡೆಯಲಾಗಿದೆ ಎಂದೂ ಅವರು ಹೇಳಿದ್ದಾರೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 4544 8000; ಫ್ಯಾಕ್ಸ್: +91 80 3985 6862;
ಇಮೇಲ್: investor.india@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLLC024991

22ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಇ-ಮತದಾನದ ಸೂಚನೆ

ಕಂಪನಿಗಳ ಕಾಯ್ದೆ, 2013 (ಕಾಯ್ದೆ) ಮತ್ತು ನಿಯಮಗಳ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಯ ಎಜಿಎಂ ಪ್ರಕಟಣೆಯಲ್ಲಿ ಸೂಚಿಸಿರುವಂತೆ ವ್ಯವಹಾರಗಳನ್ನು ನಡೆಸಲು ವೀಡಿಯೊ ಕಾನ್ಫರೆನ್ಸಿಂಗ್ ("VC") / ಇತರ ಆಡಿಯೊ ದೃಶ್ಯ ಸಾಧನಗಳ ಮೂಲಕ (OAVM). ಅದರ ಮೇಲೆ ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 (ಸೆಬಿ (ಲಿಸ್ಟಿಂಗ್ ರೆಗ್ಯುಲೇಷನ್)), ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಹೊರಡಿಸಿದ ಸುತ್ತೋಲೆಗಳೊಂದಿಗೆ ಓದಿ, ಏಪ್ರಿಲ್ 13, 2020 ರ ಸುತ್ತೋಲೆ ಸಂಖ್ಯೆ 17/2020, ಮೇ 05, 2020 ರ ಸುತ್ತೋಲೆ ಸಂಖ್ಯೆ 20/2020 ಮತ್ತು ಜನವರಿ 13, 2021 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 02/2021 ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿದ ಸುತ್ತೋಲೆ (ಸೆಬಿ) ತನ್ನ ಸುತ್ತೋಲೆ ಸಂಖ್ಯೆ SEBI/HO/CFD/CMD1/CIR/P/2020/79 ಅನ್ನು ಮೇ 12, 2020 ರ ದಿನಾಂಕ ಮತ್ತು ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2021/11 ಜನವರಿ 15, 2021ರಂದು ವೀಕ್ಷಿಸಿ (ಒಟ್ಟಾರೆಯಾಗಿ ಸಂಬಂಧಿತ ಸುತ್ತೋಲೆಗಳು ಅಥವಾ ಸುತ್ತೋಲೆಗಳು ಎಂದು ಕರೆಯಲಾಗುತ್ತದೆ). ಕಂಪನಿಯ ಇಕ್ವಿಟಿ ಷೇರುದಾರರ ಇಪ್ಪತ್ತೆರಡನೇ ವಾರ್ಷಿಕ ಸಾಮಾನ್ಯ ಸಭೆ (ಸಭೆ / ಎಜಿಎಂ) 2021 ರ ಆಗಸ್ಟ್ 26 ರ ಗುರುವಾರ ಮಧ್ಯಾಹ್ನ 3.30 ಕ್ಕೆ ನಡೆಯಲಿದೆ ಎಂದು ಸೂಚನೆ ನೀಡಲಾಗಿದೆ.

ಕಂಪನಿಯ ಎಜಿಎಂನ ನೋಟೀಸ್ ಜೊತೆಗೆ 2020–21ರ ಹಣಕಾಸು ವರ್ಷದ ವಾರ್ಷಿಕ ವರದಿಯಲ್ಲಿ ನಿರ್ದೇಶಕರ ಅಂತರ ವರದಿ, ಲಾಭ ಮತ್ತು ನಷ್ಟದ ಹೇಳಿಕೆ, ಬ್ಯಾಲೆನ್ಸ್ ಶೀಟ್ ಮತ್ತು ಅದರ ಲೆಕ್ಕ ಪರಿಶೋಧಕರ ವರದಿಯನ್ನು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಕಳುಹಿಸಲಾಗುತ್ತಿದೆ. ಆ ಷೇರುದಾರರಿಗೆ, ಜುಲೈ 23, 2021 ರಂತೆ, ಅವರ ಇಮೇಲ್ ವಿಳಾಸಗಳನ್ನು ಕಂಪನಿ / ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲಾಗಿದೆ. 2020–21ರ ವಾರ್ಷಿಕ ವರದಿಯೊಂದಿಗೆ ಎಜಿಎಂನ ಸೂಚನೆ ಕಂಪನಿಯ ವೆಬ್‌ಸೈಟ್ www.diageoindia.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿ ಅಂದರೆ ಬಿಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಲಭ್ಯವಿವೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ರೆಗ್ಯುಲೇಷನ್ಸ್)ನ ನಿಯಮ 44 ರೊಂದಿಗೆ ಓದಿ ಕಾಯಿದೆಯ ಸೆಕ್ಷನ್ 108ರ ನಿಬಂಧನೆಗಳಿಗೆ ಅನುಸಾರವಾಗಿ, ಕಂಪನಿಯು ತನ್ನ ಸದಸ್ಯರಿಗೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಎಜಿಎಂನಲ್ಲಿ ಅಂಗೀಕರಿಸಲು ಪ್ರಸ್ತಾಪಿಸಲಾದ ನಿರ್ಣಯಗಳ ಮೇಲೆ, ರಿಮೋಟ್ ಇ-ವೋಟಿಂಗ್ ಮತ್ತು ಇ-ವೋಟಿಂಗ್ ಎಜಿಎಂ ಸಮಯದಲ್ಲಿ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಸೇವೆಗಳ ಮೂಲಕ ಸೌಲಭ್ಯವನ್ನು ಒದಗಿಸುತ್ತಿದೆ. ರಿಮೋಟ್ ಇ-ಮತದಾನ ಸೌಲಭ್ಯವು ಆಗಸ್ಟ್ 23, 2021 ರಂದು ಬೆಳಿಗ್ಗೆ 10.00 ರಿಂದ (IST) ಪ್ರಾರಂಭವಾಗಲಿದೆ ಮತ್ತು ಆಗಸ್ಟ್ 25, 2021 ರಂದು ಸಂಜೆ 5 ಗಂಟೆಗೆ ಕೊನೆಗೊಳ್ಳುತ್ತದೆ. (IST). ಇ-ವೋಟಿಂಗ್ ಮಾಡ್ಯೂಲ್ ಅನ್ನು CDSL ನಿಂದ ನಿಷ್ಕ್ರಿಯಗೊಳಿಸುತ್ತದೆ. ಎಜಿಎಂನ ವಿಸಿ / ಒಎವಿಎಂ ಸೌಲಭ್ಯದಲ್ಲಿ ಇರುವ ಮತ್ತು ದೂರಸ್ಥ ಇ-ಮತದಾನದ ಮೂಲಕ ಮತ ಚಲಾಯಿಸದ ಸದಸ್ಯರು ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದ ಸದಸ್ಯರು, ಎಜಿಎಂ ಸಮಯದಲ್ಲಿ ಲಭ್ಯವಿರುವ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಸದಸ್ಯರು / ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಕಟ್-ಆಫ್ ದಿನಾಂಕದಂದು ಅಂದರೆ ಆಗಸ್ಟ್ 19, 2021 ರಂದು ಹೆಸರು ದಾಖಲಾಗಿರುವ ವ್ಯಕ್ತಿಯು ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂ ಸಮಯದಲ್ಲಿ ಇ-ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕದ ಆರಂಭದಲ್ಲಿ ಅಂದರೆ ಆಗಸ್ಟ್ 19, 2021 ರಂತೆ ಕಂಪನಿಯಲ್ಲಿ ಅವರ ಷೇರುದಾರರಿಗೆ ಅನುಗುಣವಾಗಿರಬೇಕು.

VC/OAVM ಸೌಲಭ್ಯದ ಮೂಲಕ ಎಜಿಎಂನಲ್ಲಿ ಹಾಜರಿರುವ ಮತ್ತು ದೂರಸ್ಥ ಇ-ಮತದಾನದ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸದ ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದ ಷೇರುದಾರರು ಮಾತ್ರ ಈ ಸಮಯದಲ್ಲಿ ಲಭ್ಯವಿರುವ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ ಎಜಿಎಂ. ಎಜಿಎಂ ಸಮಯದಲ್ಲಿ ಲಭ್ಯವಿರುವ ಇ-ಮತದಾನದ ಮೂಲಕ ಷೇರುದಾರರಿಂದ ಯಾವುದೇ ಮತಗಳನ್ನು ಚಲಾಯಿಸಿದರೆ ಮತ್ತು ಅದೇ ಷೇರುದಾರರು VC/OAVM ಸೌಲಭ್ಯದ ಮೂಲಕ ಸಭೆಯಲ್ಲಿ ಭಾಗವಹಿಸದಿದ್ದರೆ, ಅಂತಹ ಷೇರುದಾರರು ನೀಡಿದ ಮತಗಳನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ, ಸೌಲಭ್ಯದಂತೆ ಸಭೆಯಲ್ಲಿ ಇ-ಮತದಾನವು ಸಭೆಯಲ್ಲಿ ಭಾಗವಹಿಸುವ ಷೇರುದಾರರಿಗೆ ಮಾತ್ರ ಲಭ್ಯವಿದೆ. ದೂರಸ್ಥ ಇ-ಮತದಾನದ ಮೂಲಕ ಮತ ಚಲಾಯಿಸಿದ ಷೇರುದಾರರು ಎಜಿಎಂಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಆದಾಗ್ಯೂ, ಅವರು ಎಜಿಎಂ ಸಮಯದಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ಎಜಿಎಂನ ಸೂಚನೆ ರವಾನೆಯಾದ ನಂತರ ಕಂಪನಿಯ ಷೇರುದಾರರಾಗಿರುವ ಮತ್ತು ಪಡೆಯುವ ಯಾವುದೇ ವ್ಯಕ್ತಿಗಳು ಮತ್ತು ಕಟ್-ಆಫ್ ದಿನಾಂಕದಂದು ಷೇರುಗಳನ್ನು ಹಿಡಿದಿಟ್ಟುಕೊಳ್ಳುವುದು ಅಂದರೆ ಆಗಸ್ಟ್ 19, 2021 ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಬಹುದು ಅಥವಾ AGM ಸಮಯದಲ್ಲಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯುವ ಮೂಲಕ helpdesk.evoting@cdslindia.com ಗೆ ಇಮೇಲ್ ಕಳುಹಿಸುವ ಮೂಲಕ ಮತ ಚಲಾಯಿಸಬಹುದು. ಅವರ ಫೋಲಿಯೊ ನಂ./ಡಿಪಿ ಐಡಿ ಕ್ಲೈಂಟ್ ಐಡಿ ಆದಾಗ್ಯೂ, ಅಂತಹ ಷೇರುದಾರರನ್ನು ಈಗಾಗಲೇ ಇ-ಮತದಾನಕ್ಕಾಗಿ ಸಿಡಿಎಸ್‌ಎಲ್‌ನಲ್ಲಿ ನೋಂದಾಯಿಸಿದ್ದರೆ, ಮತ ಚಲಾಯಿಸಲು ಅಸ್ತಿತ್ವದಲ್ಲಿರುವ ಬಳಕೆದಾರರ ಐಡಿ ಮತ್ತು ಪಾಸ್ವರ್ಡ್ ಅನ್ನು ಬಳಸಬಹುದು. ಅಂತಹ ಸದಸ್ಯರು ಕಂಪನಿಯ ವೆಬ್‌ಸೈಟ್‌ನಿಂದ www.diageoindia.com ನಲ್ಲಿ ಸಭೆಯ ಪ್ರಕಟಣೆಯನ್ನು ಪಡೆಯಬಹುದು ಅಥವಾ investor.india@diageo.com ಅಥವಾ bglsta@integratedindia.in ಗೆ ಬರೆಯಿರಿ. ಎಜಿಎಂನ ಸೂಚನೆ ಸಿಡಿಎಸ್‌ಎಲ್ ಇ-ವೋಟಿಂಗ್ ವೆಬ್‌ಸೈಟ್ www.evotingindia.com ನಲ್ಲಿ ಲಭ್ಯವಿರುತ್ತದೆ.

ಕ್ರಮ. ಸಂಖ್ಯೆ.	ವಿವರಗಳು	ದಿನ, ದಿನಾಂಕ ಮತ್ತು ಸಮಯ
1.	22 ನೇ ಎಜಿಎಂ ನೋಟಿಸ್ ರವಾನೆ ಪೂರ್ಣಗೊಂಡ ದಿನಾಂಕ:	**ಶನಿವಾರ, ಜುಲೈ 31, 2021**
2.	ದೂರಸ್ಥ ಇ-ಮತದಾನ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ:	**ಆಗಸ್ಟ್ 23, 2021 ಸೋಮವಾರ ಬೆಳಿಗ್ಗೆ 10 ಗಂಟೆಗೆ (10.00 ಗಂಟೆಗಳ ಐಎಸ್ಟಿ)**
3.	ದೂರಸ್ಥ ಇ-ಮತದಾನ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ:	**ಆಗಸ್ಟ್ 25, 2021 ಬುಧವಾರ ಸಂಜೆ 5 ಗಂಟೆಗೆ (17.00 ಗಂಟೆಗಳ ಐಎಸ್ಟಿ)**
4.	ಕಟ್-ಆಫ್ ದಿನಾಂಕ	**ಆಗಸ್ಟ್ 19, 2021**

ಡಿಮೆಟೀರಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಠೇವಣಿ ಭಾಗವಹಿಸುವವರೊಂದಿಗೆ (ಡಿಪಿ) ತಮ್ಮ ಇಮೇಲ್ ವಿಳಾಸಗಳನ್ನು ತಮ್ಮ ಡಿಪಿಯೊಂದಿಗೆ ನೋಂದಾಯಿಸದ / ನವೀಕರಿಸದಿರುವವರು, ತಮ್ಮ ಇಮೇಲ್ ವಿಳಾಸಗಳನ್ನು ಸಂಬಂಧಿತ ಡಿಪಿಯಲ್ಲಿ ನೋಂದಾಯಿಸಲು / ನವೀಕರಿಸಲು ಕೋರಲಾಗಿದೆ. ಕಂಪನಿಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ / ನವೀಕರಿಸದ ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟರಿಗೆ ("ಆರ್‌ಟಿಎ") bglsta@integratedindia.in ನಲ್ಲಿ ಬರೆಯುವ ಮೂಲಕ ನೋಂದಾಯಿಸಲು / ನವೀಕರಿಸಲು ಕೋರಲಾಗಿದೆ. ಹೆಸರು, ಫೋಲಿಯೊ ಸಂಖ್ಯೆ, ಪಿನ್ ಕೋಡ್‌ನೊಂದಿಗೆ ವಿಳಾಸ, ಸಂಪರ್ಕ ಸಂಖ್ಯೆ, ಜೊತೆಗೆ ಪ್ಯಾನ್ ಕಾರ್ಡ್‌ನ ಸ್ವಯಂ ದೃಢೀಕರಿಸಿದ ಪ್ರತಿಗಳು ಮತ್ತು ವಿಳಾಸ ಪುರಾವೆ (ಆಧಾರ್ ಕಾರ್ಡ್ / ಮತದಾರರ ಗುರುತಿನ ಚೀಟಿ / ಪಾಸ್‌ಪೋರ್ಟ್) ಅನ್ನು ನಮೂದಿಸಿದ ಸಹಿ ಕೋರಿಕೆ ಪತ್ರ ಆರ್‌ಟಿಎ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ. ಅಂತೆಯೇ, ಮೇಲೆ ಸೂಚಿಸಿದಂತೆ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು / ನವೀಕರಿಸಲು ಕೋರಲಾಗಿದೆ.

ಡಿಮೆಟರಲೈಸ್ಡ್ ಮೋಡ್, ಭೌತಿಕ ಮೋಡ್ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಷೇರುಗಳನ್ನು ಹೊಂದಿರುವ ಸದಸ್ಯರು, ದೂರಸ್ಥ ಇ-ಮತದಾನ ಪ್ರಾರಂಭವಾದ ನಂತರ, ಈ ಕೆಳಗಿನ ಸೂಚನೆಗಳನ್ನು ಅನುಸರಿಸಿ ಮತ ಚಲಾಯಿಸಬಹುದು:

(i) ಷೇರುದಾರರು ಇ-ಮತದಾನ ವೆಬ್‌ಸೈಟ್ www.evotingindia.com ಗೆ ಲಾಗ್ ಇನ್ ಆಗಬೇಕು.
(ii) ಷೇರುದಾರರು / ಸದಸ್ಯರು ಮಾಡ್ಯೂಲ್ ಕ್ಲಿಕ್ ಮಾಡಿ.
(iii) ಈಗ ನಿಮ್ಮ ಬಳಕೆದಾರ ಐಡಿ ಅನ್ನು ನಮೂದಿಸಿ
ಎ. ಸಿಡಿಎಸ್‌ಎಗೆ ಲಾಗ್ ಆಗಿ 16 ಅಂಕೆಗಳ ಫಲಾನುಭವಿ ಐಡಿ ನಮೂದಿಸಿ,
ಬಿ. ಎನ್‌ಎಸ್‌ಡಿಎಲ್‌ಗಾಗಿ: 8 ಅಕ್ಷರ ಡಿಪಿ ಐಡಿ ನಂತರ 8 ಅಂಕೆಗಳ ಕ್ಲೈಂಟ್ ಐಡಿ ನಮೂದಿಸಿ,
ಸಿ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಕಂಪನಿಯಲ್ಲಿ ನೋಂದಾಯಿತ ಫೋಲಿಯೊ ಸಂಖ್ಯೆಯನ್ನು ನಮೂದಿಸಬೇಕು.
(iv) ಮುಂದೆ ಪ್ರದರ್ಶಿಸಿದ ಕ್ಯಾಪ್ಚಾವನ್ನು ನಮೂದಿಸಿ ಮತ್ತು ಲಾಗಿನ್ ಕ್ಲಿಕ್ ಮಾಡಿ.
(v) ನೀವು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದರೆ ಮತ್ತು www.evotingindia.com ಗೆ ಲಾಗ್ ಇನ್ ಆಗಿದ್ದರೆ ಮತ್ತು ಹಿಂದಿನ ಇ-ಮತದಾನದ ಮೇಲೆ ಮತ ಚಲಾಯಿಸಿದರೆ ಯಾವುದೇ ಕಂಪನಿ, ನಂತರ ನಿಮ್ಮ ಅಸ್ತಿತ್ವದಲ್ಲಿರುವ ಪಾಸ್‌ವರ್ಡ್‌ಅನ್ನು ಬಳಸಬೇಕಾಗುತ್ತದೆ.
(vi) ನೀವು ಮೊದಲ ಬಾರಿಗೆ ಬಳಕೆದಾರರಾಗಿದ್ದರೆ ಈ ಕೆಳಗಿನ ಹಂತಗಳನ್ನು ಅನುಸರಿಸಿ:

	ಡಿಮ್ಯಾಟ್ ಫಾರ್ಮ್ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ
ಪ್ಯಾನ್	ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಟ್ಟ ನಿಮ್ಮ 10-ಅಂಕಿಯ ಆಲ್ಫಾ-ಸಂಖ್ಯಾ ಪ್ಯಾನ್* ಅನ್ನು ನಮೂದಿಸಿ (ಡಿಮ್ಯಾಟ್ ಷೇರುದಾರರಿಗೆ ಮತ್ತು ಭೌತಿಕ ಷೇರುದಾರರಿಗೆ ಅನ್ವಯಿಸುತ್ತದೆ) *ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ತಮ್ಮ ಪ್ಯಾನ್ ಅನ್ನು ನವೀಕರಿಸದ ಕಂಪನಿ ಷೇರುದಾರರು/RTA ಕಳುಹಿಸಿದ ಅನುಕ್ರಮ ಸಂಖ್ಯೆಯನ್ನು ಬಳಸಲು ವಿನಂತಿಸಲಾಗಿದೆ ಅಥವಾ bglsta@integratedindia.in ಅನ್ನು ಸಂಪರ್ಕಿಸಿ.
ಲಾಭಾಂಶ ಬ್ಯಾಂಕ್ ವಿವರಗಳು ಅಥವಾ ದಿನಾಂಕ ಜನನ (DOB)	ಲಾಗಿನ್ ಆಗಲು ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಅಥವಾ ಕಂಪನಿಯ ದಾಖಲೆಗಳಲ್ಲಿ ದಾಖಲಾಗಿರುವಂತೆ ಡಿವಿಡೆಂಡ್ ಬ್ಯಾಂಕ್ ವಿವರಗಳು ಅಥವಾ ಹುಟ್ಟಿದ ದಿನಾಂಕವನ್ನು (dd / mm / yyyy ಸ್ವರೂಪದಲ್ಲಿ) ನಮೂದಿಸಿ. ಎರಡೂ ವಿವರಗಳನ್ನು ಠೇವಣಿ ಅಥವಾ ಕಂಪನಿಯೊಂದಿಗೆ ದಾಖಲಿಸದಿದ್ದರೆ, ದಯವಿಟ್ಟು ಮೇಲಿನ ಸೂಚನೆ (iii) ನಲ್ಲಿ ಉಲ್ಲೇಖಿಸಿರುವಂತೆ ಡಿವಿಡೆಂಡ್ ಬ್ಯಾಂಕ್ ವಿವರಗಳ ಕ್ಷೇತ್ರದಲ್ಲಿ ಸದಸ್ಯ ಐಡಿ / ಫೋಲಿಯೊ ಸಂಖ್ಯೆಯನ್ನು ನಮೂದಿಸಿ.

(vii) ಈ ವಿವರಗಳನ್ನು ಸೂಕ್ತವಾಗಿ ನಮೂದಿಸಿದ ನಂತರ, ಸಲ್ಲಿಸು ಟ್ಯಾಬ್ ಕ್ಲಿಕ್ ಮಾಡಿ.
(viii) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ನಂತರ ನೇರವಾಗಿ ಕಂಪನಿ ಆಯ್ಕೆ ಪರದೆಯನ್ನು ತಲುಪುತ್ತಾರೆ. ಆದಾಗ್ಯೂ, ಷೇರುದಾರರು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹಿಡಿದಿಟ್ಟುಕೊಳ್ಳುವುದು, ಈಗ ಪಾಸ್‌ವರ್ಡ್ ರಚನೆ ಮೆನುವನ್ನು ತಲುಪುತ್ತದೆ. ಅದರಲ್ಲಿ ಅವರು ತಮ್ಮ ಲಾಗಿನ್ ಪಾಸ್ವರ್ಡ್ ಅನ್ನು ಕಡ್ಡಾಯವಾಗಿ ಹೊಸ ಪಾಸ್ವರ್ಡ್ ಕ್ಷೇತ್ರದಲ್ಲಿ ನಮೂದಿಸಬೇಕಾಗುತ್ತದೆ. ದಯವಿಟ್ಟು ಗಮನಿಸಿ ಈ ಪಾಸ್‌ವರ್ಡ್ ಅನ್ನು ಡಿಮ್ಯಾಟ್ ಹೊಂದಿರುವವರು ಅವರು ಅರ್ಹರಾಗಿರುವ ಇತರೆ ಕಂಪನಿಯಲ್ಲಿ ಮತ ಚಲಾಯಿಸಲು ಸಹ ಬಳಸಬಹುದು, ಆ ಕಂಪನಿಯು ಸಹ ಸಿಡಿಎಸ್‌ಎಲ್ ಮೂಲಕ ಇ – ಮತದಾನ ಆರಿಸಿಕೊಂಡಲ್ಲಿ. ನಿಮ್ಮ ಪಾಸ್‌ವರ್ಡ್ ಅನ್ನು ಬೇರೆ ಯಾವುದೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳದಿರಲು ಮತ್ತು ನಿಮ್ಮ ಪಾಸ್ವರ್ಡ್ ಗೌಪ್ಯತೆ ಉಳಿಸಿಕೊಳ್ಳಲು ಕಾಳಜಿ ವಹಿಸುವಂತೆ ಬಲವಾಗಿ ಶಿಫಾರಸು ಮಾಡಲಾಗಿದೆ.
(ix) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ, ಈ ಪ್ರಕಟಣೆಯಲ್ಲಿರುವ ನಿರ್ಣಯಗಳ ಮೇಲೆ ಇ-ಮತದಾನಕ್ಕಾಗಿ ಮಾತ್ರ ವಿವರಗಳನ್ನು ಬಳಸಬಹುದು.
(x) ಕಂಪನಿಯ ಇವಿಎಸ್‌ಎನ್ ಕ್ಲಿಕ್ ಮಾಡಿ.
(xi) ಮತದಾನ ಪುಟದಲ್ಲಿ, ನೀವು ರೆಸಲ್ಯೂಶನ್ ಡಿಸ್ಕ್ರಿಪ್ಷನ್ ಅನ್ನು ನೋಡುತ್ತೀರಿ ಮತ್ತು ಮತದಾನಕ್ಕಾಗಿ ಹೌದು / ಇಲ್ಲ ಆಯ್ಕೆಯನ್ನು ನೋಡುತ್ತೀರಿ. ಬಯಸಿದಂತೆ ಹೌದು ಅಥವಾ ಇಲ್ಲ ಆಯ್ಕೆಯನ್ನು ಆರಿಸಿ. ಹೌದು ಆಯ್ಕೆಯು ನೀವು ರೆಸಲ್ಯೂಶನ್‌ಗೆ ಸಮ್ಮತಿಸುತ್ತೀರಿ ಮತ್ತು ಇಲ್ಲ ಆಯ್ಕೆಯು ನೀವು ರೆಸಲ್ಯೂಶನ್‌ಗೆ ಭಿನ್ನಾಭಿಪ್ರಾಯ ಹೊಂದಿದ್ದೀರಿ ಎಂದು ಸೂಚಿಸುತ್ತದೆ.
(xii) ನೀವು ಸಂಪೂರ್ಣ ರೆಸಲ್ಯೂಶನ್ ವಿವರಗಳನ್ನು ವೀಕ್ಷಿಸಲು ಬಯಸಿದರೆ "RESOLUTIONS FILE LINK" ಕ್ಲಿಕ್ ಮಾಡಿ.
(xiii) ನೀವು ಮತ ಚಲಾಯಿಸಲು ನಿರ್ಧರಿಸಿದ ರೆಸಲ್ಯೂಶನ್ (ಗಳನ್ನು) ಆಯ್ಕೆ ಮಾಡಿದ ನಂತರ, "SUBMIT" ಕ್ಲಿಕ್ ಮಾಡಿ. ದೃಢೀಕರಣ ಪೆಟ್ಟಿಗೆಯನ್ನು ಪ್ರದರ್ಶಿಸಲಾಗುತ್ತದೆ. ನೀವೇನಾದರೂ ನಿಮ್ಮ ಮತವನ್ನು ದೃಢೀಕರಿಸಲು ಬಯಸಿದರೆ, ಸರಿ ಕ್ಲಿಕ್ ಮಾಡಿ, ಇಲ್ಲದಿದ್ದರೆ ನಿಮ್ಮ ಮತವನ್ನು ಬದಲಾಯಿಸಲು, ರದ್ದುಪಡಿಸು ಕ್ಲಿಕ್ ಮಾಡಿ ಮತ್ತು ಅದಕ್ಕೆ ಅನುಗುಣವಾಗಿ ನಿಮ್ಮ ಮತವನ್ನು ಮಾರ್ಪಡಿಸಿ.
(xiv) ರೆಸಲ್ಯೂಶನ್‌ನಲ್ಲಿ ನಿಮ್ಮ ಮತವನ್ನು ದೃಢೀಕರಿಸಿದ ನಂತರ, ನಿಮ್ಮ ಮತವನ್ನು ಮಾರ್ಪಡಿಸಲು ನಿಮಗೆ ಅನುಮತಿಸಲಾಗುವುದಿಲ್ಲ.
(xv) ಮತದಾನ ಪುಟದಲ್ಲಿ ಮುದ್ರಿಸಲು "ಇಲ್ಲಿ ಕ್ಲಿಕ್ ಮಾಡಿ" ಆಯ್ಕೆಯನ್ನು ಕ್ಲಿಕ್ ಮಾಡುವುದರ ಮೂಲಕ ನೀವು ಚಲಾಯಿಸಿದ ಮತಗಳ ಮುದ್ರಣವನ್ನು ಸಹ ತೆಗೆದುಕೊಳ್ಳಬಹುದು.
(xvi) ಡಿಮ್ಯಾಟ್ ಖಾತೆದಾರನು ಲಾಗಿನ್ ಪಾಸ್‌ವರ್ಡ್ ಅನ್ನು ಮರೆತಿದ್ದರೆ, ನಂತರ ಬಳಕೆದಾರ ಐಡಿ ಮತ್ತು ಇಮೇಜ್ ಪರಿಶೀಲನಾ ಕೋಡ್ ಅನ್ನು ನಮೂದಿಸಿ ಮತ್ತು ಕ್ಲಿಕ್ ಮಾಡಿ ಪಾಸ್ವರ್ಡ್ ಮರೆತಿರುವಿರಿ ಮತ್ತು ಸಿಸ್ಟಮ್ ಕೇಳಿದಂತೆ ವಿವರಗಳನ್ನು ನಮೂದಿಸಿ.
(xvii) ವೈಯಕ್ತಿಕವಲ್ಲದ ಷೇರುದಾರರು ಮತ್ತು ಪಾಲಕರಿಗೆ-ದೂರಸ್ಥ ಮತದಾನದ ಸೌಲಭ್ಯ

- ವೈಯಕ್ತಿಕವಲ್ಲದ ಷೇರುದಾರರು (ಅಂದರೆ ಇತರ ವ್ಯಕ್ತಿಗಳು, ಎಚ್‌ಯುಎಫ್, ಎನ್‌ಆರ್‌ಐ ಇತ್ಯಾದಿ) ಮತ್ತು ಪಾಲಕರು www.evotingindia.com ಗೆ ಲಾಗ್‌ಇನ್ ಆಗಲು ಮತ್ತು ತಮ್ಮನ್ನು ಕಾರ್ಪೋರೇಟ್ ಮಾಡ್ಯೂಲ್‌ನಲ್ಲಿ ನೋಂದಾಯಿಸಲು ಕೋರಲಾಗಿದೆ.
- ಸ್ಟಾಂಪ್ ಮತ್ತು ಘಟಕದ ಚಿಹ್ನೆಯನ್ನು ಹೊಂದಿರುವ ನೋಂದಣಿ ಫಾರ್ಮ್‌ನ ಸ್ಕ್ಯಾನ್ ಮಾಡಿದ ನಕಲನ್ನು helpdesk.evoting@cdslindia.com ಗೆ ಕಳುಹಿಸಬೇಕು.
- ಲಾಗಿನ್ ವಿವರಗಳನ್ನು ಸ್ವೀಕರಿಸಿದ ನಂತರ ನಿರ್ವಾಹಕ ಲಾಗಿನ್ ಮತ್ತು ಪಾಸ್‌ವರ್ಡ್ ಬಳಸಿ ಅನುಸರಣೆ ಬಳಕೆದಾರರನ್ನು ರಚಿಸಬೇಕು. ಅನುಸರಣೆ ಬಳಕೆದಾರರು ಅವರು ಮತ ಚಲಾಯಿಸಲು ಬಯಸುವ ಖಾತೆ (ಗಳನ್ನು) ಲಿಂಕ್ ಮಾಡಲು ಸಾಧ್ಯವಾಗುತ್ತದೆ.
- ಲಾಗಿನ್‌ನಲ್ಲಿ ಲಿಂಕ್ ಮಾಡಲಾದ ಖಾತೆಗಳ ಪಟ್ಟಿಯನ್ನು helpdesk.evoting@cdslindia.com ಗೆ ಮೇಲ್ ಮಾಡಬೇಕು ಮತ್ತು ಖಾತೆಗಳ ಅನುಮೋದನೆಯ ಮೇರೆಗೆ ಅವರು ತಮ್ಮ ಮತವನ್ನು ಪ್ರಸಾರ ಮಾಡಲು ಸಾಧ್ಯವಾಗುತ್ತದೆ. ಬೋರ್ಡ್ ರೆಸಲ್ಯೂಶನ್ ಮತ್ತು ಪವರ್ ಆಫ್ ಅಟಾರ್ನಿ (ಪಿಒಎ) ಯ ಸ್ಕ್ಯಾನ್ ಮಾಡಿದ ನಕಲು, ಯಾವುದಾದರೂ ಇದ್ದರೆ ಅವರು ಅದನ್ನು ಪರಿಶೀಲಿಸಲು ಪರಿಶೀಲಕರಿಗೆ ಪಿಡಿಎಫ್ ರೂಪದಲ್ಲಿ ಅಪ್‌ಲೋಡ್ ಮಾಡಬೇಕು.
- ಪರ್ಯಾಯವಾಗಿ, ವೈಯಕ್ತಿಕವಲ್ಲದ ಷೇರುದಾರರು ಸಂಬಂಧಿತ ಬೋರ್ಡ್ ರೆಸಲ್ಯೂಶನ್ / ಪ್ರಾಧಿಕಾರದ ಪತ್ರ ಇತ್ಯಾದಿಗಳನ್ನು ಕಳುಹಿಸಲು ಕೋರಿದ್ದಾರೆ. ಮತ ಚಲಾಯಿಸಲು ಅಧಿಕಾರ ಹೊಂದಿರುವ ಸರಿಯಾದ ಅಧಿಕೃತ ಅಧಿಕಾರಿಯ ದೃಢೀಕರಣಗೆ ವಿಶೇಷ ಸಹಿ ಸಹಿತ, ಇಮೇಲ್ ಐಡಿ sudhir.compsec@gmail.com ಅಥವಾ ಇಮೇಲ್ ಮೂಲಕ ಪರಿಶೀಲಕರಿಗೆ ಕಳುಹಿಸಲು ಅಥವಾ ಇಮೇಲ್ ಐಡಿ investor.india@diageo.com ನಲ್ಲಿರುವ ಕಂಪನಿಯ ವೈಯಕ್ತಿಕ ಟ್ಯಾಬ್‌ನಿಂದ ಮತ ಚಲಾಯಿಸಿದರೆ ಮತ್ತು ಸಿಡಿಎಸ್‌ಎಲ್
- ಇ-ಮತದಾನ ವ್ಯವಸ್ಥೆಯಲ್ಲಿ ಅದೇ ರೀತಿ ಅಪ್‌ಲೋಡ್ ಮಾಡದಿದ್ದಲ್ಲಿ ಪರಿಶೀಲನಾಕಾರರು ಅದನ್ನು ಪರಿಶೀಲಿಸುತ್ತಾರೆ.

ಡಿಮೆಟರಲೈಸ್ಡ್ ಮೋಡ್, ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು, ಎಜಿಎಂ ಸಮಯದಲ್ಲಿ, ಈ ಕೆಳಗಿನ ಸೂಚನೆಗಳನ್ನು ಅನುಸರಿಸಿ ಮತ ಚಲಾಯಿಸಬಹುದು:

(i) ಎಜಿಎಂ ದಿನದಂದು ಸಭೆ ಮತ್ತು ಇ-ಮತದಾನಕ್ಕೆ ಹಾಜರಾಗುವ ವಿಧಾನವು ದೂರಸ್ಥ ಇ-ಮತದಾನಕ್ಕಾಗಿ ಮೇಲೆ ತಿಳಿಸಿದ ಸೂಚನೆಗಳಂತೆಯೇ ಇರುತ್ತದೆ.
(ii) ಸಭೆಗೆ ಹಾಜರಾಗಲು VC/OAVM ಲಿಂಕ್ ಲಭ್ಯವಿರುತ್ತದೆ, ಅಲ್ಲಿ ರಿಮೋಟ್ ಇ-ಮತದಾನಕ್ಕಾಗಿ ಮೇಲೆ ತಿಳಿಸಲಾದ ಸೂಚನೆಗಳ ಪ್ರಕಾರ ಯಶಸ್ವಿ ಲಾಗಿನ್‌ಗಳ ನಂತರ ಕಂಪನಿಯ ಇವಿಎಸ್‌ಎನ್ ಪ್ರದರ್ಶಿಸಲಾಗುತ್ತದೆ.
(iii) ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸಿದ ಷೇರುದಾರರು ಸಭೆಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಆದಾಗ್ಯೂ, ಅವರು ಎಜಿಎಂನಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
(iv) ಉತ್ತಮ ಅನುಭವಕ್ಕಾಗಿ ಲ್ಯಾಪ್‌ಟಾಪ್‌ಗಳು / ಐಪ್ಯಾಡ್‌ಗಳ ಮೂಲಕ ಸಭೆಗೆ ಸೇರಲು ಷೇರುದಾರರನ್ನು ಪ್ರೋತ್ಸಾಹಿಸಲಾಗುತ್ತದೆ.
(v) ಸಭೆಯಲ್ಲಿ ಷೇರುದಾರರು ಯಾವುದೇ ತೊಂದರೆ ಉಂಟಾಗದಂತೆ ಕ್ಯಾಮೆರಾ ಮತ್ತು ಉತ್ತಮ ವೇಗದೊಂದಿಗೆ ಇಂಟರ್ನೆಟ್ ಅನ್ನು ಬಳಸಲು ಹೆಚ್ಚಿನ ಅಗತ್ಯವಿದೆ.
(vi) ಮೊಬೈಲ್ ಡಿವೈಸರ್ ಟ್ಯಾಬ್ಲೆಟ್‌ಗಳಿಂದ ಅಥವಾ ಮೊಬೈಲ್ ಹಾಟ್‌ಸ್ಪಾಟ್ ಮೂಲಕ ಲ್ಯಾಪ್‌ಟಾಪ್ ಮೂಲಕ ಸಂಪರ್ಕಿಸುವ ಭಾಗವಹಿಸುವವರು ಆಯಾ ನೆಟ್‌ವರ್ಕ್‌ನಲ್ಲಿ ಏರಿಳಿತದಿಂದಾಗಿ ಆಡಿಯೋ / ವಿಡಿಯೋ ನಷ್ಟವನ್ನು ಅನುಭವಿಸಬಹುದು ಎಂಬುದನ್ನು ದಯವಿಟ್ಟು ಗಮನಿಸಿ. ಆದ್ದರಿಂದ ಮೇಲಿನ ಯಾವುದೇ ರೀತಿಯ ತೊಂದರೆಗಳನ್ನು ತಗ್ಗಿಸಲು ಸ್ಟೇಬಲ್ ವೈ-ಫೈ ಅಥವಾ ಲ್ಯಾನ್ ಸಂಪರ್ಕವನ್ನು ಬಳಸಲು ಶಿಫಾರಸು ಮಾಡಲಾಗಿದೆ.
(vii) ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಪ್ರಶ್ನೆಗಳನ್ನು ಕೇಳಲು ಇಚ್ಛಿಸುವ ಷೇರುದಾರರು ತಮ್ಮ ಹೆಸರನ್ನು, ಡಿಮ್ಯಾಟ್ ಖಾತೆ ಸಂಖ್ಯೆ/ಫೋಲಿಯೊ ಸಂಖ್ಯೆ, ಇಮೇಲ್ ಐಡಿ, ಮೊಬೈಲ್ ಸಂಖ್ಯೆಯನ್ನು ನಮೂದಿಸಲು **ಸಭೆಗೆ ಕನಿಷ್ಠ 5 ದಿನಗಳ** ಮುಂಚಿತವಾಗಿ ತಮ್ಮ ವಿನಂತಿಯನ್ನು investor.india@diageo.com ಗೆ ಕಳುಹಿಸುವ ಮೂಲಕ ತಮ್ಮನ್ನು ಸ್ಪೀಕರ್ ಆಗಿ ನೋಂದಾಯಿಸಿಕೊಳ್ಳಬಹುದು. AGM ಸಮಯದಲ್ಲಿ ಮಾತನಾಡಲು ಇಚ್ಛಿಸದ ಆದರೆ ಪ್ರಶ್ನೆಗಳನ್ನು ಹೊಂದಿರುವ ಷೇರುದಾರರು ತಮ್ಮ ಹೆಸರು, ಡಿಮ್ಯಾಟ್ ಖಾತೆ ಸಂಖ್ಯೆ/ಫೋಲಿಯೊ ಸಂಖ್ಯೆ, ಇಮೇಲ್ ಐಡಿ, ಮೊಬೈಲ್ ಸಂಖ್ಯೆಯನ್ನು investor.india@diageo.com ನಲ್ಲಿ ನಮೂದಿಸುವುದಕ್ಕೆ **5 ದಿನಗಳ ಮುಂಚಿತವಾಗಿ** ತಮ್ಮ ಪ್ರಶ್ನೆಗಳನ್ನು ಮುಂಗಡವಾಗಿ ಕಳುಹಿಸಬಹುದು. ಈ ಪ್ರಶ್ನೆಗಳಿಗೆ ಕಂಪನಿಯು ಸೂಕ್ತವಾಗಿ ಪ್ರತಿಕ್ರಿಯಿಸುತ್ತದೆ.
(viii) ತಮ್ಮನ್ನು ಸ್ಪೀಕರ್ ಆಗಿ ನೋಂದಾಯಿಸಿಕೊಂಡ ಷೇರುದಾರರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು ಮಾತ್ರ ಅನುಮತಿಸಲಾಗುತ್ತದೆ.
(ix) VC/OAVM ಸೌಲಭ್ಯದ ಮೂಲಕ AGM ನಲ್ಲಿ ಇರುವ ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತವನ್ನು ಚಲಾಯಿಸದ ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದ ಷೇರುದಾರರು ಮಾತ್ರ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಎಜಿಎಂ ಸಮಯದಲ್ಲಿ ಅರ್ಹರಾಗಿರುತ್ತಾರೆ .
(x) AGM ಸಮಯದಲ್ಲಿ ಲಭ್ಯವಿರುವ ಇ-ವೋಟಿಂಗ್ ಮೂಲಕ ಷೇರುದಾರರಿಂದ ಯಾವುದೇ ಮತಗಳನ್ನು ಚಲಾಯಿಸಿದರೆ ಮತ್ತು ಅದೇ ಷೇರುದಾರರು VC/OAVM ಸೌಲಭ್ಯದ ಮೂಲಕ ಸಭೆಯಲ್ಲಿ ಭಾಗವಹಿಸದಿದ್ದರೆ, ಅಂತಹ ಷೇರುದಾರರು ಮಾಡಿದ ಮತಗಳನ್ನು ಸೌಲಭ್ಯವಾಗಿ ಅಮಾನ್ಯವೆಂದು ಪರಿಗಣಿಸಲಾಗುತ್ತದೆ ಸಭೆಯ ಸಮಯದಲ್ಲಿ ಇ-ಮತದಾನವು ಸಭೆಯಲ್ಲಿ ಭಾಗವಹಿಸುವ ಷೇರುದಾರರಿಗೆ ಮಾತ್ರ ಲಭ್ಯವಿದೆ.

ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕ ಅಂದರೆ ಆಗಸ್ಟ್ 19, 2020 ರ ಆರಂಭದ ವೇಳೆಗೆ ಕಂಪನಿಯಲ್ಲಿ ಅವರ ಷೇರುದಾರರಿಗೆ ಅನುಗುಣವಾಗಿರಬೇಕು.

ಸದಸ್ಯರು ತಮ್ಮ ಕುಂದುಕೊರತೆಗಳನ್ನು, ಯಾವುದಾದರೂ ಇದ್ದರೆ, ಶೀಘ್ರ ಪರಿಹಾರಕ್ಕಾಗಿ bglsta@integratedindia.in / investor.india@diageo.com ಗೆ ಇಮೇಲ್ ಮಾಡಲು ವಿನಂತಿಸಲಾಗಿದೆ. ಎಲೆಕ್ಟ್ರಾನಿಕ್ ವಿಧಾನದಿಂದ ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳ ಸಂದರ್ಭದಲ್ಲಿ, ಸದಸ್ಯರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು:

ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್,
17 ನೇ ಮಹಡಿ, ಪಿ ಜೆ ಟವರ್ಸ್, ದಲಾಲ್ ಸ್ಟ್ರೀಟ್, ಫೋರ್ಟ್, ಮುಂಬೈ - 400 001.
ದೂರವಾಣಿ – 1800 200 5533, ಇಮೇಲ್ – helpdesk.evoting@cdslindia.com

ಸದಸ್ಯರು ವಿಸಿ ಮತ್ತು/ಅಥವಾ ಇ-ಮತದಾನದ ಮೂಲಕ ಎಜಿಎಂಗೆ ಹಾಜರಾಗುವ ಬಗ್ಗೆ ಯಾವುದೇ ಪ್ರಶ್ನೆಗಳು ಅಥವಾ ಸಮಸ್ಯೆಗಳನ್ನು ಹೊಂದಿದ್ದರೆ, ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು ("FAQs") ಮತ್ತು ಇ-ಮತದಾನ ಕೈಪಿಡಿಯನ್ನು www.evotingindia.com ನಲ್ಲಿ, ಸಹಾಯ ವಿಭಾಗದ ಅಡಿಯಲ್ಲಿ ಬರೆಯಬಹುದು ಅಥವಾ helpdesk.evoting@cdslindia.com ಗೆ ಇಮೇಲ್ ಮಾಡಿ ಅಥವಾ 022- 23058738 ಅಥವಾ 022-23058542 ಅಥವಾ 022-23058543 ಅನ್ನು ಸಂಪರ್ಕಿಸಿ.

ಎಲೆಕ್ಟ್ರಾನಿಕ್ ಮೂಲಕ ಮತ ಚಲಾಯಿಸುವ ಸೌಲಭ್ಯದೊಂದಿಗೆ ಸಂಪರ್ಕ ಹೊಂದಿರುವ ಎಲ್ಲಾ ಕುಂದುಕೊರತೆಗಳನ್ನು ಶ್ರೀ ರಾಕೇಶ್ ದಾಲ್ವಿ, ವ್ಯವಸ್ಥಾಪಕರು, (CDSL), ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್, ಎ ವಿಂಗ್, 25 ನೇ ಮಹಡಿ, ಮ್ಯಾರಥಾನ್ ಫ್ಯೂಚರ್, ಮಫತ್ಲಾಲ್ ಮಿಲ್ ಕಾಂಪೌಂಡ್ಸ್, NM ಜೋಶಿ ಮಾರ್ಗ , ಲೋಯರ್ ಪರೇಲ್ (ಪೂರ್ವ), ಮುಂಬೈ – 400013 ಅಥವಾ ಇಮೇಲ್ ಕಳುಹಿಸಿ helpdesk.evoting@cdslindia.com ಅಥವಾ 022-23058542/43 ಗೆ ಕರೆ ಮಾಡಿ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಮಿತ್ತಲ್ ಸಂಘ್ವಿ
ಕಂಪನಿ ಕಾರ್ಯದರ್ಶಿ

ದಿನಾಂಕ : 31ನೇ ಜುಲೈ 2021
ಸ್ಥಳ : ಬೆಂಗಳೂರು

ಶಿವಕುಮಾರ್– ಸಿದ್ದರಾಮಯ್ಯ ಮಧ್ಯೆ 'ಉಸ್ತುವಾರಿ' ಉಪಸ್ಥಿತಿ

'ಕೈ' ನಾಯಕರ ಸಭೆ: ಒಗ್ಗಟ್ಟಿನ ಮಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಾಯಕತ್ವ ವಿಚಾರದಲ್ಲಿ ಸೃಷ್ಟಿಯಾಗಿರುವ 'ಬಣ ರಾಜಕೀಯ' ನಿಯಂತ್ರಿಸಿ, ಒಗ್ಗಟ್ಟು ಪ್ರದರ್ಶನಕ್ಕೆ ಮುಂದಾಗಿರುವ ಕಾಂಗ್ರೆಸ್ ಹೈಕಮಾಂಡ್, ರಾಜ್ಯಮಟ್ಟದ ನಾಯಕರ ಬದಲು, ಪಕ್ಷದ 'ಉಸ್ತುವಾರಿ'ಯ ನೇತೃತ್ವದಲ್ಲಿ ವಲಯಮಟ್ಟದಲ್ಲಿ ಸಭೆಗಳನ್ನು ನಡೆಸುತ್ತಿದೆ.

ಕೆಪಿಸಿಸಿಗೆ ಶೀಘ್ರದಲ್ಲಿ ನೂತನ ಪದಾಧಿಕಾರಿಗಳ ನೇಮಕ ನಡೆಯಲಿದೆ. ಪಟ್ಟಿ ಹೊರಬೀಳುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೆಂಬಲಿಗರ ಮಧ್ಯೆ ಸಂಘರ್ಷ ಉಂಟಾಗಬಾರದೆಂಬ ಕಾರಣಕ್ಕೆ, ಬ್ಲಾಕ್‌ಮಟ್ಟದಿಂದಲೇ ಎಚ್ಚರಿಕೆ ವಹಿಸಲು ವರಿಷ್ಠರು ಮುಂದಾಗಿದ್ದಾರೆ.

ಶಾಸಕ ಜಮೀರ್ ಅಹ್ಮದ್ ಖಾನ್ ನೀಡಿದ್ದ 'ಭಾವಿ ಮುಖ್ಯಮಂತ್ರಿ' ಹೇಳಿಕೆ ಇತ್ತೀಚೆಗೆ ಕಾಂಗ್ರೆಸ್‌ನಲ್ಲಿ ತೀವ್ರ ತಿಕ್ಕಾಟಕ್ಕೆ ಕಾರಣವಾಗಿತ್ತು. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಮತ್ತು ತಟಸ್ಥ ನಾಯಕರ ಬಣಗಳು ರಂಗಕ್ಕಿಳಿದಾಗ ಅದಕ್ಕೆ ಕಡಿವಾಣ ಹಾಕಲು ಹೈಕಮಾಂಡ್ ಅನಿವಾರ್ಯವಾಗಿ ಮಧ್ಯಪ್ರವೇಶಿಸಿತ್ತು.

'ರಾಹುಲ್ ಗಾಂಧಿ ಅವರ ಸೂಚನೆಯಂತೆ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರನ್ನು ಅಕ್ಕಪಕ್ಕದಲ್ಲಿ ಕುಳ್ಳಿರಿಸಿಕೊಂಡು ವಲಯವಾರು ಸಭೆಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ, ಸ್ಥಳೀಯ ನಾಯಕರಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಮೂಡದಂತೆ ಒಗ್ಗಟ್ಟಿನ ಮಂತ್ರ ಪಠಿಸುತ್ತಿದ್ದಾರೆ. ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿ ಶೀಘ್ರ ಹೊರಬೀಳಲಿದೆ. ಹೀಗಾಗಿ, ಒಗ್ಗಟ್ಟು ಅನಿವಾರ್ಯವಾಗಿದೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

'ಈ ಹಿಂದೆ ರಾಜ್ಯ ನಾಯಕರ ನೇತೃತ್ವದಲ್ಲಿ ವಲಯಮಟ್ಟದ ಸಭೆ ನಡೆಯುತ್ತಿತ್ತು. ಮೊದಲ ಬಾರಿಗೆ ಉಸ್ತುವಾರಿಯ ಉಪಸ್ಥಿತಿಯಲ್ಲಿ ನಡೆಯುತ್ತಿದೆ. ಹುಬ್ಬಳ್ಳಿ, ತುಮಕೂರು, ಮಂಗಳೂರು, ಮೈಸೂರು ವಲಯಗಳಲ್ಲಿ 18ಕ್ಕೂ ಹೆಚ್ಚು ಜಿಲ್ಲೆಗಳ ಮುಖಂಡರ ಜೊತೆ ಸುರ್ಜೇವಾಲ ಮುಖಾಮುಖಿ ಸಭೆ ನಡೆಸಿದ್ದಾರೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರನ್ನು ಜೊತೆಯಲ್ಲೇ ಕರೆದುಕೊಂಡು ಸರಣಿ ಸಭೆ ನಡೆಸುತ್ತಿದ್ದಾರೆ. ಆ ಮೂಲಕ, ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ಚರ್ಚೆ ನಡೆಸುತ್ತಿದ್ದಾರೆ. ಜಿಲ್ಲಾ ಮುಖಂಡರ ನಡುವಿನ ಗೊಂದಲಗಳನ್ನು ಎಲ್ಲರ ಸಮ್ಮುಖದಲ್ಲೇ ಸುರ್ಜೇವಾಲಾ ಬಗೆಹರಿಸುತ್ತಿದ್ದಾರೆ. ಆ ಮೂಲಕ, ಬಣಗಳ ಮೇಲಾಟಕ್ಕೆ ಕಡಿವಾಣ ಹಾಕುವುದು ಅವರ ಉದ್ದೇಶ' ಎಂದೂ ಕಾಂಗ್ರೆಸ್ ಮೂಲಗಳು ಹೇಳಿವೆ.

ಬಸವನಗುಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಂಪ್ಯೂಟರ್ ಪ್ರಯೋಗಾಲಯವನ್ನು ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಉದ್ಘಾಟಿಸಿದರು. ಪ್ರೊ.ನಾಗೇಂದ್ರ ರಾವ್, ಕಾಲೇಜಿನ ಪ್ರಾಂಶುಪಾಲರಾದ ಶುಭಾ ರಮೇಶ್, ರೋಟರಿ ಸಂಸ್ಥೆಯ ಮಹಮ್ಮದ್ ತಸ್ಲೀಲ್, ವೀರು ಮೆಟಲ್ಸ್ ಸಂಸ್ಥೆಯ ಮೋಹನ್ ರೈ ಇದ್ದರು. ಕಾಗ್ನಿಸಂಟ್ ಮತ್ತು ರೋಟರಿ ಮಾನ್ಯತಾ ಸಂಸ್ಥೆಗಳು ಪ್ರಯೋಗಾಲಯಕ್ಕೆ ಕಂಪ್ಯೂಟರ್‌ಗಳನ್ನು ದೇಣಿಗೆ ನೀಡಿವೆ.

ಪಿಪಿಇ ಕಿಟ್ ಖರೀದಿಯಲ್ಲಿ ಅಕ್ರಮ ಕೆಆರ್‌ಎಸ್ ಪಕ್ಷ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (ಕೆಎಸ್‌ಎಂಎಸ್‌ಸಿಎಲ್) ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಪಿಪಿಇ ಕಿಟ್ ಖರೀದಿಯಲ್ಲಿ ಭಾರಿ ಅಕ್ರಮ ಎಸಗಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಆರೋಪಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್.ದೀಪಕ್, 'ವೈದ್ಯಕೀಯ ಸರಬರಾಜು ಕಂಪನಿಗಳಿಂದ ಒಟ್ಟು 12 ಲಕ್ಷ ಪಿಪಿಇ ಕಿಟ್ ಖರೀದಿಗಾಗಿ ಕೆಎಸ್‌ಎಂಎಸ್‌ಸಿಎಲ್ ದರಪಟ್ಟಿ ಆಹ್ವಾನಿಸಿತ್ತು. ಖರೀದಿ ನಿಯಮಗಳನ್ನು ಪಾಲಿಸದ ಎಚ್ ಆ್ಯಂಡ್ ಜೆಡ್ ಅಪಾರೆಲ್ಸ್ ಎಂಬ ಕಂಪನಿಗೆ ಪಿಪಿಇ ಕಿಟ್ ಸರಬರಾಜಿಗೆ ಅವಕಾಶ ಕಲ್ಪಿಸಲಾಗಿದೆ' ಎಂದು ದೂರಿದರು.

'ಯುಕ್ಬಾ ಫ್ಯಾಷನ್ಸ್ ಎಂಬ ಮತ್ತೊಂದು ಸಂಸ್ಥೆ ಕಡಿಮೆ ದರಕ್ಕೆ ಕಿಟ್ ಸರಬರಾಜು ಮಾಡುವುದಾಗಿ ಹೇಳಿದ್ದರೂ ಅಧಿಕ ಬೆಲೆ ಉಲ್ಲೇಖಿಸಿದ್ದ ಅಪಾರೆಲ್ಸ್ ಸಂಸ್ಥೆಗೆ ₹16 ಕೋಟಿ ವೆಚ್ಚದಲ್ಲಿ 4 ಲಕ್ಷ ಪಿಪಿಇ ಕಿಟ್ ಖರೀದಿಸುವ ಆದೇಶ ಹೊರಡಿಸಲಾಗಿದೆ. ಆದರೆ, ಅಪಾರೆಲ್ಸ್ ಸಂಸ್ಥೆ ಸರಬರಾಜು ಮಾಡಿರುವ ಕಿಟ್‌ಗಳು ಕಳಪೆ ಗುಣಮಟ್ಟದ್ದಾಗಿದ್ದು, ನಿಗದಿತ ಮಾನದಂಡಗಳಿಗೆ ಅನುಗುಣವಾಗಿಲ್ಲ. ಈ ಅಕ್ರಮದಲ್ಲಿ ನಿಗಮದ ಅಧಿಕಾರಿಗಳು ನೇರವಾಗಿ ಭಾಗಿಯಾಗಿದ್ದಾರೆ' ಎಂದು ಆರೋಪಿಸಿದರು.

'ಯುಕ್ಬಾ ಸಂಸ್ಥೆಯನ್ನು ಯಾವ ಕಾರಣಕ್ಕಾಗಿ ಕೈಬಿಡಲಾಯಿತು ಎಂಬ ಕಾರಣವನ್ನು ನಿಗಮ ಸ್ಪಷ್ಟಪಡಿಸಿಲ್ಲ. ನಿಗಮವು ಟೆಂಡರ್ ಕರೆಯದೆಯೇ ಕೇವಲ ದರಪಟ್ಟಿ ಆಧಾರದ ಮೇಲೆ ಖರೀದಿ ಪ್ರಕ್ರಿಯೆ ನಡೆಸುತ್ತಿದೆ. ಇದರಿಂದ ಮಧ್ಯವರ್ತಿಗಳಿಗೆ ಹಾಗೂ ಭ್ರಷ್ಟರಿಗೆ ಹೆಚ್ಚು ಅನುಕೂಲವಾಗುತ್ತಿದೆ' ಎಂದರು.

ಪಕ್ಷದ ಕಾರ್ಯದರ್ಶಿ ಮಲ್ಲಿಕಾರ್ಜುನ ಭಟ್ಟರಹಳ್ಳಿ,'ಖರೀದಿ ಪ್ರಕ್ರಿಯೆಗಳನ್ನು ಪಾರದರ್ಶಕವಾಗಿ ನಡೆಸಬೇಕು. ಖರೀದಿ ಆದೇಶಗಳನ್ನು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು. ಇಲ್ಲಿಯವರೆಗೆ ನಿಗಮವು ನಡೆಸಿರುವ ಖರೀದಿಗಳ ಕುರಿತು ಶ್ವೇತಪತ್ರ ಹೊರಡಿಸಬೇಕು. ಈಗ ನಡೆದಿರುವ ಅಕ್ರಮದ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರ ಉಸ್ತುವಾರಿಯಲ್ಲಿ ತನಿಖೆಯಾಗಬೇಕು' ಎಂದರು.

ಪಿಪಿಇ ಕಿಟ್ ಅನ್ನು ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಲಾಯಿತು. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಸಿ.ಎನ್.ದೀಪಕ್, ಮಲ್ಲಿಕಾರ್ಜುನ ಭಟ್ಟರಹಳ್ಳಿ ಹಾಗೂ ರಘುಪತಿ ಭಟ್ ಇದ್ದಾರೆ —ಪ್ರಜಾವಾಣಿ ಚಿತ್ರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈರುತ್ಯ ರೈಲ್ವೆ

E-TENDER NOTICE No. 25/MYS/2021
Dt: 27.07.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಸಂಪಿಗೆ ರೋಡ್–ಬೀರೂರು ವಿಭಾಗ: 60 ಕೆಜಿ ದಪ್ಪ ವೆಬ್ ಸ್ವಿಚ್‌ಗಳು ಮತ್ತು ವೆಲ್ಡೇಬಲ್ ಸಿಎಮ್‌ಎಸ್ ಕ್ರಾಸಿಂಗ್‌ಗಳು 1 ಇನ್ 12 – 76 ಸೆಟ್‌ಗಳಿಂದ ಅಸ್ತಿತ್ವದಲ್ಲಿರುವ 52 ಕೆಜಿ ಸ್ವಿಚ್‌ಗಳು ಮತ್ತು ಸಿಎಂಎಸ್ ಕ್ರಾಸಿಂಗ್‌ಗಳ ಥ್ರೂ ರಿನ್ಯೂವಲ್.	Rs.1,13,19,964/-
2	ಬೀರೂರು–ಕರಜ್‌ಗಿ ವಿಭಾಗ: ಸಂಪಿಗೆ ರೋಡ್–ಬೀರೂರು ವಿಭಾಗ: 60 ಕೆಜಿ ದಪ್ಪ ವೆಬ್ ಸ್ವಿಚ್‌ಗಳು ಮತ್ತು ವೆಲ್ಡೇಬಲ್ ಸಿಎಮ್‌ಎಸ್ ಕ್ರಾಸಿಂಗ್‌ಗಳು 1 ಇನ್ 12 – 123 ಸೆಟ್‌ಗಳಿಂದ ಅಸ್ತಿತ್ವದಲ್ಲಿರುವ 52 ಕೆಜಿ ಸ್ವಿಚ್‌ಗಳು ಮತ್ತು ಸಿಎಂಎಸ್ ಕ್ರಾಸಿಂಗ್‌ಗಳ ಥ್ರೂ ರಿನ್ಯೂವಲ್ ಮತ್ತು ಚಿಕ್ಕಜಾಜುರು–ರಾಯದುರ್ಗ ವಿಭಾಗದ ಬಾಕಿ ಉಳಿದಿರುವ ಕೆಲಸ. ಚಿಕ್ಕಜಾಜೂರು–ಚಳ್ಳಕೆರೆ ನಿಲ್ದಾಣಗಳ ನಡುವೆ 69.100 ಕಿಮೀ ಉದ್ದಕ್ಕೆ ಕಿ.ಮೀ.0/000–69/100 ರಿಂದ ಥ್ರೂ ಫಿಟ್ಟಿಂಗ್ ರಿನ್ಯೂವಲ್ (ಟಿಎಫ್‌ಆರ್). **ಉಪ ಕಾಮಗಾರಿ I** – ಬೀರೂರು–ಕರಜ್‌ಗಿ ವಿಭಾಗ: 60 ಕೆಜಿ ದಪ್ಪ ವೆಬ್ ಸ್ವಿಚ್‌ಗಳು ಮತ್ತು ವೆಲ್ಡೇಬಲ್ ಸಿಎಮ್‌ಎಸ್ ಕ್ರಾಸಿಂಗ್‌ಗಳು 1 ಇನ್ 12 – 123 ಸೆಟ್‌ಗಳಿಂದ ಅಸ್ತಿತ್ವದಲ್ಲಿರುವ 52 ಕೆಜಿ ಸ್ವಿಚ್‌ಗಳು ಮತ್ತು ಸಿಎಂಎಸ್ ಕ್ರಾಸಿಂಗ್‌ಗಳ ಥ್ರೂ ರಿನ್ಯೂವಲ್ ಮತ್ತು **ಉಪ ಕಾಮಗಾರಿ II** – ಚಿಕ್ಕಜಾಜುರು–ರಾಯದುರ್ಗ ವಿಭಾಗದ ಬಾಕಿ ಉಳಿದಿರುವ ಕೆಲಸ. ಚಿಕ್ಕಜಾಜೂರು–ಚಳ್ಳಕೆರೆ ನಿಲ್ದಾಣಗಳ ನಡುವೆ 69.100 ಕಿಮೀ ಉದ್ದಕ್ಕೆ ಕಿ.ಮೀ.0/000–69/100 ರಿಂದ ಥ್ರೂ ಫಿಟ್ಟಿಂಗ್ ರಿನ್ಯೂವಲ್ (ಟಿಎಫ್‌ಆರ್).	Rs. 2,63,21,601/-
3	ಮೈಸೂರು–ಅರಸೀಕೆರೆ ವಿಭಾಗ: ಮೈಸೂರು–ಅರಸೀಕೆರೆ ವಿಭಾಗದ ಟಿಎಸ್‌ಆರ್ (ಎಸ್)– 75.00ಕಿ.ಮೀ ನ ಮಂಜೂರಾದ ಕೆಲಸದ ಅಡಿಯಲ್ಲಿ ಕಿಮೀ. 44/800 ರಿಂದ 119/800 ವರೆಗೆ 75.00 ಕಿಮೀ ಉದ್ದಕ್ಕೆ ಬಿಸಿಎಂ ಮೂಲಕ ಟ್ರ್ಯಾಕ್‌ನ ಆಳವಾದ ಸ್ಕ್ರೀನಿಂಗ್‌ಗೆ ಸಂಬಂಧಿಸಿದಂತೆ ಪೂರಕ ಕೆಲಸ	Rs. 3,00,94,398/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18-08-2021, 11:00 ಗಂಟೆಯವರೆಗೆ

ಮಾಹಿತಿಗಾಗಿ www.ireps.gov.in ಗೆ ಲಾಗಾನ್ ಆಗಿ

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು / ಕಾಮಗಾರಿಗಳು ಮೈಸೂರು

PUB/132/AASP/PRB/SWR/2021-22

S.W.Railways SWRRLY SWRRLY

ಕಣ್ಣಿನ ತಪಾಸಣೆ ಶಿಬಿರವನ್ನು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಜೆ.ಪುಟ್ಟಸ್ವಾಮಿ ವೀಕ್ಷಿಸಿದರು. ಎಸ್ಸಿಲಾರ್ ಫೌಂಡೇಷನ್‌ನ ಮಹೇಶ್, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಸದಸ್ಯ ಎಚ್.ವೆಂಕಟೇಶ್ ದೊಡ್ಡೇರಿ, ರಾಮಲಿಂಗಪ್ಪ, ರಂಗರಾಜು ಇದ್ದಾರೆ.

'ಪಂಚಾಯಿತಿ ಮಟ್ಟದಲ್ಲೇ ಅರ್ಜಿ ವಿಲೇವಾರಿ'

ನೆಲಮಂಗಲ: 'ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಪಂಚಾಯಿತಿ ಮಟ್ಟದಲ್ಲೇ ಅರ್ಜಿಗಳ ವಿಲೇವಾರಿ ಮಾಡುವ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಲಾಗುವುದು' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಜೆ.ಪುಟ್ಟಸ್ವಾಮಿ ತಿಳಿಸಿದರು.

ವಿಶ್ವಗಾಣಿಗರ ಸಮುದಾಯ ಚಾರಿಟಬಲ್ ಟ್ರಸ್ಟ್, ಎಸ್ಸಿಲಾರ್ ವಿಷನ್ ಫೌಂಡೇಷನ್ ಹಾಗೂ ಐ-ದೃಷ್ಟಿ ಕಣ್ಣಿನ ಆಸ್ಪತ್ರೆಗಳ ಸಹಯೋಗದಲ್ಲಿ ನಗರೂರಿನಲ್ಲಿ ಹಮ್ಮಿಕೊಂಡಿದ್ದ ಕಣ್ಣಿನ ಉಚಿತ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

'ಸರ್ಕಾರದ ಆಡಳಿತದ ದೈನಂದಿನ ಕಾರ್ಯವೈಖರಿಯನ್ನು ಸಾರ್ವಜನಿಕರ ಗಮನಕ್ಕೆ ತರಲು 'ಮಾಹಿತಿ ಫಲಕ' (ಡ್ಯಾಶ್‌ಬೋರ್ಡ್) ವ್ಯವಸ್ಥೆ ರೂಪಿಸಲು ಯೋಜಿಸಲಾಗಿದೆ' ಎಂದರು.

ಎಸ್ಸಿಲಾರ್ ಫೌಂಡೇಷನ್‌ನ ಟ್ರಸ್ಟಿ ಮಹೇಶ್ ಮಾತನಾಡಿದರು. ನಗರೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಎಚ್.ವಿ. ಯಶೋಧ, ಉಪಾಧ್ಯಕ್ಷೆ ಗೀತಾ, ಸದಸ್ಯರಾದ ಎನ್.ಎಚ್.ನರೇಂದ್ರಬಾಬು, ಗೋವಿಂದರಾಜು, ಫೌಂಡೇಷನ್‌ನ ಧರ್ಮಪ್ರಸಾದ್ ರೈ ಭಾಗವಹಿಸಿದ್ದರು.

7 ಬಾಲ ಕಾರ್ಮಿಕರ ರಕ್ಷಣೆ

ರಾಮನಗರ/ ಚನ್ನಪಟ್ಟಣ: ಚನ್ನಪಟ್ಟಣದ ಹೆಚ್ಚಿನ ಸಮೀಪ ರೈಲು ಹಳಿ ಸಮತಟ್ಟು ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಏಳು ಬಾಲಕಾರ್ಮಿಕರನ್ನು ಶನಿವಾರ ರಕ್ಷಣೆ ಮಾಡಲಾಗಿದೆ.

ತೆಲಂಗಾಣ ರಾಜ್ಯದ ವಾರಂಗಲ್ ಜಿಲ್ಲೆಯವರಾದ 3 ಹೆಣ್ಣು ಹಾಗೂ 4 ಗಂಡು ಮಕ್ಕಳನ್ನು ರಕ್ಷಿಸಲಾಗಿದ್ದು, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ ವಿದ್ಯಾರ್ಥಿ ನಿಲಯವೊಂದರಲ್ಲಿ ಆಶ್ರಯ ನೀಡಲಾಗಿದೆ.

ರೈಲು ಹಳಿ ನಿರ್ವಹಣೆ ಕಾಮಗಾರಿಯನ್ನು ವ್ಯಕ್ತಿಯೊಬ್ಬರು ಗುತ್ತಿಗೆ ಪಡೆದಿದ್ದು, ಅವರು ತೆಲಂಗಾಣದಿಂದ ಕಾರ್ಮಿಕರನ್ನು ಕರೆತಂದಿದ್ದರು. ಈ ಕಾರ್ಮಿಕರು ತಮ್ಮ ಮಕ್ಕಳನ್ನೂ ಶಾಲೆ ಬಿಡಿಸಿ ಕರೆತಂದು ತಮ್ಮೊಟ್ಟಿಗೆ ಕೆಲಸದಲ್ಲಿ ತೊಡಗಿಸಿಕೊಂಡಿದ್ದುದು ಎಂದು ತಿಳಿದುಬಂದಿದೆ.

'3ನೇ ಅಲೆ ನಿಯಂತ್ರಣಕ್ಕೆ ಜನರ ಸಹಕಾರ ಅಗತ್ಯ'

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ವಿಕೇಂದ್ರೀಕೃತ ವ್ಯವಸ್ಥೆಯಿಂದ ಆದ ಅನುಕೂಲಗಳ ಕುರಿತು ಜನಾಗ್ರಹ ತಂಡದ ಸದಸ್ಯರು ಶನಿವಾರ ಚರ್ಚೆ ನಡೆಸಿದರು. ಮೂರನೇ ಅಲೆ ಸಂಭವಿಸಿದರೂ ಅದನ್ನು ನಿಯಂತ್ರಿಸುವಲ್ಲಿ ನಾಗರಿಕರು ಯಾವ ರೀತಿಯಾಗಿ ಬಿಬಿಎಂಪಿ ಜೊತೆಗೆ ಕೈ ಜೋಡಿಸಬೇಕು ಎಂಬುದರ ಕುರಿತು ಸಲಹೆಯನ್ನೂ ನೀಡಿದರು.

ಸಾಮಾಜಿಕ ಹೋರಾಟಗಾರ ಜಗದೀಶ್ ರೆಡ್ಡಿ, 'ಕೋವಿಡ್ ಎರಡನೇ ಅಲೆಯನ್ನು ಎದುರಿಸಲು, ಬಿಬಿಎಂಪಿಯು ವಾರ್ಡ್ ಮಟ್ಟದಲ್ಲಿ ವಿಕೇಂದ್ರೀಕೃತ ಚಿಕಿತ್ಸೆ ನಿರ್ಧಾರ ವ್ಯವಸ್ಥೆ (ಟ್ರಯಾಜ್) ಮತ್ತು ತುರ್ತು ಸೇವೆ ಸಮಿತಿಗಳನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಿತು. ಹಲವು ವಾರ್ಡ್‌ಗಳಲ್ಲಿ ಇಂತಹ ಸಮಿತಿಗಳನ್ನು ರಚಿಸಿದ್ದರಿಂದ, ಕೋವಿಡ್ ನಿರ್ವಹಣೆಯಲ್ಲಿ ಸಾರ್ವಜನಿಕರೂ ಕೈಜೋಡಿಸಲು ಅನುಕೂಲವಾಯಿತು' ಎಂದರು.

ಬಿಬಿಎಂಪಿ ಅಧಿಕಾರಿಗಳಾದ ಕೆ. ಮಾಯಣ್ಣ ಗೌಡ, ವಿ.ಕೆ. ರಮಾಮಣಿ, ಡಾ.ಬಿ.ಆರ್. ರವಿಕುಮಾರ್, ಮಹತಿ ಟ್ರಸ್ಟ್‌ನ ಸ್ವರೂಪಾ, ಸಾಮಾಜಿಕ ಹೋರಾಟಗಾರ ತಾರಕ್ ಕೃಷ್ಣಮೂರ್ತಿ, ಸಮಿತಿ ಸದಸ್ಯರಾದ ಗಿರೀಶ್ ಶಂಕರ್, ಎಸ್. ಅನಿತಾ, ಪ್ರತಿಮಾ ಕಾಕನೂರ್ ಇತರರು ಪಾಲ್ಗೊಂಡಿದ್ದರು.



ಶಿವರಾಮ ಕಾರಂತ ಬಡಾವಣೆ– ಮನೆಗಳ ಧ್ವಂಸ ಬೇಡ: ಎಚ್‌ಡಿಕೆ ಮನವಿ

'ಕಾನೂನು ಹೋರಾಟ ಬೆಂಬಲಿಸಲು ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವರಾಮ ಕಾರಂತ ಬಡಾವಣೆ ನಿರ್ಮಾಣದ ಹೆಸರಿನಲ್ಲಿ ಬಡ, ಮಧ್ಯಮ ಹಾಗೂ ರೈತರ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ದೌರ್ಜನ್ಯ ನಡೆಸುತ್ತಿದೆ. ಈ ಸಂಬಂಧ ಕಾನೂನಾತ್ಮಕವಾಗಿ ಸ್ಪಷ್ಟ ಚಿತ್ರಣ ಹೊರಬೀಳುವವರೆಗೆ ಈ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಮನೆಗಳನ್ನು ಕೆಡವಬಾರದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ಶಿವರಾಮ ಕಾರಂತ ಬಡಾವಣೆಗಾಗಿ ಭೂಮಿ ಕಳೆದುಕೊಂಡವರ ಜೊತೆಗೆ ದಾಸರಹಳ್ಳಿ ಕ್ಷೇತ್ರದ ಸೋಮಶೆಟ್ಟಿಹಳ್ಳಿಯಲ್ಲಿ ಶನಿವಾರ ಏರ್ಪಡಿಸಿದ್ದ ಸಾಂತ್ವನ ಸಭೆಯಲ್ಲಿ ಅವರು ಮಾತನಾಡಿದರು.

'ಸಂತ್ರಸ್ತರ ಪರವಾಗಿ ಕಾನೂನು ಹೋರಾಟಕ್ಕೆ ಕೈಜೋಡಿಸುತ್ತೇನೆ. ಮುಖ್ಯಮಂತ್ರಿಯವರು, ಹಿರಿಯ ಅಧಿಕಾರಿಗಳು ಹಾಗೂ ಈ ಸಂಬಂಧ ರಚನೆಗೊಂಡಿರುವ ಸಮಿತಿ ಅಧ್ಯಕ್ಷರೊಂದಿಗೆ ಈ ಕುರಿತು ಚರ್ಚಿಸಿ ಮನೆ ಕೆಡಹುವುದನ್ನು ನಿಲ್ಲಿಸುವಂತೆ ಕೋರುತ್ತೇನೆ' ಎಂದರು.

'ಶಿವರಾಮ ಕಾರಂತ ಬಡಾವಣೆಗಾಗಿ ಭೂಮಿ ಕಳೆದುಕೊಂಡವರಿಂದ ಈಗಷ್ಟೇ ಅರ್ಜಿ ಪಡೆಯಲಾಗುತ್ತಿದೆ. ಅದರ ಪರಿಶೀಲನೆಯನ್ನೂ ಮಾಡದೇ, ಇಲ್ಲಿ ಕಟ್ಟಿದ ಮನೆಗಳನ್ನು ಏಕಾಏಕಿ ಬೀಳಿಸುವುದು ಸರಿಯಲ್ಲ. ಈ ಭಾಗದ ಶಾಸಕರೇ ಬಿಡಿಎ ಅಧ್ಯಕ್ಷರಾಗಿದ್ದಾರೆ. ಅವರೇ ಇಂತಹ ಕೆಲಸಕ್ಕೆ ಮುಂದಾಗಿರುವುದು ದುರದೃಷ್ಟಕರ' ಎಂದು ಬೇಸರ ವ್ಯಕ್ತಪಡಿಸಿದರು.

'30 ಸಾವಿರ ಕುಟುಂಬಗಳನ್ನು ಬೀದಿಗೆ ತಳ್ಳಿ 25 ಸಾವಿರ ನಿವೇಶನಗಳ ನಿರ್ಮಾಣ ಮಾಡುತ್ತಿರುವುದು ಯಾವ ಪುರುಷಾರ್ಥಕ್ಕೆ' ಎಂದು ಪ್ರಶ್ನಿಸಿದ ಅವರು, 'ಈ ಬಡಾವಣೆ ನಿರ್ಮಾಣ ಕೈಬಿಡುವಂತೆ ಹೈಕೋರ್ಟ್ 2014 ರಲ್ಲಿ ಆದೇಶ ಮಾಡಿತ್ತು. ಆದರೆ, ಸುಪ್ರೀಂ ಕೋರ್ಟ್‌ಗೆ ಸುಳ್ಳು ದಾಖಲೆಗಳನ್ನು ನೀಡಿದ ಬಿಡಿಎ, ರೈತ ವಿರೋಧಿ ಆದೇಶಗಳು ಪ್ರಕಟವಾಗುವುದಕ್ಕೆ ಕಾರಣವಾಗಿದೆ' ಎಂದೂ ಅವರು ದೂರಿದರು.

'ಈಗಲೂ ಅಡ್ವೊಕೇಟ್ ಜನರಲ್ ಮೂಲಕ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ಮೂಲಕ ರಾಜ್ಯ ಸರ್ಕಾರ ಈ ಯೋಜನೆಯನ್ನು ಕೈಬಿಡಬಹುದು' ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ಸ್ಥಳೀಯ ಮುಖಂಡರಾದ ನಂಜುಂಡಪ್ಪ, ನಾಗಭೂಷಣ್, ಕೆ.ಸಿ. ವೆಂಕಟೇಶ್, ಚರಣ್ ಗೌಡ ಹಾಜರಿದ್ದರು. ಭೂಮಿ ಕಳೆದುಕೊಂಡ ಸಂತ್ರಸ್ತರು ಸಭೆಯಲ್ಲಿ ಇದ್ದರು.

ಸಭೆಯಲ್ಲಿ ಆರ್.ಮಂಜುನಾಥ್, ಎಚ್.ಡಿ.ಕುಮಾರಸ್ವಾಮಿ, ಡಿ.ಆರ್.ನಂಜುಂಡಪ್ಪ ಇದ್ದರು. ಸಭೆಯಲ್ಲಿ ಪಾಲ್ಗೊಂಡಿದ್ದ ಸಂತ್ರಸ್ತರು – ಪ್ರಜಾವಾಣಿ ಚಿತ್ರ

'ಕಂದಾಯ ನಿವೇಶನದಾರರಿಗಾಗಿ ಜನಸ್ನೇಹಿ ಕೇಂದ್ರ'

ಶಿವರಾಮ ಕಾರಂತ ಬಡಾವಣೆಗೆ ಗುರುತುಪಡಿಸಲಾದ ಪ್ರದೇಶದಲ್ಲಿರುವ ಕಂದಾಯ ನಿವೇಶನದಾರರ ಅನುಕೂಲಕ್ಕಾಗಿ ಕೇಂದ್ರ ಕಚೇರಿ ಆವರಣದಲ್ಲಿ ಜನಸ್ನೇಹಿ ಕೇಂದ್ರವನ್ನು ಬಿಡಿಎ ಪ್ರಾರಂಭಿಸಿದೆ.

ಈ ಬಡಾವಣೆಗೆ ಭೂಸ್ವಾಧೀನ ನಡೆಸಲು ಉದ್ದೇಶಿಸಲಾದ ಪ್ರದೇಶಗಳಲ್ಲಿನ ಕಂದಾಯ ನಿವೇಶನಗಳನ್ನು ಬಿಡಿಎ ಸ್ವಾಧೀನಪಡಿಸಿಕೊಳ್ಳಲಿದೆ. 2018ಕ್ಕೂ ಮುಂಚೆ ಇಲ್ಲಿ ಕಂದಾಯ ನಿವೇಶನ ಖರೀದಿಸಿದವರಿಗೆ ಬಿಡಿಎ 30x40 ಚ.ಅಡಿ ವಿಸ್ತೀರ್ಣದ ಬದಲಿ ನಿವೇಶನವನ್ನು ಹಂಚಿಕೆ ಮಾಡಲಿದೆ. ಇದಕ್ಕಾಗಿ ಕಂದಾಯ ನಿವೇಶನದಾರರು 2021ರ ಸೆ. 17ಕ್ಕೆ ಮುನ್ನ ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ಆನ್‌ಲೈನ್ ಮೂಲಕ ಹಾಗೂ ದಾಖಲೆಗಳನ್ನು ಜನಸ್ನೇಹಿ ಕೇಂದ್ರದ ಮೂಲಕ ಸಲ್ಲಿಸಬಹುದು ಎಂದು ಬಿಡಿಎ ಪ್ರಕಟಣೆಯಲ್ಲಿ ತಿಳಿಸಿದೆ.

'ಸಿ.ಎಂ ಆಗಿದ್ದರೂ ಗುಮಾಸ್ತನಂತಿದ್ದೆ'

'ರಾಜ್ಯದಲ್ಲಿ 2018ರಲ್ಲಿ ಮೈತ್ರಿ ಸರ್ಕಾರವಿದ್ದಾಗ ನಾನು ಸ್ವತಂತ್ರ ಮುಖ್ಯಮಂತ್ರಿಯಾಗಿರಲಿಲ್ಲ. ಗುಮಾಸ್ತನಂತೆ ಕೆಲಸ ಮಾಡಬೇಕಾಗಿತ್ತು. ಅಂತಹ ಇಕ್ಕಟ್ಟಿನಲ್ಲಿ 14 ತಿಂಗಳು ಕಾರ್ಯನಿರ್ವಹಿಸಿದೆ. ಶ್ರೀಮಂತರ ಪರವಾಗಿ ಯಾವುದೇ ಆದೇಶವನ್ನು ನಾನು ನೀಡಲಿಲ್ಲ' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ಬೆಂಗಳೂರು ನಗರಾಭಿವೃದ್ಧಿ ಖಾತೆ ಕಾಂಗ್ರೆಸ್‌ನವರ ಸುಪರ್ದಿನಲ್ಲಿತ್ತು. ಬಿಡಿಎ, ಬಿಬಿಎಂಪಿ ಸೇರಿದಂತೆ ಬೆಂಗಳೂರು ನಗರಾಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಸಭೆಯನ್ನು ನಾನು ಮಾಡುವಂತಿರಲಿಲ್ಲ' ಎಂದೂ ಹೇಳಿದರು.

'ನಟ ದರ್ಶನ್, ಶಿವಶಂಕರಪ್ಪಗೆ ಅನ್ವಯಿಸುವುದಿಲ್ಲವೇ?'

'ಸುಪ್ರೀಂ ಕೋರ್ಟ್ ತೀರ್ಪನ್ನು ಮುಂದಿಟ್ಟುಕೊಂಡು ಬಡವರ ಮನೆಗಳನ್ನು ಕೆಡವಲಾಗುತ್ತಿದೆ. ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದವರ ಮನೆಗಳನ್ನು ತೆರವುಗೊಳಿಸುವಂತೆ ರಾಷ್ಟ್ರೀಯ ಹಸಿರು ಮಂಡಳಿ ತೀರ್ಪು ನೀಡಿದಾಗಲೂ ಬಡವರ ಮನೆಗಳನ್ನು ಮಾತ್ರ ಧ್ವಂಸಗೊಳಿಸಲಾಯಿತು. ನಟ ದರ್ಶನ್, ಕಾಂಗ್ರೆಸ್ ನಾಯಕ ಶಾಮನೂರು ಶಿವಶಂಕರಪ್ಪ ಅವರಿಗೆ ಮಾತ್ರ ಈ ತೀರ್ಪನ್ನು ಅನ್ವಯಿಸಲಿಲ್ಲ' ಎಂದು ಶಾಸಕ ಆರ್. ಮಂಜುನಾಥ್ ದೂರಿದರು.

'ಈ ಜನರು ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿದ್ದರೆ ಕ್ರಮ ತೆಗೆದುಕೊಳ್ಳಬಹುದಿತ್ತು. ಆದರೆ, ತಾವು ಉಳುಮೆಗಾಗಿ ಇಟ್ಟುಕೊಂಡಿದ್ದ ಜಾಗದಲ್ಲಿ ಮನೆ ಕಟ್ಟಿದ್ದಾರೆ' ಎಂದರು.

'ಭೂಮಿ ಕಳೆದುಕೊಳ್ಳುತ್ತಿರುವ ಸಂತ್ರಸ್ತರು ಅರ್ಜಿ ಸಲ್ಲಿಸಲು 2022 ಫೆ.15ರವರೆಗೆ ಅವಕಾಶವಿದೆ. ಆದರೆ ಬಿಡಿಎ ಅಧಿಕಾರಿಗಳು ನ್ಯಾಯಾಲಯದ ಆದೇಶದ ನೆಪದಲ್ಲಿ ಮನೆಗಳನ್ನು ಉರುಳಿಸಿ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ಟೀಕಿಸಿದರು.

ಎಸ್‌ಬಿಐ ಗೃಹ ಸಾಲದ ಸಂಸ್ಕರಣಾ ಶುಲ್ಕ ಮನ್ನಾ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), 'ಮಾನ್ಸೂನ್ ಧಮಾಕಾ ಆಫರ್' ಅಡಿಯಲ್ಲಿ ಗೃಹ ಸಾಲಗಳ ಮೇಲಿನ ಸಂಸ್ಕರಣಾ ಶುಲ್ಕವನ್ನು ಕೈಬಿಟ್ಟಿದೆ. ಈ ಕೊಡುಗೆಯು ಆಗಸ್ಟ್ ತಿಂಗಳ ಅಂತ್ಯದವರೆಗೂ ಇರಲಿದೆ ಎಂದು ಶನಿವಾರ ತಿಳಿಸಿದೆ.

'ಎಸ್‌ಬಿಐನ ಗೃಹ ಸಾಲದ ಬಡ್ಡಿದರವು ಶೇ 6.70ರಿಂದ ಆರಂಭವಾಗುತ್ತಿದ್ದು, ಇದನ್ನು ಪರಿಗಣಿಸಿದರೆ ಮನೆ ಖರೀದಿಸಲು ಇದಕ್ಕಿಂತ ಉತ್ತಮ ಸಮಯ ಇರಲಾರದು' ಎಂದು ಬ್ಯಾಂಕ್ ಹೇಳಿದೆ.

'ಬಡ್ಡಿ ದರವು ಐತಿಹಾಸಿಕ ಕಡಿಮೆ ಮಟ್ಟದಲ್ಲಿ ಇರುವುದು ಹಾಗೂ ಸಂಸ್ಕರಣಾ ಶುಲ್ಕ ಮನ್ನಾ ಮಾಡಿರುವುದರಿಂದ ಮನೆ ಖರೀದಿಸುವ ನಿರ್ಧಾರಕ್ಕೆ ಬರಲು ಜನರಿಗೆ ಸುಲಭವಾಗಲಿದೆ' ಎಂದು ಬ್ಯಾಂಕ್‌ನ ರಿಟೇಲ್ ಮತ್ತು ಡಿಜಿಟಲ್ ಬ್ಯಾಂಕಿಂಗ್ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಸಿ.ಎಸ್. ಶೆಟ್ಟಿ ಹೇಳಿದ್ದಾರೆ. ಸದ್ಯ, ಗೃಹ ಸಾಲಗಳ ಮೇಲೆ ಶೇ 0.40ರಷ್ಟು ಸಂಸ್ಕರಣಾ ಶುಲ್ಕ ಇದೆ.

ನಗರದಲ್ಲಿ 450 ಮಂದಿಗೆ ಹೊಸದಾಗಿ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ 450 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 365, ಮೈಸೂರಿನಲ್ಲಿ 177 ಹಾಗೂ ಕೊಡಗಿನಲ್ಲಿ 132 ಪ್ರಕರಣಗಳು ಪತ್ತೆಯಾಗಿವೆ. ಉಡುಪಿಯಲ್ಲಿ 148, ತುಮಕೂರಿನಲ್ಲಿ 108 ಹಾಗೂ ಹಾಸನದಲ್ಲಿ 105 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.05 ಲಕ್ಷ ದಾಟಿದೆ.

ರಾಜ್ಯದಲ್ಲಿ ಕೋವಿಡ್ ಪೀಡಿತರಲ್ಲಿ 37 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 15 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 11, ದಕ್ಷಿಣ ಕನ್ನಡದಲ್ಲಿ 7, ಹಾಸನದಲ್ಲಿ 4, ಮೈಸೂರು, ಕೋಲಾರ ಹಾಗೂ ಚಿಕ್ಕಮಗಳೂರಿನಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.86ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,562ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 1,632 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.44 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆಕಂಡಿದ್ದು, ಸದ್ಯ 23,796 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

'ಆರೋಗ್ಯ ಕಾರ್ಯಕರ್ತರ ಮಕ್ಕಳಿಗೆ ವಿದ್ಯಾರ್ಥಿ ವೇತನ'

'ಕೋವಿಡ್ ಕಾಯಿಲೆಯಿಂದ ಮೃತಪಟ್ಟ ಆರೋಗ್ಯ ಕಾರ್ಯಕರ್ತರ ನಾಲ್ಕು ಮಕ್ಕಳಿಗೆ ತಲಾ ₹ 2 ಲಕ್ಷ ವಿದ್ಯಾರ್ಥಿ ವೇತನ ಹಾಗೂ ಎಂಟು ಪದವೀಧರ ಮಕ್ಕಳಿಗೆ ಉದ್ಯೋಗ ಕೊಡಿಸಲಾಗುವುದು' ಎಂದು ಕಾವೇರಿ ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ವಿಜಯ ಭಾಸ್ಕರನ್ ತಿಳಿಸಿದರು.

ನಗರದಲ್ಲಿ ಆಸ್ಪತ್ರೆಯು ಶನಿವಾರ ಆಯೋಜಿಸಿದ ಕೃತಜ್ಞತಾ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಕೋವಿಡ್‌ನಿಂದಾಗಿ ಕೆಲ ಆರೋಗ್ಯ ಕಾರ್ಯಕರ್ತರೂ ಮೃತಪಟ್ಟಿದ್ದಾರೆ. ಅವರನ್ನೇ ನಂಬಿದ್ದ ಕುಟುಂಬಗಳು ಅನಾಥವಾಗಿವೆ. ಹಾಗಾಗಿ, ಅಂತಹ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಪದವೀಧರರಿಗೆ ಉದ್ಯೋಗ ಕೊಡಿಸಲೂ ಸಹಾಯ ಮಾಡುತ್ತಿದ್ದೇವೆ' ಎಂದರು.

ಆಸ್ಪತ್ರೆಗಳಿಗೆ ಪ್ರಶಸ್ತಿ ಪ್ರದಾನ: ಕೋವಿಡ್ ಸಂದರ್ಭದಲ್ಲಿ ಚಿಕಿತ್ಸಾ ವಿಧಾನದಲ್ಲಿ ನಾವಿನ್ಯತೆ ಅಳವಡಿಸಿಕೊಂಡ ಆಸ್ಪತ್ರೆಗಳನ್ನು ಗುರುತಿಸಿ, ಪ್ರಶಸ್ತಿ ನೀಡಲಾಯಿತು. ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯು ಅತ್ಯುತ್ತಮ ಆವಿಷ್ಕಾರ ಪ್ರಶಸ್ತಿ ಪಡೆದುಕೊಂಡಿತು. ಈ ಪ್ರಶಸ್ತಿಯು ₹ 50 ಸಾವಿರ ನಗದನ್ನು ಒಳಗೊಂಡಿದೆ. ವೈದ್ಯಕೀಯ ವಿಭಾಗದಲ್ಲಿ ಇಎಸ್‌ಐಸಿ ಆಸ್ಪತ್ರೆ, ಕಿಮ್ಸ್ ಆಸ್ಪತ್ರೆ, ವೈದ್ಯಕೀಯೇತರ ವಿಭಾಗದಲ್ಲಿ ಕಾವೇರಿ ಆಸ್ಪತ್ರೆ ಮತ್ತು ಸೇಂಟ್ ಫಿಲೋಮಿನಾ ಆಸ್ಪತ್ರೆಗಳು ಪ್ರಶಸ್ತಿ ಪಡೆದುಕೊಂಡವು.



ಸಾಹಿತಿ ಡಾ.ಎಸ್‌.ಎಲ್‌.ಭೈರಪ್ಪ ಕಿಡಿ

ವಿಶ್ವೇಶ್ವರಯ್ಯ ಅವರಿಗೆ ದೊಡ್ಡ ದೂರದೃಷ್ಟಿ ಇತ್ತು. ಎಲ್ಲ ವಿಷಯಗಳಲ್ಲಿ ತಜ್ಞರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೆ ಪ್ರಮುಖ ಕಾರಣಕರ್ತರು ಎಂದರು

'ವಿಶ್ವೇಶ್ವರಯ್ಯ ಅವರನ್ನು ತುಳಿಯುವ ಪ್ರಯತ್ನ'

ಮೈಸೂರು: 'ಮೈಸೂರು ಮಹಾರಾಜರನ್ನು ಎತ್ತಿಕಟ್ಟಿ ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ತುಳಿಯುವ ಪ್ರಯತ್ನ ನಡೆಯುತ್ತಿದೆ. ಇದು ದೇಶವನ್ನು ಹಾಳು ಮಾಡುವ ಕೃತ್ಯ' ಎಂದು ಸಾಹಿತಿ ಡಾ.ಎಸ್.ಎಲ್.ಭೈರಪ್ಪ ದೂರಿದರು.

ನಗರದಲ್ಲಿ ಶನಿವಾರ ಲೇಖಕ ಡಿ.ಎಸ್.ಜಯಪ್ಪಗೌಡರ ಅಭಿನಂದನಾ ಗ್ರಂಥ 'ಜಯಸಿರಿ'ಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.



'ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ಅಪರೂಪದ ವ್ಯಕ್ತಿಗಳು. ಆದರೆ, ಕನ್ನಂಬಾಡಿ ಕಟ್ಟೆ, ಮೈಸೂರು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ ಅನ್ನು ಮಹಾರಾಜರು ಸ್ಥಾಪಿಸಿದ್ದೇ ವಿನಃ ವಿಶ್ವೇಶ್ವರಯ್ಯನವರಲ್ಲ ಎಂದು ಕೆಲವರು ವಾದಿಸುತ್ತಿದ್ದಾರೆ. ಹಾಗಿದ್ದರೆ, ಅವುಗಳಲ್ಲಿ ವಿಶ್ವೇಶ್ವರಯ್ಯನವರ ಪಾತ್ರವಿಲ್ಲವೇ? ಎಲ್ಲವನ್ನೂ ಮಹಾರಾಜರೇ ಮಾಡಿದ್ದರು ಎಂದು ಹೇಳುತ್ತಾ ಹೋದರೆ ಇಂದಿನ ಪೀಳಿಗೆಗೆ ತಪ್ಪು ಮಾಹಿತಿ ರವಾನಿಸಿದಂತೆ ಆಗುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಪ್ರಜಾಪ್ರತಿನಿಧಿ ಸಭೆಯಲ್ಲಿ ಕನ್ನಡದಲ್ಲೇ ಮಾತನಾಡಬೇಕು ಎಂದು ವಿಶ್ವೇಶ್ವರಯ್ಯ ಸೂಚಿಸಿದ್ದರು. ಆಡಳಿತಕ್ಕೆ ಬೇಕಾದ ಕನ್ನಡದ ಶಬ್ದಗಳಿಗಾಗಿ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ್ದರು. ಅದರ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ ಹುಟ್ಟಿತು. ಆದರೆ, ಅದರ ಶ್ರೇಯಸ್ಸನ್ನು ಮಹಾರಾಜರಿಗೆ ನೀಡುತ್ತಿದ್ದಾರೆ. ನಿಜವಾಗಿ ಕೆಲಸ ಮಾಡಿದವರು ಯಾರು ಎಂಬುದನ್ನು ಜನರಿಗೆ ತಿಳಿಸಬೇಕಲ್ಲವೇ' ಎಂದು ಪ್ರಶ್ನಿಸಿದರು.

ಹೊರರಾಜ್ಯದಿಂದ ಗಾಂಜಾ ತಂದು ಮಾರಾಟ; ಇಬ್ಬರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ತ್ರಿಪುರ ಹಾಗೂ ಬಿಹಾರದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಎಚ್‌ಆರ್‌ಬಿಆರ್ ಬಡಾವಣೆಯ 1ನೇ ಹಂತದ ಬಾಬುಸಾಪಾಳ್ಯ ಜಂಕ್ಷನ್ ಬಳಿ ಗಾಂಜಾ ಮಾರಲು ಆರೋಪಿಗಳು ಬಂದಿದ್ದರು. ಎರಡು ಬ್ಯಾಗ್‌ಗಳಲ್ಲಿ ಗಾಂಜಾ ಪೊಟ್ಟಣಗಳನ್ನು ತುಂಬಿಕೊಂಡು ತಂದಿದ್ದರು. ಅವರ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಬಂಧಿಸಲಾಯಿತು. ₹ 6.50 ಲಕ್ಷ ಮೌಲ್ಯದ 21 ಕೆ.ಜಿ 500 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಯೊಬ್ಬ ತ್ರಿಪುರಾ ರಾಜ್ಯದವ. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಇನ್ನೊಬ್ಬ ಆರೋಪಿ ಪರಿಚಯವಾಗಿತ್ತು. ಇಬ್ಬರೂ ಸೇರಿ ಗಾಂಜಾ ಮಾರಾಟ ಮಾಡಲು ಮುಂದಾಗಿದ್ದರು. ತ್ರಿಪುರ ಹಾಗೂ ಬಿಹಾರದ ಕೆಲವರ ಜೊತೆ ಒಡನಾಟ ಹೊಂದಿದ್ದ ಆರೋಪಿಗಳು, ಅವರ ಮೂಲಕ ಗಾಂಜಾ ಖರೀದಿಸಿ ನಗರಕ್ಕೆ ತರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಖಾಸಗಿ ಕಂಪನಿಗಳ ಕೆಲ ಉದ್ಯೋಗಿಗಳು ಹಾಗೂ ಕಾರ್ಮಿಕರಿಗೆ ಮಾದಕ ದ್ರವ್ಯ ಮಾರುತ್ತಿದ್ದರು.'

'ಗಾಂಜಾ ಮಾರಾಟದಿಂದ ಬಂದ ಹಣವನ್ನು ಆರೋಪಿಗಳು ಹಂಚಿಕೊಳ್ಳುತ್ತಿದ್ದರು. ಇವರ ಜೊತೆ ಮತ್ತಷ್ಟು ಆರೋಪಿಗಳು ಭಾಗಿಯಾಗಿರುವ ಮಾಹಿತಿ ಇದೆ' ಎಂದು ಪೊಲೀಸರು ತಿಳಿಸಿದರು.

ದ್ವಿಚಕ್ರ ವಾಹನ ಕಳವು ಮಾಡಿಸುತ್ತಿದ್ದ 'ಪತ್ತೇದಾರಿ'

ಮಾದನಾಯಕನಹಳ್ಳಿ ಪೊಲೀಸರ ಕಾರ್ಯಾಚರಣೆ – ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದಲ್ಲಿ ನಡೆಯುತ್ತಿದ್ದ ದ್ವಿಚಕ್ರ ವಾಹನಗಳ ಕಳವು ಪ್ರಕರಣದಲ್ಲಿ ಐವರು ಆರೋಪಿಗಳನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಜಿಲ್ಲೆಯ ಹುತ್ತರಿದುರ್ಗದ ಎಚ್.ಜಿ. ಶಿವಶಂಕರ್ (25), ತಾವರೆಕೆರೆಯ ಹೊನಗನಹಟ್ಟಿಯ ಕೆ. ರವಿಕುಮಾರ್ (21), ಕೆ. ಮುನಿರಾಜು (20), ಲಗ್ಗೆರೆಯ ಬಿ.ಯು. ಜಗದೀಶ್ (21) ಹಾಗೂ ಸುಂಕದಕಟ್ಟೆಯ ಬಿ.ಯು. ಮೋಹನ್‌ಕುಮಾರ್ (22) ಬಂಧಿತರು. ಇವರಿಂದ ₹ 40 ಲಕ್ಷ ಮೌಲ್ಯದ 46 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಶಿವಶಂಕರ್

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಶಿವಶಂಕರ್, ನಾಗರಬಾವಿಯಲ್ಲಿ ವಾಸವಿದ್ದ. ಡಿಕನ್ಸನ್ ರಸ್ತೆಯಲ್ಲಿರುವ ಪತ್ತೇದಾರಿ ಏಜೆನ್ಸಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಏಜೆನ್ಸಿಗೆ ಬರುತ್ತಿದ್ದ ಜನರ ಮನವಿಯಂತೆ ಪತ್ತೇದಾರಿ ಕೆಲಸ ಮಾಡುವುದು ಆತನ ಜವಾಬ್ದಾರಿ ಆಗಿತ್ತು. ಪತ್ತೇದಾರಿ ಕೆಲಸಕ್ಕೆ ಹೋಗಲು ಆತ, ನೋಂದಣಿ ಸಂಖ್ಯೆ ಫಲಕವಿಲ್ಲದ ದ್ವಿಚಕ್ರವಾಹನಗಳಿಗಾಗಿ ಹುಡುಕಾಟ ನಡೆಸುತ್ತಿದ್ದ.'

'ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬನ ಮೂಲಕ ಶಿವಶಂಕರ್‌ಗೆ ಆರೋಪಿ ಕೆ. ರವಿಕುಮಾರ್ ಪರಿಚಯವಾಗಿತ್ತು. ಸುಲಿಗೆ ಯತ್ನ ಪ್ರಕರಣದಲ್ಲಿ ರವಿಕುಮಾರ್ ಜೈಲಿಗೆ ಹೋಗಿಬಂದಿದ್ದ ವಿಷಯ ತಿಳಿದಿದ್ದ ಶಿವಶಂಕರ್, 'ಪತ್ತೇದಾರಿ ಕೆಲಸಕ್ಕೆ ನೋಂದಣಿ ಸಂಖ್ಯೆ ಫಲಕವಿಲ್ಲದ ವಾಹನಗಳು ಬೇಕು. ಕಳವು ಮಾಡಿ ತನ್ನಿ, ಹಣ ಕೊಡುತ್ತೇನೆ' ಎಂದಿದ್ದ. ಅದಕ್ಕೆ ಒಪ್ಪಿದ್ದ ರವಿಕುಮಾರ್, ಸಹಚರರ ಜೊತೆ ಸೇರಿ ವಾಹನ ಕಳವು ಮಾಡಲಾರಂಭಿಸಿದ್ದ' ಎಂದೂ ಪೊಲೀಸರು ತಿಳಿಸಿದರು.

ಮೆಕ್ಯಾನಿಕ್ ಕಡೆ ತರಬೇತಿ: 'ವಾಹನ ಕದಿಯುವುದು ಹೇಗೆ ಹಾಗೂ ಪೊಲೀಸರಿಗೆ ಸುಳಿವು ಸಿಗದಂತೆ ಕೃತ್ಯ ನಡೆಸುವುದು ಹೇಗೆ ಎಂಬ ಬಗ್ಗೆ ಪತ್ತೇದಾರಿ ಶಿವಶಂಕರ್‌ನೇ ಆರೋಪಿಗಳಿಗೆ ಹೇಳಿಕೊಡುತ್ತಿದ್ದ. ಕೀ ಇಲ್ಲದೇ ವಾಹನಗಳ ಲಾಕ್ ತೆರೆಯುವ ಕುರಿತು ತನ್ನ ಸ್ನೇಹಿತನಾದ ಮೆಕ್ಯಾನಿಕ್ ಮೋಹನ್‌ಕುಮಾರ್ ಮೂಲಕ ರವಿಕುಮಾರ್ ಹಾಗೂ ಇತರೆ ಆರೋಪಿಗಳಿಗೆ ತರಬೇತಿ ಕೊಡಿಸಿದ್ದ' ಎಂದೂ ಪೊಲೀಸರು ವಿವರಿಸಿದರು.

'ಕಳವು ಮಾಡಬೇಕಾದ ವಾಹನ ಗುರುತಿಸುತ್ತಿದ್ದ ಶಿವಶಂಕರ್, ವಿಳಾಸದ ಸಮೇತ ರವಿಕುಮಾರ್‌ಗೆ ಮಾಹಿತಿ ನೀಡುತ್ತಿದ್ದ. ರವಿಕುಮಾರ್ ಹಾಗೂ ಇತರರು ಸ್ಥಳಕ್ಕೆ ಹೋಗಿ ವಾಹನ ಕದ್ದುಕೊಂಡು ಬಂದು ಶಿವಶಂಕರ್‌ಗೆ ಕೊಡುತ್ತಿದ್ದರು. ಆತನಿಂದ ಹಣ ಪಡೆದು, ಅದರಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ಪೊಲೀಸರು ಹೇಳಿದರು.

'ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳ ಕಳವು ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗಿದ್ದವು. ತನಿಖೆ ಕೈಗೊಂಡು ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ಕೆಲ ಸುಳಿವುಗಳು ಸಿಕ್ಕಿದ್ದವು. ಅದರನ್ವಯ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಇಬ್ಬರು, ಕದ್ದ ವಾಹನಗಳ ಖರೀದಿದಾರರು' ಎಂದೂ ತಿಳಿಸಿದರು.

ಕುರಿ, ಕೋಳಿಗಿಂತ ಗೋಮಾಂಸ ಹೆಚ್ಚು ತಿನ್ನಿ: ಬಿಜೆಪಿ ಸಚಿವ

ಶಿಲ್ಲಾಂಗ್ (ಪಿಟಿಐ): ರಾಜ್ಯದ ಜನರು ಕೋಳಿ, ಕುರಿ ಮತ್ತು ಮೀನಿಗಿಂತ ಗೋಮಾಂಸವನ್ನೇ ಹೆಚ್ಚಾಗಿ ತಿನ್ನುವಂತೆ ಹೇಳಿರುವ ಮೇಘಾಲಯದ ಪಶುಸಂಗೋಪನಾ ಸಚಿವ, ಬಿಜೆಪಿಯ ಹಿರಿಯ ನಾಯಕ ಸನ್ಬೋರ್ ಶುಲ್ಲೈ, 'ಪ್ರಜಾಪ್ರಭುತ್ವ ದೇಶದಲ್ಲಿ ಪ್ರತಿಯೊಬ್ಬರೂ ತಮ್ಮಿಷ್ಟದ ಆಹಾರ ಸೇವಿಸಲು ಸ್ವತಂತ್ರರು' ಎಂದಿದ್ದಾರೆ.

ಬಿಜೆಪಿ ಸರ್ಕಾರವು ಗೋಹತ್ಯೆಗೆ ನಿಷೇಧ ಹೇರಲಿದೆ ಎಂಬ ಗ್ರಹಿಕೆಯನ್ನು ದೂರ ಮಾಡುವ ನಿಟ್ಟಿನಲ್ಲಿ, ಗೋಮಾಂಸ ಸೇವನೆಯನ್ನು ಉತ್ತೇಜಿಸಿದ್ದಾಗಿ ಅವರು ಹೇಳಿದ್ದಾರೆ.

ಶುಲ್ಲೈ, ಕಳೆದ ವಾರವಷ್ಟೇ ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ನೆರೆಯ ರಾಜ್ಯವಾದ ಅಸ್ಸಾಂನಲ್ಲಿ ಗೋರಕ್ಷಣಾ ಕಾಯ್ದೆ ಜಾರಿ ಮಾಡಿರುವುದರಿಂದ, ಮೇಘಾಲಯಕ್ಕೆ ಜಾನುವಾರು ಸಾಗಿಸಲು ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ಆ ರಾಜ್ಯದ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಅವರೊಂದಿಗೆ ಚರ್ಚಿಸುವುದಾಗಿಯೂ ಹೇಳಿದರು.

ಎರಡೂ ರಾಜ್ಯಗಳ ಗಡಿ ವಿವಾದದ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದ ಗಡಿ ಹಾಗೂ ಜನರ ರಕ್ಷಣೆಗಾಗಿ ರಾಜ್ಯದ ಪೊಲೀಸ್ ಪಡೆಯನ್ನು ಬಳಸಿಕೊಳ್ಳಲು ಇದು ಸಕಾಲ. ಅಸ್ಸಾಂ ಜನರು, ನಮ್ಮ ರಾಜ್ಯದ ಜನರಿಗೆ ಗಡಿಯಲ್ಲಿ ನಿರಂತರವಾಗಿ ಕಿರುಕುಳ ನೀಡುತ್ತಿದ್ದರೆ, ನಾವು ಆ ಸ್ಥಳದಲ್ಲೇ ಅವರಿಗೆ ಪ್ರತಿಕ್ರಿಯೆ ನೀಡಬೇಕಾಗುತ್ತದೆ. ಕೇವಲ ಚಹಾ ಕುಡಿದು ಮಾತನಾಡುವುದರಿಂದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಸ್ಥಳದಲ್ಲೇ ಉತ್ತರ ನೀಡಬೇಕು' ಎಂದ ಅವರು, ಹಾಗೆಂದು ತಾವು ಹಿಂಸೆಯನ್ನು ಸಮರ್ಥಿಸಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಕಾರ್ಯಕರ್ತರ ನಡುವೆ ಚರ್ಚೆಗೆ ಗ್ರಾಸವಾದ ಘಟನೆ

ಅಶೋಕ – ಸೋಮಣ್ಣ ಪರಸ್ಪರ ಬೈಯ್ದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟ ಸೇರುವ ಪ್ರಯತ್ನದಲ್ಲಿ ಮಾಜಿ ಸಚಿವರಾದ ಆರ್. ಅಶೋಕ ಮತ್ತು ವಿ. ಸೋಮಣ್ಣ ಏಕವಚನದಲ್ಲಿ ಜಗಳವಾಡಿಕೊಂಡಿರುವ ಸಂಗತಿ ಬಿಜೆಪಿ ಮುಖಂಡರ ನಡುವೆ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ತಮ್ಮನ್ನು ಕರೆಯದೇ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿಮಾಡಿದ ಅಶೋಕ ಅವರ ನಡೆಯನ್ನು ಸೋಮಣ್ಣ ಅವರು ಪ್ರಶ್ನಿಸಿದ್ದೇ ಜಗಳಕ್ಕೆ ಕಾರಣ ಎನ್ನಲಾಗಿದೆ. ಮೊಬೈಲ್ ಮಾತುಕತೆ ವೇಳೆ ಪರಸ್ಪರ ಏಕವಚನ ಮತ್ತು ಕೆಟ್ಟ ಪದಗಳನ್ನು ಬಳಸಿ ಬೈದಾಡಿಕೊಂಡಿದ್ದಾರೆ. ಮೊಬೈಲ್ ಸಂಭಾಷಣೆಯ ಆಡಿಯೊ ತುಣುಕು ಕೆಲವರಿಗೆ ಲಭ್ಯವಾಗಿದ್ದು, ಪಕ್ಷದೊಳಗೆ ಈ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ.

ಜುಲೈ 28ರಂದು ಪ್ರಮಾಣವಚನ ಸ್ವೀಕರಿಸಿದ್ದ ಬಸವರಾಜ ಬೊಮ್ಮಾಯಿ, ಅದೇ ದಿನ ಆರ್‌ಎಸ್‌ಎಸ್ ಕಚೇರಿ ಕೇಶವ ಕೃಪಾಕ್ಕೆ ಭೇಟಿನೀಡಿದ್ದರು. ಬಿಜೆಪಿಯ ಹಿರಿಯ ಶಾಸಕರಾದ ಅಶೋಕ ಮತ್ತು ಸೋಮಣ್ಣ ಇಬ್ಬರೂ ಅಲ್ಲಿಯೇ ಭೇಟಿಯಾಗಿದ್ದರು. ಒಟ್ಟಿಗೆ ದೆಹಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿಮಾಡಿ, ಇಬ್ಬರನ್ನೂ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಮನವೊಲಿಕೆ ಮಾಡಲು ಪರಸ್ಪರ ಒಪ್ಪಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.



ಆರ್‌.ಅಶೋಕ

ವಿ.ಸೋಮಣ್ಣ

ಅಶೋಕ ಅವರು ಸೋಮಣ್ಣ ಅವರಿಗೆ ತಿಳಿಸದೆಯೇ ಒಬ್ಬರೇ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿಮಾಡಿದ್ದರು. ಈ ವಿಷಯ ತಿಳಿಯುತ್ತಿದ್ದಂತೆಯೇ ಸೋಮಣ್ಣ ಕರೆಮಾಡಿ ವಿಚಾರಿಸಿದ್ದಾರೆ. ತಮ್ಮನ್ನು ಬಿಟ್ಟು ಹೋದದ್ದೇಕೆ ಎಂದು ಏಕವಚನದಲ್ಲಿ ಪ್ರಶ್ನಿಸುತ್ತಿದ್ದಂತೆಯೇ ಅಶೋಕ ಹರಿಹಾಯ್ದಿದ್ದಾರೆ. ಇಬ್ಬರ ನಡುವೆ ದೊಡ್ಡ ಜಗಳವೇ ನಡೆದಿದೆ ಎಂಬ ಮಾಹಿತಿ ಲಭಿಸಿದೆ.

'ಸಂಪುಟಕ್ಕೆ ತಮ್ಮನ್ನು ಸೇರಿಸದಂತೆ ವರಿಷ್ಠರಿಗೆ ಅಶೋಕ ದೂರು ಹೇಳಿರಬಹುದು ಎಂದು ಸೋಮಣ್ಣ ಅನುಮಾನ ವ್ಯಕ್ತಪಡಿಸಿದ್ದಾರೆ. ಆಗ ಜಗಳ ಮತ್ತಷ್ಟು ಜೋರಾಗಿದೆ. ಇಬ್ಬರೂ ಪರಸ್ಪರರ ವಿರುದ್ಧ ಪಿತೂರಿ, ಸೇಡಿನ ರಾಜಕಾರಣದ ಆರೋಪ ಮಾಡಿದ್ದಾರೆ. ಸುಮಾರು ಹತ್ತು ನಿಮಿಷಗಳಿಗೂ ಹೆಚ್ಚು ಕಾಲ ಜಗಳವಾಡಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ನನಗೆ ಉಪಮುಖ್ಯಮಂತ್ರಿ ಸ್ಥಾನ ಹಾಗೂ ಬೆಂಗಳೂರು ಉಸ್ತುವಾರಿ ತಪ್ಪಿಸಲು ನೀನು ಯತ್ನಿಸಿದ್ದೆ' ಎಂದು ಅಶೋಕ ಅವರು ಸೋಮಣ್ಣ ವಿರುದ್ಧ ಈ ಜಗಳದ ವೇಳೆ ಹರಿಹಾಯ್ದಿದ್ದರೆ, 'ಸಚಿವ ಸ್ಥಾನವನ್ನೇ ಸಿಗದಂತೆ ಮಾಡಲು ಮುಂದಾಗಿದ್ದೀಯಾ' ಎಂದು ಸೋಮಣ್ಣ ಅವರು ಅಶೋಕ ವಿರುದ್ಧ ಕೆಂಡಕಾರಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಆರ್. ಅಶೋಕ ಅವರಿಗೆ ಕರೆ ಮಾಡಲಾಯಿತು. ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

'25 ದಿನಗಳ ಹಿಂದಿನ ಘಟನೆ: ಸೋಮಣ್ಣ

'ನಮ್ಮಿಬ್ಬರ ನಡುವೆ ಮಾತುಕತೆ ನಡೆದಿರುವುದು ಇತ್ತೀಚೆಗೆ ಅಲ್ಲ. 25 ದಿನಗಳ ಹಿಂದೆ ನಡೆದ ಚರ್ಚೆಯನ್ನೇ ಸಂಪುಟದ ವಿಚಾರ ಎಂದು ಬಿಂಬಿಸಲಾಗಿದೆ' ಎಂದು ವಿ. ಸೋಮಣ್ಣ ತಿಳಿಸಿದರು. ವಾಗ್ವಾದದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ನಾನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೆ. ಕೊಡಗು ಜಿಲ್ಲೆ ಭೇಟಿ ಸಂಬಂಧ ಅಶೋಕ ಹಾಗೂ ನನ್ನ ಮಧ್ಯೆ ಮಾತುಕತೆ ನಡೆದಿತ್ತು. ಅದನ್ನೇ ಈ ರೀತಿ ಬಿಂಬಿಸಲಾಗಿದೆ. ಇಬ್ಬರ ನಡುವೆ ಯಾವುದೇ ವೈಮನಸ್ಸು ಇಲ್ಲ' ಎಂದು ಹೇಳಿದರು.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000 ಫ್ಯಾಕ್ಸ್: 080 41362010
ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಸೂಚನೆ

ಕಂಪನಿಯ 34ನೇ ವಾರ್ಷಿಕ ಸಾರ್ವತ್ರಿಕ ಸಭೆಯನ್ನು ('ಎಜಿಎಂ') 23 ನೇ ಆಗಸ್ಟ್, 2021 ಸೋಮವಾರ ಮಧ್ಯಾಹ್ನ 3.00 ಗಂಟೆಗೆ (ಐಎಸ್‌ಟಿ) ವಿಡಿಯೋಕಾನ್ಫರೆನ್ಸ್ (ವಿಸಿ) / ಇತರೆ ಆಡಿಯೋ ವಿಷುಯಲ್ ಮೂಲಕ (ಒಎವಿಎಂ) ನಡೆಸಲಿದೆ ಎಂದು 2013 ರ ಕಂಪನಿ ಕಾಯ್ದೆಯಲ್ಲಿ ಅನ್ವಯಿಸುವ ಎಲ್ಲಾ ನಿಬಂಧನೆಗಳ ಪ್ರಕಾರ ಹಾಗೂ ಇದರ ನಿಯಮಾನುಸಾರ ಮತ್ತು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯದ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 2015 ಅನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ("ಎಂಸಿಎ") ಹಾಗೂ ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯದವರು ನೀಡಿರುವ ವಿಷಯದ ಬಗ್ಗೆ ಅನ್ವಯಿಸುವ ಎಲ್ಲಾ ಸುತ್ತೋಲೆಗಳೊಂದಿಗೆ ಓದಿಕೊಳ್ಳುವುದು. 34ನೇ ವಾರ್ಷಿಕ ಸಾರ್ವತ್ರಿಕ ಸಭೆಯ ಸೂಚನೆ ಹಾಗೂ 2020–21 ರ ವಾರ್ಷಿಕ ವರದಿಯನ್ನು ಎಲ್ಲಾ ಸದಸ್ಯರಿಗೆ, ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರಿ ಗಳಲ್ಲಿ ಲಭ್ಯವಿರುವ ಇ-ಮೇಲ್ ಐಡಿಗಳಿಗೆ 30 ಜುಲೈ, 2021 ರಂದು ಕಳುಹಿಸಲಾಗಿದೆ. 34ನೇ ಎಜಿಎಂ ಸೂಚನೆಯು ಕಂಪನಿಯ ವೆಬ್‌ಸೈಟ್ www.timken.com/en-in ಹಾಗೂ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳ ಕಂಪನಿ ಷೇರುಗಳು ಪ್ರಕಟವಾದ ಸ್ಥಳದಲ್ಲಿ ಲಭ್ಯವಿದೆ. 34ನೇ ಎಜಿಎಂ ಸೂಚನೆಯು ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ನಲ್ಲಿಯು ಸಹ ಲಭ್ಯವಿದೆ.

ಸಂಸ್ಥೆಗಳ ನಿಯಮ 20 (ಆಡಳಿತ ವರ್ಗ ಹಾಗೂ ಆಡಳಿತ) ಸಮಯಕ್ಕೆ ಅನುಗುಣವಾಗಿ ಬದಲಾಯಿಸುವ ನಿಯಮಗಳು, 2014 ಮತ್ತು ಸೆಕ್ಯೂರಿಟೀಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ನಿಬಂಧನೆ 2015 ರ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 44 ರ ಅನುಸಾರ ಸಂಸ್ಥೆಯ ಕಾಯ್ದೆ 2013 ರ ಸೆಕ್ಷನ್ 108 ರ ನಿಬಂಧನೆಗಳಿಗೆ ಹಾಗೂ ಅನ್ವಯಿಸುವ ಎಲ್ಲಾ ಸುತ್ತೋಲೆಗ: ಅನುಸಾರ ಕಂಪನಿಯು ಎನ್‌ಎಸ್‌ಡಿಎಲ್‌ನೊಂದಿಗೆ 34ನೇ ವಾರ್ಷಿಕ ಸಾರ್ವತ್ರಿಕ ಸಭೆಯ ನಿರ್ಣಯಗಳಿಗಾಗಿ ಇ-ಮತ ಚಲಾಯಿಸಲು ವ್ಯವಸ್ಥೆ ಮಾಡಿದೆ. ಇ-ಮತ ಚಲಾವಣೆಯಲ್ಲಿ ಭಾಗವಹಿಸುವ ಸಂಪೂರ್ಣ ವಿಧಾನದ ಬಗ್ಗೆ ಎಜಿಎಂ ಸೂಚನೆಯಲ್ಲಿ ಲಭ್ಯವಿದೆ. ಭೌತಿಕ ಅಥವಾ ಡಿ ಮೆಟೀರಿಯಲೈಸ್ಡ್ ರೂಪದಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಸದಸ್ಯರು ಕಟ್ಟ ಕಡೆಯ ದಿನದಂದು ತಮ್ಮ ಮತವನ್ನು ಎಲೆಕ್ಟ್ರಾನಿಕ್ ಯಂತ್ರದ ಮೂಲಕ ಚಲಾಯಿಸಬಹುದು, ಯಾವುದೇ ವ್ಯಕ್ತಿಯು ವಾರ್ಷಿಕ ಸಾರ್ವತ್ರಿಕ ಸಭೆಯ (ಎಜಿಎಂ) ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಷೇರುಗಳನ್ನು ಹೊಂದಿ ಕಟ್ಟ ಕಡೆಯ ದಿನಾಂಕದಂದು ಅಂದರೆ 16ನೇ ಆಗಸ್ಟ್ 2021 ರಂದು ಸದಸ್ಯರಾದಲ್ಲಿ evoting.nsdl.co.in ಗೆ ತಮ್ಮ ಮನವಿಯನ್ನು ಕಳುಹಿಸಿ ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆಯಬಹುದು.

ರಿಮೋಟ್ ಇ–ಮತ ಚಲಾವಣೆಯು 2021, 20 ನೇ ಆಗಸ್ಟ್ ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಹಾಗೂ 2021, 22ನೇ ಆಗಸ್ಟ್, ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ನಂತರ ರಿಮೋಟ್ ಇ-ಮತ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುವುದು. ಮತ ಚಲಾವಣೆಯ ಫಲಿತಾಂಶವನ್ನು ನಿಯಮದ ಅನುಸಾರ ಘೋಷಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿಯು ಸಹ ಪ್ರಕಟಿಸಲಾಗುವುದು. ರಿಮೋಟ್ ಇ-ಮತ ಚಲಾವಣೆ ಮೂಲಕ ಮತ ಚಲಾಯಿಸಿರುವ ಸದಸ್ಯರು 34ನೇ ವಾರ್ಷಿಕ ಸಾರ್ವತ್ರಿಕ ಸಭೆ (ಎಜಿಎಂ) ಯಲ್ಲಿ ಭಾಗವಹಿಸಬಹುದು ಆದರೆ ಪುನಃ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ಯಾವುದೇ ವಿಚಾರಣೆಗೆ ಅಥವಾ ಇ-ಮತ ಚಲಾವಣೆಯ ಬಗ್ಗೆ ಸಮಸ್ಯೆಗಳಿಗೆ ಆಗಿಂದಾಗೆ ಕೇಳಲ್ಪಡುವ ಪ್ರಶ್ನೆ ("ಎಫ್‌ಎಕ್ಯೂ") ಗಳನ್ನು ಗಮನಿಸಿ ಮತ್ತು www.evoting.nsdl.com ನ ಡೌನ್ ಲೋಡಿಂಗ್ ಸೆಕ್ಷನಿನಲ್ಲಿ ಲಭ್ಯವಿರುವ ಇ-ಮತ ಮ್ಯಾನ್ಯುಯಲ್ ಅನ್ನು ಉಲ್ಲೇಖಿಸಬಹುದು. ಯಾವುದೇ ತೊಂದರೆ/ಕುಂದು ಕೊರತೆ ಇದ್ದಲ್ಲಿ, ಸದಸ್ಯರು ಕೆಳಸಹಿದಾರರನ್ನು tilinvestor@timken.com (ದೂರವಾಣಿ ಸಂಖ್ಯೆ: 080–41362000) ಅಥವಾ ಆರ್‌ಟಿಎಯವರನ್ನು rta@cbmsl.com (ದೂರವಾಣಿ ಸಂಖ್ಯೆ: 033–40116700 / 033–40116715) ಮೂಲಕ ಸಂಪರ್ಕಿಸಬಹುದು.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಬೆಂಗಳೂರು
31 ಜುಲೈ, 2021

ಹೊರಗೆ ಹೋಗುವಾಗ ಮುಖಗವಸು ಧರಿಸಿ

‘ನಳಿನ್ ನೇತೃತ್ವದಲ್ಲಿ ಮುಂದಿನ ಚುನಾವಣೆ’

ಪ್ರಜಾವಾಣಿ ವಾರ್ತೆ

ಕೆ.ಎಸ್. ಈಶ್ವರಪ್ಪ

ಬೆಂಗಳೂರು: ‘ಬಿಜೆಪಿಯು 2023ರ ವಿಧಾನಸಭಾ ಚುನಾವಣೆಯನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಎದುರಿಸಲಿದೆ’ ಎಂದು ಹಿರಿಯ ಶಾಸಕ ಕೆ.ಎಸ್. ಈಶ್ವರಪ್ಪ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಶನಿವಾರ ಮಾತನಾಡಿದ ಅವರು, ‘ಯಡಿಯೂರಪ್ಪ ಅವರಿಗೆ ನಾಲ್ಕು ಬಾರಿ ಮುಖ್ಯಮಂತ್ರಿ ಆಗುವ ಅವಕಾಶ ಲಭಿಸಿತ್ತು. ಆದರೆ, ಮತದಾರರು ಒಮ್ಮೆಯೂ ಬಿಜೆಪಿಗೆ ಪೂರ್ಣ ಬಹುಮತ ನೀಡದ ಕಾರಣದಿಂದ ಎಲ್ಲ ಸಂದರ್ಭಗಳಲ್ಲೂ ಗೊಂದಲಗಳಾದವು. ಮುಂದೆ ಹಾಗಾಗದಂತೆ ತಡೆಯಲು ಸಂಘಟನೆಯ ಶಕ್ತಿಯಿಂದ ಬಹುಮತ ಪಡೆದು ಅಧಿಕಾರಕ್ಕೆ ಬರಬೇಕಿದೆ’ ಎಂದರು.

‘ಬದಲಾದ ಸನ್ನಿವೇಶದಲ್ಲಿ ಸಂಘಟನೆಗೆ ಅನುಕೂಲವಾಗಬೇಕು, ಸರ್ಕಾರವೂ ಬದಲಾಗಬೇಕು. ಇದಕ್ಕಾಗಿ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಚುನಾವಣೆ ಎದುರಿಸಲಾಗುವುದು. ಅವರು ಪಕ್ಷ ಬಲಪಡಿಸಿದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಮುನ್ನಡೆಸಲಿದ್ದಾರೆ. ಇಬ್ಬರೂ ಸೇರಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುತ್ತಾರೆ’ ಎಂದು ಹೇಳಿದರು.

ಪಕ್ಷದ ನಿರ್ಧಾರ: ‘ಸಂಪುಟ ವಿಸ್ತರಣೆ ಬಗ್ಗೆ ತಮಗೇನೂ ಗೊತ್ತಿಲ್ಲ. ಮುಖ್ಯಮಂತ್ರಿಯವರೇ ಹೇಳಬೇಕು. ಯಾರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಅಥವಾ ಬಿಡಬೇಕು ಎಂಬುದನ್ನು ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ರಾಜ್ಯದ ವಿವಿಧೆಡೆಯ ಮಠಾಧೀಶರು, ಪಕ್ಷದ ಮುಖಂಡರು, ಕಾರ್ಯಕರ್ತರು ಬಂದು ನನ್ನನ್ನು ಭೇಟಿ ಮಾಡಿದ್ದಾರೆ. ಸಾವಿರಾರು ಮಂದಿ ದೂರವಾಣಿ ಕರೆಯ ಮೂಲಕ ವಿಚಾರಿಸುತ್ತಿದ್ದಾರೆ. ನಿಮ್ಮನ್ನೇ ಮುಖ್ಯಮಂತ್ರಿ ಮಾಡಬೇಕಿತ್ತು ಎನ್ನುವವರಿದ್ದಾರೆ. ಈಗ ಉಪ ಮುಖ್ಯಮಂತ್ರಿ ಹುದ್ದೆಯನ್ನಾದರೂ ನೀಡಲಿ ಎನ್ನುವವರೂ ಇದ್ದಾರೆ. ಆದರೆ, ಪಕ್ಷದ ನಾಯಕರು ಇದನ್ನು ತೀರ್ಮಾನ ಮಾಡಬೇಕಿದೆ’ ಎಂದು ಈಶ್ವರಪ್ಪ ಹೇಳಿದರು.

ಒಕ್ಕಲಿಗರ ಬಲಿ: ‘ಬಸವರಾಜ ಬೊಮ್ಮಾಯಿ ಜನತಾ ಪರಿವಾರದ ಮುಖ್ಯಮಂತ್ರಿ’ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಈಶ್ವರಪ್ಪ, ‘ಬೊಮ್ಮಾಯಿ ಜನತಾ ದಳದಿಂದ ಬಂದಿದ್ದಾರೆ. ಆದರೆ 12 ವರ್ಷದಿಂದ ಪಕ್ಷದವರೇ ಆಗಿದ್ದಾರೆ. ಅವರನ್ನು ಮುಖ್ಯಮಂತ್ರಿ ಮಾಡಿರುವುದರಲ್ಲಿ ಏನು ತಪ್ಪಿದೆ’ ಎಂದು ಕೇಳಿದರು.

ಈಶ್ವರಪ್ಪ – ಕಲ್ಲಡ್ಕ ಪ್ರಭಾಕರ ಭಟ್ ಚರ್ಚೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಹಿರಿಯ ಮುಖಂಡ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅವರು ಶಾಸಕ ಕೆ.ಎಸ್. ಈಶ್ವರಪ್ಪ ಅವರ ನಿವಾಸಕ್ಕೆ ಶನಿವಾರ ಭೇಟಿ ನೀಡಿ, ಕೆಲಕಾಲ ಸಮಾಲೋಚನೆ ನಡೆಸಿದರು.

ಸದ್ಯದ ರಾಜಕೀಯ ಬೆಳವಣಿಗೆಗಳು, ಸಂಪುಟ ವಿಸ್ತರಣೆ, ಪಕ್ಷ ಸಂಘಟನೆ ಸೇರಿದಂತೆ ಹಲವು ವಿಷಯಗಳ ಕುರಿತು ಇಬ್ಬರೂ ಸಮಾಲೋಚನೆ ನಡೆಸಿದ್ದಾರೆ.

ಬಿಜೆಪಿಯ ಕೆಲವು ಶಾಸಕರು ಮತ್ತು ಮುಖಂಡರು ಪಕ್ಷ ಸಂಘಟನೆಗಿಂತ ಆಸಕ್ತಿ ತೋರದೆ ವೈಯಕ್ತಿಕ ಹಿತಾಸಕ್ತಿಗಳ ಕಡೆಗೆ ಹೆಚ್ಚು ಗಮನ ನೀಡುತ್ತಿದ್ದಾರೆ ಎಂದು ಈಶ್ವರಪ್ಪ ಅವರು ಪ್ರಭಾಕರ ಭಟ್ ಬಳಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಅನುದಾನ ತರಲು ಬೊಮ್ಮಾಯಿಗೆ ಸಾಧ್ಯವೇ’

ಮೈಸೂರು: ‘ಬಿಜೆಪಿಯಲ್ಲೇ ಬೆಳೆದಿದ್ದರೂ ಬಿ.ಎಸ್.ಯಡಿಯೂರಪ್ಪ ಅವರಿಗೆ ಕೇಂದ್ರದಿಂದ ಅನುದಾನ ತರಲು ಆಗಲಿಲ್ಲ. ಇನ್ನು ಜನತಾ ಪರಿವಾರದಿಂದ ಹೋಗಿರುವ ಬಸವರಾಜ ಬೊಮ್ಮಾಯಿ ಅವರಿಗೆ ಸಾಧ್ಯವೇ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

‘ಜನತಾ ಪರಿವಾರದಿಂದ ಬಂದವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿದ್ದಾರೆ. ಆದರೆ ಅವರ ಮಾತನ್ನು ಬಿಜೆಪಿ ಹೈಕಮಾಂಡ್ ಕೇಳುವುದು ಅನುಮಾನ’ ಎಂದು ಇಲ್ಲಿ ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಮುಖ್ಯಮಂತ್ರಿ ಒಬ್ಬರಿಂದಲೇ ಕೊರೊನಾ ನಿಯಂತ್ರಣ ಸಾಧ್ಯವಿಲ್ಲ. ಬೇಗ ಸಚಿವ ಸಂಪುಟ ರಚನೆಯಾಗಬೇಕು. ಕೊರೊನಾ 3ನೇ ಅಲೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೇರಳ, ಮಹಾರಾಷ್ಟ್ರದಿಂದ ಬರುವವರನ್ನು ಅಧಿಕಾರಿಗಳ ಮೂಲಕ ತಡೆಯಬೇಕು’ ಎಂದು ಆಗ್ರಹಿಸಿದರು.

ಸಾಮಾಜಿಕ ಪಿಂಚಣಿ ಹೆಚ್ಚಳಕ್ಕೆ ಆದೇಶ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮೊದಲ ಸಂಪುಟ ಸಭೆಯಲ್ಲಿ ಕೈಗೊಂಡಿದ್ದ ನಿರ್ಧಾರದಂತೆ ಸಂಧ್ಯಾ ಸುರಕ್ಷಾ ಪಿಂಚಣಿ, ಅಂಗವಿಕಲರು ಮತ್ತು ವಿಧವೆಯರ ಮಾಸಾಶನಗಳನ್ನು ಹೆಚ್ಚಿಸಿ ಕಂದಾಯ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಜುಲೈ 28ರಂದು ಪ್ರಮಾಣವಚನ ಸ್ವೀಕರಿಸಿದ ಬಳಿಕ ಸಂಪುಟ ಸಭೆ ನಡೆಸಿದ್ದ ಬೊಮ್ಮಾಯಿ, ಸಂಧ್ಯಾ ಸುರಕ್ಷಾ ಪಿಂಚಣಿಯನ್ನು ₹ 1,000ದಿಂದ ₹1,200ಕ್ಕೆ, ಅಂಗವಿಕಲರು ಮತ್ತು ವಿಧವೆಯರ ಮಾಸಾಶನವನ್ನು ₹ 600ರಿಂದ ₹800ಕ್ಕೆ ಹೆಚ್ಚಿಸುವ ನಿರ್ಧಾರ ಕೈಗೊಂಡಿದ್ದರು. ಆಗಸ್ಟ್‌ನಿಂದಲೇ ಪರಿಷ್ಕೃತ ಮಾಸಾಶನ ಫಲಾನುಭವಿಗಳಿಗೆ ಸಿಗಲಿದೆ.

ಶೇ 10 ಮೀಸಲಾತಿ: ಪರಿಷ್ಕೃತ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿಗಳನ್ನು ಬಿಟ್ಟು ಉಳಿದ ಎಲ್ಲ ಜಾತಿಗಳಲ್ಲಿನ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಕೇಂದ್ರ ಸರ್ಕಾರದ ಹುದ್ದೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಶೇ 10ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸುವ ಸಂಬಂಧ ರಾಜ್ಯ ಸರ್ಕಾರ ಶನಿವಾರ ಪರಿಷ್ಕೃತ ಆದೇಶ ಹೊರಡಿಸಿದೆ.

ಈ ಆದೇಶ ಹೊರಡಿಸಿರುವುದರಿಂದ, ಶೇ 10ರಷ್ಟು ಮೀಸಲಾತಿ ಸೌಲಭ್ಯ 144 ಜಾತಿಗಳಿಗೆ ಮಾತ್ರ ಅನ್ವಯವಾಗುವಂತೆ 2019ರ ಮೇ 14ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ. ಜುಲೈ 22ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.

ವಾರ್ಷಿಕ ಆದಾಯ ₹ 8 ಲಕ್ಷಗಳಿಗೂ ಕಡಿಮೆ ಇರುವ ಕುಟುಂಬಗಳ ಅರ್ಹ ಅಭ್ಯರ್ಥಿಗಳಿಗೆ ಈ ಮೀಸಲಾತಿ ಸೌಲಭ್ಯ ಸಿಗಲಿದೆ. ಕಂದಾಯ ಇಲಾಖೆ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಮೂಲಕ ಆದಾಯ ಮತ್ತು ಸ್ವತ್ತು ಪ್ರಮಾಣ ವಿತರಿಸಲಿದೆ. ಪ್ರಮಾಣಪತ್ರ ವಿತರಿಸುವ ಸಂದರ್ಭದಲ್ಲಿ ಪ್ಯಾನ್ ಕಾರ್ಡ್, ಫಾರ್ಮ್–16, ಆದಾಯ ತೆರಿಗೆ ಪಾವತಿ ಬಗ್ಗೆ ಪರಿಶೀಲಿಸಬೇಕು. ಈ ದಾಖಲೆಗಳು ಕುಟುಂಬದ ಸದಸ್ಯರ ಬಳಿ ಇಲ್ಲವೆಂದು ನೋಟರಿಯಿಂದ ದೃಢೀಕರಿಸಿದ ಪ್ರಮಾಣಪತ್ರವನ್ನು ಅಭ್ಯರ್ಥಿಗಳು ಸಲ್ಲಿಸಬೇಕು. ಆ ಬಳಿಕ, ಕುಟುಂಬದ ಆದಾಯ ಖಚಿತಪಡಿಸಿ ಪ್ರಮಾಣಪತ್ರ ನೀಡಬೇಕು ಎಂದು ಪರಿಷ್ಕೃತ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಯಾರು ಅರ್ಹರಲ್ಲ: 5 ಎಕರೆ ಮತ್ತು ಅದಕ್ಕಿಂತ ಹೆಚ್ಚು ಕೃಷಿ ಜಮೀನು ಹೊಂದಿರುವ, ಒಂದು ಸಾವಿರ ಚದರ ಅಡಿ ಅಥವಾ ಅದಕ್ಕಿಂತ ದೊಡ್ಡ ಫ್ಲ್ಯಾಟ್ ಇರುವ, ನಗರಸಭೆ ವ್ಯಾಪ್ತಿಯಲ್ಲಿ 100 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ಅಥವಾ ಆ ವ್ಯಾಪ್ತಿ ಹೊರತಾದ ಕಡೆಗಳಲ್ಲಿ 200 ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ವಾಸ್ತವ್ಯ ಜಾಗ ಹೊಂದಿರುವ ಕುಟುಂಬ ಈ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಲ್ಲ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	114.58	13,526	5,263
ಹಾರಂಗಿ	2,859	2,855.49	4,061	4,260
ಕಬಿನಿ	2,284	2,279.89	6,900	5,000
ಹೇಮಾವತಿ	2,922	2,919.15	8,052	9,070
ಲಿಂಗನಮಕ್ಕಿ	1,819	1,807.10	17,910	-
ಸೂಪಾ (ಮೀ)	564	551.85	19,462	-
ಮಾಣಿ	594.36	581.92	3,085	-
ತುಂಗಭದ್ರಾ	1,633	1,632.39	42,475	44,352
ಮಲಪ್ರಭಾ	2,079.50	2,074.60	4,576	1,694
ಘಟಪ್ರಭಾ	2,175	2,173.50	9,538	9,538
ಭದ್ರಾ	186	182	7,225	3,140
ಆಲಮಟ್ಟಿ (ಮೀ)	519.60	517.10	4,08,596	4,21,882
ನಾರಾಯಣಪುರ (ಮೀ)	492.25	489.31	4,20,000	4,14,730

* ನೆಲಮಟ್ಟದಿಂದ

ಕೃಷ್ಣಾ: ಪ್ರವಾಹ ಯಥಾಸ್ಥಿತಿ

ರಾಯಚೂರು/ಯಾದಗಿರಿ: ಕೃಷ್ಣಾ ನದಿಯಲ್ಲಿ ಪ್ರವಾಹ ಮಟ್ಟ ಯಥಾಸ್ಥಿತಿಯಿದ್ದು, ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಮತ್ತು ದೇವದುರ್ಗ ತಾಲ್ಲೂಕಿನ ಹೂವಿನಹೆಡಗಿ ಸೇತುವೆಗಳು ವಾರದಿಂದ ಮುಳುಗಡೆಯಾಗಿವೆ.

ಯಾದಗಿರಿ ಜಿಲ್ಲೆಯ ನದಿ ತೀರದಲ್ಲಿಯ ಭತ್ತದ ಗದ್ದೆಗಳಲ್ಲಿ ಒಡ್ಡುಗಳು ಮಾತ್ರ ಕಾಣುತ್ತಿವೆ. ಬೆಳೆ ಕೊಳೆತು ನಾಶವಾಗಿದೆ ಎಂದು ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ವಡಗೇರಾ ತಾಲ್ಲೂಕಿನ ಕದರಾಪುರ ಗ್ರಾಮದ ಮೀನುಗಾರರ 33 ಕುಟುಂಬಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ನೀರಿನ ಪ್ರಮಾಣದಲ್ಲಿ ಇಳಿಕೆ (ಬೆಳಗಾವಿ ವರದಿ): ಕೆಲವು ದಿನಗಳಿಂದ ಮಹಾರಾಷ್ಟ್ರ ಮತ್ತು ಗಡಿ ಭಾಗದಲ್ಲಿ ಮಳೆ ಬಹುತೇಕ ಕಡಿಮೆಯಾಗಿದ್ದು, ಆ ರಾಜ್ಯದಿಂದ ಕೃಷ್ಣಾ ನದಿಗೆ ಹರಿದು ಬರುವ ನೀರಿನ ಪ್ರಮಾಣದಲ್ಲೂ ಇಳಿಕೆಯಾಗಿದೆ.

ಮಹಾರಾಷ್ಟ್ರದ ಕಡೆಯಿಂದ 2.85 ಲಕ್ಷ ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಬಂದು ಸೇರುತ್ತಿದೆ. ಶುಕ್ರವಾರ 3.04 ಲಕ್ಷ ಕ್ಯುಸೆಕ್ ನೀರು ಹರಿದು ಬರುತ್ತಿತ್ತು. ಮುಳುಗಡೆ ಸ್ಥಿತಿಯಲ್ಲಿರುವ ಚಿಕ್ಕೋಡಿ ಭಾಗದ 9 ಸೇತುವೆಗಳಲ್ಲಿ ಕೆಲವು ಸೇತುವೆಗಳು ಸಂಚಾರಕ್ಕೆ ಮುಕ್ತವಾಗುವ ನಿರೀಕ್ಷೆ ಇದೆ. ಚಿಕ್ಕೋಡಿ, ಕಾಗವಾಡ, ರಾಯಬಾಗ ಮತ್ತು ಅಥಣಿ ತಾಲ್ಲೂಕುಗಳ ನದಿ ತೀರದ ಗ್ರಾಮಗಳು ಜಲಾವೃತ ಸ್ಥಿತಿಯಲ್ಲೇ ಇವೆ.

ತಗ್ಗಿದ ಮಳೆ: ಶಿವಮೊಗ್ಗ ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ. ಜಿಲ್ಲೆಯಲ್ಲಿ ಸರಾಸರಿ ಒಟ್ಟು 15.37 ಮಿ.ಮೀ. ಮಳೆಯಾಗಿದೆ. ಹೊಸನಗರದಲ್ಲಿ 28.80 ಮಿ.ಮೀ, ತೀರ್ಥಹಳ್ಳಿಯಲ್ಲಿ 45.40 ಮಿ.ಮೀ, ಸಾಗರದಲ್ಲಿ 18.60 ಮಿ.ಮೀ, ಸೊರಬದಲ್ಲಿ 2.40 ಮಿ.ಮೀ, ಶಿವಮೊಗ್ಗದಲ್ಲಿ 9.80 ಮಿ.ಮೀ ಮಳೆಯಾಗಿದೆ.

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001.
ಫೋನ್: 080–22865661/22865747/22860509 ಇ–ಮೇಲ್:mdadc2011@gmail.com

2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ

ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು :
- ಸ್ವಯಂ ಉದ್ಯೋಗ ಕಾರ್ಯಕ್ರಮಗಳು
  - ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
  - ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
- ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘದವರಿಗೆ)
- ಸಮಗ್ರ ಗಂಗಾ ಕಲ್ಯಾಣ ಯೋಜನೆ

ಪರಿಶಿಷ್ಟ ಜಾತಿ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದಿಂದ ಅರ್ಜಿಗಳ ಆಹ್ವಾನ (ದೂರವಾಣಿ ಸಂಖ್ಯೆ : 080–22868069 ಅಥವಾ ಇ–ಮೇಲ್ scstntdntcell@gmail.com):
- ಸ್ವಯಂ ಉದ್ಯೋಗ ಯೋಜನೆ / ನೇರ ಸಾಲ
- ಉದ್ಯಮ ಶೀಲತಾ ಯೋಜನೆ
- ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘದವರಿಗೆ)

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:02.08.2021
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.09.2021

ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ www.adcl.karnataka.gov.in ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯಲ್ಲಿನ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿಯನ್ನು ಸಂಪರ್ಕಿಸಬಹುದು.

ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂನ/1011/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ವಿಶ್ವವಿದ್ಯಾನಿಲಯ
(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರುಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್ –2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)
ಇನ್‌ಫಾರ್‌ಮೇಷನ್ ಅಂಡ್ ಕಮ್ಯೂನಿಕೇಷನ್ ಡಿವಿಜನ್
ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು– 570006
ದೂ.ಸಂ.: 0821 –2419556 Email: icd@uni-mysore.ac.in
ನಂ.ಎಂಜಿಎಂ/ಐಸಿಡಿ/49/2021–22 ದಿನಾಂಕ: 27.07.2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು, ಇನ್‌ಫಾರ್‌ಮೇಷನ್ ಅಂಡ್ ಕಮ್ಯೂನಿಕೇಷನ್ ಡಿವಿಜನ್(ಐಸಿಡಿ), ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು **Supply, Installation and Commissioning of Information Technology Infrastructure for School of Engineering at University of Mysore on turnkey basis** ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧ್ಯಾದೇಶ 2000 ಅಧ್ಯಾಯ–2ರ ಅಧಿನಿಯಮ 3(1)ರಡಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ನೋಂದಾಯಿತ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: MU/ICD/SOE-ITI/ 2021-22/IND-801 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 30.08.2021 ಸಂಜೆ 5.30ರವರೆಗೆ. ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ (http://eproc.karnataka.gov.in) ನಿಂದ ಅಥವಾ ದೂರವಾಣಿ ಸಂಖ್ಯೆ: 0821–2419445/556ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು
DIPR/DDMYS/MCA/352/2021-22

ನಗರಸಭೆ ಕಾರ್ಯಾಲಯ, ರಾಣೇಬೆನ್ನೂರು–581115
ಜಿಲ್ಲೆ : ಹಾವೇರಿ, ರಾಜ್ಯ : ಕರ್ನಾಟಕ, ದೂರವಾಣಿ : 08373-266466
Website: http://www.ranebennurcity.mrc.gov.in
Email : itstaff_ulb_ranebennur@yahoo.co.in
ನಂ.ನಸರಾ.ನೀಸ.ವಿ.ಕುದರಿಹಾಳ.1ನೇ–ಹಂತ/2020–21 ದಿನಾಂಕ : 30–07–2021

ಇ–ಹರಾಜು ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಣೇಬೆನ್ನೂರು ನಗರಸಭೆ ವ್ಯಾಪ್ತಿಯ ಕುದರೆಹಾಳದಿಂದ (1ನೇ ಹಂತ) ನಗರಕ್ಕೆ ನೀರು ಸರಬರಾಜು ಆಗುತ್ತಿದ್ದ ಕುಡಿಯುವ ನೀರಿನ ಸ್ಥಾವರ ಹಾಗೂ ಕೊಳವೆ ಮಾರ್ಗವನ್ನು ಇದ್ದ ಸ್ಥಿತಿಯಲ್ಲಿ ನೆಲ ಅಗೆದು ತೆರವುಗೊಳಿಸಿ ತೆಗೆದುಕೊಂಡು ಹೋಗುವ ಕಾಮಗಾರಿ ಸದರಿ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಇ–ಹರಾಜು ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು ರೂ. **1,94,000–00** ಗಳನ್ನು ಇ–ಟೆಂಡರ್‌ಗೆ ಆನ್ ಲೈನ್ ಇ–ಸಂಗ್ರಹಣೆ ಮೂಲಕ ಇ.ಎಂ.ಡಿ. ಮೊತ್ತವನ್ನು ಪಾವತಿ ಮಾಡಿ ಭಾಗವಹಿಸಬಹುದು. ಇ–ಹರಾಜಿಗೆ ಭಾಗವಹಿಸುವ ದಿನಾಂಕ ಹಾಗೂ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಕೊನೆಯ ದಿನಾಂಕವನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ **www.eproc.karnataka.gov.in** ನಲ್ಲಿ ಪಡೆದು ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ಪ್ರಕಟಣೆಯ ವಿವರಗಳನ್ನು ನಗರಸಭೆಯ ಕಛೇರಿಯ ವೆಬ್ ಸೈಟ್ **http//www.ranebennurcity.mrc.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ನಗರಸಭೆಯ ಕಛೇರಿ ವೇಳೆಯಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ : **+91–8046010000 +91–8022631200** ರಿಂದ ಮಾಹಿತಿ ಪಡೆಯಬಹುದು.

Indent no. **DMA/2021-22/AUCTION 5077** (ಅಂದಾಜು ಮೊತ್ತ ರೂ. **193.50** ಲಕ್ಷಗಳು)

ಇ–ಹರಾಜು ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: **14–08–2021** ಸಮಯ : 16.00, ಬಿಡ್ ಪೂರ್ವ ಸಭೆಯ ದಿನಾಂಕ & ವೇಳೆ ಸ್ಥಳ : ನಗರಸಭೆ ಕಾರ್ಯಾಲಯ ರಾಣೇಬೆನ್ನೂರು : **05–08–2021** ಸಮಯ : 11.30, ಇ–ಹರಾಜಿನಲ್ಲಿ ಆಸಕ್ತರು ಭಾಗವಹಿಸುವಿಕೆಯ ಅಂತಿಮ ದಿನಾಂಕ ಮತ್ತು ವೇಳೆ : **14–08–2021** ಸಮಯ : 17.00

ಸಹಿ/– ಅಧ್ಯಕ್ಷರು, ನಗರಸಭೆ, ರಾಣೇಬೆನ್ನೂರು
ಸಹಿ/– ಪೌರಾಯುಕ್ತರು, ನಗರಸಭೆ, ರಾಣೇಬೆನ್ನೂರು
ವಾಸಾಸಂಇ/ಹಾವೇರಿ/ಎಂಸಿಎ/186/2021–22

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI
Cantonment Area, STD- 08392, Director:'- 242 387, PA:235 201,Fax:08392-235 202, Principal:'-235 204,
e-mail : directorvimsBallari@gmail.com
website: www.vimsBallari.org.in
ಸಂ.ವಿಮ್ಸ್/ಸರಬರಾಜು/ಟೆಂಡರ್/56/2021–22 ದಿನಾಂಕ: 30.07.2021

ಮರು ಇ–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಔಷಧಗಳು, ಸರ್ಜಿಕಲ್ ಡಿಸ್ಪೋಸಬಲ್ಸ್ ಮತ್ತು ಲಿನೆನ್ ಐಟಮ್ಸ್ **(DRUGS, SURGICAL DISPOSABLES AND LINEN ITEMS)** ಗಳನ್ನು ಕೋವಿಡ್–19 ಸಲುವಾಗಿ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ–1999 ಮತ್ತು ನಿಯಮ–2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: **https://eproc.karnataka.gov.in** ಮೂಲಕ ಪಡೆಯಲು ಕೋರಿದೆ. 01. ಟೆಂಡರ್ ಫಾರಂ ಅನ್ನು ವೆಬ್‌ಸೈಟ್ – http//eproc.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳು ಪ್ರಾರಂಭದ ದಿನಾಂಕ: **02/08/2021.** 02. ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **07.08.21 up to 5.00 PM.** 03. ಪ್ರಿ ಬಿಡ್ ಮಿಟಿಂಗ್ ದಿನಾಂಕ ಮತ್ತು ಸಮಯ: **09.08.2021 @ 11.30 AM in the chambers of Diector, VIMS, Ballari.** 04. ಸ್ಯಾಂಪಲ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **On or before 16.08.2021. up to 4.00 PM to the Medical Suprintendent, Medical College Hospital ,VIMS, Ballari. Without sample item will not be considered.** 04. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **16.08.2021 up to 5.00 PM.** 05. ಟೆಂಡರಿನ ಟೆಕ್ನೋ–ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್): **17.08.2021 @ 5.15 PM.** 07. ಸದರಿ ಟೆಂಡರಿನ ಅಂದಾಜು ಮೊತ್ತ: **198.27 Lakhs.** 08. EMD: **Submit the EMD Declaration as per the Annexure-II**

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/221/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್ ಬಳ್ಳಾರಿ. ದೂರವಾಣಿ: 08392–242293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2021–22/1314 ದಿ:.26.07.2021.

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಕೆ.ಡಬ್ಲ್ಯೂ–3ರ ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ವಿವಿಧ ತಾಲ್ಲೂಕಿನ ಲೆಕ್ಕಶೀರ್ಷಿಕೆ ನಬಾರ್ಡ್ ಹಾಗೂ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಕೈಗೊಳ್ಳಲಿರುವ **11 ಚೆಕ್‌ಡ್ಯಾಂ ನಿರ್ಮಾಣ, 02 ಏನೀಯೋ ನಿರ್ಮಾಣ, 01 ಏ.ನೀ.ಯೋ. ಅಭಿವೃದ್ಧಿ ಹಾಗೂ 01 ಕೆರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ** ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ **ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ.100.00 ಲಕ್ಷಗಳು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ.62.64 ಲಕ್ಷಗಳಿರುತ್ತದೆ.** ಟೆಂಡರ್‌ನ್ನು **ದಿನಾಂಕ: 02.08.2021 ರಿಂದ ದಿನಾಂಕ: 11.08.2021 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಟೆಂಡರಿನ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 13.08.2021 ರಂದು ಬೆಳಿಗ್ಗೆ:11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ಗಳನ್ನು ದಿನಾಂಕ: 19.08.2021 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.** ಹೆಚ್ಚಿನ ಮಾಹಿತಿಗಳನ್ನು “ಇ–ಪ್ರಕ್ಯೂರ್‌ಮೆಂಟ್” ವೆಬ್‌ಸೈಟ್ **http://eproc.karntaka.gov.in/e-portal/ index.seam** ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/218/ಎಂಸಿಎ/2021–22

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರಸಂ:ಕಾಇಂ:ಲೋಇವಿ:ತುಮ:ಸಇಂ–1: ಟೆಂಡರ್ ಮುಂದೂಡಿಕೆ 31(1):2021–22 ದಿನಾಂಕ 29.07.2021

ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂ.31(1)/2021–22 ದಿನಾಂಕ: 29.07.2021

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 31(1)/2021–22: ದಿನಾಂಕ 29.07.2021 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ: 8443–ಠೇವಣಿ ವಂತಿಕೆ(ರೈಲ್ವೇ ಅನುದಾನ) ಯೋಜನೆ ಅಡಿಯಲ್ಲಿ 01 ಕಾಮಗಾರಿಗೆ ಇ–ಪ್ರಪ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ **ರೂ.1264.80 ಲಕ್ಷಗಳು,** ಇ.ಎಂ.ಡಿ ಮೊತ್ತ **ರೂ.12,64,800/–** ಅರ್ಹ ಗುತ್ತಿಗೆದಾರರು: 1ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **13.08.2021**ರ 16.00 ಗಂಟೆಗೆ, ಇ–ಪ್ರೂಕ್ಯೂರ್ ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **30.07.2021** ರಿಂದ **13.08.2021**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **13.08.2021** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.08.2021 ಸಂಜೆ 16.30ಗಂಟೆಗೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19.08.2021** ಸಂಜೆ 11.00ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka. gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/200/MCA/ 2021-22

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
Tender Notification No:EE/DKPRED/M/TENDER/-11/JE-1/ 2021-22/624 Date: 30-07-2021

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ.
(1) ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲೂಕು ವ್ಯಾಪ್ತಿಯ ಮಂಗಳೂರು ದಕ್ಷಿಣ ಬ್ಲಾಕ್‌ಗೆ ಒಳಪಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಂಬ್ಲಮೊಗರು ಇದರ ಉನ್ನತೀಕರಣದ ಸಲುವಾಗಿ ಹೊಸ ಶಾಲಾ ಕಟ್ಟಡ ನಿರ್ಮಾಣ. ಅಂದಾಜು ಮೊತ್ತ **ರೂ. 1,28,45,521/–,** (2) ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲೂಕು ಕೋಳ್ನಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಸುರಿಬೈಲಿನಲ್ಲಿ ನೂತನ ಉನ್ನತೀಕರಿಸಿದ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣ, ಅಂದಾಜು ಮೊತ್ತ **ರೂ. 1,46,80,558/–** (3) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕು ಉಜಿರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಪ್ರೌಢಶಾಲೆ, ಬದನಾಜೆ ಹೊಸ ಶಾಲಾ ಕಟ್ಟಡ ನಿರ್ಮಾಣ, ಅಂದಾಜು ಮೊತ್ತ **ರೂ. 1,28,45,521/–.**

ಗುತ್ತಿಗೆದಾರರ ಅರ್ಹತೆ: **1ನೇ ದರ್ಜೆ ಮೇಲ್ಪಟ್ಟು,** ಕೆಲಸ ಮುಗಿಸಲು ನಿಗದಿಪಡಿಸಿದ ದಿನಾಂಕ: **11 ತಿಂಗಳು (ಎಲ್ಲಾ ಋತುಮಾನ ಸೇರಿ)**

ಈ ಟೆಂಡರನ್ನು ಕರ್ನಾಟಕ ಸರಕಾರದ ರಾಜ್ಯಾಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲ https://eproc.karnataka.gov.in ಪಡೆಯಬಹುದಾಗಿದೆ. ಬಿಡ್ದುಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 21.08.2021 ಅಪರಾಹ್ನ 4.00 ಗಂಟೆ,** ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ: 23.08.2021 ಅಪರಾಹ್ನ 4.00 ಗಂಟೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30.08.2021 ಅಪರಾಹ್ನ 4.00 (16:00)** ಗಂಟೆಯೆಂದು ನಿಗಧಿಪಡಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯ ಎಲ್ಲಾ ವಿವರಣೆಗಳಿಗಾಗಿ https://eproc.karnataka.gov.in ವೆಬ್‌ಸೈಟ್‌ನ್ನು ವೀಕ್ಷಿಸಬಹುದಾಗಿದೆ. ಅಲ್ಲದೇ ಕಾರ್ಯಾಲಯದ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ. ಕಚೇರಿ ದೂರವಾಣಿ ಸಂಖ್ಯೆ: **0824 2451284.**

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
DIPR/ADM/MCA/316/21-22 dt. 31.7.2021

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್.
ನೊಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್, ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ, ಶಿವಮೊಗ್ಗ – 577201.
CIN:U74999KA2017PLC100268, GSTIN:29AAYCS3808B1Z0, PAN:AAYCS3808B, TAN:BLRS63059D.
Web: http://shivamoggasmartcity.co.in/
E-mail: shimogasmartcity@gmail.com
PH.No: 08182-279951.
No:SSCL/CR/TECH/91/ELEC/2020-21/487 date: 29.07.2021

ಟೆಂಡರ್ ಪ್ರಕಟಣೆ

ಶಿವಮೊಗ್ಗ ಸ್ಮಾರ್ಟ್ ಸಿಟಿ ಕಛೇರಿಯ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ ಕೆಪಿಡಬ್ಲೂಡಿ/ರಾಹೆ ಅಥವಾ ಇತರೆ ಪ್ರಾಧಿಕಾರದಲ್ಲಿ ನೋಂದಾಯಿತ ಅರ್ಹದರ್ಜೆಯ ನೊಂದಾಯಿತ ಗುತ್ತಿಗೆದಾರರಿಂದ ಮೊಹರು ಮಾಡಿದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ ದ್ವಿ–ಲಕೋಟೆ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ.ಸಂ. 1. ಕಾಮಗಾರಿ ಹೆಸರು: ಶಿವಮೊಗ್ಗ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ರವಿಂದ್ರ ಬಗರ ಮತ್ತು ರಾಜೇಂದ್ರ ನಗರದಲ್ಲಿನ ಹಾಲಿ ಹೆಚ್.ಟಿ, ಎಲ್.ಟಿ ಮಾರ್ಗವನ್ನು ಭೂಗತ ಕೇಬಲ್ ಮಾರ್ಗವನ್ನಾಗಿ ಪರಿವರ್ತಿಸುವ ಕಾಮಗಾರಿ **ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:** 70.19 **ಇ.ಎಂ.ಡಿ ಮೊತ್ತ ರೂ.ಲಕ್ಷಗಳಲ್ಲಿ:** EMD declarartion should be furnished in the enclosed format As per government order no AE 675 vecha-12/2020 Bengaluru, dated-22/12/2020 for EMD exemption) **ಗುತ್ತಿಗೆದಾರರ ನೊಂದಣಿ:** ಒಂದನೇ ದರ್ಜೆ(ಎಲೆಕ್ಟ್ರಿಕಲ್ಸ್) **ಕೆಲಸದ ಅವಧಿ:** 3 ತಿಂಗಳು

1. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಖಾಲಿ ಟೆಂಡರ್ ಫಾರಂಗಳನ್ನು ದಿನಾಂಕ: 31/07/2021@4.00 (ಸಂಜೆ 4.00ರಿಂದ) ಪಡೆಯಬಹುದು. 2. ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:04/08/2021@ ಬೆಳಿಗ್ಗೆ 11.00 3. ಪೂರ್ವಭಾವಿ ಸಭೆ: 07/08/2021@ ಸಂಜೆ 4.00 4. ಭರ್ತಿ ಮಾಡಿದ ಟೆಂಡರ್ ಪಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ:17/08/2021 (ಸಂಜೆ 4.00ರವರೆಗೆ) 5. ಇ–ಪ್ರಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18/08/2021 (ಸಂಜೆ 4.30ಕ್ಕೆ) 6. ಇ–ಪ್ರಕ್ಯೂರ್‌ಮೆಂಟ್ ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯ ನಂತರ. ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ. ವ್ಯವಸ್ಥಾಪಕ ನಿರ್ದೇಶಕರು ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–161/07/ಎಂಸಿಎ/21–22

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ, ಕೋಲಾರ ಜಿಲ್ಲೆ, ಕೋಲಾರ
ಕ್ರ.ಸಂ: ಸ.ಶಿ.ಅ/ಲೆ.ವಿ/ಹೊ.ಸಿ.ಸೇ–ಇ–ಟೆಂಡರ್/2021–22 ದಿನಾಂಕ: 30.07.2021

ಇ–ಟೆಂಡರ್ ಟೆಂಡರ್

2021–22ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮಗಳ ಅನಷ್ಠಾನ ಸಂಬಂಧ ಜಿಲ್ಲಾ ಕಛೇರಿ ಹಾಗೂ 6 ಬಿ.ಆರ್.ಸಿ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಒದಗಿಸಲು ಅರ್ಹ ಅಧಿಕೃತ ಸರಬರಾಜುದಾರರು / ಏಜೆನ್ಸಿಗಳಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.

ವಿವರ: **ಜಿಲ್ಲಾ ಮತ್ತು ಬ್ಲಾಕ್ ಕಛೇರಿಗೆ ಹೊರಗುತ್ತಿಗೆ ನೌಕರರ ಸೇವೆ ಒದಗಿಸುವುದು.** ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 23.08.2021ರ ಸಂಜೆ 4:00 ಗಂಟೆಯವರೆಗೆ.** ಟೆಂಡರಿಗಿಟ್ಟ ಮೊತ್ತ: **ರೂ. 40.00 ಲಕ್ಷಗಳು.** ಹೆಚ್ಚಿನ ಮಾಹಿತಿಗಾಗಿ **www.eprocurement. karnataka.gov.in** ವೀಕ್ಷಿಸಿ

ಸಹಿ/– ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ವಾಸಾಸಂಇ/ಕೋಲಾರ/ಜಿಎ/155/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ
20ನೇ & 21ನೇ ಮಹಡಿ, ವಿ.ವಿ. ಗೋಪುರ, ಡಾ|| ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು 560001. Website: https://dom.karnataka.gov.in
ಇ–ಮೇಲ್: directorgokdom@gmail.com
ಸಂಖ್ಯೆ: DOM/IIT-IIM/CR-66/2021-22 ದಿನಾಂಕ: 31-07-2021

ಅಧಿಸೂಚನೆ
ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ, ಸಿಖ್ & ಪಾರ್ಸಿ
INCENTIVE FOR IIT, IIIT, NIT, IIM, IISER, AIIMS, NLU, INI & IuSLA
ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ 2021-22

ಮೇಲೆ ಸೂಚಿಸಿದ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಅಲ್ಪಸಂಖ್ಯಾತರ ಸಮುದಾಯದ (**ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ, ಸಿಖ್ & ಪಾರ್ಸಿ**) ವಿದ್ಯಾರ್ಥಿಗಳಿಗೆ ತಮ್ಮ ಕೋರ್ಸ್‌ನ ಅವಧಿಯಲ್ಲಿ ಒಂದು ಬಾರಿ ತಲಾ ರೂ. 2.00ಲಕ್ಷಗಳ ಪ್ರೋತ್ಸಾಹಧನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲತಾಣದಲ್ಲಿ ತಮ್ಮ ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸುವುದು, ನಂತರ ಭರ್ತಿ ಮಾಡಿದ ಅರ್ಜಿಯ ಮುದ್ರಿತ ಪ್ರತಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ಸಹಿ/- ಡಾ|| ಹೆಚ್.ಆರ್. ಶಿವಕುಮಾರ್, ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಕಲಬುರಗಿ–585101
ದೂರವಾಣಿ : 08472–278666 e-mail : kalaburagisbm@gmail.com
ಕ್ರ.ಸಂ:ಜಿಪಂಕ/ಸ್ವಭಾಮಿ/ISN/INC/2020-21 ದಿನಾಂಕ : 27–07–2021

:: ಇ–ಟೆಂಡರ್ ಅಧಿಸೂಚನೆ ::

ಕಲಬುರಗಿ ಜಿಲ್ಲಾ ಪಂಚಾಯತ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಹಂತ–ಹಂತವಾಗಿ ನಿಗದಿಯಾಗುವ ಬೇಡಿಕೆ ಪತ್ರಗಳನ್ನು ಆಧಾರಿಸಿ ಮಹಿಳೆಯರ ಸ್ಯಾನಿಟರಿ ಪ್ಯಾಡಗಳ ದಹನ ಯಂತ್ರ (Incinerator for Sanitary Napkin) ಸರಬರಾಜು ಮಾಡಲು ಕೆ.ಟಿ.ಪಿ.ಪಿ. ನಿಯಮಾವಳಿಗಳನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಡೆಯುವ ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ.
1) ಇ–ಟೆಂಡರ್ ಪ್ರಕಟಣೆ ದಿನಾಂಕ: **31–07–2021,** 2) ಟೆಂಡರ್‌ಗೆ ಇಟ್ಟ ಒಟ್ಟು ಮೊತ್ತ : **1,17,45,000/–,** 3) ಇ.ಎಂ.ಡಿ. ಮೊತ್ತ : 1,76,175/– (1.5), 4) ಟೆಂಡರ್ ಪ್ರಾರಂಭದ ದಿನಾಂಕ : **02/08/2021,** 5) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ : **09/08/2021** ಸಂಜೆ 4.30 ಗಂಟೆ, 6) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: **10/08/2021 ಸಂಜೆ 4.45 ಗಂಟೆ.** 7) ಆರ್ಥಿಕ ಬಿಡ್ಡ್ ತೆರೆಯುವ ದಿನಾಂಕ: **19/08/2021 ಬೆ. 11.00 ಗಂಟೆಗೆ.**
ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಕಲಬುರಗಿ ರವರನ್ನು ಕಛೇರಿ ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ : 9480866001.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/479/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105
ಪೋ.ನಂ 08472–278634/256944, Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22/859 ದಿನಾಂಕ: 30–07–2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಚಿಂಚೋಳಿ ತಾಲೂಕಿನ–01 (Indent No 33379-call-2), 2) ಟೆಂಡರಿಗಿಟ್ಟ ಮೊತ್ತ ಕನಿಷ್ಠ : 3,07,78,175/-, ಗರಿಷ್ಠ : 3,07,78,175/-, 3) ಲೆಕ್ಕ ಶಿರ್ಷಿಕೆ : JJM 2020-21, 4) ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ:**31–07–2021 ರಿಂದ 09–08–2021,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೊಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **09–08–2021 ಸಾಯಂಕಾಲ 4:00 ಗಂಟೆವರೆಗೆ,** 8) ಪ್ರಿ ಬಿಡ್ ಸಭೆ ದಿನಾಂಕ : **05–08–2021 ಬೆ. 11.00 ಗಂಟೆಯ ನಂತರ,** 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **10–08–2021 ಸಾಯಂಕಾಲ 4:01 ಗಂಟೆವರೆಗೆ,** 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ: **12–08–2021 ಬೆ. 11.00 ಗಂಟೆಯ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೇ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/485/ಎಂ.ಸಿ&ಎ/2021–22

ಮೈಸೂರು, ಕೊಡಗು ಗಡಿಯಲ್ಲಿ ತಪಾಸಣೆ ಚುರುಕು • ದಕ್ಷಿಣ ಕನ್ನಡ: ಪ್ರತ್ಯೇಕ ಮಾರ್ಗಸೂಚಿಗೆ ಸಿದ್ಧತೆ

ಕೇರಳ ಗಡಿ: ಕಟ್ಟೆಚ್ಚರ, ಹೆಚ್ಚಿದ ತಪಾಸಣೆ

ಪ್ರಜಾವಾಣಿ ವಾರ್ತೆ

ಎಚ್‌.ಡಿ.ಕೋಟೆ ತಾಲ್ಲೂಕಿನ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಶನಿವಾರ ತಪಾಸಣೆ ನಡೆಸುತ್ತಿದ್ದ ದೃಶ್ಯ

ಮೈಸೂರು / ಮಡಿಕೇರಿ / ಚಾಮರಾಜನಗರ: ಕೇರಳ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ದಿನೇ ದಿನೇ ಏರಿಕೆಯಾಗುತ್ತಿದ್ದಂತೆ ರಾಜ್ಯಕ್ಕೆ ಹೊಂದಿಕೊಂಡಿರುವ ಗಡಿ ಭಾಗದಲ್ಲಿ ಕಟ್ಟೆಚ್ಚರ ವಹಿಸಿದ್ದು, ತಪಾಸಣೆಯನ್ನು ಚುರುಕುಗೊಳಿಸಲಾಗಿದೆ.

ಕೊಡಗು ಜಿಲ್ಲೆಯ ಕರಿಕೆ, ಮಾಕುಟ್ಟ ಹಾಗೂ ಕುಟ್ಟ ಗಡಿ ಪ್ರದೇಶ, ಮೈಸೂರು ಜಿಲ್ಲೆಯ ಬಾವಲಿ ಚೆಕ್‌ಪೋಸ್ಟ್ ಹಾಗೂ ಚಾಮರಾಜನಗರ ಜಿಲ್ಲೆಯ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಬಿಗಿ ನಿಯಮಗಳನ್ನು ಜಾರಿಗೊಳಿಸಲಾಗಿದೆ.

ತಪಾಸಣಾ ಕೇಂದ್ರವನ್ನು ತೆರೆದು ಆರೋಗ್ಯ ಇಲಾಖೆ ಸಿಬ್ಬಂದಿ, ಆಶಾ ಕಾರ್ಯಕರ್ತರು ಹಾಗೂ ಪೊಲೀಸರನ್ನು ನಿಯೋಜಿಸಲಾಗಿದೆ. ಈ ಭಾಗದಲ್ಲಿ ಶನಿವಾರ ವಾಹನಗಳನ್ನು ತಡೆದ ಸಿಬ್ಬಂದಿಯು ಪ್ರಯಾಣಿಕರನ್ನು ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸಿದರು. ಆರ್‌ಟಿ–ಪಿಸಿಆರ್ ವರದಿ ಕಡ್ಡಾಯಗೊಳಿಸಿರುವ ಕುರಿತು ವಾಗ್ವಾದ ನಡೆಯಿತು.

‘ಕೇರಳದಿಂದ ಬರುವವರು ಎರಡು ಡೋಸ್ ಲಸಿಕೆ ಪಡೆದಿದ್ದರೂ, ಕಳೆದ 72 ಗಂಟೆಗಳ ಅವಧಿಯಲ್ಲಿ ಪಡೆದಿರುವ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ತೋರಿಸುವುದನ್ನು ಕಡ್ಡಾಯಮಾಡಲಾಗಿದೆ. ವರದಿ ಇಲ್ಲದವರನ್ನು ವಾಪಸು ಕಳುಹಿಸಲಾಗುತ್ತಿದೆ’ ಎಂದು ಎಚ್‌.ಡಿ.ಕೋಟೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ತಿಳಿಸಿದರು.

ಕೊಡಗು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರೂ ಚೆಕ್‌ಪೋಸ್ಟ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ತಿಂಗಳಿಂದ ಈಚೆಗೆ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿದ್ದವು. ಮತ್ತೆ ಏರಿಕೆಯಾಗುವ ಆತಂಕ ಎದುರಾಗಿದೆ.

ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಶುಕ್ರವಾರವೇ ಎಚ್‌.ಡಿ.ಕೋಟೆ ತಾಲ್ಲೂಕಿನ ಬಾವಲಿ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ ಪರಿಶೀಲಿಸಿದ್ದರು. ಚಾಮರಾಜನಗರ ಜಿಲ್ಲಾಧಿಕಾರಿ ಎಂ.ಆರ್‌.ರವಿ ಶನಿವಾರ ಚೆಕ್‌ಪೋಸ್ಟ್‌ಗೆ ತೆರಳಿ ವೀಕ್ಷಿಸಿದರು.

ಗಡಿ ಭಾಗದಿಂದ ನಿತ್ಯವೂ 120ಕ್ಕೂ ಅಧಿಕ ದ್ವಿಚಕ್ರ ವಾಹನಗಳು, ತರಕಾರಿ ವಾಹನಗಳು ಜಿಲ್ಲೆಯೊಳಗೆ ಬರುತ್ತಿವೆ. ಬಸ್‌ಗಳ ಸಂಚಾರ ಕಡಿಮೆಯಾಗಿದೆ.

ಒಂದು ವಾರ ಅಂತರ ರಾಜ್ಯ ಬಸ್ ಸಂಚಾರ ನಿರ್ಬಂಧ

ಮಂಗಳೂರು: ಕೇರಳದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗಸೂಚಿ ಸಿದ್ಧಪಡಿಸಲು ಜಿಲ್ಲಾಡಳಿತ ನಿರ್ಧರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಕಾಸರಗೋಡಿಗೆ ಸಂಚರಿಸುವ ಸರ್ಕಾರಿ, ಖಾಸಗಿ ಬಸ್‌ಗಳನ್ನು ಆಗಸ್ಟ್ 1 ರಿಂದ ಒಂದು ವಾರ ಸ್ಥಗಿತಗೊಳಿಸಲು ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆ ಶನಿವಾರ ನಿರ್ಧರಿಸಿದೆ.

‘ಕೇರಳದಿಂದ ಜಿಲ್ಲೆಗೆ ಬರುವವರ ಸಂಖ್ಯೆ ಏರಿದೆ. ಲಸಿಕೆ ಪಡೆದವರು, ನೆಗೆಟಿವ್ ವರದಿ ಇರುವವರಿಗೆ ಪ್ರವೇಶಾವಕಾಶವಿದೆ. ಮತ್ತಷ್ಟು ನಿಯಮಗಳ ಜಾರಿ ಕುರಿತು ವರದಿ ಸಲ್ಲಿಸಲಿದ್ದು, ಸರ್ಕಾರದ ಸೂಚನೆ ಆಧರಿಸಿ ಮಾರ್ಗಸೂಚಿ ರೂಪಿಸಲಾಗುವುದು’ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

‘ಧಾರ್ಮಿಕ ಕ್ಷೇತ್ರಗಳಿಗೆ ಬರುವ ಜನರ ನಿಯಂತ್ರಣ, ಅಂತರ ರಾಜ್ಯ ಬಸ್‌ಗಳ ಸಂಚಾರ, ಬೇರೆ ರಾಜ್ಯದಿಂದ ಬರುವ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚುವರಿ ನಿಯಮಗಳನ್ನು ಹಾಕುವ ಕುರಿತು ಆರೋಗ್ಯ ಇಲಾಖೆ ಅಧಿಕಾರಿಗಳ ಜೊತೆಗೆ ಚರ್ಚಿಸಲಾಗುತ್ತಿದೆ’ ಎಂದು ಡಾ.ರಾಜೇಂದ್ರ ತಿಳಿಸಿದ್ದಾರೆ.

‘ತಲಪಾಡಿ ಮತ್ತು ಕಾಸರಗೋಡು ಜಿಲ್ಲೆಯ ಗಡಿಯ ಚೆಕ್‌ಪೋಸ್ಟ್‌ಗಳಲ್ಲಿ ಆರ್‌ಟಿಪಿಸಿಆರ್ ತಪಾಸಣೆ ಕೇಂದ್ರ ಆರಂಭಿಸಲಾಗಿದೆ. ನೆಗೆಟಿವ್ ವರದಿ ಇಲ್ಲದವರ ಗಂಟಲುದ್ರವ ಸಂಗ್ರಹಿಸುತ್ತಿದ್ದು, ವರದಿ ಬರುವವರೆಗೆ ಪ್ರತ್ಯೇಕವಾಗಿರಲು ಸೂಚಿಸಲಾಗುತ್ತಿದೆ’ ಎಂದು ಆರೋಗ್ಯಾಧಿಕಾರಿ ಡಾ.ಕಿಶೋರ್‌ಕುಮಾರ್ ತಿಳಿಸಿದ್ದಾರೆ.

ಈ ಮಧ್ಯೆ ಆಗಸ್ಟ್ ಮೊದಲ ವಾರದಲ್ಲಿ ಆರಂಭ ಆಗುತ್ತಿರುವ ಮಂಗಳೂರು ವಿಶ್ವವಿದ್ಯಾಲಯದ ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಮತ್ತೆ ಮುಂದೂಡುವಂತೆ ಒತ್ತಾಯಗಳು ಆರಂಭವಾಗಿವೆ.

ಕೇರಳದಲ್ಲಿ ವಾರಾಂತ್ಯ ಕರ್ಫ್ಯೂ: ಕೇರಳದಲ್ಲಿ ವಾರಾಂತ್ಯದ ಕರ್ಫ್ಯೂ ಇರುವುದರಿಂದ ಶನಿವಾರ ಗಡಿಭಾಗದಲ್ಲಿ ವಾಹನಗಳ ಸಂಖ್ಯೆ ಕಡಿಮೆಯಾಗಿತ್ತು.

ಕ್ಲಬ್‌ಹೌಸ್‌ಗೆ ಬನ್ನಿ

ಪ್ರಜಾವಾಣಿ ಆಲದಮರ

ಹೀಗೊಂದು ಚಿಂತನ- ಮಂಥನ

ಅಕಾಡೆಮಿಗಳ ಸ್ವರೂಪ, ಕಾರ್ಯಶೈಲಿ ಬದಲಾಗಬೇಕೆ?

ಎಲ್‌.ಎನ್‌. ಮುಕುಂದರಾಜ್ ಹಿರಿಯ ಸಾಹಿತಿ, ಚಿಂತಕ

ವಿಶುಕುಮಾರ್ ನಿವೃತ್ತ ನಿರ್ದೇಶಕ, ಕನ್ನಡ- ಸಂಸ್ಕೃತಿ ಇಲಾಖೆ

ಬಿ.ವಿ.ವಸಂತಕುಮಾರ್ ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರೀತಿ ನಾಗರಾಜ್ ಪತ್ರಕರ್ತೆ, ಲೇಖಕಿ

ಅಜಕ್ಕಳ ಗಿರೀಶ್ ಭಟ್ ಅಧ್ಯಕ್ಷ, ಕುವೆಂಪು ಭಾಷಾ ಭಾರತಿ

ಮತ್ತು ನೀವು

01-8-2021 ಭಾನುವಾರ, ಬೆಳಿಗ್ಗೆ 10.30ರಿಂದ 12.30ರವರೆಗೆ

ಕೋವಿಡ್ ಮೂರನೇ ಅಲೆ ಸಮರ್ಪಕ ನಿರ್ವಹಣೆಗೆ ನೆರವು: ಕೇಂದ್ರ ಸರ್ಕಾರ

ರಾಜ್ಯಕ್ಕೆ ₹ 800 ಕೋಟಿ ಪ್ಯಾಕೇಜ್ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ 3ನೇ ಅಲೆಯ ಸಮರ್ಪಕ ನಿರ್ವಹಣೆಗಾಗಿ ರಾಜ್ಯಕ್ಕೆ ₹ 800 ಕೋಟಿ ಆರ್ಥಿಕ ನೆರವಿನ ಪ್ಯಾಕೇಜ್ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ಕೇಂದ್ರದ ಆರೋಗ್ಯ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಮನಸುಖ್ ಮಾಂಡವಿಯ ಅವರನ್ನು ಶನಿವಾರ ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದಲ್ಲಿನ ಕೋವಿಡ್ ಸ್ಥಿತಿಗತಿಯ ಬಗ್ಗೆ ವಿವರ ನೀಡಿದ್ದಾಗಿ ಸುದ್ದಿಗಾರರಿಗೆ ತಿಳಿಸಿದರು.

ಕೋವಿಡ್ ತುರ್ತು ಸ್ಪಂದನೆ ಹಾಗೂ ಆರೋಗ್ಯ ವ್ಯವಸ್ಥೆ ಸಿದ್ಧತೆಗಾಗಿ ಪ್ಯಾಕೇಜ್ ರೂಪದಲ್ಲಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ₹ 23,000 ಕೋಟಿ ಹಂಚಿಕೆ ಮಾಡಲು ಕೇಂದ್ರ ನಿರ್ಧರಿಸಿದೆ. ಈಗಾಗಲೇ ಶೇ 15ರಷ್ಟು ಅನುದಾನ ಬಿಡುಗಡೆಯಾಗಿದೆ. ಶೀಘ್ರವೇ ಪೂರ್ಣ ಪ್ರಮಾಣದ ನೆರವಿನ ಭರವಸೆ ದೊರೆತಿದೆ ಎಂದು ಹೇಳಿದರು.

ಆಮ್ಲಜನಕ ತಯಾರಿಕೆ ಘಟಕ ಮತ್ತು ಐಸಿಯು ಸ್ಥಾಪನೆ, ವೆಂಟಿಲೇಟರ್ ಮತ್ತು ಮಾಸ್ಕ್ ಖರೀದಿ, ಔಷಧಿ ಪೂರೈಕೆ, ಕೋವಿಡ್ ಪರೀಕ್ಷೆ, ತುರ್ತು ವೈದ್ಯಕೀಯ ಸೌಲಭ್ಯ, ಅಂಬುಲೆನ್ಸ್ ವ್ಯವಸ್ಥೆ ಒಳಗೊಂಡಂತೆ ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗಾಗಿ ಈ ಪ್ಯಾಕೇಜ್ ನೀಡಲಾಗುತ್ತಿದೆ ಎಂದರು.

1.50 ಕೋಟಿ ಡೋಸ್‌ಗೆ ಬೇಡಿಕೆ: ರಾಜ್ಯದಲ್ಲಿ ಕೋವಿಡ್ ಲಸಿಕೆಗೆ ತೀವ್ರ ಬೇಡಿಕೆ ಇದೆ. ಈಗ ಮಾಸಿಕ ಪೂರೈಸಲಾಗುತ್ತಿರುವ 50ರಿಂದ 60 ಲಕ್ಷ ಡೋಸ್ ಲಸಿಕೆ ಸಾಕಾಗುತ್ತಿಲ್ಲ. ಕೂಡಲೇ 1.50 ಕೋಟಿ ಡೋಸ್ ಲಸಿಕೆ ವಿತರಣೆ ಮಾಡುವಂತೆ ಕೋರಲಾಗಿದೆ. ಆಗಸ್ಟ್ ತಿಂಗಳಲ್ಲಿ 1 ಕೋಟಿ ಡೋಸ್ ಹಂಚಿಕೆ ಮಾಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

‘ಮೇಕೆದಾಟು ಯೋಜನೆ ನಮ್ಮ ಹಕ್ಕು’

ನವದೆಹಲಿ: ‘ಮೇಕೆದಾಟು ಯೋಜನೆ ಮೂಲಕ ಸುತ್ತಮುತ್ತಲ ಭಾಗದ ಜನರ ಕುಡಿಯುವ ನೀರಿನ ಬವಣೆ ನೀಗಿಸುತ್ತೇವೆ. ಯಾರಾದರೂ ಉಪವಾಸ ಕುಳಿತುಕೊಳ್ಳಲಿ, ಊಟವನ್ನಾದರೂ ಮಾಡಲಿ ನಮಗೆ ಸಂಬಂಧವಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಖಾರವಾಗಿ ನುಡಿದರು.

ಮೇಕೆದಾಟು ಯೋಜನೆಗೆ ಅನುಮತಿ ನೀಡದಂತೆ ಆಗ್ರಹಿಸಿ ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ನಿವೃತ್ತ ಐಪಿಎಸ್ ಅಧಿಕಾರಿ ಅಣ್ಣಾಮಲೈ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ‘ಕಾವೇರಿಯ ಹೆಚ್ಚುವರಿ ನೀರಿನ ಮೇಲೆ ನಮಗೆ ಹಕ್ಕಿದೆ. ಮೇಕೆದಾಟು ಯೋಜನೆ ಸಹ ನಮ್ಮ ಹಕ್ಕು. ನಾವು ಯೋಜನೆ ಪೂರ್ಣಗೊಳಿಸುವುದು ಶತಸಿದ್ಧ’ ಎಂದರು.

ರಾಜ್ಯ ಪ್ರವೇಶಕ್ಕೆ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ

ಒಂದನೇ ಪುಟದಿಂದ...

ವಿಮಾನ, ರೈಲು ಹಾಗೂ ರಸ್ತೆ ಮಾರ್ಗದಲ್ಲಿ ಬಸ್ ಅಥವಾ ಖಾಸಗಿ ವಾಹನಗಳಲ್ಲಿ ಕರ್ನಾಟಕಕ್ಕೆ ಬರುವವರು ಕಡ್ಡಾಯವಾಗಿ ನಿಯಮಗಳನ್ನು ಪಾಲನೆ ಮಾಡಬೇಕು. ಕೇರಳ ಹಾಗೂ ಮಹಾರಾಷ್ಟ್ರದಿಂದ ಹೊರಡುವ ಎಲ್ಲ ವಿಮಾನಗಳಿಗೂ ನಿಯಮ ಅನ್ವಯವಾಗುತ್ತದೆ. ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಹೊಂದಿರುವವರಿಗೆ ಮಾತ್ರ ವಿಮಾನಯಾನ ಸಂಸ್ಥೆಯವರು ಬೋರ್ಡಿಂಗ್ ಪಾಸ್ ನೀಡಬೇಕು ಎಂದು ಸುತ್ತೋಲೆಯಲ್ಲಿ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ: ರೈಲಿನಲ್ಲಿ ಪ್ರಯಾಣಿಸುವ ಎಲ್ಲ ಪ್ರಯಾಣಿಕರು ಪರೀಕ್ಷಾ ವರದಿಯನ್ನು ಹೊಂದಿರುವ ಬಗ್ಗೆ ರೈಲ್ವೆ ಪ್ರಾಧಿಕಾರವು ಖಚಿತಪಡಿಸಿಕೊಳ್ಳಬೇಕು. ಬಸ್‌ಗಳಲ್ಲಿ ನಿರ್ವಾಹಕರು ಪರಿಶೀಲಿಸಬೇಕು. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು ಹಾಗೂ ಮೈಸೂರು ಮತ್ತು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಬೆಳಗಾವಿ, ಕಲಬುರ್ಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ, ನಿಯಮಗಳು ಪಾಲನೆಯಾಗುವಂತೆ ನೋಡಿಕೊಳ್ಳಬೇಕು. ಇದು ಜಿಲ್ಲಾಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ ಎಂದು ಹೇಳಲಾಗಿದೆ.

ವಿದ್ಯಾಭ್ಯಾಸ, ಕಚೇರಿ ಕೆಲಸ, ವ್ಯಾಪಾರ–ವ್ಯವಹಾರ ಸೇರಿದಂತೆ ಇತರ ಕಾರಣಗಳಿಗೆ ದೈನಂದಿನ ಭೇಟಿ ನೀಡುವವರು ಪ್ರತಿ 15 ದಿನಗಳಿಗೆ ಒಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ತಿಳಿಸಲಾಗಿದೆ.

ತುರ್ತು ಸಂದರ್ಭದಲ್ಲಿ ವಿನಾಯಿತಿ: ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವ ಸಾಂವಿಧಾನಿಕ ಕಾರ್ಯಕಾರಿಗಳು, ವೈದ್ಯರು, ಆರೋಗ್ಯ ಸಿಬ್ಬಂದಿ ಹಾಗೂ ಎರಡು ವರ್ಷದೊಳಗಿನ ಮಕ್ಕಳಿಗೆ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿಯ ವಿನಾಯಿತಿ ನೀಡಲಾಗಿದೆ.

ಕುಟುಂಬದಲ್ಲಿ ಮರಣ, ವೈದ್ಯಕೀಯ ಚಿಕಿತ್ಸೆ ಸೇರಿದಂತೆ ವಿವಿಧ ತುರ್ತು ಸಂದರ್ಭದಲ್ಲಿ ಆಗಮಿಸುವ ಪ್ರಯಾಣಿಕರು ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಹೊಂದಿರದಿದ್ದರೂ ಬರಲು ಅವಕಾಶ ನೀಡಲಾಗಿದೆ. ಅಂತಹವರ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆ ನಡೆಸಬೇಕು. ಅವರ ವಿಳಾಸ, ಸಂಪರ್ಕ ಸಂಖ್ಯೆ ಸೇರಿದಂತೆ ವಿವಿಧ ವಿವರವನ್ನು ಪಡೆದುಕೊಳ್ಳಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಗಡಿ ಕಟ್ಟೆಚ್ಚರ: ಬೊಮ್ಮಾಯಿ ಸೂಚನೆ

ಒಂದನೇ ಪುಟದಿಂದ...

ಅಂತರ ರಾಜ್ಯ ಗಡಿಗಳಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ತನಿಖಾ ಠಾಣೆ ಆರಂಭಿಸಬೇಕು. ಜಿಲ್ಲಾಧಿಕಾರಿ ಮತ್ತು ಎಸ್‌ಪಿ ಪ್ರತಿ ಎರಡು ದಿನಕ್ಕೊಮ್ಮೆ ತನಿಖಾ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಹೊರ ರಾಜ್ಯಗಳಿಂದ ಬರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಲ್ಲಿ ಕ್ವಾರಂಟೈನ್ ವ್ಯವಸ್ಥೆ ಮಾಡಬೇಕು ಎಂದು ಆದೇಶಿಸಿದರು.

ಎಲ್ಲ ಜಿಲ್ಲೆಗಳಲ್ಲೂ ಅಗತ್ಯ ಪ್ರಮಾಣದ ಆಮ್ಲಜನಕ ದಾಸ್ತಾನು ಮಾಡಬೇಕು. ಸ್ಥಳದಲ್ಲೇ ಆಮ್ಲಜನಕ ಉತ್ಪಾದಿಸುವ ಘಟಕಗಳಿಗೆ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಚಾಮರಾಜನಗರದಲ್ಲಿ ಆಮ್ಲಜನಕ ಉತ್ಪಾದನಾ ಘಟಕವನ್ನು ವಾರದೊಳಗೆ ಅಳವಡಿಸಬೇಕು ಎಂದು ನಿರ್ದೇಶನ ನೀಡಿದರು.

ರೆಸಾರ್ಟ್‌ಗಳಿಗೆ ಬರುವ ಗ್ರಾಹಕರಿಗೂ ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಪಡೆದ ‘ಕೋವಿಡ್ ನೆಗೆಟಿವ್’ ವರದಿ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಬೇಕು ಎಂದು ಸೂಚನೆ ನೀಡಿದರು.

ಚಿಕನ್ ಪಾಕ್ಸ್‌ನಂತೆ ವೇಗವಾಗಿ ಹರಡುವ ಡೆಲ್ಟಾ

ಅಮೆರಿಕದ ಸಿಡಿಸಿ ಅಭಿಪ್ರಾಯ: ಸೋಂಕು ಏರಿಕೆ– ವಿವಿಧ ದೇಶಗಳಲ್ಲಿ ಮುಂಜಾಗ್ರತೆ



ವಾಷಿಂಗ್ಟನ್ (ಎಎಫ್‌ಪಿ): ಕೊರೊನಾದ ಡೆಲ್ಟಾ ರೂಪಾಂತರ ತಳಿಯು ಚಿಕನ್ ಪಾಕ್ಸ್‌ನಂತೆ ವೇಗವಾಗಿ ಹರಡಲಿದೆ ಎಂದು ಅಮೆರಿಕದ ಕಾಯಿಲೆ ನಿಯಂತ್ರಣ ಮತ್ತು ತಡೆ ಕೇಂದ್ರದ (ಸಿಡಿಸಿ) ಆಂತರಿಕ ದಾಖಲೆಗಳಲ್ಲಿ ಉಲ್ಲೇಖವಾಗಿರುವುದಾಗಿ ‘ದಿ ನ್ಯೂಯಾರ್ಕ್ ಟೈಮ್ಸ್’ ವರದಿ ಮಾಡಿದೆ.

ಅಮೆರಿಕವಲ್ಲದೆ, ವಿಶ್ವದ ಇತರ ದೇಶಗಳಲ್ಲೂ ಪ್ರಕರಣಗಳ ಏರಿಕೆಗೆ ಡೆಲ್ಟಾ ರೂಪಾಂತರ ತಳಿಯೇ ಕಾರಣ ಎಂದು ಅಭಿಪ್ರಾಯಪಡಲಾಗಿದೆ.

‘ಮಕ್ಕಳನ್ನು ಗುರಿಯಾಗಿಸಿಲ್ಲ’

ಡಬ್ಲ್ಯುಎಚ್‌ಒ: ಡೆಲ್ಟಾ ರೂಪಾಂತರ ತಳಿಯು ನಿರ್ದಿಷ್ಟವಾಗಿ ಮಕ್ಕಳನ್ನಷ್ಟೇ ಗುರಿಯಾಗಿಸಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ.

‘ಜನ ಗುಂಪು ಸೇರುವಲ್ಲಿ ಹೆಚ್ಚು ಹರಡುತ್ತಿರುವುದು ಕಂಡುಬಂದಿದೆ ಎಂದು ಡಬ್ಲ್ಯುಎಚ್‌ಒ ಕೋವಿಡ್ ತಾಂತ್ರಿಕ ತಂಡದ ಮುಖ್ಯಸ್ಥೆ, ಅಮೆರಿಕದ ತಜ್ಞೆ ಮಾರಿಯಾ ವ್ಯಾನ್ ಕೆರ್ಖೋವ್ ಹೇಳಿದ್ದಾರೆ. ಡೆಲ್ಟಾ ರೂಪಾಂತರ ತಳಿಯು ಸದ್ಯ 132 ದೇಶಗಳಲ್ಲಿ ಪತ್ತೆಯಾಗಿದೆ’ ಎಂದಿದ್ದಾರೆ.

ನಿಯಮ ಪಾಲಿಸದಿದ್ದರೆ ಪರ್ಮಿಟ್ ರದ್ದು

ಸಿಂಗಪುರ (ಪಿಟಿಐ): ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸದ ಪ್ರಜೆಗಳ ಪರ್ಮಿಟ್ ಹಾಗೂ ದೀರ್ಘಾವಧಿ ಪಾಸ್ ಹೊಂದಿದ್ದರೆ ಅದನ್ನು ರದ್ದುಪಡಿಸಲಾಗುವುದು ಎಂದು ಸಿಂಗಪುರ ಶನಿವಾರ ಎಚ್ಚರಿಸಿದೆ.

ಆರೋಗ್ಯ ಸಚಿವಾಲಯ ಈ ಕುರಿತು ಹೇಳಿಕೆ ನೀಡಿದೆ. ಆಸ್ಟ್ರೇಲಿಯ ಮತ್ತು ಚೀನಾದ ಜಿಯಾಂಗ್ಸು ಪ್ರಾಂತ್ಯದಿಂದ ಜನರ ಸಂಚಾರಕ್ಕೆ ಕಟ್ಟುನಿಟ್ಟಿನ ನಿರ್ಬಂಧ ಹೇರಿದ ಹಿಂದೆಯೇ ಇಂಥ ಎಚ್ಚರಿಕೆ ಹೊರಬಿದ್ದಿದೆ.

ಹೊಸ ನಿಯಮ ಸೋಮವಾರ ಜಾರಿಗೆ ಬರಲಿದೆ.

ಪಾಕ್- ಕರಾಚಿ ಸೇರಿ ವಿವಿಧೆಡೆ ಲಾಕ್‌ಡೌನ್

ಇಸ್ಲಾಮಾಬಾದ್: ಕೋವಿಡ್ ಪ್ರಕರಣಗಳ ಏರುಗತಿ ಹಿನ್ನೆಲೆಯಲ್ಲಿ ಪಾಕಿಸ್ತಾನವು, ಕರಾಚಿ ಸೇರಿದಂತೆ ಸಿಂಧ್ ಪ್ರಾಂತ್ಯದ ವಿವಿಧ ನಗರಗಳಲ್ಲಿ ಆಗಸ್ಟ್ 8ರವರೆಗೂ ಲಾಕ್‌ಡೌನ್ ಘೋಷಿಸಿದೆ. ಸ್ಥಳೀಯ ಸರ್ಕಾರ ಮತ್ತು ಉದ್ಯಮ ಪ್ರತಿನಿಧಿಗಳ ವಿರೋಧದ ನಡುವೆಯೂ ಈ ಲಾಕ್‌ಡೌನ್ ನಿರ್ಧಾರ ಪ್ರಕಟಿಸಲಾಗಿದೆ.

ಚೀನಾ- 15 ನಗರಗಳಲ್ಲಿ ಸೋಂಕು ಏರುಮುಖ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಏಕಾಏಕಿ ರಾಜಧಾನಿ ಬೀಜಿಂಗ್ ಮತ್ತು ಇತರೆ 14 ನಗರಗಳಲ್ಲಿ ಪ್ರಕರಣಗಳು ಏರಿಕೆ ಕಂಡುಬಂದಿದೆ ಎಂದು ವರದಿಯಾಗಿದೆ. ಜಿಯಾಂಗ್ಸು ಪ್ರಾಂತ್ಯದ ರಾಜಧಾನಿ ನಾಂಜಿಂಗ್‌ನಲ್ಲಿ ಮೊದಲಿಗೆ ಏರಿಕೆ ದಾಖಲಾಯಿತು. ಬಳಿಕ ಬೀಜಿಂಗ್ ಸೇರಿ ಐದು ಪ್ರಾಂತ್ಯಗಳಿಗೂ ವಿಸ್ತರಣೆಯಾಯಿತು. ಈ ಬೆಳವಣಿಗೆ ಹಿನ್ನೆಲೆಯಲ್ಲಿ ನಾಂಜಿಂಗ್ ವಿಮಾನಯಾನ ಸೇವೆಯನ್ನು ರದ್ದುಪಡಿಸಿದೆ.

ಶವಗಳ ಇಡಲು ಶೀತಲೀಕರಣ ಘಟಕ

ಬ್ಯಾಂಕಾಕ್ (ರಾಯಿಟರ್ಸ್): ಕೋವಿಡ್ ಸಾವು ಪ್ರಕರಣಗಳು ಹೆಚ್ಚಿದಂತೆ ಇಲ್ಲಿನ ಆಸ್ಪತ್ರೆಗಳು ಶವಗಳನ್ನು ಇಡಲು ಶೀತಲೀಕರಣ ಘಟಕಗಳ ಮೊರೆ ಹೋಗಿವೆ. 2004ರಲ್ಲಿ ಸುನಾಮಿ ವೇಳೆಯೂ ಇದೇ ಕ್ರಮವನ್ನು ಅನುಸರಿಸಲಾಗಿತ್ತು.

ಕಠಿಣ ನಿರ್ಬಂಧ ಹೇರದಿದ್ದರೆ ಕಷ್ಟ – ಕೇಂದ್ರ

ಒಂದನೇ ಪುಟದಿಂದ...

- ಶೇ 10ಕ್ಕಿಂತ ಕಡಿಮೆ ಪಾಸಿಟಿವಿಟಿ ದರ ಇರುವ ಜಿಲ್ಲೆಗಳಲ್ಲಿ ಸೋಂಕು ಹೆಚ್ಚದಂತೆ ನೋಡಿಕೊಳ್ಳಲು, ಲಸಿಕೆ ಕಾರ್ಯಕ್ರಮ ಚುರುಕುಗೊಳಿಸಬೇಕು
- ಶೇ 80ರಷ್ಟು ಮರಣ ಪ್ರಮಾಣ ಕಂಡುಬಂದಿರುವ, ಹಿರಿಯ ನಾಗರಿಕರು ಮತ್ತು 45–60 ವರ್ಷದೊಳಗಿನ ಜನರಿಗೆ ಲಸಿಕೆ ಕಾರ್ಯಕ್ರಮ ಚುರುಕುಗೊಳಿಸಬೇಕು
- ಜಿಲ್ಲಾವಾರು ರೋಗ ಹರಡುವಿಕೆಯ ಮಾಹಿತಿ ಪಡೆಯಲು ರಾಜ್ಯಗಳು ತಮ್ಮದೇ ಸೆರೊ ಸರ್ವೆ ನಡೆಸಬೇಕು
- ಹೆಚ್ಚು ಪ್ರಕರಣ ವರದಿಯಾಗುವ ಕ್ಲಸ್ಟರ್‌ಗಳಲ್ಲಿ ಕಂಟೇನ್ಮೆಂಟ್ ವಲಯ ಗುರುತಿಸುವಿಕೆ, ಕಣ್ಗಾವಲು ಹೆಚ್ಚಿಸುವಿಕೆ ಮೊದಲಾದ ಕ್ರಮ ಜಾರಿಗೊಳಿಸಬೇಕು ಎಂದು ಕೇಂದ್ರ ಸೂಚಿಸಿದೆ

ಸಂಕ್ಷಿಪ್ತ ಸುದ್ದಿ

ಕೇರಳ: 20,624 ಹೊಸ ಪ್ರಕರಣ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಸತತ ಐದನೇ ದಿನ, ಶನಿವಾರವು 20 ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಆದರೆ, ಸಾವಿನ ಪ್ರಮಾಣ ಸ್ವಲ್ಪಮಟ್ಟಿಗೆ ತಗ್ಗಿದೆ. ಸೋಂಕು ದೃಢೀಕರಣ ಪ್ರಮಾಣ ಶೇ 12.31ರಷ್ಟಿದೆ.

ಶನಿವಾರ ಒಟ್ಟು 20,624 ಪ್ರಕರಣ ಪತ್ತೆಯಾಗಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 33,90,761ಕ್ಕೆ ತಲುಪಿದೆ. 80 ಮಂದಿ ಮೃತಪಟ್ಟಿದ್ದು, ಮೃತರ ಸಂಖ್ಯೆ 16,781ಕ್ಕೆ ತಲುಪಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

41,649 ಪ್ರಕರಣ, 593 ಸಾವು

ನವದೆಹಲಿ: ದೇಶದಾದ್ಯಂತ ಶನಿವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆ ಅವಧಿಯಲ್ಲಿ 41,649 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 593 ಸೋಂಕಿತರು ಮೃತಪಟ್ಟಿದ್ದಾರೆ.ಈವರೆಗೆ ಸೋಂಕಿತರಾದವರ ಸಂಖ್ಯೆ 3,16,13,993ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಗಡಿ ಜಿಲ್ಲೆಗಳಲ್ಲಿ ಸೋಂಕು ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ 1,987 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದ್ದು, ನೆರೆಯ ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಒಂದು ದಿನದ ಅವಧಿಯಲ್ಲಿ 1.38 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.43ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ರಾಜ್ಯದ 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್‌ನಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ.

ಸಮಾಜ ಕಲ್ಯಾಣ ಇಲಾಖೆ

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಉದ್ಯಮ)

ನಂ 17/5, 2ನೇ ಮಹಡಿ, ಓಬ್ಲಾಂಗ್ ಬ್ಲಾಕ್, ಯೂನಿಟಿ ಕಟ್ಟಡ, ಜೆ.ಸಿ. ರಸ್ತೆ, ಬೆಂಗಳೂರು–560002

ದೂ : 080–22215222 e-mail:adijambava2019@gmail.com

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಮಾದಿಗ ಮತ್ತು ಸಂಬಂಧಿತ ಸಮುದಾಯದವರ ಆರ್ಥಿಕ ಸಬಲೀಕರಣಕ್ಕಾಗಿ ಅರ್ಜಿಗಳ ಆಹ್ವಾನ

ಯೋಜನೆಗಳು

ಸ್ವಯಂ ಉದ್ಯೋಗ ಯೋಜನೆ

ನೇರ ಸಾಲ ಯೋಜನೆ :

ತರಕಾರಿ, ಹಣ್ಣು, ಮಾರಾಟ ಮತ್ತು ಹಸು/ಎಮ್ಮೆ/ಕುರಿ/ಹಂದಿ/ ಮೊಲ ಸಾಕಾಣಿಕೆ ಇತ್ಯಾದಿ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಘಟಕ ವೆಚ್ಚ ಗರಿಷ್ಠ ರೂ. 50,000/– ವರೆಗೆ ಸಾಲ ಸೌಲಭ್ಯವನ್ನು ನಿಗಮದಿಂದ ನೇರವಾಗಿ ಮಂಜೂರು ಮಾಡಲಾಗುವುದು.

ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ) :

ಅರ್ಹ ನಿರುದ್ಯೋಗಿಗಳು ಸ್ವಯಂ ಉದ್ಯೋಗಗಳಲ್ಲಿ ತೊಡಗಿಕೊಂಡು ಆದಾಯ ಗಳಿಸಲು ಬ್ಯಾಂಕಿನಿಂದ ಮಂಜೂರಾದ ಸಾಲದ ಉದೇಶಗಳಿಗೆ ಘಟಕ ವೆಚ್ಚದ ಶೇ. 70ರಷ್ಟು ಅಥವಾ ಗರಿಷ್ಟ ರೂ. 1.00 ಲಕ್ಷದವರೆಗೆ ಸಹಾಯಧನವನ್ನು ಮಂಜೂರು ಮಾಡಲಾಗುವುದು.

ಮೈಕ್ರೋ ಕ್ರೆಡಿಟ್ ಯೋಜನೆ :

ಮಹಿಳೆಯರಲ್ಲಿ ಗುಂಪು ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮಹಿಳಾ ಸ್ವಹಾಯ ಸಂಘಗಳು ಸ್ವಯಂ ಉದ್ಯೋಗ ಕೈಗೊಂಡು ಆದಾಯ ಗಳಿಸಲು ಕನಿಷ್ಟ 10 ಸಂಖ್ಯೆಯ ಸದಸ್ಯರಿರುವ ಮಹಿಳಾ ಸ್ವಸಹಾಯ ಕನಿಷ್ಟ ರೂ. 2.50 ಲಕ್ಷ ಸಹಾಯಧನ / ಸಾಲ ಸೌಲಭ್ಯ ಮಂಜೂರು ಮಾಡಲಾಗುವುದು.

ಗಂಗಾ ಕಲ್ಯಾಣ ಯೋಜನೆ:

ಸಣ್ಣ / ಅತಿ ಸಣ್ಣ ರೈತರು ಹೊಂದಿರುವ ಖುಷ್ಕಿ ಜಮೀನಿಗೆ ರೂ. 3.50 / 4.00 ಲಕ್ಷ ಘಟಕ ವೆಚ್ಚದಲ್ಲಿ ಕೊಳವೆ ಬಾವಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಭೂ ಒಡೆತನ ಯೋಜನೆ:

ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಕೃಷಿಗೆ ಯೋಗ್ಯವಾದ ಜಮೀನು ಖರೀದಿಗೆ ರೂ. 15.00 / 20.00 ಲಕ್ಷ ಘಟಕ ವೆಚ್ಚದಲ್ಲಿ ಸಾಲ ಸೌಲಭ್ಯ ಮಂಜೂರು ಮಾಡಲಾಗುವುದು.

ಫಲಾಪೇಕ್ಷಿಗಳು: ಅರ್ಜಿಗಳನ್ನು ನಿಗಮದ ಲಿಂಕ್ https://adijambava.online ಮೂಲಕ ಅವಶ್ಯ ದಾಖಲೆಗಳೊಂದಿಗೆ ಅಪ್‌ಲೋಡ್ ಮಾಡಬಹುದು. ಅರ್ಜಿಗಳನ್ನು ಇದೇ ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅವಶ್ಯ ದಾಖಲೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿಗಳಲ್ಲಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು

ಪ್ರಾರಂಭದ ದಿನಾಂಕ : 02.08.2021

ಕೊನೆಯ ದಿನಾಂಕ : 02.09.2021

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ/ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ರವರನ್ನು ಸಂಪರ್ಕಿಸಬಹುದು.

ವಾಸಾಸಂಇ/ಜೆಂ.ನ./ಜಿಎ/1010/2021–22

ವ್ಯವಸ್ಥಾಪಕ ನಿರ್ದೇಶಕರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

2ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು–560 009

ಇ–ಮೇಲ್: sbmkarnataka1@gmail.com

ಕಡತ ಸಂಖ್ಯೆ: RDWSD/JJM/ISA/03/CB-SA/2020-21 ದಿನಾಂಕ: 31.07.2021

ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಲ ಜೀವನ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ರಾಜ್ಯ ಕಛೇರಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಖಾಲಿಯಿರುವ ತಾತ್ಕಾಲಿಕ ಹುದ್ದೆಗಳಿಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಸಮಾಲೋಚಕರನ್ನು ನೇಮಿಸಿಕೊಳ್ಳಲು ಅರ್ಜಿ ಕರೆಯಲಾಗಿದೆ.

ಹುದ್ದೆಗಳ ವಿವರಗಳು, ವಿದ್ಯಾರ್ಹತೆ ಹಾಗೂ ಕಾರ್ಯಾನುಭವದ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ ಸಂ.	ಹುದ್ದೆಯ ವಿವರ ಮತ್ತು ಸಂಖ್ಯೆ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ ಮತ್ತು ಅನುಭವ	ಮಾಸಿಕ ಸಂಭಾವನೆ
1. ಕೇಂದ್ರ ಕಛೇರಿ				
1.	ಹಿರಿಯ ಸಮಾಲೋಚಕರು (Executive Engineer Level)	01	Graduate in Civil Engineering with at least 20 years of experience in Government sector. Candidate should have served minimum in the rank of Executive Engineer applicable for minimum 5 years. Also, the candidate should have minimum 3 years of working experience in handling the water supply / sanitation works. **Age Limit:** The age of the candidate should not be more than **62 (Sixty Two)** years as on the date of this Notification. The contract will be up to a maximum of 65 years. **(On outsource basis only).**	Rs. 60,000/- & Rs.15,000/- per month will be given as a Travel Allowance.
2.	ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ತಜ್ಞರು (M&E Expert)	01	The candidate is required to possess a Post Graduate degree in Economics / Statistics / Public Policy from a recognized university only. 5-8 years of relevant experience in M&E, research, surveys, setting indicators, knowledge of evaluation methodologies, data collection, and data evaluation. Working on large scale missions/programs in the development sectors preferably in water and sanitation sectors.	ರೂ. 50,000/– ರಿಂದ ರೂ. 60,000/–
2. ಜಿಲ್ಲಾ ಪಂಚಾಯಿತಿ ಕಛೇರಿ – ಜಲ ಜೀವನ ಮಿಷನ್ & ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ)				
1.	ಜಿಲ್ಲಾ ಯೋಜನ ವ್ಯವಸ್ಥಾಪಕರು (DPM)	02	The candidate is required to possess a Post Graduate degree in Management / Social Science / Social Work / relevant professional degree from a recognized university only. Minimum 8 years relevant experience in project management / leading a team of experts in development sectors preferably in water, sanitation, and rural development. **(Vacant Districts: Raichur & Ballari).**	ರೂ. 35,000/– ರಿಂದ ರೂ. 45,000/–
2.	ಜಿಲ್ಲಾ MIS ಸಮಾಲೋಚಕರು	03	M.C.A./Statistics, M.Sc.Computer Science/ BE Computer Science from a recognized university only. 3-5 years of relevant experience in data management, data research preferably in the developmental sectors. **(Vacant Districts: JJM: Bagalkote, & Gadag, SBM-G: Bidar).**	ರೂ. 25,000/– ರಿಂದ ರೂ. 30,000/–
3.	ನೈರ್ಮಲ್ಯ ಹಾಗೂ ಶುಚಿತ್ವ ಸಮಾಲೋಚಕರು (SH)	02	Graduate degree in Engineering/ Social Science/ Public health / Rural Management or other relevant fields from a recognized university only. Minimum 3 years experience in relevant field and candidate should have worked in development sectors preferably in water, sanitation, health and rural development. **(Vacant Districts: Chikkamagaluru & Vijayanagara (Ballari)).**	ರೂ. 25,000/– ರಿಂದ ರೂ. 30,000/–
4.	ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ ಸಮಾಲೋಚಕರು (SLWM)	03	Graduate in Environmental Engineering/ Civil Engineering with Specialistion in Environmental Sciences from a recognized university only. Minimum 3 years experience in relevant field and should have worked in development sectors preferably in water, sanitation, and rural development. **(Vacant Districts: Kolar, Belagavi & Tumkur).**	ರೂ. 25,000/– ರಿಂದ ರೂ. 30,000/–

1) ವಯೋಮಾನ: ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 45 ವರ್ಷಗಳು ಮೀರಿರಬಾರದು. (ಕ್ರ ಸಂ– I-1 ಹೊರತುಪಡಿಸಿ)

2) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ತುಂಬಿ, ಅರ್ಜಿ ಜೊತೆಗೆ ವಯಸ್ಸಿನ ದೃಢೀಕರಣ, ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥ್ಯಗಳು & Resume ಅನ್ನು **ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆ.ಹೆಚ್.ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 5600–009 ಈ ವಿಳಾಸಕ್ಕೆ ಅರ್ಜಿಯ ಹಾರ್ಡ್‌ಪ್ರತಿಯನ್ನು ದಿನಾಂಕ: 16.08.2021ರ ಸಂಜೆ 5:30 ಗಂಟೆಯೊಳಗೆ ಸಲ್ಲಿಸಬೇಕು.** ನಂತರ ಬಂದಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. (ಅರ್ಜಿಯು ನಮೂನೆಯು RDPR website: **https://rdpr.karnataka.gov.in** ಮತ್ತು **https://swachhamevajayate.org** (ನೇಮಕಾತಿ ಲಿಂಕ್)ನಲ್ಲಿ ಲಭ್ಯವಿರುತ್ತದೆ).

3) ವಿದ್ಯಾರ್ಹತೆ, ಕಾರ್ಯಾನುಭವ ಹಾಗೂ ಅರ್ಜಿದಾರರ ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ವೆಬ್‌ಸೈಟ್ ನಲ್ಲಿ ವಿವರಿಸಲಾಗಿದ್ದು, ಅರ್ಜಿ ಸಲ್ಲಿಸುವ ಮೊದಲು ವಿವರವಾಗಿ ಓದಿಕೊಂಡು ಅರ್ಜಿ ಸಲ್ಲಿಸುವುದು.

ಸಹಿ/– ಆಯುಕ್ತರು

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

DIPR/DDU/BCPL/1006/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊಡಗು: ಭೂಕುಸಿತವಾಗಿದ್ದ ಪ್ರದೇಶದಲ್ಲಿ ಮತ್ತೆ ಭೀತಿ; ಗ್ರಾಮಸ್ಥರಲ್ಲಿ ಆತಂಕ

ನಿಲ್ಲದ ಬೆಟ್ಟ ಕೊರೆಯುವ ಕೆಲಸ

● ಆದಿತ್ಯ ಕೆ.ಎ.

ಮಡಿಕೇರಿ: ಪುಟ್ಟ ಜಿಲ್ಲೆ ಕೊಡಗಿನಲ್ಲಿ ಈಗ ಪ್ರತಿ ಮಳೆಗಾಲದಲ್ಲೂ ತಲ್ಲಣ ಶುರುವಾಗುತ್ತದೆ. ಅದು ಇತ್ತೀಚಿನ ವರ್ಷಗಳ ಬೆಳವಣಿಗೆ. ನಾಲ್ಕು ತಿಂಗಳು ಸುರಿಯುತ್ತಿದ್ದ ನಿರಂತರ ಮಳೆಗೂ ಜಗ್ಗದ ಶತಮಾನದ ದೈತ್ಯ ಬೆಟ್ಟಗಳು, ಈಗ ನಾಲ್ಕು ದಿನದ ಮಳೆಗೇ ಕುಸಿದು ಬೀಳುತ್ತಿವೆ. ಬಿರುಕು ಬಿಡುತ್ತಿವೆ; ಸ್ಫೋಟಗೊಳ್ಳುತ್ತಿವೆ. ಬೆಟ್ಟದ ತಪ್ಪಲಿನ ಕೃಷಿ ಜಮೀನು, ಜನವಸತಿ ಪ್ರದೇಶ ಎಲ್ಲವೂ ನಾಶವಾಗುತ್ತಿದೆ.

ಪಶ್ಚಿಮಘಟ್ಟದ ಸಾಲಿನಲ್ಲಿ ಕಾಡುನಾಶ, ಅಭಿವೃದ್ಧಿಯ ಭರಾಟೆ, ಬೆಟ್ಟದ ತುದಿಯಲ್ಲಿ ಬೃಹತ್ ಯಂತ್ರಗಳ ಕೆಲಸ, ಪ್ರವಾಸಿಗರ ಸೆಳೆಯುವ ಯೋಜನೆಗಳು–ಇವೇ ದುರಂತಕ್ಕೆ ಕಾರಣವೆಂಬ ತಜ್ಞರ ಎಚ್ಚರಿಕೆಯ ನಡುವೆಯೂ ಬೆಟ್ಟ ಕೊರೆಯುವ ಕೆಲಸ ಮಾತ್ರ ನಿಂತಿಲ್ಲ.

ನಾಲ್ಕು ವರ್ಷದ ಹಿಂದೆ ಭೂಕುಸಿತವಾದ ಸ್ಥಳಗಳಲ್ಲೇ ಈ ವರ್ಷವೂ ಸಣ್ಣ ಪ್ರಮಾಣದ ಕುಸಿತವಾಗಿದೆ. ಹೆಬ್ಬಟ್ಟಗೇರಿ, ದೇವಸ್ತೂರು, ಉದಯಗಿರಿ ಭಾಗದಲ್ಲಿ ಜನರು ಆತಂಕದಲ್ಲೇ ದಿನ ಕಳೆಯುತ್ತಿದ್ದಾರೆ. ತಾತಿಮನೆ ಪೈಸಾರಿಯಲ್ಲಿ ಭೂಮಿಯ ಒಳಗಿನಿಂದ ಸದ್ದು ಕೇಳಿಸುತ್ತಿದೆ. 'ಮೂರು ವರ್ಷಗಳ ಹಿಂದೆಯೂ ಗುಡ್ಡ ಕುಸಿಯುವ ಮುನ್ನ ಇದೇ ರೀತಿಯ ಅನುಭವವಾಗಿತ್ತು' ಎಂದು ನೆನಪಿಸಿಕೊಳ್ಳುತ್ತಾರೆ ಸ್ಥಳೀಯರು.

ಸಂತ್ರಸ್ತರ ಪುನರ್ವಸತಿ ಕೆಲಸಗಳು ಇನ್ನೂ ಪೂರ್ಣಗೊಂಡಿಲ್ಲ. ಕೃಷಿ ಜಮೀನು ಕಳೆದುಕೊಂಡವರಿಗೆ ಪರಿಹಾರ ಲಭಿಸಿಲ್ಲ. ಬೆಳೆ ಪರಿಹಾರ ಮಾತ್ರ ನೀಡಲಾಗಿದೆ. ಇದು ರೈತರ ಆಕ್ರೋಶದ ಕಟ್ಟೆ ಒಡೆಯುವಂತೆ ಮಾಡಿದೆ. ಹೆದ್ದಾರಿ ಬದಿಯಲ್ಲಿ, ಮಡಿಕೇರಿ ನಗರದಲ್ಲಿ ಭೂಕುಸಿತವಾದ ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣವೂ ನಡೆದಿದೆ.

23 ಕಡೆ ಭೂಕುಸಿತದ ಸಂಭವ:: 'ಈ ವರ್ಷವೂ ಮಳೆ ಹೆಚ್ಚಾದರೆ 23 ಸ್ಥಳಗಳಲ್ಲಿ ಭೂಕುಸಿತವಾಗುವ ಸಾಧ್ಯತೆಯಿದೆ' ಎಂದು ತಜ್ಞರು ವರದಿ ನೀಡಿದ್ದಾರೆ. ಅಲ್ಲಿನ ನಿವಾಸಿಗಳಿಗೆ ನೋಟಿಸ್ ನೀಡಲಾಗಿದೆ.

ಹಿಂದಿನ ವರ್ಷ ತಲಕಾವೇರಿಯ ಗಜಗಿರಿ ಬೆಟ್ಟ ಕುಸಿದು ಅರ್ಚಕರ ಕುಟುಂಬದ ಐವರು ಭೂಸಮಾಧಿಯಾಗಿದ್ದರು. ಪರಿಹಾರ ಕಾರ್ಯ ಅರ್ಧಕ್ಕೆ ನಿಂತಿತ್ತು. ಗುಡ್ಡ ಕುಸಿಯಲು ಬೆಟ್ಟದ ಮೇಲ್ಭಾಗದಲ್ಲಿ ಅರಣ್ಯ ಇಲಾಖೆ ತೆಗೆದಿದ್ದ ಇಂಗುಗುಂಡಿಗಳೇ ಕಾರಣ ಎಂಬ ಆರೋಪವಿತ್ತು. ದುರಂತದ ಬಳಿಕ ಅರಣ್ಯ ಇಲಾಖೆ ಅಂದಾಜು ಒಂದು ಸಾವಿರ ಇಂಗುಗುಂಡಿಗಳನ್ನು ಮುಚ್ಚಿತ್ತು.

'ಗಜಗಿರಿಯಲ್ಲಿ ಭೂಕುಸಿತ ತಡೆಗಟ್ಟಲು ಹಣ್ಣಿನ ಗಿಡಗಳನ್ನು ನೆಟ್ಟು ಹುಲ್ಲಿನ ಬೀಜಗಳನ್ನು ಬಿತ್ತಿದ್ದು ಮಳೆಗೆ ಚಿಗುರೊಡೆದಿವೆ. ಆ ಭಾಗದ ಬೆಟ್ಟದಲ್ಲಿ ಬೇಗ ಬೆಳೆಯುವ ಹಾಗೂ ಭೂಸವಕಳಿ ತಡೆಗಟ್ಟುವ ಸಸಿಗಳನ್ನೂ ನಾಟಿ ಮಾಡಲಾಗಿದೆ' ಎಂದು ಇಲಾಖೆ ಮೂಲಗಳು ತಿಳಿಸಿವೆ. ಈ ಅನಾಹುತಗಳ ನಡುವೆಯೂ ಪ್ರವಾಸೋದ್ಯಮ ಇಲಾಖೆ ರಾಜಾಸೀಟ್‌ನಲ್ಲಿ ಬೆಟ್ಟ ಕೊರೆದು ಉದ್ಯಾನ ವಿಸ್ತರಣೆಗೆ ಕೈಹಾಕಿದೆ. ವೀಕ್ಷಣಾ ಗೋಪುರ, ಪ್ರವಾಸಿಗರ ಮೋಜಿಗೆ ಕಾಲುದಾರಿ ನಿರ್ಮಿಸುತ್ತಿದೆ.

'ರಾಜಾಸೀಟ್ ಕಾಂಕ್ರೀಟ್ ಕಾಡಾಗಿ ಮಾರ್ಪಟ್ಟಿದೆ. ಅಭಿವೃದ್ಧಿಯ ಹೆಸರಿನಲ್ಲಿ ಸುತ್ತಮುತ್ತಲಿನ ಬೆಟ್ಟವನ್ನು ಅಗೆದು ಕಾಂಕ್ರೀಟ್‌ಮಯಗೊಳಿಸಲಾಗಿದೆ. ರಾಜಾಸೀಟ್ ಪ್ರದೇಶವು ಮಂಗಳೂರು ರಸ್ತೆಗೆ ಕುಸಿಯುವ ಸಾಧ್ಯತೆಯಿದೆ' ಎಂದು ಪರಿಸರ ಹೋರಾಟಗಾರ ಹರೀಶ್ ಜಿ.ಆಚಾರ್ಯ ಆತಂಕ ವ್ಯಕ್ತಪಡಿಸುತ್ತಾರೆ.

ಮಡಿಕೇರಿ – ಸಂಪಾಜೆ ನಡುವೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ–275ರ ಕರ್ತೋಜಿ ಬಳಿ ಮಣ್ಣು ಕುಸಿದಿದೆ

ಪ್ರಕೃತಿದತ್ತ ರಚನೆಗೆ ಹಾನಿ

ಯಾವುದೇ ಎತ್ತರದ ಅಥವಾ ಘಟ್ಟ ಪ್ರದೇಶದಲ್ಲಿ, ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಭೂಕುಸಿತ ಆಗುವುದು ಸಾಮಾನ್ಯ. ಆದರೆ, ಪ್ರಕೃತಿದತ್ತವಾದ ರಚನೆಯನ್ನು ಕೆಡಿಸಿದಾಗ ಇಂತಹ ಅವಘಡಗಳು ಹೆಚ್ಚಾಗುತ್ತವೆ. ಅಂದರೆ, ಗುಡ್ಡ ಕಡಿದು ರಸ್ತೆ ಮಾಡುವಂತಹ ಅವೈಜ್ಞಾನಿಕ ಅಭಿವೃದ್ಧಿ ಕಾಮಗಾರಿಗಳು ಕಾರಣವಾಗುತ್ತವೆ. ಸ್ವಾಭಾವಿಕವಾಗಿ ಶೇ 50ರಷ್ಟು ಭೂಕುಸಿತ ಸಂಭವಿಸಿದರೆ, ಉಳಿದ ಶೇ 50ರಷ್ಟು ವಿಕೋಪಗಳಿಗೆ ಮಾನವ ನಿರ್ಮಿತ ಚಟುವಟಿಕೆಗಳು ಕಾರಣವಾಗಿರುತ್ತವೆ.

ಡಾ.ಜಿ.ಎಸ್. ಶ್ರೀನಿವಾಸ ರೆಡ್ಡಿ, ಭೂವಿಜ್ಞಾನಿ, ಹವಾಮಾನ ತಜ್ಞ

ಜಮೀನು ಕಳೆದುಕೊಂಡವರಿಗೆ ನ್ಯಾಯಯುತ ಪರಿಹಾರ ಸಿಕ್ಕಿಲ್ಲ. ಗದ್ದೆಗಳಲ್ಲಿ ಸಂಗ್ರಹವಾದ ಮಣ್ಣು ತೆರವು ಆಗಿಲ್ಲ. ಹೆಸರಿಗಷ್ಟೇ ಕೊಡಗು ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ

ರವಿ, ಕಾಲೂರು

ಮಳೆ ಬಂದರೆ ದ್ವೀಪವಾಗುವ ಕರಾವಳಿ

ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಭೂಕುಸಿತದ ಭೀತಿ

ಮಂಗಳೂರು: ಮಳೆಯ ಅಬ್ಬರ ಹೆಚ್ಚಾಗುತ್ತಿದ್ದಂತೆಯೇ ಕರಾವಳಿಯು ರಾಜಧಾನಿ ಬೆಂಗಳೂರಿನೊಂದಿಗೆ ಸಂಪರ್ಕ ಕಳೆದುಕೊಳ್ಳುವ ಆತಂಕ ಶುರುವಾಗುತ್ತದೆ. ವಾಣಿಜ್ಯ ಚಟುವಟಿಕೆ, ಜನರ ಓಡಾಟಕ್ಕೆ ಕಡಿವಾಣ ಬೀಳುತ್ತಿದ್ದು, ಹೆದ್ದಾರಿ ಸಂಚಾರವೇ ಸಂಕಟ ತರುತ್ತಿದೆ.

ಎರಡು ವರ್ಷಗಳ ಹಿಂದೆ ಚಾರ್ಮಾಡಿಯಲ್ಲಿ ಭೀಕರ ಭೂಕುಸಿತವಾಗಿ, ರಸ್ತೆಯು ಸಂಪೂರ್ಣ ಬಂದ್ ಆಗಿತ್ತು. ಅದಕ್ಕೂ ಮೊದಲು ಶಿರಾಡಿ ಘಾಟಿಯಲ್ಲಿ ಪದೇ ಪದೇ ಭೂಕುಸಿತದಿಂದ ಪ್ರಯಾಣ ಸುರಕ್ಷಿತವಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗಿತ್ತು. ಮಡಿಕೇರಿ ಮೂಲಕ ಬೆಂಗಳೂರು ಸಂಪರ್ಕಿಸುವ ಸಂಪಾಜೆ ಘಾಟಿಯೂ ಕುಸಿತದ ಆತಂಕ ಎದುರಿಸುತ್ತಲೇ ಇದೆ.

ಚಾರ್ಮಾಡಿಯಲ್ಲಿ ತುರ್ತು ಕಾಮಗಾರಿ ನಡೆಸಲಾಗಿದ್ದು, ಬೆಳಿಗ್ಗೆ 6ರಿಂದ ಸಂಜೆ 7 ಗಂಟೆಯವರೆಗೆ ಲಘು ವಾಹನಗಳ ಓಡಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಶಿರಾಡಿ ಘಾಟಿಯಲ್ಲೂ ಲಘು ವಾಹನಗಳ ಓಡಾಟ ಶುರುವಾಗಿದೆ. ಇದೀಗ ಸರಕು ಸಾಗಣೆ ವಾಹನಗಳ ಭಾರ ಸಂಪಾಜೆ ಘಾಟಿ ಮೇಲೆ ಬೀಳುತ್ತಿದ್ದು, ಮತ್ತಷ್ಟು ಮಳೆಯಾದರೆ ಆ ದಾರಿಯೂ ಬಂದ್ ಆಗುವ ಸಾಧ್ಯತೆ ಇದೆ ಎನ್ನುವುದು ವಾಹನ ಚಾಲಕರ ಅಭಿಪ್ರಾಯ.

ವಾಣಿಜ್ಯ ಚಟುವಟಿಕೆ ಸ್ಥಗಿತ: ಬೆಂಗಳೂರಿನ ಕೈಗಾರಿಕೆಗಳ ಉತ್ಪನ್ನಗಳನ್ನು ಇಲ್ಲಿನ ಎನ್‌ಎಂಪಿಟಿಯ ಮೂಲಕ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ. ಶಿರಾಡಿ ಘಾಟಿ ಮೂಲಕವೇ ಸರಕು ಸಾಗಣೆ ವಾಹನಗಳು ಸಂಚರಿಸುತ್ತಿದ್ದು, ಈ ಘಾಟಿಯಲ್ಲಿ ಸಂಚಾರ ಸ್ಥಗಿತವಾದರೆ, ಬೆಂಗಳೂರಿನ ಕೈಗಾರಿಕೆಗಳು ಸಂಕಷ್ಟ ಎದುರಿಸುವಂತಾಗುತ್ತದೆ.

ಬೆಂಗಳೂರು, ತುಮಕೂರು, ಕುಣಿಗಲ್, ಹಾಸನ, ಚಿಕ್ಕಮಗಳೂರು, ಕುಶಾಲನಗರ, ಮೈಸೂರು ಭಾಗದ ಉದ್ಯಮಿಗಳು ರಫ್ತು ವಹಿವಾಟಿಗೆ ಮಂಗಳೂರಿನ ಎನ್‌ಎಂಪಿಟಿಯನ್ನು ಅವಲಂಬಿಸಿದ್ದಾರೆ. ಎನ್‌ಎಂಪಿಟಿಯು ಎಲ್‌ಪಿಜಿ ಆಮದು ಮಾಡುವ ದೊಡ್ಡ ಬಂದರಾಗಿದ್ದು, ನಿತ್ಯ ಇಲ್ಲಿಂದ ರಾಜ್ಯ, ಇತರೆ ರಾಜ್ಯಗಳಿಗೆ 150ಕ್ಕೂ ಅಧಿಕ ಬುಲೆಟ್ ಟ್ಯಾಂಕರ್‌ಗಳು ಸಂಚರಿಸುತ್ತವೆ. ಈ ರಸ್ತೆಯಲ್ಲಿ ಸಂಚಾರ ಸ್ಥಗಿತವಾದರೆ, ವಾಣಿಜ್ಯ ಚಟುವಟಿಕೆಗಳೇ ಸ್ಥಗಿತವಾಗುತ್ತವೆ ಎನ್ನುತ್ತಾರೆ ಕೆನರಾ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಐಸಾಕ್ ವಾಸ್.

ಅತ್ತ ಆಗುಂಬೆ ಘಾಟಿಯಲ್ಲೂ ಅಧಿಕ ಮಳೆಯಾದರೆ ಮಣ್ಣು ಕುಸಿತ ಸಹಜ ಎನ್ನುವಂತಾಗಿದೆ.

ಪೂರಕ ಮಾಹಿತಿ: ಚಿದಂಬರ ಪ್ರಸಾದ (ಮಂಗಳೂರು), ಆದಿತ್ಯ ಕೆ.ಎ. (ಮಡಿಕೇರಿ), ಸುನಿಲ್ ಕೆ.ಎಸ್. (ಹಾಸನ) ಜಾನೇಕೆರೆ ಆರ್. ಪರಮೇಶ್ (ಸಕಲೇಶಪುರ)

ಅವೈಜ್ಞಾನಿಕ ಕಾಮಗಾರಿ

ಸಕಲೇಶಪುರ: ಹಾಸನ–ಮಾರನಹಳ್ಳಿ ಚತುಷ್ಪಥ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿದ್ದು, ಸಕಲೇಶಪುರ–ಮಾರನಹಳ್ಳಿ ಕಾಮಗಾರಿ 2017ರಿಂದ ನನೆಗುದಿಗೆ ಬಿದ್ದಿದೆ. ಗುಡ್ಡ ಕಡಿದು ರಸ್ತೆ ವಿಸ್ತರಿಸಲಾಗಿದೆ. ತಡೆಗೋಡೆ ನಿರ್ಮಿಸದಿರುವುದರಿಂದ 2018ರಿಂದ ನಿರಂತರವಾಗಿ ಭೂ ಕುಸಿತವಾಗುತ್ತಿದೆ. 2019ರಲ್ಲಿ ದೊಡ್ಡತಪ್ಪಲೆ ಬಳಿ ಗುಡ್ಡ ಕುಸಿದು ಮೂರು ತಿಂಗಳು ಸಂಚಾರ ಸ್ಥಗಿತಗೊಂಡಿತ್ತು.

'ಭೂ ಕುಸಿತಕ್ಕೆ ಹೆದ್ದಾರಿಯ ಅವೈಜ್ಞಾನಿಕ ಕಾಮಗಾರಿ ಕಾರಣ. ಪ್ರಕೃತಿ ವಿಕೋಪಕ್ಕಿಂತಲೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳು, ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಈ ಸಮಸ್ಯೆ ಎದುರಾಗಿದೆ' ಎಂಬುದು ಶಾಸಕ ಎಚ್.ಕೆ. ಕುಮಾರಸ್ವಾಮಿ ಆರೋಪ.

ಅಪಾಯದಲ್ಲಿ ಹೆದ್ದಾರಿ

ಮಡಿಕೇರಿ: ಮಡಿಕೇರಿ, ಸಂಪಾಜೆಯ ನಡುವೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ 2018ರಲ್ಲಿ ಮದೆನಾಡು, ಮದೆ, ಕಾಟಕೇರಿಯ ಬಳಿ ದೊಡ್ಡ ಪ್ರಮಾಣದಲ್ಲಿ ಭೂಕುಸಿತವಾಗಿ ವಾಹನ ಸಂಚಾರ ಬಂದ್ ಆಗಿತ್ತು. ಆ ಸ್ಥಳಗಳಲ್ಲಿ ಮರಳಿನ ಚೀಲವಿಟ್ಟು ರಸ್ತೆ ಮಾಡಲಾಗಿತ್ತು. ಮತ್ತೆ ಭಾರಿ ಮಳೆ ಸುರಿದರೆ ಮರಳಿನ ಚೀಲಗಳು ಉರುಳಿ ಹೆದ್ದಾರಿ ಕುಸಿಯುವ ಆತಂಕವಿದೆ.

ಕೇಂದ್ರ ಸರ್ಕಾರದಿಂದ ₹ 58.8 ಕೋಟಿ ಅನುದಾನ ಬಿಡುಗಡೆಯಾಗಿದ್ದು, ತಡೆಗೋಡೆ ನಿರ್ಮಾಣ ಕುಂಟುತ್ತಾ ಸಾಗುತ್ತಿದೆ. ಈ ವರ್ಷವೂ ಎರಡನೇ ಮೊಣ್ಣಂಗೇರಿಯಿಂದ ಮದೆನಾಡು ತನಕ ಅಲ್ಲಲ್ಲಿ ರಸ್ತೆಯಲ್ಲೇ ಜಲ ಉಕ್ಕುತ್ತಿದೆ. ಕರ್ತೋಜಿ ಬಳಿ ಬಿರುಕು ಕಾಣಿಸಿಕೊಂಡಿದೆ.

ಚಾರ್ಮಾಡಿ ಘಾಟಿಯ ಕುಸಿತ ಪ್ರದೇಶದಲ್ಲಿ ಕಾಮಗಾರಿ ನಿರ್ವಹಿಸಲು ಅಂದಾಜು ಪಟ್ಟಿ ತಯಾರಿಸಿ ಪ್ರಸ್ತಾವ ಸಲ್ಲಿಸಲಾಗುವುದು. ತಾತ್ಕಾಲಿಕ ರಕ್ಷಣಾ ಕಾಮಗಾರಿ ನಡೆದಿದೆ.

ಕೃಷ್ಣಕುಮಾರ್, ರಾಷ್ಟ್ರೀಯ ಹೆದ್ದಾರಿ ಎಇಇ

ಶಿರಾಡಿ ಘಾಟಿ ಕಾಮಗಾರಿ ಗುತ್ತಿಗೆ ಪಡೆದಿದ್ದ ಕಂಪನಿ ಆರ್ಥಿಕ ದಿವಾಳಿ ಘೋಷಿಸಿದ್ದು, ಉಪ ಗುತ್ತಿಗೆ ಪಡೆದ ಕಂಪನಿಗಳ ಆರ್ಥಿಕ ಗೊಂದಲದಿಂದ ತಡೆಗೋಡೆ ವಿಳಂಬವಾಗಿದೆ.

ಎ.ಕೆ. ಜಾನ್‌ಬಾಜ್, ಹೆದ್ದಾರಿ ಪ್ರಾಧಿಕಾರದ ಹಾಸನ ವಿಭಾಗದ ಯೋಜನಾ ನಿರ್ದೇಶಕ

ನೆಲೆ ಕಲ್ಪಿಸಿದ ನೆಲ ಕುಸಿದೊಡೆ... ಧರೆ ಕುಸಿದು ತಲ್ಲಣಿಸಿದ ಬದುಕು

● ಸದಾಶಿವ ಎಂ.ಎಸ್

ಕಾರವಾರ: ರಾತ್ರಿ ಬೆಳಗಾಗುವಷ್ಟರಲ್ಲಿ ಈ ಪುಟ್ಟ ಹಳ್ಳಿಯಲ್ಲಿ ಭೀಕರ ಪರಿಸ್ಥಿತಿ ತಲೆದೋರಿ, ನಿವಾಸಿಗಳು ಸಂಕಟದಲ್ಲಿದ್ದರು.

'ಸಾರ್... ತೋಟ, ಮನೆ ಎಲ್ಲವೂ ಹೋಯ್ತು. ಮಕ್ಕು–ಮರಿ ಇದಾರೆ. ಎಲ್ಲಿಗೆ ಹೋಗೋದು, ಏನು ಮಾಡ್ಬೇಕು ಗೊತ್ತಾಗ್ತಿಲ್ಲ. ನಾವು ಇಷ್ಟು ವರ್ಷಗಳಿಂದ ಪೂಜಿಸ್ಕೊಂಡು ಬಂದಿದ್ದ ಊರೇ ಈಗ ಕುಸಿದು ಬಿದ್ದಿದೆ. ನಮ್ಮನ್ನ ನೀವೇ ಮೇಲೆತ್ತಬೇಕು...'

ಭೀಕರ ಭೂ ಕುಸಿತಕ್ಕೆ ಒಳಗಾಗಿರುವ ಯಲ್ಲಾಪುರ ತಾಲ್ಲೂಕಿನ ಕಳಚೆಯಲ್ಲಿ ಪರಿಶೀಲನೆಗೆಂದು ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಭೇಟಿ ನೀಡಿದ್ದಾಗ, ಎದುರಾದ ಕುಟುಂಬದ ಹಿರಿಯರೊಬ್ಬರು ಹೀಗೆ ಅಂಗಲಾಚುತ್ತ ಗದ್ಗದಿತರಾದರು.

ಅವರ ಹಿಂದೆಯೇ ರೋಗಿಯೊಬ್ಬರನ್ನು ಜೋಳಿಗೆಯಲ್ಲಿ ಮಲಗಿಸಿ ಮರದ ಕೋಲುಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಸಾಗುತ್ತಿದ್ದವರು ಜೊತೆಯಾದರು. ಈ ಸೇವೆಯಲ್ಲಿ ನಿರತರಾಗಿದ್ದವರು ನಾಲ್ಕಾರು ಮಂದಿ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಸ್ಥಳೀಯ ಸಮಾಜಸೇವಕರು. ಅವರು ಸುಮಾರು 10 ಕಿಲೋಮೀಟರ್ ಈ ರೀತಿ ಸಾಗಿದರೆ ಮಾತ್ರ ವಾಹನದ ಬಳಿ ತಲುಪಲು ಸಾಧ್ಯವಿತ್ತು.

'ನಾವಿದ್ದ ಮನೆ ಕುಸಿದು ಬೀಳುವ ಹಂತದಲ್ಲಿದೆ. ಅಲ್ಲಿರಲು ಸಾಧ್ಯವಿಲ್ಲ. ಯಲ್ಲಾಪುರದಲ್ಲಿ ಬಾಡಿಗೆ ಮನೆ ಹುಡುಕಿದ್ದೇನೆ. ಕುಟುಂಬ ಸಮೇತ ಅಲ್ಲಿಗೆ ಹೋಗ್ತಿದೇನೆ. ಊರಿನ ಸ್ಥಿತಿ ನೋಡಲೂ ನಮ್ಮ ಕೈಲಿ ಆಗ್ತಿಲ್ಲ...' ಎಂದು ವ್ಯಥೆಪಟ್ಟವರು ಬ್ಯಾಂಕ್ ಉದ್ಯೋಗಿ ಸುನೀಲ್.

ಇಂಥ ಹತ್ತಾರು ನಿದರ್ಶನಗಳು ಇಲ್ಲಿವೆ. ಇಲ್ಲಿ ರಾತ್ರಿ ಬೆಳಗಾಗುವಷ್ಟರಲ್ಲಿ ಸಿರಿವಂತರು ಬಡವರು ಎಲ್ಲರೂ ಒಂದೇ ಸ್ಥಿತಿಗೆ ತಲುಪಿದ್ದಾರೆ. ನೆಲೆ ಕಲ್ಪಿಸಿದ್ದ ನೆಲ ಬಾಯ್ತೆರೆದು ಸರ್ವಸ್ವವನ್ನೂ ಕಬಳಿಸಿದೆ.

ಅಡಿಕೆ ತೋಟದ ನಡುವೆ ಇರುವ ಒಂಟಿ ಮನೆಗಳನ್ನು ನೋಡಿದರೆ ಬಹುತೇಕ ಎಲ್ಲೆಡೆ ಮೌನ ಆವರಿಸಿತ್ತು. ಭೂಕುಸಿತ ಮತ್ತು ಭಾರಿ ಮಳೆಯಿಂದ ಬೆಟ್ಟದ ಕೆಳಗೆ ಉಂಟಾಗಿದ್ದ ಕಂದಕದ ಬಳಿ 'ಆಚೆತೋಟ'ದ ಮನೆಯಲ್ಲಿ ವೆಂಕಟ್ರಮಣ ಭಟ್ ಕುಟುಂಬವೊಂದಿತ್ತು. ಅವರ ಮನೆಯ ಅಂಗಳ, ಗೋಡೆಗಳು ಬಿರುಕು ಬಿಟ್ಟಿವೆ. ಯಾರನ್ನಾದರೂ ಸಂಪರ್ಕಿಸಲು ದಾರಿಯೂ ಇಲ್ಲದ ಸ್ಥಿತಿ ಅವರದ್ದಾಗಿತ್ತು.

ಭೂಕುಸಿತವಾದ ಇಡೀ ಪ್ರದೇಶವನ್ನು ವೀಕ್ಷಿಸಿ ಪುನಃ ಬೆಟ್ಟದ ಮೇಲ್ಭಾಗದ ತಳಕೆಬೈಲ್‌ಗೆ ತಲುಪಿದಾಗ ಸಂಜೆಯಾಗಿತ್ತು. ರಾಜ್ಯ ಹೆದ್ದಾರಿ 6ರಲ್ಲಿ ಭೂ ಕುಸಿತವಾಗಿ ಅಲ್ಲಿ ರಸ್ತೆ ಸಂಪರ್ಕ ಕಡಿತವಾಗಿದೆ.

ಮೊಬೈಲ್ ಫೋನ್ ಬ್ಯಾಟರಿ ಚಾರ್ಜ್ ಮಾಡಲಾದರೂ ಬೇಕು ಎಂದು ಜನರೇಟರ್ ಅನ್ನು ತಲೆಹೊರೆಯಲ್ಲಿ ಹೊತ್ತುಕೊಂಡು ಸಾಗುತ್ತಿದ್ದ ವೆಂಕಟ್ರಮಣ ಹೆಗಡೆ ಎದುರಾದರು. ಅವರ ಮಗ ದೂರದ ಊರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಇಲ್ಲಿನ ವಿದ್ಯಮಾನಗಳ ಬಗ್ಗೆ, ತಮ್ಮ ಯೋಗಕ್ಷೇಮದ ವಿಚಾರ ತಿಳಿಸಲು ಮೊಬೈಲ್ ಅನಿವಾರ್ಯ. ವಿದ್ಯುತ್ ಸಂಪರ್ಕ ಸರಿಯಾಗಲು ಅದೆಷ್ಟು ದಿನಗಳೇ ಬೇಕೋ ಏನೋ. ಹಾಗಾಗಿ ಯಲ್ಲಾಪುರದಿಂದ ಬಾಡಿಗೆಗೆ ಜನರೇಟರ್ ತಂದಿದ್ದಾಗಿ ಹೇಳಿ ಕಳಚೆಯತ್ತ ಹೆಜ್ಜೆ ಹಾಕಿದರು.

ಒಂದನೇ ಪುಟದಿಂದ

ಊರಿನ ಏಕೈಕ ರಸ್ತೆಯಲ್ಲೇ ಸುಮಾರು 30 ಮೀಟರ್ ಆಳದ ಕಂದಕ ಉಂಟಾಗಿದೆ.

ದೂರ ದೂರದಲ್ಲಿರುವ ಮನೆಗಳ ಪೈಕಿ ಹಲವು ಭೂಸಮಾಧಿಯಾಗಿವೆ. ಬಿರುಕು ಬಿಟ್ಟ ಬೆಟ್ಟದಲ್ಲಿ ಮತ್ತೊಂದಿಷ್ಟು ಬೀಳುವಂತಿವೆ. ತೋಟದಲ್ಲಿ ಕಾಲಿಟ್ಟರೆ ಎಲ್ಲಿ ಕುಸಿದು ಬೀಳುವುದೋ ಎಂಬ ಆತಂಕದಲ್ಲೇ ಹೆಜ್ಜೆ ಹಾಕಬೇಕು. ಎದುರಿಗೇ, ದೊಡ್ಡದಾಗಿ ಬಾಯ್ತೆರೆದ ಗುಡ್ಡದ ಅಂಚು! ಒಂದೇ ರಾತ್ರಿಯಲ್ಲಾದ ಈ ವರುಣಾಘಾತದಿಂದ ಬೆಚ್ಚಿಬಿದ್ದ ಗ್ರಾಮಸ್ಥರು, ಸಾಕುಪ್ರಾಣಿಗಳೊಂದಿಗೆ ಊರು ತೊರೆದಿದ್ದು, ಸದ್ಯ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ.

ಸರ್ವನಾಶವಾದ ಸರ್ವಋತು ರಸ್ತೆ: ಪ್ರಾಥಮಿಕ ಮಾಹಿತಿಯಂತೆ, ಕಳಚೆಯಲ್ಲಿ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ 15 ಮನೆಗಳು ಸಂಪೂರ್ಣ ಕುಸಿದಿವೆ. ಒಬ್ಬರು ಮೃತಪಟ್ಟಿದ್ದಾರೆ. ಈ ವರ್ಷ ಮೇ–ಜೂನ್‌ನಲ್ಲಿ ಸುಮಾರು ₹ 2.50 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಸರ್ವಋತು ರಸ್ತೆಯು ಕುರುಹೂ ಇಲ್ಲದಂತೆ ನಾಶವಾಗಿದೆ.

ಬೆಟ್ಟದ ಮೇಲಿದ್ದ ನೂರಾರು ಎಕರೆ ಅಡಿಕೆ, ತೆಂಗು ತೋಟ, ಅರಣ್ಯ ಪ್ರದೇಶವು ಎಂಟು ಕಿಲೋಮೀಟರ್ ದೂರದ ತಪ್ಪಲಿಗೆ ಜಾರಿದೆ. ಕೈಗಾ–ಇಳಕಲ್ ರಾಜ್ಯ ಹೆದ್ದಾರಿ ನಡುವೆ ಬರುವ ತಳಕೆಬೈಲ್ ಎಂಬಲ್ಲಿ ಅಂದಾಜು 100 ಮೀಟರ್ ಉದ್ದಕ್ಕೆ ಗುಡ್ಡ ಕುಸಿದಿದೆ. ಪರ್ಯಾಯ ರಸ್ತೆ ಅನಿವಾರ್ಯವಾಗಿದೆ.

ಜುಲೈ 29ರಂದು ಸ್ಥಳಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇಡೀ ಗ್ರಾಮವನ್ನೇ ಸ್ಥಳಾಂತರಿಸಲು ಸೂಚಿಸಿದ್ದಾರೆ. ಇಲ್ಲಿ 283 ಮನೆಗಳಿದ್ದು, 998 ಜನರಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 63ರ ಅರಬೈಲ್ ಘಟ್ಟದಲ್ಲೂ ಭಾರಿ ಪ್ರಮಾಣದಲ್ಲಿ ಗುಡ್ಡ ಕುಸಿದಿದೆ. ಜೊಯಿಡಾ ತಾಲ್ಲೂಕಿನ ಅಣಶಿ ಬಳಿ ನಾಲ್ಕು ಕಡೆ ಮಣ್ಣಿನ ರಾಶಿ ಬಿದ್ದಿದೆ. ಶಿರಸಿ ತಾಲ್ಲೂಕಿನ ಮತ್ತಿಘಟ್ಟದಲ್ಲಿ ಫೆಬ್ರುವರಿಯಲ್ಲಿ ಹಾಗೂ ವಾರದ ಹಿಂದೆ ಗುಡ್ಡ ಕುಸಿದಿದೆ. ಕಕ್ಕಳ್ಳಿ ಭಾಗದಲ್ಲೂ ಹೀಗೇ ಆಗಿದೆ. ಗಣೇಶಪಾಲ್‌ನಲ್ಲಿ ರಸ್ತೆ ಬಿರುಕು ಬಿಟ್ಟಿದ್ದರೆ, ಕುಮಟಾ ತಾಲ್ಲೂಕಿನ ಯಾಣದ ಸುತ್ತ ಎರಡು ವರ್ಷಗಳಿಂದ ಕುಸಿತ ಹೆಚ್ಚಾಗಿದೆ.

ಕಾರವಾರ ತಾಲ್ಲೂಕಿನ ಕಡವಾಡ ಸಮೀಪದ ಮಹಡಿಬಾಗ್‌ನಲ್ಲಿ 2009ರಲ್ಲಿ ಮನೆಗಳ ಮೇಲೆ ಗುಡ್ಡ ಕುಸಿದು 19 ಜನ ಮೃತಪಟ್ಟಿದ್ದರು. 2017ರ ಜೂನ್‌ನಲ್ಲಿ ಕುಮಟಾ ತಾಲ್ಲೂಕಿನ ದುಂಡುಕುಳಿಯಲ್ಲಿ ಬಂಡೆ–ಮಣ್ಣು ಬಿದ್ದು ಮೂವರು ಮಕ್ಕಳು ಮೃತಪಟ್ಟಿದ್ದರು.

ಮೂರು ವರ್ಷಗಳಿಂದ ಕೊಡಗು ಜಿಲ್ಲೆಯನ್ನು ಭೂಕುಸಿತವೆಂಬ ಭೂತ ಕಾಡುತ್ತಿದೆ. ಇಲ್ಲಿ ಬೆಟ್ಟಗಳೇ ಕುಸಿಯುತ್ತಿವೆ. ಕರಾವಳಿಯನ್ನು ಸಂಪರ್ಕಿಸುವ ಚಾರ್ಮಾಡಿ ಘಾಟ್, ಶಿರಾಡಿ ಘಾಟ್ ಪ್ರದೇಶಗಳಲ್ಲಿ ಪ್ರತಿ ಮಳೆಗಾಲದಲ್ಲಿ ಭೂಕುಸಿತ ಸಾಮಾನ್ಯವೆಂಬಂತಾಗಿದೆ. ಕೆಲವೇ ದಿನಗಳ ಹಿಂದೆ ಶಿರಾಡಿ ಭಾಗದ ದೋಣಿಗಾಲ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ರಸ್ತೆ ಕುಸಿದಿತ್ತು.

ಆಗಬೇಕಾಗಿರುವುದೇನು?: ಸಂತ್ರಸ್ತರ ಸ್ಥಳಾಂತರದ ವ್ಯವಸ್ಥೆ ತುರ್ತಾಗಿ ಆಗಬೇಕಾಗಿದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಕ್ರಮ ಕೈಗೊಳ್ಳಬೇಕು, ಮಾನಸಿಕವಾಗಿ ಕುಗ್ಗಿ ಹೋಗಿರುವ ಜನರಿಗೆ ಸ್ಥೈರ್ಯ ತುಂಬಬೇಕಿದೆ.

ಮತ್ತೆ ನಿರಾಶ್ರಿತರಾದರು

90ರ ದಶಕದಲ್ಲಿ ಕೊಡಸಳ್ಳಿ ಜಲಾಶಯ ನಿರ್ಮಾಣಕ್ಕೆಂದು ಜಮೀನು ಕಳೆದುಕೊಂಡ ಕೆಲವರು, ಕಳಚೆಯಲ್ಲಿ ಬದುಕು ಕಟ್ಟಿಕೊಂಡಿದ್ದರು. ಮೊದಲಿನ ಊರು ಬಿಟ್ಟು ಬಂದ ನೋವು ಮರೆತು ಹೊಸ ನೆಲೆಯಲ್ಲಿ ಜೀವನ ನಡೆಸುತ್ತಿದ್ದರು. ಆದರೆ, ಜುಲೈ 22 ಮತ್ತು 23ರಂದು ಕಳಚೆಯಲ್ಲಿ ಆದ ಭೂಕುಸಿತವು, ಅವರಲ್ಲಿ ಹಲವರನ್ನು ನಿರಾಶ್ರಿತರನ್ನಾಗಿ ಮಾಡಿದೆ.

ಶತಮಾನದಲ್ಲೇ ಘನಘೋರ ವಿಕೋಪ ಉಂಟಾಗಿದೆ. ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು. ಆಗ ಹೆಚ್ಚಿನ ಪರಿಹಾರ ಬರಲು ಸಾಧ್ಯವಿದೆ

ಪ್ರಮೋದ ಹೆಗಡೆ, ಉಪಾಧ್ಯಕ್ಷ ಆಡಳಿತ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ

ಊರಿನ ಮಧ್ಯೆ ಹರಿದಿರುವ ದೊಡ್ಡ ಹಳ್ಳ ಎಲ್ಲವನ್ನೂ ನಾಶ ಮಾಡಿದೆ. ಸರ್ಕಾರ ದೊಡ್ಡ ಮನಸ್ಸು ಮಾಡಿ, ಬದುಕು ಕಟ್ಟಲು ಜೊತೆಯಾಗಬೇಕು

ಗೋಪಾಲಕೃಷ್ಣ ನರಸಿಂಹ ಕೋಮಾರ್ ತಾರಗಾರ, ಬೀಗಾರ ನಿವಾಸಿ

'ವರ್ಕ್ ಫ್ರಂ ಹೋಂ' ಕಾರಣಕ್ಕಾಗಿ ಮನೆಯಲ್ಲಿದ್ದೆ. ಈಗ ನಮ್ಮ ಇಡೀ ಊರೇ ಕುಸಿದು ಬಿದ್ದಿದೆ. ಇಂಟರ್‌ನೆಟ್ ಇಲ್ಲದ ಕಾರಣ ಸಂಬಂಧಿಕರ ಮನೆ ಆಶ್ರಯಿಸಿದ್ದೇನೆ

ವಿಶ್ವೇಶ್ವರ, ಕಳಚೆ ನಿವಾಸಿ

'ಮೂರು ಅಂಶದ ಅಧ್ಯಯನ ಮುಖ್ಯ'

'ಸಾಮಾನ್ಯವಾಗಿ ಗುಡ್ಡಗಳು ಕುಸಿದಾಗ ಮೂರು ಅಂಶಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಭೂ ವೈಜ್ಞಾನಿಕ ಲಕ್ಷಣಗಳು, ಶಿಲಾ ಸಮೂಹದ ರಚನೆ ಮತ್ತು ಲಕ್ಷಣಗಳು ಹಾಗೂ ಆ ಪ್ರದೇಶದಲ್ಲಿ ಮಾನವ ನಿರ್ಮಿತ ಅಪರಾಧಗಳನ್ನು ನೋಡಬೇಕು' ಎನ್ನುತ್ತಾರೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿವೃತ್ತ ಹಿರಿಯ ವಿಜ್ಞಾನಿ ಡಾ.ಜಿ.ವಿ.ಹೆಗಡೆ.

'45 ಡಿಗ್ರಿಗಿಂತ ಹೆಚ್ಚು ಇಳಿಜಾರು ಇಲ್ಲದ ಪ್ರದೇಶದ ಕೆಳಭಾಗದಲ್ಲಿ ಬೆಟ್ಟವನ್ನು ವಿವಿಧ ಕಾರ್ಯಗಳಿಗೆ ಕತ್ತರಿಸುವುದು ಮಾನವ ನಿರ್ಮಿತ ಅಪರಾಧ ಎಂದೇ ಕರೆಯಬಹುದು. ಬೇಸಿಗೆಯಲ್ಲಿ ಅಲ್ಲಿ ಸಮಸ್ಯೆಯಾಗದು. ಆದರೆ, ಮಳೆಗಾಲದಲ್ಲಿ ಬಿದ್ದ ನೀರು, ಬೆಟ್ಟದಲ್ಲಿರುವ ಜೇಡಿ ಮಣ್ಣಿನ ಪದರದಿಂದ ಕೆಳಗೆ ಇಳಿಯುವುದಿಲ್ಲ. ಜೊತೆಗಿರುವ ಚಿರೆಕಲ್ಲಿನ ಮಾದರಿಯ ಮಣ್ಣು, ಬೇಸಿಗೆಯಲ್ಲಿ ಸಂಕುಚಿತವಾಗುತ್ತದೆ. ಮಳೆಗಾಲದಲ್ಲಿ ಹಿಗ್ಗುತ್ತದೆ. ಅದರ ಒತ್ತಡಕ್ಕೆ ಮಣ್ಣು ಕುಸಿಯುತ್ತದೆ' ಎನ್ನುತ್ತಾರೆ ಅವರು.

ಗುಂಡಣ್ಣ

25 ವರ್ಷಗಳ ಹಿಂದೆ ಗುರುವಾರ, 1-8-1996

● **ಡಾ.ರಾಜ್‌ಕುಮಾರ್‌ಗೆ ಪ್ರತಿಷ್ಠಿತ ಫಾಲ್ಕೆ ಪ್ರಶಸ್ತಿ**

ಬೆಂಗಳೂರು, ಜುಲೈ 31– ಕನ್ನಡ ಚಿತ್ರರಂಗದ ಮೇರು ನಟ ಡಾ. ರಾಜ್‌ಕುಮಾರ್ ಅವರನ್ನು 1995ರ 'ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

'ಫಾಲ್ಕೆ ಪ್ರಶಸ್ತಿಗೆ ಡಾ.ರಾಜ್‌ಕುಮಾರ್ ಅವರು ಆಯ್ಕೆಯಾಗಿದ್ದಾರೆ ಮತ್ತು ದೆಹಲಿಯಲ್ಲಿ ಆ. 6ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೇಂದ್ರ ವಾರ್ತಾ ಸಚಿವರು ತಮಗೆ ದೂರವಾಣಿ ಮುಖಾಂತರ ತಿಳಿಸಿದರು ಎಂದು ರಾಜ್‌ಕುಮಾರ್ ಅವರ ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಪ್ರಜಾವಾಣಿಗೆ ತಿಳಿಸಿದರು.

ಚಲನಚಿತ್ರೋದ್ಯಮದ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿದವರಿಗೆ ಕೇಂದ್ರ ಸರ್ಕಾರ 'ಭಾರತೀಯ ಚಲನಚಿತ್ರರಂಗದ ಪಿತಾಮಹ' ಫಾಲ್ಕೆ ಅವರ ಸ್ಮಾರಕವಾಗಿ ನೀಡುವ ರಾಷ್ಟ್ರಮಟ್ಟದ ಈ ಪ್ರಶಸ್ತಿ ಲಕ್ಷ ರೂಪಾಯಿ ನಗದು ಒಳಗೊಂಡಿದೆ.

50 ವರ್ಷಗಳ ಹಿಂದೆ ಭಾನುವಾರ, 1-8-1971

● **ಕಾಳಿಯೋಜನೆ ಎರಡನೇ ಘಟ್ಟಕ್ಕೆ ಕೇಂದ್ರದ ಅಸ್ತು**

ಬೆಂಗಳೂರು, ಜುಲೈ 31– ಸುಮಾರು 120 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಬೃಹತ್ ಕಾಳಿ ಜಲ ವಿದ್ಯುತ್ ಯೋಜನೆಯ ಎರಡನೇ ಘಟ್ಟಕ್ಕೆ ಕೇಂದ್ರ ಜಲ ಮತ್ತು ವಿದ್ಯುತ್ ಆಯೋಗವು ಮಂಜೂರಾತಿ ನೀಡಿದೆ ಎಂದು ರಾಜ್ಯ ವಿದ್ಯುತ್ ಕಾರ್ಪೊರೇಷನ್ ಅಧ್ಯಕ್ಷ ಎಂ. ಹಯಾತ್ ಅವರು ಇಂದು ಇಲ್ಲಿ ಪ್ರಕಟಿಸಿದರು.

● **ನವಂಬರ್‌ನಲ್ಲಿ ಚುನಾವಣೆಗೆ ಕೇಂದ್ರಕ್ಕೆ ಆಗ್ರಹ**

ಮೈಸೂರು, ಜುಲೈ 31– ರಾಜ್ಯ ವಿಧಾನ ಸಭೆ ಚುನಾವಣೆ ನವಂಬರ್ ಅವಧಿಯಲ್ಲೇ ನಡೆಯಬೇಕೆಂಬ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಇಂದು ಇಲ್ಲಿ ಸ್ಪಷ್ಟಪಡಿಸಿದ ಪ್ರದೇಶ ಆಡಳಿತ ಕಾಂಗ್ರೆಸ್ ಅಧ್ಯಕ್ಷ ದೇವರಾಜ ಅರಸು ಅವರು, ರಾಜ್ಯದ ಸಂಸತ್ ಸದಸ್ಯರೂ ಇದೇ ರೀತಿ ತಿಳಿಸಿದ್ದಾರೆಂದೂ, ಈ ವಿಷಯವನ್ನು ತಾವು ಕೇಂದ್ರಕ್ಕೆ ತಿಳಿಸಿರುವುದಾಗಿಯೂ ಹೇಳಿದರು.

ದಿನ ಭವಿಷ್ಯ

ಭಾನುವಾರ ಆಗಸ್ಟ್ 1, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ಅಷ್ಟಮಿ ಗಂ. 4-11 (ಬೆ. 7-53) ಭಾನುವಾರ ನಿತ್ಯ ನಕ್ಷತ್ರ ಭರಣಿ ಗಂ. 35-26 (ರಾ. 8-23) ಗಂಡ ನಾಮ ಯೋಗ ಗಂ. 43-42 ಕೌಲವ ಕರಣ ಗಂ. 4-11 ವಿಷಾಭಾವಃ ಅಮೃತ ಗಂ. 22-37 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-09 ಸೂರ್ಯಾಸ್ತ: 6-43 ಅದೃಷ್ಟ ಸಂಖ್ಯೆ 3

ಮೇಷ: ವಾಹನ ವಹಿವಾಟುದಾರರಿಗೆ ಉತ್ತಮ ಆದಾಯದ ನಿರೀಕ್ಷೆ. ಔದ್ಯೋಗಿಕ ವಿಷಯದಲ್ಲಿ ಅನುಕೂಲತೆಗಳು ಒದಗಿ ಬರುವವು. ಸಾಮಾಜಿಕ ಕಾರ್ಯಕರ್ತರಿಗೆ ಹೆಚ್ಚಿನ ಕಾರ್ಯಬಾಹುಳ್ಯ. ಹಬ್ಬದ ಸಡಗರದ ದಿನವಾಗಲಿದೆ.

ವೃಷಭ: ಕಲಾವಿದರಿಗೆ ಹೆಚ್ಚಿನ ಸ್ಥಾನಮಾನ ಲಭ್ಯವಾಗಲಿದೆ. ಕೃಷಿ ಕೆಲಸದಲ್ಲಿ ಹೆಚ್ಚಿನ ಲಾಭ. ಆಸ್ತಿ ಖರೀದಿಯ ಬಗ್ಗೆ ಚಿಂತನೆ. ದೈನಂದಿನ ಕೆಲಸಕಾರ್ಯಗಳಲ್ಲಿ ಧೈರ್ಯ ಮತ್ತು ವಿಶ್ವಾಸದ ಕೊರತೆ ಕಂಡುಬಂದೀತು.

ಮಿಥುನ: ಕರ್ತವ್ಯ ನಿರ್ವಹಣೆಯಲ್ಲಿ ಸ್ಪಷ್ಟ ನಿಲುವು ತಳೆಯುವುದರಿಂದ ಯಶಸ್ಸು. ಸಂಶೋಧನೆಗಳಲ್ಲಿ ತೊಡಗಿದವರಿಗೆ ಉತ್ತಮ ಪ್ರೋತ್ಸಾಹ ದೊರಕಲಿದೆ. ಬರವಣಿಗೆಯಿಂದಾಗಿ ಆದಾಯ. ವೈವಾಹಿಕ ವ್ಯವಹಾರಗಳಿಗೆ ಚಾಲನೆ.

ಕರ್ಕಾಟಕ: ಬಹುದಿನಗಳ ಕಾರ್ಯಬಾಹುಳ್ಯದಿಂದಾಗಿ ದೇಹಕ್ಕೆ ಆಯಾಸದ ಅನುಭವವಾಗಲಿದೆ. ಪ್ರೀತಿಪಾತ್ರರೊಂದಿಗೆ ಸಮಯ ಕಳೆಯಲಿದ್ದೀರಿ. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುವ ಅವಕಾಶ.

ಸಿಂಹ: ಹಿತೈಷಿಗಳ ಭೇಟಿ ಸಾಧ್ಯತೆ. ವ್ಯಾಪಾರದಲ್ಲಿ ಅಧಿಕ ಲಾಭವನ್ನು ಹೊಂದಲಿದ್ದೀರಿ. ಸ್ನೇಹಿತರು ಮತ್ತು ಕುಟುಂಬದ ಸದಸ್ಯರಿಂದ ನೆರವು ದೊರಕಲಿದೆ. ದೂರದ ಪ್ರಯಾಣದ ಸಾಧ್ಯತೆ ಕಂಡುಬರುತ್ತಿದೆ.

ಕನ್ಯಾ: ಉದ್ಯೋಗಾಕಾಂಕ್ಷಿಗಳಿಗೆ ಸದಾವಕಾಶ ಒದಗಿ ಬರಲಿದೆ. ವೈಯಕ್ತಿಕ ಸಮಸ್ಯೆಗಳು ಬಗೆಹರಿದು ಮನೋಲ್ಲಾಸ ಮೂಡಲಿದೆ. ದಾರ್ಶನಿಕ ಸಂತರ ಸಮಾಗಮದಿಂದ ಆಧ್ಯಾತ್ಮ ಜೀವನಕ್ಕೆ ಹೊಸ ಆಯಾಮ.

ತುಲಾ: ವೃತ್ತಿರಂಗದಲ್ಲಿ ಗುರಿ ಸಾಧನೆಗೆ ಹೊಸ ಹಾದಿಯೊಂದರಲ್ಲಿ ಕ್ರಮಿಸಲಿದ್ದೀರಿ. ಹತ್ತಿರದ ಬಂಧುಗಳಿಂದ ಕಾರ್ಯಾನುಕೂಲ. ಕಾರ್ಯಕ್ಷೇತ್ರದಲ್ಲಿ ಅನೇಕ ರೀತಿಯ ಸಂಪರ್ಕ, ಸ್ನೇಹ, ವಿಶ್ವಾಸಗಳು ಮುನ್ನಡೆಗೆ ನೆರವಾಗಲಿದೆ.

ವೃಶ್ಚಿಕ: ದೀರ್ಘಕಾಲ ಪ್ರಯಾಣ ಮಾಡುವ ಸಾಧ್ಯತೆ. ಆರಕ್ಷಕರು/ ರಕ್ಷಣಾ ಕಾರ್ಯದಲ್ಲಿ ನಿರತರಾದವರಿಗೆ ಬಿಡುವಿಲ್ಲದ ಕೆಲಸ. ವ್ಯಾಪಾರದಲ್ಲಿ ಹೆಚ್ಚಿನ ಲಾಭ. ಹಣ್ಣು, ಹೂವು, ತರಕಾರಿ ವ್ಯಾಪಾರದಲ್ಲಿ ಲಾಭ.

ಧನು: ಸಾಮಾಜಿಕ ಕಾರ್ಯಚಟುವಟಿಕೆಗಳು, ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವ ವಿಚಾರವಾಗಿ ಚರ್ಚೆ ನಡೆಸಲಿದ್ದೀರಿ. ಭೋಜನಕೂಟದಲ್ಲಿ ಭಾಗಿಯಾಗುವ ಸಾಧ್ಯತೆ. ಮಿತ್ರರಿಂದ ಉತ್ತಮ ಸಹಕಾರ.

ಮಕರ: ಉದ್ಯೋಗದಲ್ಲಿ ಮಹತ್ತರ ಬದಲಾವಣೆಯಾಗುವ ವಿಚಾರವಾಗಿ ಹಿರಿಯರೊಂದಿಗೆ ಚರ್ಚೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಉತ್ತಮ ದಿನವಾಗಿ ಕಂಡುಬರುತ್ತಿದೆ.

ಕುಂಭ: ಸನ್ಮಾರ್ಗದಲ್ಲಿ ಸಾಗುವುದರಿಂದ ಕುಟುಂಬದ ಬಾಧ್ಯತೆಗಳ ನಿರ್ವಹಣೆ ಸರಾಗ. ಅವಿವಾಹಿತರಿಗೆ ವಿಶೇಷ ರೀತಿಯಲ್ಲಿ ಸಂಬಂಧಗಳು ಕೂಡಿ ಬರಲಿವೆ. ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ಅವಕಾಶಗಳು ತೆರೆದುಕೊಳ್ಳಲಿವೆ.

ಮೀನ: ಕುಟುಂಬದ ಕ್ಲಿಷ್ಟ ಸಮಸ್ಯೆಗಳನ್ನು ಜಾಣ್ಮೆಯಿಂದ ಬಗೆಹರಿಸಿಕೊಳ್ಳುವುದರಿಂದ ಹಿರಿಯರ ಪ್ರಶಂಸೆಯನ್ನು ಹೊಂದಲಿದ್ದೀರಿ. ಅಧಿಕ ಧನಾಗಮನದಿಂದ ನೆಮ್ಮದಿ. ಹೂಡಿಕೆಗಳಲ್ಲಿ ಹಣ ವಿನಿಯೋಗ ಸಾಧ್ಯತೆ.

ನಿಮ್ಮ ಜನ್ಮದಿನ 1-ಆಗಸ್ಟ್ ಇಂದು ಅತ್ಯಂತ ಶುಭದಾಯಕ. ಮಕ್ಕಳ ಉನ್ನತ ಶಿಕ್ಷಣದ ಬಗೆಗಿನ ಆತಂಕದ ವಿಚಾರದಲ್ಲಿ ಮನೆಯಲ್ಲಿ ಮಾತುಕತೆ ನಡೆಸಲಿದ್ದೀರಿ. ಹೊಸ ಉದ್ಯಮ ಸ್ಥಾಪನೆ ಅಥವಾ ಆಸ್ತಿ ಖರೀದಿ ಮಾಡುವ ಸಾಧ್ಯತೆ. ಸಂಪಾದನೆ ಹೆಚ್ಚುವುದು. ನಿಮ್ಮ ಕಾರ್ಯದಕ್ಷತೆಯಿಂದಾಗಿ ಹೆಚ್ಚಿನ ಸ್ಥಾನಮಾನ ಪ್ರಾಪ್ತವಾಗುವುದು.

ಪದಬಂಧ 4675 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರಗೆಲಸವನ್ನು ಮಾಡುವವನು (3)
3.ಆನೆಯ ಮರಿಯಿದು (3)
5.ನಿಗದಿತ ಬೆಲೆಗಿಂತ ಹೆಚ್ಚು ಹಣ ಬಯಸುವವನು (5)
6.ಕಾಯಿಪಲ್ಲೆ ಅಥವಾ ಹಣ್ಣುಗಳ ಸಾರ (2)
8.ಬಯಕೆಯನ್ನು ಹೀಗೆ ವ್ಯಕ್ತಪಡಿಸಿ (2)
9.ಏಳು ದಿನಗಳ ಅವಧಿ (2)
10.ತಿರುಗಿದಾಗ ಕ್ರೀಡೆ ಕಾಣುತ್ತಿದೆಯಲ್ಲಾ? (2)
14.ಒಳ್ಳೆತನದ ಸೋಗಿನಲ್ಲಿ ಮೋಸ ಮಾಡುವವನು (5)
15.ಕಂಪನ ಹೀಗೆ ಉಂಟಾಗಿದೆ (3)
16.ರೀತಿಯೊಡನೆ ಬರುವ ಪದ್ಧತಿ (3)

ಮೇಲಿಂದ ಕೆಳಕ್ಕೆ

1.ಒತ್ತಾಯವನ್ನು ಹೀಗೆನ್ನಿ (4)
2.ಮೆದುಗಾರೆ ಇಲ್ಲಿದೆ (3)
3.ಈತ ತಿಳಿಗೇಡಿ (3)
4.ಆಶ್ವಾಸನೆ ಈ ವರಸೆಯಲ್ಲಿ ಬಂದಿದೆಯಲ್ಲಾ? (4)
7.ತೆಳ್ಳಗಿನದು ಇದು (3)
8.ಗಟ್ಟಿಯಾದ ಕೂಗು (3)
9.ತಾಯಿಯ ಮನೆ ಕಿಟಕಿ (4)
11.ಅಕ್ಕಪಕ್ಕ ಎಂದು ಹೀಗೆ ಹೇಳಿ (4)
12.ನಾಯಿ ಇಲ್ಲಿದೆ (3)
13.ಕರಿಯ ಮಾರಾಟ! (3)



4674ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಿಡಿಗೇಡಿ 5.ಜಾಯಮಾನ 6.ಕುರಾಪತ 8.ಪರಿಮಳ 12.ವನಸುಮ 14.ನಿರಾಯುಧ 15.ಅಂತರ್ಧಾನ 16.ಮನೋಹರ

ಮೇಲಿಂದ ಕೆಳಕ್ಕೆ: 1.ಅಜಾನುಬಾಹು 2.ಸಮಾರೋಪ 3.ಕಿರುಕುಳ 4.ಡಿಕ್ಕತ 7.ಪನ್ನ 9.ಮದನ 10.ಕಯನಾನಜ 11.ಜಿರಾ 12.ವಧಕಾರ 13.ಮನೆತನ 14.ನಿಯಮ

ಸುಡೊಕು 5061

			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5060 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಡಿ ಸಂಘರ್ಷ: ಅಸ್ಸಾಂ, ಮಿಜೋರಾಂ ನಡುವೆ ಸಮನ್ಸ್ ಮೇಲಾಟ

ಅಸ್ಸಾಂ ಮುಖ್ಯಮಂತ್ರಿ ವಿರುದ್ಧ ಪ್ರಕರಣ

ಐಜ್ವಾಲ್ (ಪಿಟಿಐ): ಗಡಿ ವಿಚಾರವಾಗಿ ಮಿಜೋರಾಂನ ಕೊಲಾಸಿಬ್ ಜಿಲ್ಲೆಯ ವೈರೆಂಗತೆ ಪಟ್ಟಣದ ಹೊರವಲಯದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ, ಅಸ್ಸಾಂ ಮತ್ತು ಮಿಜೋರಾಂ ನಡುವೆ ಸಮನ್ಸ್ ಮೇಲಾಟ ಶುರುವಾಗಿದ್ದು, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹಾಗೂ ರಾಜ್ಯದ ಆರು ಅಧಿಕಾರಿಗಳ ವಿರುದ್ಧ ಮಿಜೋರಾಂ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ನಡುವೆ, ಮಿಜೋರಾಂನ ಆರು ಅಧಿಕಾರಿಗಳಿಗೆ ಸಮನ್ಸ್ ನೀಡಿರುವ ಅಸ್ಸಾಂ, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಕೊಲೆ ಯತ್ನ ಮತ್ತು ಕ್ರಿಮಿನಲ್ ಪಿತೂರಿ ಸೇರಿದಂತೆ ವಿವಿಧ ಆರೋಪಗಳ ಅಡಿಯಲ್ಲಿ ಅಸ್ಸಾಂ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಮಿಜೋರಾಂ ಐಜಿಪಿ ಜಾನ್ ನೀಹ್ಲಾಯಾ ತಿಳಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, 'ಪ್ರಕರಣ ದಾಖಲಿಸಿದ್ದಕ್ಕೆ ಸಂತೋಷ. ಆದರೆ ತನಿಖೆಯನ್ನು ಸ್ವತಂತ್ರ ಸಂಸ್ಥೆಯಿಂದ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

ಇತ್ತೀಚಿನ ಗಡಿ ಸಂಘರ್ಷದ ಕುರಿತು ತಮ್ಮ ಹಾಗೂ ಆರು ಮಂದಿ ಸರ್ಕಾರಿ ಅಧಿಕಾರಿಗಳ ವಿರುದ್ಧ ಎಫ್ಐಆರ್ ದಾಖಲಿಸಿರುವ ಹಿಂದಿನ ತರ್ಕವೇನು ಎಂದು ಬಿಸ್ವಾ ಪ್ರಶ್ನೆ ಮಾಡಿದ್ದಾರೆ.

ಅಸ್ಸಾಂ ಐಜಿಪಿ ಅನುರಾಗ್ ಅಗರ್‌ವಾಲ್, ಡಿಐಜಿ ದೇವೋಜ್ಯೋತಿ ಮುಖರ್ಜಿ, ಕ್ಯಾಚಾರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾಹಂದ್ರಕಾಂತ್ ನಿಂಬಾಳ್ಕರ್ ಮತ್ತು ಧೋಲ್ಯೆ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಸಹಬ್ ಉದ್ದೀನ್ ಹೆಸರು ಎಫ್ಐಆರ್‌ನಲ್ಲಿದೆ. ಜತೆಗೆ ಜಿಲ್ಲಾಧಿಕಾರಿ ಕೀರ್ತಿ ಜಲ್ಲಿ ಮತ್ತು ವಿಭಾಗೀಯ ಅರಣ್ಯಾಧಿಕಾರಿ ಸನ್ನಿದೇವ್ ಚೌಧರಿ ಅವರ ಮೇಲೂ ಆರೋಪ ಹೊರಿಸಲಾಗಿದೆ. ಅಸ್ಸಾಂ ಪೊಲೀಸ್ ಇಲಾಖೆ 200 ಸಿಬ್ಬಂದಿ ವಿರುದ್ಧವೂ ಎಫ್ಐಆರ್ ದಾಖಲಾಗಿದೆ.

> **ಕೊಲಾಸಿಬ್ ಜಿಲ್ಲೆಯ ಮಿಜೋರಾಂ ನಿವಾಸಿಗಳಲ್ಲದ ಯಾರಿಗೂ ಯಾವುದೇ ನಿರ್ಬಂಧಗಳಿಲ್ಲ. ಈಶಾನ್ಯ ಭಾಗ ಯಾವಾಗಲೂ ಒಂದೇ**
> **ಝೋರಮತಾಂಗ್,**
> ಮಿಜೋರಾಂ ಮುಖ್ಯಮಂತ್ರಿ

ಅಸ್ಸಾಂ ಸರ್ಕಾರವು, ಮಿಜೋರಾಂನ ಆರು ಅಧಿಕಾರಿಗೆ ಸಮನ್ಸ್ ನೀಡಿದ್ದು, ವಿಚಾರಣೆಗೆ ಕರೆದಿದೆ. ಕೊಲಾಸಿಬ್ ಜಿಲ್ಲೆಯ ಉಪ ಆಯುಕ್ತ ಎಚ್ ಲಾಲ್‌ತಂಗ್ಲಿಯಾನಾ, ಪೊಲೀಸ್ ವರಿಷ್ಠಾಧಿಕಾರಿ ವನ್ಲಾಲ್‌ಫಕ ರಾಲ್ಟೆ ಮೊದಲಾದವರಿಗೆ ಆಗಸ್ಟ್ 2ರಂದು ಧೋಲ್ಯೆ ಪೊಲೀಸ್ ಠಾಣೆಯಲ್ಲಿ ಹಾಜರಾಗುವಂತೆ ಆದೇಶಿಸಿದೆ.

ಗಡಿಯ ಘರ್ಷಣಾ ಸ್ಥಳದಲ್ಲಿ ಪರಿಸ್ಥಿತಿ ಶಾಂತಿಯುತವಾಗಿದ್ದರೂ, ಬೂದಿ ಮುಚ್ಚಿದ ಕೆಂಡದಂತಿದೆ. ಹೆಚ್ಚಿನ ಸಂಖ್ಯೆಯ ಸಿಆರ್‌ಪಿಎಫ್ ಪಡೆ ಸಿಬ್ಬಂದಿ ಎರಡೂ ರಾಜ್ಯಗಳ ನಡುವಿನ ರಾಷ್ಟ್ರೀಯ ಹೆದ್ದಾರಿ 306ರಲ್ಲಿ ಗಸ್ತು ತಿರುಗುತ್ತಿದ್ದಾರೆ.

ಮಿಜೋರಾಂ ರಾಜ್ಯಪಾಲರಿಂದ ರಾಷ್ಟ್ರಪತಿ ಭೇಟಿ (ನವದೆಹಲಿ): ಮಿಜೋರಾಂ ರಾಜ್ಯಪಾಲ ಡಾ. ಹರಿಬಾಬು ಕಂಭಂಪತಿ ಅವರು ಶನಿವಾರ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಭೇಟಿ ಮಾಡಿದ್ದು, ಅಸ್ಸಾಂ ಹಾಗೂ ಮಿಜೋರಾಂ ಗಡಿ ಸಂಘರ್ಷದ ಹಿನ್ನೆಲೆಯಲ್ಲಿ ಈ ಸಭೆಯು ಮಹತ್ವ ಪಡೆದುಕೊಂಡಿದೆ.

ಕಳೆದ ಸೋಮವಾರ ಅಸ್ಸಾಂ ಅಧಿಕಾರಿಗಳ ತಂಡದ ಮೇಲೆ ಮಿಜೋರಾಂ ಪೊಲೀಸರು ಗುಂಡಿನ ದಾಳಿ ನಡೆಸಿದ್ದರು. ಐವರು ಅಸ್ಸಾಂ ಪೊಲೀಸ್ ಸಿಬ್ಬಂದಿ ಮತ್ತು ಒಬ್ಬ ನಾಗರಿಕ ಮೃತಪಟ್ಟಿದ್ದರು. ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ 50 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಸಂಪುಟ ವಿಸ್ತರಣೆ ಮತ್ತು ಮಹಿಳಾ ಪ್ರಾತಿನಿಧ್ಯ
ಸಂವಾದದಲ್ಲಿ ಭಾಗವಹಿಸುವವರು
ಆರ್. ಪ್ರಮೀಳಾ ನಾಯ್ಡು, ಅಧ್ಯಕ್ಷೆ, ಕರ್ನಾಟಕ ರಾಜ್ಯ ಮಹಿಳಾ ಆಯೋಗ
ಆರ್.ಮಂಜುಳಾ ನಾಯ್ಡು, ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ
ಜ್ಯೋತಿ ಅನಂತಸುಬ್ಬರಾವ್, ಸಿಪಿಐ ರಾಜ್ಯ ಸಮಿತಿ ಸದಸ್ಯೆ
ಸಿ.ಜಿ. ಮಂಜುಳಾ, ಹಿರಿಯ ಪತ್ರಕರ್ತೆ, ಲೇಖಕಿ
ಸೋಮವಾರ, 2-8-2021 ಸಮಯ- ಬೆಳಿಗ್ಗೆ 11ರಿಂದ 12

ಪುಲ್ವಾಮಾ ಆತ್ಮಾಹುತಿ ದಾಳಿಕೋರನಿಗೆ ತರಬೇತಿ ನೀಡಿದ್ದ

ಎನ್‌ಕೌಂಟರ್‌ಗೆ ಉಗ್ರ ಬಲಿ

ಪುಲ್ವಾಮಾ (ಪಿಟಿಐ): ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಅವಂತಿಪೋರಾದಲ್ಲಿ ಶನಿವಾರ ನಡೆದ ಎನ್‌ಕೌಂಟರ್‌ನಲ್ಲಿ ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಸೋದರಳಿಯ ಮೊಹಮ್ಮದ್ ಇಸ್ಮಾಯಿಲ್ ಅಲಿಯಾಸ್ ಲಂಬೂ ಸೇರಿದಂತೆ ಇಬ್ಬರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ.

ಉಗ್ರರು ಇರುವ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಶನಿವಾರ ಬೆಳಗ್ಗೆ ನಮೀಬಿಯಾನ್, ಮಾರ್ಸರ್ ಅರಣ್ಯ ಪ್ರದೇಶ ಮತ್ತು ದಾಚಿಗಾಂನಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಿದ್ದವು. ಈ ವೇಳೆ ಉಗ್ರರು ಗುಂಡಿನ ದಾಳಿ ಮಾಡಿದರು. ಹೀಗಾಗಿ ಕಾರ್ಯಾಚರಣೆಯು ಎನ್‌ಕೌಂಟರ್‌ನಲ್ಲಿ ಮುಕ್ತಾಯವಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಕೌಂಟರ್‌ನಲ್ಲಿ ಮೃತಪಟ್ಟಿರುವ ಇಬ್ಬರು ಉಗ್ರರ ಪೈಕಿ ಒಬ್ಬನನ್ನು ಮೊಹಮ್ಮದ್ ಇಸ್ಮಾಯಿಲ್ ಅಲ್ವಿ ಅಲಿಯಾಸ್ ಅದ್ನಾನ್ ಅಲಿಯಾಸ್ ಲಂಬೂ ಎಂದು ಗುರುತಿಸಲಾಗಿದೆ. ಆತ ಐಇಡಿ ಸ್ಫೋಟಕಗಳ ವಿಚಾರದಲ್ಲಿ ಪರಿಣಿತನಾಗಿದ್ದ. 2019 ರಲ್ಲಿ 40 ಸಿಆರ್‌ಪಿಎಫ್ ಸಿಬ್ಬಂದಿಯ ಜೀವ ಬಲಿ ಪಡೆದಿದ್ದ ಪುಲ್ವಾಮಾ ದಾಳಿಯ ಹಿಂದೆ ಈತನದ್ದೂ ಕೈವಾಡ ಇತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಲಂಬೂ ಮಸೂದ್ ಜೆಇಎಂನ ಮುಖ್ಯಸ್ಥ ಅಜರ್ ಕುಟುಂಬದವನಾಗಿದ್ದಾನೆ. ಪುಲ್ವಾಮಾ ದಾಳಿಯ ಸಂಚು ಮತ್ತು ಯೋಜನೆಯಲ್ಲಿ ಈತ ಭಾಗಿಯಾಗಿದ್ದ. ಪುಲ್ವಾಮ ದಾಳಿಗೆ ಸಂಬಂಧಿಸಿದ ಎನ್‌ಐಎ ಚಾರ್ಜ್‌ಶೀಟ್‌ನಲ್ಲಿ ಆತನ ಹೆಸರಿತ್ತು' ಎಂದು ಕಾಶ್ಮೀರ ಪೊಲೀಸರು ಟ್ವೀಟ್ ಮಾಡಿದ್ದಾರೆ.

ನಾಡ ದೋಣಿ ಮೀನುಗಾರಿಕೆಯಲ್ಲಿ ಸಿಕ್ಕಿದ ಮೀನುಗಳನ್ನು ಮಂಗಳೂರಿನ ದಕ್ಕೆಯಲ್ಲಿ ಮಹಿಳೆಯರು ಶನಿವಾರ ವಿಂಗಡಿಸಿದರು
–ಪ್ರಜಾವಾಣಿ ಚಿತ್ರ / ಇರ್ಷಾದ್ ಮಹಮ್ಮದ್

ವಿಮಾನ ತುರ್ತು ಭೂಸ್ಪರ್ಶ

ತಿರುವನಂತಪುರ (ಪಿಟಿಐ): ಸೌದಿ ಅರೇಬಿಯಾಕ್ಕೆ ತೆರಳುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವು ಶನಿವಾರ ತಿರುವನಂತಪುರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. 'ತಿರುವನಂತಪುರದಿಂದ ಶನಿವಾರ ಬೆಳಿಗ್ಗೆ 7.52ಕ್ಕೆ ಟೇಕ್ ಆಫ್ ಆಗಿತ್ತು. ಆದರೆ, ಕಿಟಕಿಯೊಂದರಲ್ಲಿ ಬಿರುಕು ಪತ್ತೆಯಾದ್ದರಿಂದ, ಇದೇ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

₹ 11,400 ಕೋಟಿ ಜಿಎಸ್‌ಟಿ ಬಾಕಿ: ಬಿಡುಗಡೆ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಕ್ಕೆ ಬರಬೇಕಿರುವ ಕಳೆದ ವರ್ಷದ ಜಿಎಸ್‌ಟಿ ಬಾಕಿ ಮೊತ್ತವಾದ ₹ 11,400 ಕೋಟಿ ಬಿಡುಗಡೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಶನಿವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈ ಕುರಿತು ಮನವಿ ಸಲ್ಲಿಸಿರುವುದಾಗಿ ಹೇಳಿದರು.

ಮಾಸಿಕ ಕಂತಿನ ರೂಪದಲ್ಲಿ ಜಿಎಸ್‌ಟಿ ಬಾಕಿ ಹಣ ಬಿಡುಗಡೆ ಮಾಡುವ ಭರವಸೆಯನ್ನು ಸಚಿವರು ನೀಡಿದ್ದಾರೆ. ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವಂತೆಯೂ ಇದೇ ವೇಳೆ ಕೋರಲಾಗಿದೆ ಎಂದು ಅವರು ತಿಳಿಸಿದರು.

ಕೃಷಿ ಕ್ಷೇತ್ರದ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ನಬಾರ್ಡ್ ಮೂಲಕ ನೆರವು ನೀಡುವಂತೆಯೂ ಮನವಿ ಮಾಡಲಾಗಿದೆ. ರಾಜ್ಯದ ಎಲ್ಲ ಬೇಡಿಕೆಗಳನ್ನೂ ಈಡೇರಿಸುವುದಾಗಿ ಸಚಿವರು ತಿಳಿಸಿದ್ದಾರೆ ಎಂದು ಅವರು ಹೇಳಿದರು.

ಎನ್‌ಎಂಡಿಸಿಗೆ ಎಂಟು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕಂಪನಿಗಳ ಆಡಳಿತಕ್ಕೆ ಸಂಬಂಧಿಸಿದಂತೆ ಎನ್‌ಎಂಡಿಸಿ ಲಿಮಿಟೆಡ್ ಎಂಟು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

ಸುಮಿತ್ ದೇಬ್

ವರ್ಚುವಲ್ ವೇದಿಕೆಯ ಮೂಲಕ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ನೀಡಲಾಯಿತು. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಕೊಡುಗೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯ ಸೃಷ್ಟಿಸುವಲ್ಲಿ ಅವುಗಳ ಸಾಮರ್ಥ್ಯವನ್ನು ಪರಿಗಣಿಸಿ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

ನಾಯಕತ್ವದ ವಿಭಾಗದಲ್ಲಿ ಎನ್‌ಎಂಡಿಸಿ ಸಿಎಂಡಿ ಸುಮಿತ್ ದೇಬ್ ಅವರು 2021ರ ಸಿಎಂಡಿ ಲೀಡರ್‌ಶಿಪ್ ಅವಾರ್ಡ್‌ಗೆ ಭಾಜನರಾಗಿದ್ದಾರೆ.

ಎನ್‌ಟಿಪಿಸಿ ಲಾಭ ಶೇ 17ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 3,444 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೆ ಅವಧಿಗೆ ಕಂಪನಿಯ ನಿವ್ವಳ ಲಾಭ ₹ 2,949 ಕೋಟಿ ಇತ್ತು ಎಂದು ಮುಂಬೈ ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯ ಒಟ್ಟಾರೆ ವರಮಾನವು ₹ 26,794 ಕೋಟಿಗಳಿಂದ ₹ 30,390 ಕೋಟಿಗಳಿಗೆ ಏರಿಕೆ ಆಗಿದೆ.

ಬಿಎಸ್‌ವೈ ವಿರುದ್ಧ ದೂರು: ಪಿಐಎಲ್ ಪರಿಗಣಿಸಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ದೂರು ರದ್ದುಗೊಳಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಂ ಸಲ್ಲಿಸಿದ್ದ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿಗಣಿಸಲು ಹೈಕೋರ್ಟ್ ನಿರಾಕರಿಸಿದೆ.

ಶಾಸಕ ಬಿ.ಎಸ್. ಯಡಿಯೂರಪ್ಪ, ಅವರ ಮಗ ವಿಜಯೇಂದ್ರ ಮತ್ತು ಇತರರ ವಿರುದ್ಧದ ಭ್ರಷ್ಟಾಚಾರ ಆರೋಪದ ಕುರಿತು ತನಿಖೆ ನಡೆಸಲು ಎಸ್‌ಐಟಿ ನೇಮಿಸಬೇಕು ಅಥವಾ ಸಿಬಿಐ ತನಿಖೆಗೆ ವಹಿಸಬೇಕು ಎಂದು ಅರ್ಜಿಯಲ್ಲಿ ಟಿ.ಜೆ. ಅಬ್ರಹಂ ಕೋರಿದ್ದಾರೆ.

ಭ್ರಷ್ಟಾಚಾರ ನಿಗ್ರಹ ದಳಕ್ಕೆ(ಎಸಿಬಿ) ಸಲ್ಲಿಸಿದ್ದ ದೂರು ಆಧರಿಸಿ ಕ್ರಮ ಕೈಗೊಂಡಿಲ್ಲ ಎಂದು ನ್ಯಾಯಾಲಯಕ್ಕೆ ಅಬ್ರಹಾಂ ಅರ್ಜಿ ಸಲ್ಲಿಸಿದ್ದರು. ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಲಿಲ್ಲ ಎಂಬ ಕಾರಣಕ್ಕೆ ಖಾಸಗಿ ದೂರನ್ನೂ ನ್ಯಾಯಾಲಯ ವಜಾಗೊಳಿತ್ತು.

'ಅರ್ಜಿದಾರರು ಕೋರಿರುವಂತೆ ಯಾವುದೇ ತನಿಖೆಗೆ ವಹಿಸಲು ಮೊದಲನೆಯದಾಗಿ ಎಫ್‌ಐಆರ್ ಕೂಡ ದಾಖಲಾಗಿಲ್ಲ. ರಿಟ್ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದು ಪರಿಗಣಿಸಲು ಆಗುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

ಚೀನಾ: ತಗ್ಗಿದ ತಯಾರಿಕಾ ಚಟುವಟಿಕೆ

ಬೀಜಿಂಗ್ (ಪಿಟಿಐ): ಚೀನಾದ ತಯಾರಿಕಾ ಚಟುವಟಿಕೆಯು ಜುಲೈನಲ್ಲಿ ಇಳಿಕೆ ಕಂಡಿದೆ ಎಂದು ರಾಷ್ಟ್ರೀಯ ಅಂಕಿ–ಅಂಶಗಳ ಇಲಾಖೆಯು ಶನಿವಾರ ತಿಳಿಸಿದೆ.

ಬೇಡಿಕೆಯಲ್ಲಿ ಇಳಿಕೆ, ತಗ್ಗಿದ ರಫ್ತು ವಹಿವಾಟು ಹಾಗೂ ಪ್ರತಿಕೂಲ ಹವಾಮಾನದ ಕಾರಣಗಳಿಂದಾಗಿ ಚಟುವಟಿಕೆಯಲ್ಲಿ ಇಳಿಕೆ ಕಂಡುಬಂದಿದೆ.

ತಯಾರಿಕಾ ಚಟುವಟಿಕೆಯನ್ನು ಸೂಚಿಸುವ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಜೂನ್‌ನಲ್ಲಿ 50.9 ರಷ್ಟು ಇದ್ದಿದ್ದು, ಜುಲೈನಲ್ಲಿ 50.4ಕ್ಕೆ ಇಳಿಕೆ ಕಂಡಿದೆ. 2020ರ ಫೆಬ್ರುವರಿ ನಂತರದ ಅತ್ಯಂತ ಕನಿಷ್ಠ ಮಟ್ಟದ ಬೆಳವಣಿಗೆ ಇದಾಗಿದೆ. ಪಿಎಂಐ 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎನ್ನಲಾಗುತ್ತದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1400 (1400)
ಸೂರ್ಯಕಾಂತಿ (ರಿಫೈನ್ಡ್)	₹1480(1480)
ಪಾಮೋಲಿನ್	₹1272 (1278)

ಮುಂಬೈ ಧಾರಣೆ

ಶೇಂಗಾ

31-7-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	1390 (1380)
ಪಾಮ್ ವಾರದ ಡೆಲಿವರಿ	1270 (1276)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 48,000 (48,200)
ಬೆಳ್ಳಿ ಕೆ.ಜಿ 68,000 (68,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-48500
ಪುತ್ತೂರು	
ಕೋಕ	10500-26000
ಹೊಸತು	31000-45000
ಬೆಳ್ತಂಗಡಿ	
ಕೋಕ	21500-26000
ಹೊಸಚಾಲಿ	22500-45000
ಹಳೆಚಾಲಿ	41470-52000
ಚಿತ್ರದುರ್ಗ	
ಆಪಿ	42000-42400
ಬೆಟ್ಟೆ	35639-36069
ಕೆಂಪುಗೋಟು	29719-30179
ರಾಶಿ	41529-41959
ಸಿದ್ದಾಪುರ	
ಬಿಳಿಗೋಟು	31199-35089
ಚಾಲಿ	36399-40919
ಕೋಕ	26699-31612
ರಾಶಿ	41099-41099
ಶಿರಸಿ	
ಬೆಟ್ಟೆ	31000-38309
ಬಿಳಿಗೋಟು	22109-37388
ಚಾಲಿ	37399-41551
ರಾಶಿ	38289-41639
ರಾಮನಗರ ರೇಷ್ಮೆ	
ಮಿಶ್ರತಳಿ	231-459
ದ್ವಿತಳಿ	259-525

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	12300	12200	196.5ಸೆಂಟ್ಸ್
ಎಸಿ	5830	4800	4850	
ಆರ್‌ಪಿ	6000	5800	6000	ಲಂಡನ್
ಆರ್‌ಸಿ	3350	3400	3425	1885 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಗೂಢಚರ್ಯೆ ತಂತ್ರಜ್ಞಾನ : ನಿರ್ಬಂಧ

ವಾಷಿಂಗ್ಟನ್ (ಪಿಟಿಐ): ತನ್ನ ಗೂಢಚರ್ಯೆ ತಂತ್ರಜ್ಞಾನವನ್ನು ಬಳಸದಂತೆ ಇಸ್ರೇಲಿ ಸೈಬರ್ ಸೆಕ್ಯುರಿಟಿ ಕಂಪನಿ ಎನ್‌ಎಸ್‌ಒ ಕೆಲವು ರಾಷ್ಟ್ರಗಳಿಗೆ ನಿರ್ಬಂಧ ವಿಧಿಸಿದೆ

ಭಾರತ ಸೇರಿದಂತೆ ಹಲವು ದೇಶಗಳ ಪತ್ರಕರ್ತರು, ಮಾನವ ಹಕ್ಕುಗಳ ರಕ್ಷಕರು, ರಾಜಕಾರಣಿಗಳು ಮತ್ತು ಇತರರ ಮೇಲೆ ಕಣ್ಗಾವಲಿಡಲು ಪೆಗಾಸಸ್ ಗೂಢಚರ್ಯೆ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ ಎಂದು ಇತ್ತೀಚೆಗೆ ಅಂತರರಾಷ್ಟ್ರೀಯ ಮಾಧ್ಯಮ ಒಕ್ಕೂಟವೊಂದು ವರದಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಪೆಗಾಸಸ್ ತನಿಖೆ ಆರಂಭಿಸುತ್ತಿರುವುದರಿಂದ, ಗೂಢಚರ್ಯೆ ತಂತ್ರಜ್ಞಾನ ಬಳಕೆಗೆ ತಾತ್ಕಾಲಿಕ ನಿರ್ಬಂಧ ವಿಧಿಸಿದೆ.

ಜೆಡಿಯು ಅಧ್ಯಕ್ಷರಾಗಿ ಲಾಲನ್ ಸಿಂಗ್ ಆಯ್ಕೆ

ನವದೆಹಲಿ (ಪಿಟಿಐ): ಲಾಲನ್ ಸಿಂಗ್ ಎಂದೇ ಹೆಸರಾದ ಜೆಡಿಯು ಸಂಸದ ರಾಜೀವ್ ರಂಜನ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಶನಿವಾರ ಆಯ್ಕೆಯಾದರು. ರಾಷ್ಟ್ರೀಯ ಕಾರ್ಯಕಾರಣಿ ಸಭೆಯಲ್ಲಿ ಈ ಆಯ್ಕೆ ನಡೆಯಿತು. ಈಚೆಗೆ ಕೇಂದ್ರ ಸಚಿವ ಸಂಪುಟ ಸೇರಿದ ಆರ್.ಸಿ.ಪಿ.ಸಿಂಗ್ ಅವರ ಸ್ಥಾನದಲ್ಲಿ ಲಾಲನ್ ಸಿಂಗ್ ಅಧಿಕಾರ ವಹಿಸಿಕೊಳ್ಳುವರು.

ಭಾರತ–ಬಾಂಗ್ಲಾ: ಇಂದಿನಿಂದ ರೈಲಿನಲ್ಲಿ ಸರಕು ಸಾಗಣೆ

ಕೋಲ್ಕತ್ತ: ಭಾರತ ಮತ್ತು ಬಾಂಗ್ಲಾದೇಶದ ನಡುವೆ ಸರಕು ಸಾಗಣೆ ರೈಲ್ವೆ ಸಂಚಾರ ಸೇವೆಯು ಹಲ್ದಿಬಾರಿ–ಚಿಲಾಹಟಿ ಮಾರ್ಗದಲ್ಲಿ ಭಾನುವಾರ ಆರಂಭವಾಗಲಿದೆ. 1965ರಿಂದ ಈ ಸೇವೆಯು ಸ್ಥಗಿತವಾಗಿತ್ತು.

ಈ ರೈಲು ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಕಳೆದ ವರ್ಷ ಡಿಸೆಂಬರ್ 17ರಂದು ಉದ್ಘಾಟಿಸಿದ್ದರು. ಜಲ್ಲಿಕಲ್ಲುಗಳನ್ನು ಹೊತ್ತ ರೈಲು ಪಶ್ಚಿಮ ಬಂಗಾಳದ ಚಿಲಾಹಟಿಯಿಂದ ಬಾಂಗ್ಲಾದೇಶದ ನಿಲ್‌ಫಮಾರಿ ಜಿಲ್ಲೆಗೆ ತೆರಳಲಿದೆ ಎಂದು ನಾರ್ಥ್‌ಈಸ್ಟ್ ಫ್ರಂಟಿಯರ್ ರೈಲ್ವೆಯ ವಕ್ತಾರರು ತಿಳಿಸಿದರು.

ವಸತಿ ಮಾರಾಟ ತಗ್ಗಿಸಿದ ಕೋವಿಡ್ ಎರಡನೇ ಅಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯಿಂದಾಗಿ ದೇಶದಲ್ಲಿ ವಸತಿ ಮಾರಾಟವು 2021ರ ಎರಡನೇ ತ್ರೈಮಾಸಿಕದಲ್ಲಿ ಶೇ 58ರಷ್ಟು ಇಳಿಕೆ ಕಂಡಿದೆ ಎಂದು ಪ್ರಾಪ್‌ಈಕ್ವಿಟಿ ಸಂಸ್ಥೆ ಹೇಳಿದೆ.

ಪ್ರಮುಖ ನಗರಗಳಲ್ಲಿ ಕಠಿಣ ಸ್ವರೂಪದ ಲಾಕ್‌ಡೌನ್ ಮತ್ತು ಗೃಹ ಸಾಲ ವಿತರಣೆಯ ಮಂದಗತಿಯಲ್ಲಿ ಇದ್ದ ಕಾರಣಕ್ಕಾಗಿ ವಸತಿ ಮಾರಾಟದ ಮೇಲೆ ಪರಿಣಾಮ ಉಂಟಾಗಿದೆ ಎಂದು ತನ್ನ ವರದಿಯಲ್ಲಿ ತಿಳಿಸಿದೆ.

ಬೆಂಗಳೂರು, ಚೆನ್ನೈ, ಹೈದರಾಬಾದ್, ಕೋಲ್ಕತ್ತ, ಮುಂಬೈ ಮಹಾನಗರ ಪಾಲಿಕೆ, ಎನ್‌ಸಿಆರ್ ಮತ್ತು ಪುಣೆ ನಗರಗಳಲ್ಲಿ ವಸತಿ ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ ಎಂದು ಮಾಹಿತಿ ನೀಡಿದೆ.

ಅದೇ ರೀತಿ ಹೊಸ ಯೋಜನೆಗಳ ಬಿಡುಗಡೆಯಲ್ಲಿಯೂ ಶೇ 54ರಷ್ಟು ಕಡಿಮೆ ಆಗಿದೆ ಎಂದು ತಿಳಿಸಿದೆ.

ಕೋವಿಡ್‌ನ ಮೊದಲ ಅಲೆಯಿಂದ ಹೊರಬಂದು ನಿಧಾನವಾಗಿ ಚೇತರಿಕೆ ಕಾಣುತ್ತಿದ್ದ ರಿಯಲ್ ಎಸ್ಟೇಟ್ ವಲಯಕ್ಕೆ ಎರಡನೇ ಅಲೆಯಿಂದ ಹೆಚ್ಚು ಹಾನಿ ಆಗಿದೆ. ಹಬ್ಬದ ಸಂದರ್ಭಗಳಲ್ಲಿ ಗ್ರಾಹಕರನ್ನು ಆಕರ್ಷಿಸಲು ವಿನಾಯಿತಿ, ವಿಶೇಷ ಪಾವತಿ ಕೊಡುಗೆಗಳು ಸೇರಿದಂತೆ ಇನ್ನೂ ಯೋಜನೆಗಳನ್ನು ನೀಡುವ ಅಗತ್ಯವಿದೆ ಎಂದು ಪ್ರಾಪ್‌ಈಕ್ವಿಟಿಯ ಸ್ಥಾಪಕ ಸಮೀರ್ ಜಸುಜಾ ಹೇಳಿದ್ದಾರೆ.

ಪ್ರಜಾವಾಣಿ ಕನ್ನಡ ಧ್ವನಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ
'ಹರಟೆ ಕಟ್ಟೆ'
ರಾಜ್ಯದಲ್ಲಿ ಹುಲಿ ಸಂರಕ್ಷಣೆ ಏನು, ಎತ್ತ?
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ವಿ.ಏಡುಕುಂಡಲು, ಡಿಸಿಎಫ್, ಮಲೆ ಮಹದೇಶ್ವರ ವನ್ಯಧಾಮ
ಸಂಜಯ್ ಗುಬ್ಬಿ, ವನ್ಯಜೀವಿ ತಜ್ಞ
ಇಂದು ಸಂಜೆ 4 ಗಂಟೆಗೆ
ನೀವೂ ಆಲಿಸಿರಿ, ಸ್ನೇಹಿತರಿಗೂ ಕೇಳಿಸಿರಿ
https://www.prajavani.net/podcast
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಂಸದ ಸ್ಥಾನಕ್ಕೂ ರಾಜೀನಾಮೆ: ಬಾಬುಲ್ ಸುಪ್ರಿಯೊ

ಕೋಲ್ಕತ್ತ (ಪಿಟಿಐ): ಕೇಂದ್ರದ ಮಾಜಿ ಸಚಿವ, ಬಿಜೆಪಿ ನಾಯಕ ಬಾಬುಲ್ ಸುಪ್ರಿಯೊ ಅವರು ಸಕ್ರಿಯ ರಾಜಕೀಯದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಸಂಸದ ಸ್ಥಾನಕ್ಕೂ ರಾಜೀನಾಮೆ ನೀಡುತ್ತೇನೆ ಎಂದೂ ಅವರು ಶನಿವಾರ ಪ್ರಕಟಿಸಿದರು.

ಕೇಂದ್ರ ಸಂಪುಟದಿಂದ ತಮ್ಮನ್ನು ಕೈಬಿಟ್ಟದ್ದು ಹಾಗೂ ಪಕ್ಷದ ರಾಜ್ಯ ಘಟಕದ ನಾಯಕರ ಜೊತೆಗಿನ ಭಿನ್ನಮತ ಈ ನಿರ್ಧಾರಕ್ಕೆ ಕಾರಣ ಎಂಬ ಸುಳಿವು ನೀಡಿದ್ದಾರೆ. ಮೋದಿ ನೇತೃತ್ವದ ಕೇಂದ್ರ ಸಂಪುಟದಲ್ಲಿ 2014 ರಿಂದ ರಾಜ್ಯ ಸಚಿವರಾಗಿ ವಿವಿಧ ಖಾತೆಯನ್ನು ಅವರು ನಿಭಾಯಿಸಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ

ಜನನ : 2.11.1942 ಮರಣ : 22.07.2021
ಕುಟುಂಬದ ಏಳಿಗೆಗಾಗಿ ಹಗಲಿರುಳು ಶ್ರಮಿಸಿ, ಬಂಧುಗಳಿಗೆ ಹಿತೈಷಿಯಾಗಿ ಬಾಳಿದ
ಶ್ರೀಮತಿ ಕೆ.ಪಿ. ಚಂದ್ರಮ್ಮ ನಂಜುಂಡೇಗೌಡ
ಕಬ್ಬಿನಹಳ್ಳಿ, ಚಿಕ್ಕಮಗಳೂರು
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವ ದುಃಖತಪ್ತ
ಡಾ. ಕೆ.ಎನ್. ಸುರೇಶ, ಕೆ.ಎನ್. ಸವಿತ
ಮೊಮ್ಮಕ್ಕಳು ಮತ್ತು ಮರಿಮಕ್ಕಳು,
ಕುಟುಂಬ ವರ್ಗದವರು ಹಾಗೂ ಬಂಧುಮಿತ್ರರು

ವೈಕುಂಠ ಸಮಾರಾಧನೆ

ಜನನ: 09.04.1933 – ಮರಣ :21.07.2021
ಶ್ರೀಮತಿ. ಪಾರ್ವತಮ್ಮ
W/o ಲೇಟ್ ಕೆ.ಪಿ. ಹನುಮಪ್ಪ ರೆಡ್ಡಿ
ಇವರು ದಿನಾಂಕ 21.07.2021ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾದ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ದಿನಾಂಕ : 01.08.2021ನೇ ಭಾನುವಾರ ಬೆಳಗ್ಗೆ 10.00 ಗಂಟೆಗೆ ನಂ.814, ಕೋರಮಂಗಲ, 6ನೇ ಹಂತ, ಬೆಂಗಳೂರು –95 ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು
ಲಲಿತ ಬಾಬು ರೆಡ್ಡಿ ಮತ್ತು ಕುಟುಂಬದವರು,
ತ್ರಿವೇಣಿ ಅಶೋಕ್ ರೆಡ್ಡಿ ಮತ್ತು ಕುಟುಂಬದವರು,
ಜಯಲಕ್ಷ್ಮಿ ನಾರಾಯಣ್ಣ ರೆಡ್ಡಿ ಮತ್ತು ಕುಟುಂಬದವರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330
Industrial & Factory
Outskirts
CONVERTED LAND for sale. NH 75. Nelamangala. 26275 Sq ft. Contact 9591932764 or 9972148777

ಉದ್ಯೋಗಾವಕಾಶ
Engg/ Production Technical
HITECH ELECTRONIC Services required ITI Electronics 0-5 years Service Technician with ESI/ PF Facility for Industrial Repair services Center, Bangalore. Mob: 9986070888/ 8553003024/26, kumar@hesindia.net, www.hesindia.net
General
REQUIRED LADY Yoga teacher at home for Female in JP Nagar Apartment. 9844030831

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

ಇಂದೇ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/- ದವರೆಗೆ ವಸತಿಯೂಟದೊಂದಿಗೆ ಇಂದೇ ಸಂಪರ್ಕಿಸಿ: ಸುಪ್ರಿಯಾ- 9538032277, 9538075599

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಬ್ಯಾಂಕ್‌ಗಳಿಗೆ,ಶೋರೂಂಗಳಿಗೆಯಾವುದೇ ವಿದ್ಯಾರ್ಹತೆಯಿರುವ ವಿದ್ಯಾರ್ಹತೆಯಿಲ್ಲದವರಿಗೂ ವಸತಿಯೂಟದೊಂದಿಗೆ ಸಂಬಳ+OT,17,200/- 47000/-.8884412822, 9986083666

WORK FROM home with training, fresh graduates or 10+2 call 7605058339
Marketing & Sales
WANTED EXPERIENCED Sales Managers for Cement, Contact: 9916449766/ 9986696546, acecemex@gmail.com
REQUIRED MARKETING MANAGER/ OFFICER for Indias well known solar water heater manufacturing company for their Karnataka operations. Candidates with any graduation having experience in similar field may apply. Email to hr@sudarshansaur.com
Wanted
ಬಂದ ದಿನವೇ ಕೆಲಸ (ಮಾರ್ಕೇಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓ.ಟಿ.15,000 86,000. 7259685221, 7760116548
ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

ಭವಿಷ್ಯ
Astrology
★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306
ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071
★ಉಚಿತ ಭವಿಷ್ಯ★ ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106
★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ
Travel
ವಿಮಾನ/ A/C ಬಸ್ಸಿನಲ್ಲಿ 03.08.2021, 14.09.2021, 7ದಿನಗಳು ಅಹಮದಾಬಾದ್ ಪಟೇಲ್ ಪ್ರತಿಮೆ, ದ್ವಾರಕಾ,ಸೋಮನಾಥ್, ನಿಷ್ಕಳಂಕ ಮಹಾದೇವ. 22.08.2021, 23.09.2021, 8/12 ದಿನಗಳು ಕಾಶಿ,ಗಯಾ, ಅಲಹಾಬಾದ್. 12.09.2021, 24.09.2021, 14ದಿನಗಳು. ಚಾರ್ಧಾಮ್‌ಯಾತ್ರೆ ಅನಿತಾ ಟ್ರಾವಲ್ಸ್ ಶೇಷಾದ್ರಿಪುರ, ಬೆಂಗಳೂರು-20. 7760884305, 8660701232

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 1 ಆಗಸ್ಟ್ 2021

ಮಿಂಚು ಹರಿಸಿದ ತಾರೆಗಳು 9

ಕಡಲ ತಡಿಯ 'ಕನ್ನಡ ಮಿತ್ರರು'! 11

ಕಪ್ಪೆಗಳು ಸಾರ್ ಕಪ್ಪೆಗಳು

ಪಶ್ಚಿಮ ಘಟ್ಟ ಪ್ರದೇಶದ ಪುಟ್ಟ ಊರು ಬಾರೆ. ಅದು ಇಪ್ಪತ್ತಕ್ಕೂ ಅಧಿಕ ಪ್ರಭೇದಗಳ, ಥರಾವರಿ ಬಣ್ಣಗಳ ಕಪ್ಪೆಗಳ ಆವಾಸಸ್ಥಾನ. ಮಳೆ ಬಂದು ನಿಂತಾಗಲೊಮ್ಮೆ ಹಗಲು–ರಾತ್ರಿ ಎನ್ನದೆ ಊರಿನ ಸುತ್ತಲಿನ ಕಾಡು–ಮೇಡು ಸುತ್ತಾಡಿ ಕಪ್ಪೆಗಳ ಮೇಲೆ ಕಣ್ಣಿಟ್ಟು, ಅವುಗಳ ಜೀವನ ಕ್ರಮ ಅಭ್ಯಸಿಸಿದ ಛಾಯಾಗ್ರಾಹಕರೊಬ್ಬರು ಮಾಡಿಕೊಂಡ ಪುಟ್ಟ–ಪುಟ್ಟ ಟಿಪ್ಪಣಿಗಳ ಗುಚ್ಛವೇ ಈ 'ಮಂಡೂಕೋಪನಿಷತ್'!

ಗೋಪಾಲಕೃಷ್ಣ ಹೆಗಡೆ ಬಾರೆ

ಗೋಪಾಲಕೃಷ್ಣ ಹೆಗಡೆ ಬಾರೆ

'ವಟರ್, ವಟರ್, ಟುರ್ರೊ, ಟುರ್ರೊ, ಟರ್ರ್ರರ್ರ...'

ಮಳೆಗಾಲ ಶುರುವಾದರೆ ನಮ್ಮೂರಿನ ಪರಿಸರದ ಸುತ್ತ ಈ ರೀತಿಯ ಸಂಗೀತಗೋಷ್ಠಿ ಸದಾ ಇದ್ದದ್ದೇ. ನನ್ನೂರು ಪಶ್ಚಿಮಘಟ್ಟದ ತಪ್ಪಲಿನಲ್ಲಿರುವ ಯಲ್ಲಾಪುರ ತಾಲ್ಲೂಕಿನ ಪುಟ್ಟ ಗ್ರಾಮ ಬಾರೆ. ಆ ಸಂಗೀತ ಗೋಷ್ಠಿಗಳನ್ನೂ ಅದರಲ್ಲಿ ಪಾಲ್ಗೊಂಡ ಕಲಾವಿದರನ್ನೂ – ಅದೇ ಕಪ್ಪೆಗಳನ್ನು– ಹುಡುಕಿಕೊಂಡು, ಕ್ಯಾಮೆರಾ ಹೆಗಲಿಗೇರಿಸಿಕೊಂಡು ನಮ್ಮೂರಿನ ಸುತ್ತಲಿನ ಕಾಡು ಸುತ್ತಿದ್ದೇ ಸುತ್ತಿದ್ದು. ನಮ್ಮ ಪರಿಸರದಲ್ಲಿ ಅದೆಷ್ಟೊಂದು ಪ್ರಭೇದಗಳ ಕಪ್ಪೆಗಳು ಇವೆ ಅಂತೀರಿ! ಅವುಗಳು 'ಹೋ' ಎಂದು ಗಲಾಟೆ ಎಬ್ಬಿಸಿದರೆ ಅದಕ್ಕೆ ಕೊನೆ ಎಂಬುದೇ ಇರುವುದಿಲ್ಲ. ಆ ಸಂಗೀತ ಕಛೇರಿಯನ್ನು ಆಸ್ವಾದಿಸುವುದನ್ನು ಬಿಟ್ಟು ಶ್ರೋತೃಗಳಿಗೆ ಬೇರೆ ಆಯ್ಕೆಯೇ ಇರುವುದಿಲ್ಲ.

'ಕಪ್ಪೆಗಳ ಗಂಟಲಿನ ಕೆಳಗೆ ಚರ್ಮ ತೆಳ್ಳಗಿದ್ದು ಬಲೂನಿನಂತೆ ವಿಸ್ತಾರವಾಗುತ್ತದೆ. ಅದರೊಳಗೆ ಭರ್ತಿ ಗಾಳಿ ತುಂಬಿದಾಗ ಅದು ಸಾಕ್ಷಾತ್ ಬಲೂನಿನಂತೆಯೇ ಕಾಣುತ್ತದೆ. ಅದರ ತುಂಬಾ ಉಸಿರೆಳೆದು ಊದಿಸಿಕೊಂಡು ಆನಂತರ, ತಿದಿ ಒತ್ತುವಂತೆ ಗಂಟಲಿನ ಮುಖಾಂತರ ಒತ್ತಿ, ಟರ್ರ್ರರ್ರ ಎಂದು ಕರ್ಕಶವಾಗಿ ಸದ್ದಾಗುವಂತೆ ಗಾಳಿಯನ್ನು ಹೊರಕ್ಕೆ ಬಿಡುತ್ತವೆ' ಎಂದು ತೇಜಸ್ವಿಯವರು 'ನೆರೆಹೊರೆಯ ಗೆಳೆಯರು' ಕೃತಿಯಲ್ಲಿ ವರ್ಣಿಸಿದ್ದ ನೆನಪು. ನನ್ನ ಕ್ಯಾಮೆರಾದ ಫ್ರೇಮ್‌ನಲ್ಲಿ ಕಪ್ಪೆಗಳ ಗಂಟಲಿನ ಕೆಳಗೆ ಬಲೂನಿನಂತೆ ಚರ್ಮ ಊದಿಕೊಂಡ (ಧ್ವನಿ ಗುಳ್ಳೆ) ಚಿತ್ರ ಸೆರೆಸಿಕ್ಕಾಗ ಖುಷಿಯೋ ಖುಷಿ. ಅಂದಹಾಗೆ, ಈ ಚಿತ್ರಗಳನ್ನು ಸೆರೆ ಹಿಡಿಯಲು ಮಳೆ ಬಂದು ನಿಂತಾಗಲೆಲ್ಲ ವರ್ಷಗಟ್ಟಲೆ ನಾನು ಕಾಡು ಸುತ್ತಿದ್ದೇನೆ. ರಾತ್ರಿಯೂ ಕಾಡಿನಲ್ಲಿ ಕಳೆದಿದ್ದೇನೆ. ಥರಾವರಿ ಕಪ್ಪೆಗಳನ್ನು ಕಂಡು ಬೆರಗಾಗಿದ್ದೇನೆ.

ತೇಜಸ್ವಿಯವರೇ ಹೇಳುವಂತೆ ಕೆಲವು ಕಪ್ಪೆಗಳು ಬಟ್ಟೆ ಹರಿದಂತೆ, ಇನ್ನು ಕೆಲವು ದಾಸಯ್ಯನ ಜಾಗಟೆಯಂತೆ ಸದ್ದು ಮಾಡುವುದನ್ನು ಆಲಿಸಿದ್ದೇನೆ. ಕೆಲವು ಸಣ್ಣ ಕಪ್ಪೆಗಳು ತಮ್ಮ ದೇಹದ ಗಾತ್ರಕ್ಕಿಂತ ದೊಡ್ಡದಾದ ಬಲೂನು ಸೃಷ್ಟಿಸಿ ನನ್ನನ್ನು ವಿಸ್ಮಯಗೊಳಿಸಿದ್ದೂ ಇದೆ. ಚಿಕ್ಕವಯಸ್ಸಿನಿಂದ ಈ ಪರಿಸರದಲ್ಲೇ ಬೆಳೆದಿದ್ದರೂ ನನಗೆ ಇಲ್ಲಿನ ಪರಿಸರ, ಪ್ರಾಣಿಗಳು, ಪಕ್ಷಿಗಳ ಬಗ್ಗೆ ಅಷ್ಟೇನೂ ಸರಿಯಾಗಿ ಗೊತ್ತಿರಲಿಲ್ಲ. ಅದರ ಬಗ್ಗೆ ಅರಿವು ಮೂಡಿಸಿದ್ದು ವನ್ಯಜೀವಿ ಛಾಯಾಗ್ರಾಹಕ ಓಂಕಾರ ಉಮೇಶ್. ಪ್ರಾಣಿ-ಪಕ್ಷಿಗಳ ಜೊತೆ ಒಡನಾಟ ಬೆಳೆಯುವುದರಿಂದ ಬದುಕು ನೆಮ್ಮದಿಯಾಗಿ ಇರುತ್ತದೆ ಎಂದು ಹೇಳಿ ಒಂದು ಕ್ಯಾಮೆರಾವನ್ನು ಕೈಗಿಟ್ಟರು. ಆಗಿನಿಂದ ವನ್ಯಜೀವಿಗಳೊಂದಿಗೆ ನನ್ನ ಸಾಂಗತ್ಯ. ಅದರಲ್ಲೂ ಕಪ್ಪೆಗಳ ಪಾಲಿಗೆ ನಾನು ದೊಡ್ಡ ಸ್ನೇಹಿತ.

ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಸಿ.ಆರ್. ನಾಯಕ್ ಮತ್ತು ಅವರ ತಂಡ ಒಮ್ಮೆ ನಮ್ಮೂರಿಗೆ ಬಂದಿತ್ತು. ಕಪ್ಪೆಗಳ ಕುರಿತು ಆಸಕ್ತಿ ಮೂಡಿಸಿದ್ದು ಅದೇ ತಂಡ. ಆ ತಂಡದ ಸಲಹೆಯಿಂದ ಪ್ರೇರಿತನಾಗಿ ಓಡಾಡಿದಾಗ ನಮ್ಮ ಊರಿನಲ್ಲಿ 24 ಜಾತಿಯ ಕಪ್ಪೆಗಳನ್ನು ಕಂಡೆ. ಕಪ್ಪೆಗಳ ಜೀವನಶೈಲಿಯನ್ನು ನೋಡುವ ಕುತೂಹಲವೂ ಉಂಟಾಯಿತು. ಆಗ ಪರಿಚಯವಾದವರು ವಿಜ್ಞಾನಿ ಕೆ.ವಿ. ಗುರುರಾಜ್. ಅವರು ಕಪ್ಪೆಗಳ ವೈಜ್ಞಾನಿಕ ಹೆಸರುಗಳನ್ನು ಹೇಳಿಕೊಟ್ಟರು. ಕಪ್ಪೆಗಳು ಮೊಟ್ಟೆ ಇಡುವುದನ್ನು, ಮೊಟ್ಟೆಗಳು ಮರಿ ಆಗುವುದನ್ನು ನೋಡಿದೆ. ಕಪ್ಪೆಗಳ ವಟರ್ ವಟರ್ ಸದ್ದಿಗೆ ಇತರೆ ಕ್ರಿಮಿಕೀಟಗಳು ಹೊರಡಿಸುವ ಜುಗಲ್‌ಬಂದಿ ಸದ್ದಿನ ಮಳೆಗಾಲದ ಸಂಗೀತಮಯ ಸಂಜೆಯನ್ನು ಆನಂದಿಸಿದೆ.

ಕಪ್ಪೆಗಳು ತೇವಾಂಶವುಳ್ಳ ಕಾಡುಗಳು ಮತ್ತು ಜೌಗು ಪ್ರದೇಶದ ಹುಲ್ಲುಗಾವಲುಗಳು, ಹಾಗೆಯೇ ಸ್ತಬ್ಧ ನದಿಗಳು ಮತ್ತು ಸುಂದರವಾದ ಸರೋವರಗಳ ತೀರದಲ್ಲಿ ವಾಸಿಸುತ್ತವೆ. ಈ ವಿಶಿಷ್ಟ ಪ್ರಾಣಿಗಳು ಬಾಲವಿಲ್ಲದ ಉಭಯಚರಗಳ ಕ್ರಮದ ಪ್ರಮುಖ ಪ್ರತಿನಿಧಿಗಳು. ಕಪ್ಪೆಗಳ ಗಾತ್ರವು ಜಾತಿಗಳ ಮೇಲೆ ಅವಲಂಬಿತ. ಅವುಗಳು ಶೀತರಕ್ತದ ಪ್ರಾಣಿಗಳು. ಆಫ್ರಿಕಾ ಅವುಗಳ ಮೂಲ ಆವಾಸಸ್ಥಾನ ಎಂದು ನಂಬಲಾಗಿದೆ. ಕಪ್ಪೆ ಒಂದು ವಿಶಿಷ್ಟ ರೀತಿಯ ಪ್ರಾಣಿಯಾಗಿದ್ದು ಅದು ಚರ್ಮದ ಬಣ್ಣವನ್ನು ಬದಲಾಯಿಸುವ ಕೋಶಗಳನ್ನು ಹೊಂದಿದೆ. ಅದು ಪ್ರಕೃತಿಯೊಂದಿಗೆ ವಿಲೀನಗೊಳ್ಳುವ ಮತ್ತು ತನ್ನ ಶತ್ರುಗಳಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯವನ್ನು ನೀಡುತ್ತದೆ.

ಕಪ್ಪೆಗಳು ಶುದ್ಧ ನೀರಿನಲ್ಲಿ ವಾಸಿಸಲು ಇಷ್ಟಪಡುತ್ತವೆ. ಇವು ಚಲಿಸುತ್ತವೆ, ಬೃಹತ್ ಜಿಗಿತಗಳನ್ನೂ ಮಾಡುತ್ತವೆ. ಹೆಚ್ಚಿನವು ಮರಗಳ ತುದಿಯವರೆಗೂ ಹತ್ತುತ್ತವೆ ಮತ್ತು ಭೂಗತ ರಂಧ್ರಗಳನ್ನು ಅಗೆಯುತ್ತವೆ. ಕೆಲವು ಪ್ರಭೇದಗಳು ನಡೆಯಬಹುದು ಮತ್ತು ಓಡಬಹುದು, ಜೊತೆಗೆ ಈಜಬಹುದು. ಕಪ್ಪೆಗಳ ಒಂದು ಕುತೂಹಲಕಾರಿ ಲಕ್ಷಣವೆಂದರೆ ಅವು ಚರ್ಮದ ಮೂಲಕ ಆಮ್ಲಜನಕವನ್ನು ಹೀರಿಕೊಳ್ಳುತ್ತವೆ. ವಿಲಕ್ಷಣವಾದ ಶಬ್ದಗಳನ್ನು ಮಾಡಲು ಕಪ್ಪೆಗೆ ಶ್ವಾಸಕೋಶದಂತಹ ಅಂಗಗಳು ಬೇಕಾಗುತ್ತವೆ. ಇದನ್ನು ಸಾಮಾನ್ಯವಾಗಿ ಕ್ರೋಕಿಂಗ್ ಎಂದು ಕರೆಯಲಾಗುತ್ತದೆ. ಧ್ವನಿಗುಳ್ಳೆಗಳು ವ್ಯಾಪಕವಾದ ಧ್ವನಿಯನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ. ಆ ಧ್ವನಿಯು ವಿರುದ್ಧ ಲಿಂಗಿಗಳನ್ನು ಆಕರ್ಷಿಸುತ್ತದೆ. ಕಪ್ಪೆ ವೀಕ್ಷಣೆಯಿಂದ ಕಲಿಯಲು ಹಲವು ಆಸಕ್ತಿದಾಯಕ ಮತ್ತು ಅದ್ಭುತ ವಿಷಯಗಳಿವೆ.ಕಪ್ಪೆ ನಿಯತಕಾಲಿಕವಾಗಿ ತನ್ನ ಚರ್ಮವನ್ನು ಹೊರಬಿಡುತ್ತದೆ.

ಕೀಟನಾಶಕ ಕಪ್ಪೆಗಳು ಸೊಳ್ಳೆಗಳು, ಚಿಟ್ಟೆಗಳು ಮತ್ತು ಸಣ್ಣ ಹುಳುಗಳನ್ನು ಸಂತೋಷದಿಂದ ತಿನ್ನುತ್ತವೆ. ವಿಶೇಷವಾಗಿ ದೊಡ್ಡವುಗಳು ಇನ್ನೂ ಹೆಚ್ಚು ಪ್ರಭಾವಶಾಲಿ ಬೇಟೆಯನ್ನು ಆಡುತ್ತವೆ. ಕೆಲವು ಜಾತಿಯ ಕಪ್ಪೆಗಳು ಇತರೆ ಕಪ್ಪೆಗಳನ್ನೇ ತಿನ್ನುತ್ತವೆ. ಕಪ್ಪೆಗಳಿಂದ ಮನುಷ್ಯರಿಗೆ ಸಾಕಷ್ಟು ಪ್ರಯೋಜನ ಇದೆ. ಅನೇಕ ಹಾನಿಕಾರಕ ಹುಳುಗಳು, ಜೀರುಂಡೆಗಳು ಮತ್ತು ಕೀಟಗಳನ್ನು ಅವು ನಾಶ ಮಾಡುತ್ತವೆ ಮತ್ತು ತಿನ್ನುತ್ತವೆ. ಆದ್ದರಿಂದ, ತರಕಾರಿ ತೋಟಗಳು ಮತ್ತು ಪ್ಲಾಟ್‌ಗಳ ಮಾಲೀಕರು ಅಂತಹ ಸಹಾಯಕರನ್ನು ಬಹಳ ಸಹಾನುಭೂತಿಯಿಂದ ನೋಡಿಕೊಳ್ಳುತ್ತಾರೆ ಮತ್ತು ಅವುಗಳಿಗೆ ಸಂತಾನೋತ್ಪತ್ತಿ ಮಾಡಲು ಮತ್ತು ವಾಸಿಸಲು ಬಗೆಯ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತಾರೆ.

ಮಾನವ ಈ ಭೂಮಿ ಮೇಲೆ ಯಾವುದನ್ನೂ ತಿನ್ನದೆ ಬಿಟ್ಟಿಲ್ಲ. ಕಪ್ಪೆಗಳು ಕೂಡ ಅದರಿಂದ ಹೊರತಾಗಿಲ್ಲ. ಪಶ್ಚಿಮ ಘಟ್ಟದ ಅರಣ್ಯಗಳಲ್ಲಿ ಮತ್ತು ಕರಾವಳಿ ಪ್ರದೇಶದಲ್ಲಿ ಸಿಗುವ 'ಬುಲ್ ಫ್ರಾಗ್'ಗೆ ಎಲ್ಲಿಲ್ಲದ ಬೇಡಿಕೆ. ಇದನ್ನು ಕೊಲ್ಲುವುದಕ್ಕೆ ನಿಷಿದ್ಧ ಇದ್ದರೂ ಅಕ್ರಮ ಬೇಟೆ ಆಗುತ್ತಿದೆ.

ಕಪ್ಪೆಗಳು ನೀರಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ ಮತ್ತು ಅದರ ಪ್ರಮಾಣವು ನಿಜವಾಗಿಯೂ ಅಗಾಧವಾಗಿರುತ್ತದೆ. ಕೆಲವೊಮ್ಮೆ ಒಂದು ಸಮಯದಲ್ಲಿ 20 ಸಾವಿರ ಮೊಟ್ಟೆಗಳನ್ನು ಇಡಬಲ್ಲವು. ಮೊಟ್ಟೆಗಳಿಂದ ಟ್ಯಾಡ್‌ಪೋಲ್‌ಗಳು ಹೊರಬರುತ್ತವೆ. ಮೊಟ್ಟೆಗಳನ್ನು ಮರಿಗಪ್ಪೆಗಳು ಅಥವಾ ಮರಿಗಳಾಗಿ ಪರಿವರ್ತಿಸಲು 7ರಿಂದ 10 ದಿನಗಳು ಬೇಕಾಗುತ್ತವೆ. ಕಪ್ಪೆಗಳು ಲೈಂಗಿಕವಾಗಿ ಪ್ರಬುದ್ಧ. ಕಪ್ಪೆಗಳ ಜೀವಿತಾವಧಿಯನ್ನು ಅಳೆಯುವುದು ಕಷ್ಟ. ಆದರೆ ವೈಜ್ಞಾನಿಕ ಸಂಶೋಧನೆಯ ಪ್ರಕಾರ, 10ರಿಂದ 14 ವರ್ಷಗಳವರೆಗೆ ಅವು ಬದುಕುತ್ತವೆ. ಕಪ್ಪೆಗಳ ಕುರಿತು ನನ್ನ ಲಹರಿ ಹೀಗೇ ಮುಂದುವರಿದಿದ್ದಾಗ ಅದಕ್ಕೆ ಬ್ರೇಕ್ ಹಾಕಿದ್ದು ಮತ್ತೆ ಕೇಳಿಬಂದ ವಟರ್, ವಟರ್ ಸದ್ದು!

'ಕಸ್ತೂರಿ ನಿವಾಸ'ದ ಕಲಾ ಸರಸ್ವತಿ

ದಕ್ಷಿಣ ಭಾರತ ಚಿತ್ರರಂಗವನ್ನು ಆಳಿದ ಮಹಾನ್ ತಾರೆಗಳಲ್ಲಿ 'ಅಭಿನಯ ಶಾರದೆ' ಜಯಂತಿ ಕೂಡ ಒಬ್ಬರು. ಡಾ.ರಾಜ್‌ಕುಮಾರ್, ಎನ್‌ಟಿಆರ್, ಅಕ್ಕಿನೇನಿ, ಜೆಮಿನಿ ಗಣೇಶನ್, ಎಂಜಿಆರ್, ಮುತ್ತುರಾಮನ್ ಅವರಂತಹ ಘಟಾನುಘಟಿ ಹೀರೊಗಳಿಗೆ ಹೀರೊಯಿನ್ ಆಗಿದ್ದ ಜಯಂತಿ ಎಂತಹ ಪಾತ್ರಗಳಲ್ಲೂ ಸೈ ಎನಿಸಿಕೊಂಡವರು. ಅವರ ಹಲವು ಸಿನಿಮಾಗಳ ನಿರ್ದೇಶಕರಾಗಿದ್ದ ಭಗವಾನ್ ಅವರು ತೆರೆದಿಟ್ಟ ತಾರೆಯ ಕಥೆ ಇಲ್ಲಿದೆ...

ಎಸ್.ಕೆ. ಭಗವಾನ್

ಅದು 1960ರ ದಶಕ. ನಾನು ಆಕೆಯನ್ನು ಮೊದಲು ನೋಡಿದ್ದು, ಬಹಳ ವಿಚಿತ್ರವಾದ ಸನ್ನಿವೇಶದಲ್ಲಿ. ಡಾ.ರಾಜ್‌ಕುಮಾರ್ ನಟನೆಯ 'ಕಣ್ತೆರೆದು ನೋಡು' ಚಿತ್ರದ ಯಶಸ್ಸಿನ ಬಳಿಕ, ಇದೇ ಚಿತ್ರವನ್ನು ತಮಿಳಿನಲ್ಲಿ ರಿಮೇಕ್ ಮಾಡಲು ನಿರ್ಮಾಪಕ ಎ.ಕೆ.ವೇಲನ್ ನಿರ್ಧರಿಸಿದ್ದರು. ಅರುಣಾಚಲಂ ಸ್ಟುಡಿಯೊ ಮಾಲೀಕರಾಗಿದ್ದ ವೇಲನ್, 'ಕಣ್ತೆರೆದು ನೋಡು' ಚಿತ್ರದಲ್ಲಿ ದೊರೈ ಅವರ ಸಿನಿಮಾಟೊಗ್ರಫಿಯನ್ನು ಮೆಚ್ಚಿದ್ದರು. ಹೀಗಾಗಿ ತಮಿಳು ರಿಮೇಕ್ ಚಿತ್ರಕ್ಕೂ ಅವರನ್ನೇ ಆಯ್ಕೆ ಮಾಡಿದ್ದರು. ಚಿತ್ರದ ನೃತ್ಯವೊಂದರ ಚಿತ್ರೀಕರಣ ಮದ್ರಾಸ್ ವೇಲನ್ ಸ್ಟುಡಿಯೊದಲ್ಲಿ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ದೊರೈ ಹಾಗೂ ನಾನು ಬಹಳ ಆತ್ಮೀಯರಾಗಿದ್ದೆವು. ಅವರೆಲ್ಲಿ ಇರುತ್ತಾರೆಯೋ ಅಲ್ಲೇ ನಾನು ಇರುತ್ತಿದ್ದೆ. We had Become inseparable. ನೃತ್ಯದ ಪೂರ್ವಸಿದ್ಧತೆ ವೇಳೆ 'ಭಗವಾನ್ ಬನ್ನಿ ಇಲ್ಲಿ' ಎಂದು ದೊರೈ ಕರೆದರು. 'ಕ್ಯಾಮೆರಾದಲ್ಲಿ ಝೂಮ್ ಮಾಡಿ, ಹುಡುಗಿಯನ್ನು ತೋರಿಸಿ, ನೋಡಿ ಹೇಗಿದ್ದಾಳೆ' ಎಂದು ಕೇಳಿದರು. ನಾನು ಆಕೆಯನ್ನು ನೋಡಿ 'ಬಹಳ ಚೆನ್ನಾಗಿದ್ದಾಳೆ' ಎಂದೆ. 'ನಮ್ಮ ಮುಂದಿನ ಚಿತ್ರಕ್ಕೆ ಇವಳನ್ನು ನಾಯಕಿಯನ್ನಾಗಿ ಮಾಡೋಣ, ಮ್ಯಾನೇಜರ್ ಬಳಿ ಮಾತನಾಡಿ' ಎಂದು ದೊರೈ ನನ್ನ ಬಳಿ ಹೇಳಿದರು. ಮ್ಯಾನೇಜರ್ ಸುಂದರ್‌ರಾಜನ್ ಅವರ ಬಳಿ ಬಂದು 'ಯಾರು ಆ ಹುಡುಗಿ' ಎಂದು ವಿಚಾರಿಸಿದಾಗ, 'ಕಮಲಾ ಎಂದು ಆಕೆಯ ಹೆಸರು. ಅದ್ಭುತ ನೃತ್ಯ ಕಲಾವಿದೆ. ಸ್ಯಾಂತ್‌ಹೋಮ್‌ನಲ್ಲಿ ಆಕೆಯ ಮನೆ' ಎಂದರು. ನಮ್ಮ ಕಾಲೊನಿ ಸಮೀಪವೇ ಎಂದುಕೊಂಡು, ವಿಳಾಸ ತೆಗೆದುಕೊಂಡು ಹೋಗಿ ಮಾತನಾಡಿದೆ.

ಇಷ್ಟೊಂದ್ ಚಿತ್ರದಲ್ಲಿ ನಟಿಸಿರುವೆನೇ?

'ಚಂದವಳ್ಳಿಯ ತೋಟ'ಕ್ಕೆ ಜಯಂತಿಯನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ 'ಕನ್ನಡ ಚಿತ್ರದಲ್ಲಿ ನಟಿಸಬೇಕೇ' ಎಂದು ಜಯಂತಿ ಅವರ ಪತಿ ಪೆಕೇಟಿ ಶಿವರಾಂ ಕೇಳಿದರು. ಆಗಿನ ಕಾಲದಲ್ಲಿ ತಮಿಳು ಹಾಗೂ ತೆಲುಗು ಸಿನಿಮಾಗಳು ಹೆಚ್ಚು ಜನಪ್ರಿಯವಾಗಿದ್ದ ಕಾರಣ ಕನ್ನಡಕ್ಕೆ ಬರಲು ಹಿಂಜರಿಕೆ ಅವರಿಗಿತ್ತು. 'ತರಾಸು ಅವರ ಕಾದಂಬರಿ ಆಧಾರಿತ ಚಿತ್ರವಿದು. ರಾಜ್‌ಕುಮಾರ್ ಇದರ ಹೀರೊ' ಎಂದು ತಿಳಿಸಿ, ನಾನು ಹೊರಡಲು ಮುಂದಾದೆ. ಈ ಸಂದರ್ಭದಲ್ಲಿ 'ಯಾರು ಹೀರೊ ಎಂದಿರಿ. ರಾಜ್‌ಕುಮಾರ್ ಅವರೇ? ಡೇಟ್ಸ್ ಯಾವಾಗಕ್ಕೆ ಬೇಕು' ಎಂದು ತಕ್ಷಣದಲ್ಲೇ ಶಿವರಾಂ ತಮ್ಮ ನಿರ್ಧಾರ ತಿಳಿಸಿದರು. ರಾಜ್‌ಕುಮಾರ್ ಎನ್ನುವ ಹೆಸರಿಗೆ ಆ ಶಕ್ತಿ ಇತ್ತು. ಅಲ್ಲಿಯವರೆಗೆ 45 ಚಿತ್ರಗಳನ್ನು ರಾಜ್‌ಕುಮಾರ್ ಮಾಡಿದ್ದರು.

ನಾನು ಜಯಂತಿಗೆ 'ಕನ್ನಡದ ಗುರು'ವಾಗಿದ್ದು ಹೀಗೆ...

ಜಯಂತಿ ಹುಟ್ಟಿದ್ದು ಬಳ್ಳಾರಿಯಲ್ಲಿ ಆದರೂ ತೆಲುಗಿನ ಪ್ರಭಾವ ಹೆಚ್ಚಿತ್ತು. ಆಕೆಯ ಮನೆಭಾಷೆ ತೆಲುಗು ಆಗಿತ್ತು. ಕನ್ನಡ ಆಕೆಗಿನ್ನೂ ಸರಿಯಾಗಿ ಉಚ್ಚರಿಸಲು ಬರುತ್ತಿರಲಿಲ್ಲ. ಆಗಿನ ಕಾಲದಲ್ಲಿ ಡಬ್ಬಿಂಗ್ ಕೂಡಾ ಇರಲಿಲ್ಲ. ಶೂಟಿಂಗ್‌ನಿಂದ ನೇರವಾಗಿ ತೆರೆಗೆ ಚಿತ್ರವು ಹೋಗುತ್ತಿತ್ತು. 12ರಿಂದ 15 ದಿನಗಳಲ್ಲಿ ಚಿತ್ರಗಳ ಚಿತ್ರೀಕರಣ ಮುಗಿಯುತ್ತಿತ್ತು. ಇಂತಹ ಸಂದರ್ಭದಲ್ಲಿ ನಾನು ಆಕೆಗೆ ಕನ್ನಡದ ಗುರು ಆದೆ. ಮೈಸೂರು ಕನ್ನಡದಲ್ಲಿ ಪ್ರತಿದಿನ ಮರುದಿನದ ದೃಶ್ಯಗಳ ಪ್ರತಿಯೊಂದು ಸಂಭಾಷಣೆಯನ್ನು ನಾನು ಹೇಳಿಕೊಡುತ್ತಿದ್ದೆ. ಇತರೆ ಸಿನಿಮಾಗಳ ಚಿತ್ರೀಕರಣ ಮುಗಿಸಿಕೊಂಡು ರಾತ್ರಿ 9 ಗಂಟೆಯ ವೇಳೆಗೆ ನಮ್ಮ ಮನೆಗೆ ಬಂದರೆ ರಾತ್ರಿ 11–12ರವರೆಗೆ ಈ ಕನ್ನಡ ಪಾಠಶಾಲೆ ನಡೆಯುತ್ತಿತ್ತು. ಹೀಗಾಗಿಯೇ ಆಕೆಯ ಕೊನೆಯ ಉಸಿರು ಇರುವವರೆಗೂ ನನ್ನನ್ನು 'ಕನ್ನಡದ ಗುರು' ಎಂದೇ ಕರೆಯುತ್ತಿದ್ದಳು. 'ನನ್ನನ್ನು ಸ್ಟಾರ್ ಮಾಡಿದವನು ನೀನು' ಎನ್ನುತ್ತಿದ್ದಳು.

ಆಕೆ ಎಂತಹ ಅದ್ಭುತ ಕಲಾವಿದೆ ಎನ್ನುವುದಕ್ಕೆ ಆಕೆ ನಟಿಸಿದ ಚಿತ್ರಗಳ ಸಂಖ್ಯೆಯೇ ಸಾಕ್ಷಿ. ಸುಮಾರು 500 ಚಿತ್ರಗಳಲ್ಲಿ ಆಕೆ ನಟಿಸಿದ್ದು, ರಾಜ್‌ಕುಮಾರ್ ಅವರ ಸುಮಾರು 200 ಚಿತ್ರಗಳ ಪೈಕಿ ಜಯಂತಿಯೇ 39 ಚಿತ್ರಗಳಲ್ಲಿ ನಟಿಸಿದ್ದಾಳೆ. ಇದು ಆಕೆಯ ನಟನೆಯ ಶಕ್ತಿಯ ಪ್ರದರ್ಶನ. ರಾಜ್‌ಕುಮಾರ್ ಅವರ ಜೊತೆ ನಟಿಸಬೇಕಿದ್ದರೆ ಬಹಳ ಯೋಗ್ಯತೆ ಬೇಕಿತ್ತು. ಈ ಯೋಗ್ಯತೆಯನ್ನು ಪಡೆದಿದ್ದವಳು ಜಯಂತಿ. 'ಚಂದವಳ್ಳಿಯ ತೋಟ'ದಲ್ಲಿ ಹಾಕಿಕೊಟ್ಟ ಈ ವೇದಿಕೆಯನ್ನು ಸಮರ್ಪಕವಾಗಿ ಬಳಸಿಕೊಂಡವಳು ಆಕೆ.

ನಂತರ ಬಂದಿದ್ದು, 'ಮಂತ್ರಾಲಯ ಮಹಾತ್ಮೆ'. ಈ ಚಿತ್ರದಲ್ಲಿ ರಾಘವೇಂದ್ರ ಸ್ವಾಮಿಗಳ ಪೂರ್ವಾಶ್ರಮದ ಪತ್ನಿಯ ಪಾತ್ರವನ್ನು ಜಯಂತಿ ಮಾಡಿದಳು. ಆ ದಿವ್ಯತೆ ಆಕೆಯ ಮುಖದಲ್ಲಿ ಕಾಣಿಸುತ್ತಿತ್ತು. ಸನ್ಯಾಸ ಸ್ವೀಕರಿಸುವ ಸಂದರ್ಭದಲ್ಲಿ ಹೆಂಡತಿಯ ಮುಖ ನೋಡಬಾರದು ಎಂದು ಹೇಳುವ ಸಂದರ್ಭದಲ್ಲಿ ಆಕೆಯ ಅಭಿನಯ ಅತ್ಯದ್ಭುತ. ಇದರಲ್ಲಿ ಒಂದು ಹಾಡಿನಲ್ಲಿ ಕಲ್ಪನಾ, ಜಯಂತಿ ನಡುವೆ ಸೌಂದರ್ಯ ಸ್ಪರ್ಧೆ ಏರ್ಪಟ್ಟಂತಿತ್ತು. ಜಯಂತಿ ಸೌಂದರ್ಯದ ಜೊತೆಗೆ ದಕ್ಷತೆ ಹಾಗೂ ಅಭಿನಯದಲ್ಲಿ ಪ್ರಾವೀಣ್ಯತೆ ಹೊಂದಿದ್ದಳು. 'ಅಭಿನಯ ಶಾರದೆ'ಗೆ ಅನ್ವರ್ಥವಾಗಿ ಆಕೆ ಅಭಿನಯಿಸುತ್ತಿದ್ದಳು.

2 ಪೀಸ್ ಟು 1 ಪೀಸ್

ಜಯಂತಿ 'ಮಿಸ್ ಲೀಲಾವತಿ' ಚಿತ್ರದಲ್ಲೇ ಅನೇಕ ನವಕಾಲೀನ ವಸ್ತ್ರಗಳನ್ನು ಧರಿಸಿದ್ದಳು. 'ಜೇಡರ ಬಲೆ' ಚಿತ್ರದಲ್ಲಿ ನಾವು ಕೊಂಚ ಮುಂದೆ ಹೋದೆವು. ನಮ್ಮ ನಡುವೆ ಅಷ್ಟು ಹೊತ್ತಿಗಾಗಲೇ ಸಲುಗೆ ಬೆಳೆದಿದ್ದ ಕಾರಣ, 'ಈ ಚಿತ್ರದಲ್ಲಿ 2 ಪೀಸ್ ಸ್ವಿಮ್‌ಸೂಟ್ ಹಾಕಬೇಕು' ಎಂದು ಕೇಳಿದೆವು. ಮೊದಲಿಗೆ ಕೊಂಚ ಹಿಂಜರಿದಳು. 'ನಾನು ದಪ್ಪವಿದ್ದೇನೆ. ಸ್ವಿಮ್‌ಸೂಟ್ ಹಾಕಿದರೆ ಚೆಂದ ಕಾಣಲಿಕ್ಕಿಲ್ಲ' ಎಂದಳು. ಶಿವರಾಂ ಕೂಡಾ ಇದಕ್ಕೆ ಮೊದಲು ವಿರೋಧಿಸಿದ್ದರು. 'ಮಿಸ್ ಲೀಲಾವತಿ'ಯಲ್ಲಿರುವಂತಹ ವಸ್ತ್ರಗಳನ್ನೇ ಹಾಕಿ ಎಂದರು.

10ನೇ ಪುಟಕ್ಕೆ...

ಅಭಿನಯ ಶಾರದೆಯ ಪ್ರತಿಭಾವಿಲಾಸ

ವೀರ ರಮಣಿ ಹಾಡು ಹುಟ್ಟಿದ ಪರಿ

ಬಿ.ಎಲ್. ವೇಣು

ಚಿತ್ರದುರ್ಗದ ಒನಕೆ ಓಬವ್ವಳ ಶೌರ್ಯ ಪರಾಕ್ರಮಗಳನ್ನು ನಾಡಿನ ಜನರ ಕಣ್ಮುಂದೆ ತಂದು ನಿಲ್ಲಿಸಿದ ನಟಿ ಜಯಂತಿ. ಎಷ್ಟೇ ಗ್ಲ್ಯಾಮರಸ್ ಪಾತ್ರದಲ್ಲಿ ಮಿಂಚಿದರೂ ಜನಮನದಲ್ಲಿ ಅಚ್ಚಳಿಯದೆ ಉಳಿದದ್ದು, ವೀರವನಿತೆ ಓಬವ್ವಳಾಗಿ ಎಂದರೆ ಅತಿಶಯೋಕ್ತಿಯಾಗದು.

1970-71ರಲ್ಲಿ ದುರ್ಗದಲ್ಲಿ 'ನಾಗರಹಾವು' ಚಿತ್ರದ ಚಿತ್ರೀಕರಣವನ್ನು ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲರು ತಮ್ಮ ತಂಡದೊಡನೆ ಆರಂಭಿಸಿದ್ದರು. ದುರ್ಗದ ಆಬಾಲವೃದ್ಧ ಮಹಿಳೆಯರಾದಿಯಾಗಿ ಚಿತ್ರೀಕರಣ ನೋಡಲು ಉತ್ಸಾಹದಿಂದ ಕೋಟೆ ಏರುತ್ತಿದ್ದುದನ್ನು ನಾನು ನೋಡಿ ಬಲ್ಲೆ. ಏಕೆಂದರೆ ನಾನೂ ಗೆಳೆಯರೊಂದಿಗೆ ಕೋಟೆ ಏರಿದವನೆ.

ಹಿರಿಯ ಸಾಹಿತಿ ತರಾಸು ಅವರ ಕಾದಂಬರಿ ಆಧಾರಿತ ಎಂಬ ಹೆಗ್ಗಳಿಕೆ ಬೇರೆ. ಆಗೆಲ್ಲ ಚಿತ್ರೀಕರಣ ವೀಕ್ಷಿಸುವವರ ಕಣ್ಣಿಗೆ ಸತ್ಯವಾಗಲೂ ಪುಟ್ಟಣ್ಣನವರೇ 'ಗ್ರೇಟ್ ಹೀರೊ'! ನಮಗೆಲ್ಲ ವಿಷ್ಣು, ಅಂಬರೀಷ್, ಆರತಿ ತೀರಾ ಅಪರಿಚಿತರು. ಪುಟ್ಟಣ್ಣನವರಿಗೆ ನಾಗರಹಾವು ಚಿತ್ರದ ಯಶಸ್ಸು ಅವರ ಕೆರಿಯರ್‌ನಲ್ಲಿ ಅತಿ ಮುಖ್ಯವಾಗಿತ್ತು. ಒಂದೆರಡು ಚಿತ್ರಗಳಾಗಲೇ ಸೋತಿದ್ದವು. ಪುಟ್ಟಣ್ಣ, ಕಾದಂಬರಿಗಳನ್ನು ಓದಿ ಬದಿಗಿಟ್ಟು, ಸಿನಿಮಾಕ್ಕೆ ಸರಿಹೊಂದುವಂತೆ ಚಿತ್ರಕಥೆ ಬರೆದುಕೊಂಡಿದ್ದೇನೆ ಎಂದು ಅವರೇ ಹೇಳಿಕೊಂಡಿದ್ದುಂಟು.

ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದ ಪುಟ್ಟಣ್ಣ, ಕಥೆಗೆ ಅಗತ್ಯವೇ ಇಲ್ಲದ ವೀರವನಿತೆ ಒನಕೆ ಓಬವ್ವಳ ಸಾಹಸಗಾಥೆಯನ್ನು ಹಾಡಿನ ಮೂಲಕ ಸೇರಿಸಿ ಅಪಾರ ಮಹಿಳಾ ಪ್ರೇಕ್ಷಕರನ್ನು ಸೆಳೆಯುವ ತಂತ್ರಕ್ಕೆ ಶರಣಾಗಿದ್ದರು. ಅದರಲ್ಲಿ ಅವರು ಯಶಸ್ವಿಯಾಗಿದ್ದು, ಇಂದಿಗೆ ಇತಿಹಾಸ.

ಪುಟ್ಟಣ್ಣನವರಿಗೆ ಓಬವ್ವೆಯ ಇತಿಹಾಸವನ್ನು ನೆನಪಿಗೆ ತಂದ ಮಹನೀಯರು, ನವಭಾರತ ತರುಣ ಕಲಾ ಸಂಘದ ದುರ್ಗದ ಕಲಾವಿದರು. ಇವರು ಆಡುತ್ತಿದ್ದ ಅಪಾರ ಯಶಸ್ವಿ ನಾಟಕ 'ರಾಜವೀರ ಮದಕರಿ ನಾಯಕ'.

10ನೇ ಪುಟಕ್ಕೆ...

ಮಿಂಚು ಹರಿಸಿದ ತಾರೆಗಳು...

‘ಓದಿ ಬರೆದರೆ ನವಾಬನಾಗುತ್ತಿ, ಆಡಿದರೆ ಹಾಳಾಗುತ್ತಿ’ ಎಂಬ ಹಳೆಯ ಗಾದೆಯೊಂದಿದೆ. ಆದರೆ, ಓದು ಮತ್ತು ಕ್ರೀಡೆ ಎರಡರಲ್ಲೂ ಏಕಕಾಲಕ್ಕೆ ಸಾಧನೆ ಸಾಧ್ಯ ಎಂದು ಒಲಿಂಪಿಕ್ ಸೈಕ್ಲಿಂಗ್ ನಲ್ಲಿ ಚಿನ್ನದ ಪದಕ ಗೆದ್ದ ಆಸ್ಟ್ರಿಯಾದ ಆನಾ ಕಿಸನ್‌ಹಾಫರ್ ತೋರಿಸಿಕೊಟ್ಟದ್ದಾರೆ. ಸಿರಿಯಾದ ಪೋರಿ ಹೆಂಡ್ ಜಾಜಾ ಹಾಗೂ ಕುವೈತ್‌ನ ಅಬ್ದುಲ್ ಅಲ್ ರಶೀದಿ ಅವರೂ ಒಲಿಂಪಿಕ್ ಅಂಗಳದಲ್ಲಿ ಗಮನ ಸೆಳೆದಿದ್ದಾರೆ. ಯುವಪೀಳಿಗೆಗೆ ಈ ಕ್ರೀಡಾಪಟುಗಳು ಉತ್ಸಾಹದ ಚಿಲುಮೆಯಾಗಿದ್ದಾರೆ...

ಆನಾ ಕಿಸನ್‌ಹಾಫರ್

ಗಣಿತದ ಟೀಚರ್ ಈಗ ಚಿನ್ನದ ಹುಡುಗಿ

ಗಿರೀಶ ದೊಡ್ಡಮನಿ

ಆನಾ ಕಿಸನ್‌ಹಾಫರ್..

ಈ ಹೆಣ್ಣುಮಗಳು ಆಸ್ಟ್ರಿಯಾ ದೇಶದಲ್ಲಿ ಹಲವರಿಗೆ ಗಣಿತಶಾಸ್ತ್ರಜ್ಞೆಯಾಗಿ ಚಿರಪರಿಚಿತರು. ಆದರೆ ಈಗ ಅವರು ವಿಶ್ವದ ಗಮನ ಸೆಳೆದು ಪ್ರೇರಣೆಯ ಕಥೆಯಾಗಿದ್ದಾರೆ. ಆದರೆ ಅದು ಗಣಿತದ ಸಾಧನೆಗಾಗಿ ಅಲ್ಲ!

ಟೋಕಿಯೊ ಒಲಿಂಪಿಕ್ ಕೂಟದ ಮಹಿಳೆಯರ ರಸ್ತೆ ಸೈಕ್ಲಿಂಗ್‌ನಲ್ಲಿ ಚಿನ್ನ ಗೆದ್ದ 30 ವರ್ಷದ ಆನಾ ಕಿಸನ್‌ಹಾಫರ್ ಈಗ ಚರ್ಚೆಯ ಕೇಂದ್ರಬಿಂದುವಾಗಿದ್ದಾರೆ. ‘ಆಡುವುದರಲ್ಲಿಯೇ ಕಾಲ ಕಳೆಯುವ ಮಕ್ಕಳು ಓದಿನಲ್ಲಿ ಹಿಂದುಳಿಯುತ್ತಾರೆ. ವಿದ್ಯಾಭ್ಯಾಸದಲ್ಲಿ ದೊಡ್ಡ ಸಾಧನೆ ಮಾಡಬೇಕಾದರೆ ಆಟೋಟದಲ್ಲಿ ಹೆಚ್ಚು ಸಮಯ ಕಳೆಯಬಾರದು. ಕ್ರೀಡಾಪಟುಗಳಿಗೆ ವಿದ್ಯೆ ತಲೆಗೆ ಹತ್ತುವುದಿಲ್ಲ’ ಎಂಬ ಅನಿಸಿಕೆಗಳನ್ನು ಆನಾ ಸುಳ್ಳು ಮಾಡಿದ್ದಾರೆ. ಓದಿಗಾಗಿ ಆಟ ಬಿಡಬೇಕಿಲ್ಲ, ಕ್ರೀಡೆಗಾಗಿ ಓದನ್ನು ತಪ್ಪಿಸಬೇಕಿಲ್ಲ ಎಂಬುದನ್ನು ತೋರಿಸಿದ್ದಾರೆ. ಅಷ್ಟೇ ಅಲ್ಲ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಕೂಡ ಗೆಲ್ಲಬಹುದು ಎಂಬುದನ್ನು ಸಾಬೀತು ಮಾಡಿದ್ದಾರೆ.

125 ವರ್ಷಗಳ ಇತಿಹಾಸ ಇರುವ ಆಧುನಿಕ ಒಲಿಂಪಿಕ್ಸ್‌ನಲ್ಲಿ ಆಸ್ಟ್ರಿಯಾಕ್ಕೆ ಸೈಕ್ಲಿಂಗ್‌ನಲ್ಲಿ ಲಭಿಸಿದ ಮೊದಲ ಚಿನ್ನದ ಪದಕ ಆನಾ ಅವರದ್ದು. 137 ಕಿಲೊ ಮೀಟರ್ಸ್ ರಸ್ತೆ ಸೈಕ್ಲಿಂಗ್‌ನಲ್ಲಿ ಅವರು ಮೂಡಿಸಿದ ಅಚ್ಚರಿ ಬಹಳ ದೊಡ್ಡದು. ಈ ಸ್ಪರ್ಧೆಯಲ್ಲಿ ಅವರು ರಿಯೊ ಒಲಿಂಪಿಕ್ ಚಿನ್ನದ ಪದಕ ವಿಜೇತೆ ಸೈಕ್ಲಿಸ್ಟ್ ನೆದರ್ಲೆಂಡ್ಸ್‌ನ ಅನಾ ವ್ಯಾನ್ ಡರ್ ಬ್ರಿಗೆನ್, ಒಲಿಂಪಿಕ್ ಕಂಚಿನ ಪದಕ ವಿಜೇತೆಯಾಗಿದ್ದ ಎಲಿಸಾ ಲೊಂಗೊ ಬಾರ್ಗಿನಿ, ಬ್ರಿಟನ್‌ನ ಲಿಜಿ ಡೀಗ್ನನ್, ಜರ್ಮನಿಯ ಲೀಸ್ ಬ್ರೆನೆರ್ ಮತ್ತು ಮಾಜಿ ವಿಶ್ವ ಚಾಂಪಿಯನ್ ಅನೆಮೀಕ್ ವ್ಯಾನ್ ವೆಲುಟೆನ್ ಅವರನ್ನು ಹಿಂದಿಕ್ಕಿದರು.

ಆನಾ ಕಿಸನ್‌ಹಾಫರ್ ತಮ್ಮ ಜೀವನದಲ್ಲಿ ಎಂದೂ ಒಲಿಂಪಿಕ್ ಚಿನ್ನ ಗೆಲ್ಲುವ ನಿರೀಕ್ಷೆಯನ್ನೂ ಇಟ್ಟುಕೊಂಡಿರಲಿಲ್ಲ. ಸುಮ್ಮನೆ ಹವ್ಯಾಸ, ಫಿಟ್‌ನೆಸ್‌ಗಾಗಿ ಆರಂಭವಾದ ಸೈಕ್ಲಿಂಗ್‌ನಲ್ಲಿ ಅವರು ಈ ಎತ್ತರಕ್ಕೆ ಏರಿದ್ದಾರೆ. ವೃತ್ತಿಪರ ಸೈಕ್ಲಿಸ್ಟ್ ಪಡೆಯುವ ವಿಶೇಷ ತರಬೇತಿಯಾಗಲಿ, ತರಬೇತುದಾರನಾಗಲಿ ಅವರಿಗಿಲ್ಲ. ಸ್ಪರ್ಧೆ ನಡೆಯುವ ನಾಲ್ಕು ದಿನಗಳ ಹಿಂದಷ್ಟೇ ಅವರು ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ, ‘ಒಲಿಂಪಿಕ್‌ನಲ್ಲಿ ಭಾಗವಹಿಸುವ ಆಸೆ ಈಗ ಈಡೇರುತ್ತದೆ’ ಎಂದಷ್ಟೇ ಬರೆದುಕೊಂಡಿದ್ದರು. ಕೂಟಕ್ಕೆ ಅವಕಾಶ ಸಿಕ್ಕಿದ್ದೇ ದೊಡ್ಡ ಸಾಧನೆಯೆಂಬ ಭಾವ ಅವರಲ್ಲಿತ್ತು. ಆದರೆ ಇಡೀ ಕ್ರೀಡಾಜಗತ್ತು ನಿಬ್ಬೆರಗಾಗುವಂತಹ ಸಾಧನೆಯನ್ನು ಮಾಡಿದರು. ‘ಒಲಿಂಪಿಕ್ ಇತಿಹಾಸದಲ್ಲಿಯೇ ಅತಿದೊಡ್ಡ ಅಚ್ಚರಿಯ ಸಾಧನೆ ಇದು’ ಎಂದು ಜಗತ್ತು ಬಣ್ಣಿಸುತ್ತಿದೆ.

ಚಿನ್ನದ ಸಂಭ್ರಮ

ಗಣಿತದ ಪ್ರೀತಿ, ಆಟದ ಅಚ್ಚುಮೆಚ್ಚು

ಆನಾಗೆ ಬಾಲ್ಯದಿಂದಲೂ ಗಣಿತದ ಲೆಕ್ಕಗಳು ಮತ್ತು ಆಟಗಳೆಂದರೆ ಅಚ್ಚುಮೆಚ್ಚು. ಆದರೆ, ಕೌಟುಂಬಿಕ ವಾತಾವರಣದಲ್ಲಿ ಓದಿಗೆ ಹೆಚ್ಚು ಪ್ರಾಧಾನ್ಯ ಇತ್ತು. ಇವರೂ ಶಾಲೆಯಲ್ಲಿ ಚುರುಕಾಗಿದ್ದರು. ಅದರಲ್ಲೂ ಗಣಿತದಲ್ಲಿ ಎತ್ತಿದ ಕೈ. 2008–11 ವಿಯೆನ್ನಾದ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಅವರು ಗಣಿತಶಾಸ್ತ್ರ ಅಧ್ಯಯನ ಮಾಡಿದರು. ನಂತರ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. ಕ್ಯಾಟೊಲೋನಿಯಾದ ಪಾಲಿಟೆಕ್ನಿಕ್ ವಿಶ್ವವಿದ್ಯಾಲಯದಿಂದ ಗಣಿತ ಪ್ರಬಂಧಕ್ಕೆ ಪಿಎಚ್.ಡಿ. ಕೂಡ ಗಳಿಸಿದರು. ಸದ್ಯ ಲಾಸೆನ್‌ನಲ್ಲಿರುವ ಇಕೊಲ್ ಪಾಲಿಟೆಕ್ನಿಕ್ ಫೆಡರಲ್ ಡಿ ಲಾಸನ್ ಸಂಸ್ಥೆಯಲ್ಲಿ ಪೋಸ್ಟ್ ಡಾಕ್ಟರಲ್ ರಿಸರ್ಚರ್ ಆಗಿದ್ದಾರೆ.

ಓದಿನ ಏಕತಾನತೆ ಮತ್ತು ಒತ್ತಡವನ್ನು ನಿಭಾಯಿಸಲು ಕ್ರೀಡೆಯಲ್ಲಿ ತೊಡಗಿಕೊಳ್ಳುತ್ತಿದ್ದರು. 2011ರಲ್ಲಿ ಟ್ರಯಥ್ಲಾನ್ ಮತ್ತು ಡುಯಥ್ಲಾನ್‌ನಲ್ಲಿ ಸ್ಪರ್ಧಿಸುತ್ತಿದ್ದರು. ಆದರೆ ಒಂದು ಬಾರಿ ಬಿದ್ದು ಗಾಯಗೊಂಡ ನಂತರ ಶಸ್ತ್ರಚಿಕಿತ್ಸೆಗೊಳಗಾದರು. ಅದರಿಂದಾಗಿ ಅವರು ಹಲವು ತಿಂಗಳುಗಳವರೆಗೆ ಓಡುವ ಅಭ್ಯಾಸವನ್ನು ಬಿಟ್ಟರು. ಚೇತರಿಸಿಕೊಂಡ ನಂತರವೂ ಓಡುವುದು ಸುಲಭವಾಗಿರಲಿಲ್ಲ. ಆದ್ದರಿಂದ ಸೈಕ್ಲಿಂಗ್‌ನತ್ತ ವಾಲಿದರು. ಹೆಚ್ಚು ಶ್ರಮ ಮತ್ತು ಸಮಯ ಬೇಡುವ ಈ ಕ್ರೀಡೆಯ ಜೊತೆಗೆ ಗಣಿತ ಅಧ್ಯಯನ, ಸಂಶೋಧನೆಯನ್ನೂ ಮುಂದುವರಿಸಿದರು.

2014ರಲ್ಲಿ ಕ್ಯಾಟಲಾನ್ ಎಂಬ ಹವ್ಯಾಸಿ ಸೈಕ್ಲಿಂಗ್ ತಂಡವನ್ನು ಸೇರಿಕೊಂಡರು. ಮೊದಲಿಗೆ ಸಣ್ಣ ಅಂತರದ ಸೈಕ್ಲಿಂಗ್‌ಗಳಲ್ಲಿ ಭಾಗವಹಿಸುತ್ತಿದ್ದ ಅವರು, 2016ರಲ್ಲಿ ಅಂತರರಾಷ್ಟ್ರೀಯ ಸೈಕ್ಲಿಂಗ್‌ನಲ್ಲಿ ಭಾಗವಹಿಸಲು ಆರಂಭಿಸಿದರು. ನ್ಯೂಯಾರ್ಕ್‌ನ ಗ್ರ್ಯಾನ್ ಫಾಂಡೊ ರೇಸ್‌ನಲ್ಲಿ ಗೆದ್ದ ನಂತರ ಅವರ ಆತ್ಮವಿಶ್ವಾಸ ಹೆಚ್ಚಿತು. ಪ್ರತಿಷ್ಠಿತ ಟೂರ್ ಡಿ ಆರ್ಡೆಷ್‌ನಲ್ಲಿ ಭಾಗವಹಿಸಿದ್ದರು. ಆದರೆ ಮೊದಲ ಸ್ಟೇಜ್‌ನಲ್ಲಿ ಬಿದ್ದು ಗಾಯಗೊಂಡ ಅವರು ಹಿಂದೆ ಸರಿಯಬೇಕಾಯಿತು. ಆದರೆ ಈ ಯಾವ ಅಡೆತಡೆಗಳೂ ಅವರನ್ನು ಸೈಕ್ಲಿಂಗ್ ಪ್ರೀತಿಯಿಂದ ದೂರ ಮಾಡಲಿಲ್ಲ. ಆಸ್ಟ್ರಿಯಾ ನ್ಯಾಷನಲ್ ರೇಸ್‌ಗಳಲ್ಲಿ ಗೆದ್ದು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು.

ಟೋಕಿಯೊದಲ್ಲಿ ಏರಿಳಿತದ ರಸ್ತೆಗಳಲ್ಲಿ ಬಿರುಬಿಸಿಲನ್ನೂ ಲೆಕ್ಕಿಸದೇ ವಿಶ್ವವಿಖ್ಯಾತ ಸೈಕ್ಲಿಸ್ಟ್‌ಗಳನ್ನು ಹಿಂದಿಕ್ಕಿ ಇತಿಹಾಸ ಬರೆದರು. ಮೂರು ಗಂಟೆ, 52 ನಿಮಿಷ 45 ಸೆಕೆಂಡುಗಳಲ್ಲಿ 137 ಕಿ.ಮೀ ಕ್ರಮಿಸಿದರು.

‘ಅಗ್ರ 25ರಲ್ಲಿ ಸ್ಥಾನ ಪಡೆಯುವ ನಿರೀಕ್ಷೆ ನನಗಿತ್ತು. ಚಿನ್ನ ಗೆದ್ದಿರುವ ಬಗ್ಗೆ ನನಗೆ ನಂಬಿಕೆಯೇ ಆಗುತ್ತಿಲ್ಲ’ ಎಂದು ಕಣ್ಣರಳಿಸಿ ಹೇಳುವ ಆನಾ ಕಿಸನ್‌ಹಾಫರ್ ಕೋವಿಡ್ ಕಾಲಘಟ್ಟದ ಒಲಿಂಪಿಕ್ಸ್‌ನ ಅಚ್ಚರಿಯಾಗಿ ಹೊರಹೊಮ್ಮಿದ್ದಾರೆ.

ಸಿರಿಯಾ ಪೋರಿಯ ಹೆಜ್ಜೆಗುರುತು

ಸಿರಿಯಾದ ಹೆಂಡ್ ಜಾಜಾ

ಟೋಕಿಯೊ ಒಲಿಂಪಿಕ್ ಕೂಟದ ಟೇಬಲ್ ಟೆನಿಸ್‌ನಲ್ಲಿ ಅವತ್ತು 12 ವರ್ಷದ ಪೋರಿ ಹೆಂಡ್ ಜಾಜಾ, ಪಿಂಗ್ ಪಾಂಗ್ ಚೆಂಡನ್ನು ಚುರುಕಾಗಿ ಹೊಡೆಯುತ್ತಿದ್ದರೆ ನೋಡುಗರ ಕಂಗಳಲ್ಲಿ ಆನಂದಬಾಷ್ಪ ತುಳುಕುತ್ತಿತ್ತು.

ರಕ್ತಸಿಕ್ತ ಅಧ್ಯಾಯಗಳೇ ತುಂಬಿರುವ ಸಿರಿಯಾ ದೇಶದ ಈ ಬಾಲೆ ಭವಿಷ್ಯದ ಬೆಳದಿಂಗಳಂತೆ ಕಂಡಿದ್ದಳು. ತನ್ನ ದೇಶದ ಕರಾಳ ಸ್ಥಿತಿಯ ನಡುವೆಯೂ ಟೇಬಲ್ ಟೆನಿಸ್ ಆಟಗಾರ್ತಿಯಾಗಿ ಒಲಿಂಪಿಕ್ ಮಟ್ಟಕ್ಕೆ ಬೆಳೆದಿರುವ ಹೆಂಡ್ ಆಟಕ್ಕೆ ಅನುಭವಿ ಆಟಗಾರರೂ ಮನಸೋತರು. ಅವತ್ತು ಆಸ್ಟ್ರಿಯಾದ 39 ವರ್ಷದ ಆಟಗಾರ್ತಿ ಲಿಯು ಜಿಯಾ 4–0 ಗೇಮ್‌ಗಳಿಂದ ಹೆಂಡ್ ವಿರುದ್ಧ ಜಯಿಸಿದರು. ಆದರೆ ಅವರ ಕಣ್ಣುಗಳಲ್ಲಿ ತಾವು ಗೆದ್ದ ಖುಷಿ ಇರಲಿಲ್ಲ. ಜಾಜಾ ಬಗ್ಗೆ ಮೆಚ್ಚುಗೆಯ ಭಾವ ಇತ್ತು. ಪ್ರೀತಿಯ ಮಿಂಚಿತ್ತು. ಜಾಜಾ ತಲೆಯನ್ನು ನೇವರಿಸಿ ಅಪ್ಪಿಕೊಂಡ ದೃಶ್ಯ ಮನಮಿಡಿಯುವಂತಿತ್ತು.

‘ಪಂದ್ಯಕ್ಕೂ ಮುನ್ನ ನನ್ನ ಮಗಳೊಂದಿಗೆ ಮಾತನಾಡಿದ್ದೆ. ನಾನು ಇವತ್ತು ನಿನಗಿಂತ ಕೇವಲ ಎರಡು ವರ್ಷ ಹಿರಿಯಳಾದ ಹುಡುಗಿಯ ಎದುರು ಆಡುತ್ತಿದ್ದೇನೆಂದು ಗೊತ್ತಾ ಎಂದು ಕೇಳಿದ್ದೆ. ಅದಕ್ಕವಳು, ಹಾಗಿದ್ದರೆ ಇವತ್ತು ನೀನು ಸೋಲುವಂತೆಯೇ ಇಲ್ಲ ಎಂದಿದ್ದಳು. ಅದಕ್ಕೆ ಪ್ರತಿಕ್ರಿಯೆಯಾಗಿ, ನನ್ನನ್ನು ಒತ್ತಡಕ್ಕೆ ತಳ್ಳಬೇಡವೆಂದಿದ್ದೆ. ಆದರೆ ಆಕೆ ಬಹಳ ಚೆನ್ನಾಗಿ ಆಡಿದಳು’ ಎಂದು ಲಿಯು ಜಿಯಾ ಹೇಳಿದ್ದರು. ಲಿಯು ಪಂದ್ಯ ಗೆದ್ದಿರಬಹುದು. ಆದರೆ, ಜಾಜಾ ಎಲ್ಲರ ಮನ ಗೆದ್ದಿದ್ದಳು.

ಸಿರಿಯಾದ ಹೆಂಡ್ ಜಾಜಾ ಅವರೊಂದಿಗೆ ಆಸ್ಟ್ರಿಯಾದ ಲಿಯು ಜಿಯಾ

ಒಲಿಂಪಿಕ್ಸ್ ಉದ್ಘಾಟನೆಯ ಪಥಸಂಚಲನದಲ್ಲಿ ತನ್ನ ದೇಶದ ಆರು ಕ್ರೀಡಾಪಟುಗಳ ತಂಡವನ್ನು ಧ್ವಜಧಾರಿಯಾಗಿ ಈ ಬಾಲೆ ಮುನ್ನಡೆಸಿದ್ದಳು. ಈ ಕೂಟದಲ್ಲಿ ಭಾಗವಹಿಸಿದ ಅತಿ ಕಿರಿಯ ಕ್ರೀಡಾಪಟು ಎಂಬ ಹೆಗ್ಗಳಿಕೆಯೂ ಜಾಜಾಳದ್ದು. 2011ರಿಂದ ಸದಾ ಯುದ್ಧ ಭೀತಿ, ಬಾಂಬ್ ದಾಳಿ, ಕಗ್ಗೊಲೆಗಳನ್ನೇ ಕಂಡಿರುವ ದೇಶ ಸಿರಿಯಾದಲ್ಲಿ ಬದುಕುಳಿಯುವುದೇ ದೊಡ್ಡ ಸವಾಲೆಂಬ ಪರಿಸ್ಥಿತಿ ಇದೆ. ಅಂಥದ್ದರಿಂದ ಒಲಿಂಪಿಕ್ ಮಟ್ಟಕ್ಕೆ ಬೆಳೆಯುವುದು ಇನ್ನೆಷ್ಟು ಕಷ್ಟದ ಕೆಲಸವಾಗಿರಬೇಕಲ್ಲವೇ?

ಹಾಮಾ ನಗರದಲ್ಲಿ ಜನಿಸಿದ ಹೆಂಡ್ ಜಾಜಾ ಬಾಂಬ್ ಸದ್ದು, ಬೆಂಕಿ, ಹೊಗೆ, ಹೆಣಗಳನ್ನು ನೋಡಿಕೊಂಡೇ ಬೆಳೆದ ಹುಡುಗಿ. ಹೆಜ್ಜೆಹೆಜ್ಜೆಗೂ ಅನುಭವಿಸಿದ ಸವಾಲುಗಳಿಗೆ ಲೆಕ್ಕವಿಲ್ಲ. ಎಷ್ಟೋ ದಿನಗಳವರೆಗೆ ಟೇಬಲ್ ಟೆನಿಸ್ ಪ್ಯಾಡಲ್ ಮತ್ತು ಚೆಂಡು ಕೂಡ ಸಿಗದೇ ಪರದಾಡಿದ್ದಳು. ಒಂದು ಜಾಗದಿಂದ ಮತ್ತೊಂದು ಸ್ಥಳಕ್ಕೆ ಹೋಗುವುದೇ ದುಸ್ತರವಾದಾಗ ತರಬೇತಿ ಪಡೆಯುವುದೂ ಕಷ್ಟವಾಗಿತ್ತು. ಕಾಂಕ್ರೀಟ್ ನೆಲದ ಮೇಲೆ ಟಿಟಿ ಅಭ್ಯಾಸ ನಡೆಸಿದ ದಿನಗಳಿಗೆ ಲೆಕ್ಕವಿಲ್ಲ. ಹಲವು ಬಾರಿ ವಿದ್ಯುತ್ ಕಡಿತ ಮತ್ತು ಇಂಟರ್‌ನೆಟ್ ಸಂಪರ್ಕವಿಲ್ಲದೇ ಅನುಭವಿಸಿದ ತೊಂದರೆಗಳು ಅನೇಕ.

ಯುದ್ಧದಿಂದಾಗಿ ಸ್ಥಳೀಯ ಟೂರ್ನಿಗಳೂ ಇಲ್ಲ. ವಿದೇಶಗಳಿಗೆ ಹೋಗಲು ಆಸ್ಪದವೂ ಇರಲಿಲ್ಲ. ಆಗೆಲ್ಲ ಮನೆಯೊಳಗಿನ ಗೋಡೆಗೆ ಚೆಂಡು ಹೊಡೆಯುತ್ತ ಅಭ್ಯಾಸ ಮಾಡಿದ್ದಳು. ಪರಿಸ್ಥಿತಿ ತಾತ್ಕಾಲಿಕವಾಗಿ ತಿಳಿಯಾದಾಗ ವೀಸಾ, ಪಾಸ್‌ಪೋರ್ಟ್ ಸಿದ್ಧ ಮಾಡಿಕೊಂಡು ವಿದೇಶಗಳಿಗೆ ಟೂರ್ನಿಗಳಲ್ಲಿ ಆಡಲು ಹೋಗುವ ತಯಾರಿ ಮಾಡಿಕೊಂಡದ್ದು ಕೂಡ ಹತ್ತಾರು ಬಾರಿ ರದ್ದಾಗಿದ್ದೂ ಇದೆ.

‘ಕಳೆದ ಐದು ವರ್ಷಗಳಲ್ಲಿ ಹಲವು ಬಗೆಯ ಅನುಭವಗಳಾಗಿವೆ. ಅದರಲ್ಲೂ ದೇಶದಲ್ಲಿ ಮತ್ತು ಸುತ್ತಮುತ್ತಲು ಯುದ್ಧ, ಸಂಘರ್ಷಗಳು ನಡೆದಾಗ ಒಲಿಂಪಿಕ್ ಸಹಾಯಧನ ಕೊಡುವುದನ್ನು ಮುಂದೆ ಹಾಕುತ್ತಿದ್ದರು. ಆಗ ಬಹಳ ಕಷ್ಟಪಡುತ್ತಿದ್ದೆ. ಆದರೆ ನಮ್ಮ ಕನಸುಗಳಿಗಾಗಿ ಹೋರಾಡಲೇಬೇಕು. ಅದೆಷ್ಟೇ ಕಷ್ಟವಾದರೂ ಸರಿ. ಗುರಿ ಮುಟ್ಟುವವರೆಗೂ ಹೋರಾಡುವುದನ್ನು ಬಿಡಲೇಬಾರದು. ನನ್ನಂತೆ ಬಹಳಷ್ಟು ಜನ ಸಂಕಷ್ಟದಲ್ಲಿದ್ದಾರೆ. ಅವರಿಗೆಲ್ಲ ಇದೇ ನನ್ನ ಸಂದೇಶ’ ಎಂದು ಜಾಜಾ ಹೇಳುತ್ತಾಳೆ.

ಅವಳೀಗ ಟೋಕಿಯೊದಿಂದ ಒಲಿಂಪಿಯನ್ ಆಗಿ ಮರಳುತ್ತಿದ್ದಾಳೆ. ಭವಿಷ್ಯದಲ್ಲಿ ಪದಕ ಜಯಿಸುವ ಎಲ್ಲ ಸಾಮರ್ಥ್ಯವೂ ಆಕೆಗೆ ಇದೆ. ಸಾಗಬೇಕಾದ ಹಾದಿಯೂ ಬಹಳಷ್ಟಿದೆ. ಆದರೆ ತನ್ನ ಸಾಧನೆ ಮತ್ತು ಛಲದ ಮೂಲಕ ಸಿರಿಯಾದ ಮಕ್ಕಳ ಕಣ್ಣುಗಳಿಂದ ಭಯದ ಛಾಯೆ ಸರಿಸಿ, ಭರವಸೆಯ ಬೆಳಕು ತುಂಬುವ ಶಕ್ತಿಯೂ ಜಾಜಾಗೆ ಇದೆ.

(ಮೂಲ: ಎಎಫ್‌ಪಿ, ಪಿಟಿಐ, ರಾಯಿಟರ್ಸ್)

ಪದಕದ ಹೊಳಪಿನ ‘ಒಲಿಂಪಿಯನ್ ನಿವಾಸ’

ವಿಕ್ರಂ ಕಾಂತಿಕೆರೆ

ಐದು ವರ್ಷಗಳ ಹಿಂದೆ, ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಯುತ್ತಿದ್ದ ಕಾಲ. ಪದಕದ ಕನಸು ಹೊತ್ತುಕೊಂಡು ಜಗತ್ತಿನ ಮೂಲೆ ಮೂಲೆಯಲ್ಲೂ ಕ್ರೀಡಾಪಟುಗಳು ಕಠಿಣ ಅಭ್ಯಾಸದಲ್ಲಿ ನಿರತರಾಗಿದ್ದ ಸಂದರ್ಭ. ಹೀಗಿರಲು, ಅತ್ತ ಕುವೈತ್‌ನಲ್ಲಿ ಅಬ್ದುಲ್ಲ ಅಲ್ ರಶೀದಿ ಅವರ ತರಬೇತಿಯೂ ಜೋರಾಗಿ ನಡೆಯುತ್ತಿತ್ತು. ಗಾಳಿಯಲ್ಲಿ ಓಲಾಡುವ ‘ಗುರಿ’ಯನ್ನು ಭೇದಿಸಿ ಪಾಯಿಂಟ್ ಗಳಿಸುವ ಪ್ರಯತ್ನಕ್ಕೆ ಬಿಡುವೇ ಇರಲಿಲ್ಲ. ಆ ಪ್ರಯತ್ನದ ಫಲವಾಗಿ ಅವರಿಗೆ ಒಲಿಂಪಿಕ್ಸ್‌ನಲ್ಲಿ ಪದಕ ಒಲಿಯಿತು.

ಈ ವರ್ಷ ಟೋಕಿಯೊದಲ್ಲೂ ಅಬ್ದುಲ್ಲ ಅಲ್ ರಶೀದಿ ಕಾಣಿಸಿಕೊಂಡರು. ಸ್ಕೀಟ್‌ನಲ್ಲಿ ಪಾಲ್ಗೊಂಡರು, ಮತ್ತೆ ಕೊರಳಿಗೆ ಪದಕ ಹಾಕಿಕೊಂಡರು. ಈ ಬಾರಿ ಅವರೊಂದಿಗೆ ದೊಡ್ಡ ಮಗ ಮನ್ಸೂರ್ ಅಲ್ ರಶೀದಿ ಮತ್ತು ಸಣ್ಣ ಮಗ ತಲಾಲ್ ಅಲ್ ರಶೀದಿ ಕೂಡ ಇದ್ದರು. ಮೂವರೂ ಸ್ಪರ್ಧಾಳುಗಳಾಗಿಯೇ ಟೋಕಿಯೊಗೆ ಹೊರಟಿದ್ದರು. ಅಬ್ದುಲ್ಲ, ದೊಡ್ಡ ಮಗನನ್ನು ಹಿಂದಿಕ್ಕಿ ಪದಕ ಗೆದ್ದುಕೊಂಡಿದ್ದರೆ ತಲಾಲ್, ಟ್ರ್ಯಾಪ್ ವಿಭಾಗದಲ್ಲಿ ಕಣಕ್ಕೆ ಇಳಿದಿದ್ದರು.

ಶೂಟಿಂಗ್‌ನಲ್ಲಿ ಚಿನ್ನ ಗೆದ್ದ, ಇರಾನ್‌ನಲ್ಲಿ ಶುಶ್ರೂಷಕ ವೃತ್ತಿಯಲ್ಲಿ ತೊಡಗಿರುವ 41 ವರ್ಷದ ಜವಾದ್ ಫರೋಗಿ, ಫಿಲಿಪ್ಪೀನ್ಸ್‌ಗೆ ಒಲಿಂಪಿಕ್ಸ್‌ನಲ್ಲಿ ಮೊದಲ ಚಿನ್ನದ ಪದಕ ಗೆದ್ದುಕೊಟ್ಟ ವೇಟ್‌ಲಿಫ್ಟರ್ ಹಿದಿಲಿನ್ ಡಯಾಜ್, ಯುದ್ಧಪೀಡಿತ ಸಿರಿಯಾದಿಂದ ಬಂದು ಟೇಬಲ್ ಟೆನಿಸ್‌ನಲ್ಲಿ ಪಾಲ್ಗೊಂಡ 12ರ ಹರೆಯದ ಬಾಲಕಿ ಹೆಂಡ್ ಜಾಜಾ, ಈಜು ಸ್ಪರ್ಧೆಯ 400 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಚಾಂಪಿಯನ್ ಆದ ಟ್ಯುನೀಷಿಯಾದ 18 ವರ್ಷದ ಅಹಮ್ಮದ್ ಹಫ್ನೋಯಿ ಮುಂತಾದವರಂತೆಯೇ ಅಬ್ದುಲ್ಲ ಅಲ್ ರಶೀದಿ ಅವರದೂ ಒಲಿಂಪಿಕ್ಸ್ ಅಂಗಣದಲ್ಲಿ ಭಿನ್ನ ಕಥೆ.

1996ರಲ್ಲಿ ಅಟ್ಲಾಂಟದಿಂದ ಶುರುವಾದ ಅಬ್ದುಲ್ಲ ಅವರ ಒಲಿಂಪಿಕ್ಸ್ ಯಾನ, ಟೋಕಿಯೊವರೆಗೆ ಬಂದು ತಲುಪಿದೆ. ಅವರಿಗೆ ಈಗ 58ರ ಹರೆಯ. ಬತ್ತದ ಯುವತ್ವದೊಂದಿಗೆ ಇನ್ನಷ್ಟು ಉತ್ಸಾಹಿಯಾಗಿರುವ ಅವರು ಮುಂದಿನ ಒಲಿಂಪಿಕ್ಸ್‌ನಲ್ಲೂ ಪಾಲ್ಗೊಳ್ಳುವುದಾಗಿ ಈಗಾಗಲೇ ತಿಳಿಸಿದ್ದಾರೆ. ಚಿನ್ನ ಗೆಲ್ಲುವವರೆಗೆ ವಿರಮಿಸುವುದಿಲ್ಲ ಎಂಬುದು ಅವರ ನೀತಿ; ಹಟ.

1996ರಿಂದ ಒಲಿಂಪಿಕ್ಸ್‌ಗಳಲ್ಲಿ ಸತತವಾಗಿ ಪಾಲ್ಗೊಂಡಿದ್ದರೂ ರಿಯೊದಲ್ಲಿ ಅಬ್ದುಲ್ಲ ಅಲ್ ರಶೀದಿ ಹೆಚ್ಚು ಸುದ್ದಿಯಾಗಿದ್ದರು. ಯಾಕೆಂದರೆ ಆ ವರ್ಷ ಅವರು ‘ಸ್ವತಂತ್ರ’ ಸ್ಪರ್ಧಿಯಾಗಿ ಕಣಕ್ಕೆ ಇಳಿದಿದ್ದರು. ಸರ್ಕಾರವು ಕ್ರೀಡಾ ಕ್ಷೇತ್ರದ ಮೇಲೆ ಸುಖಾಸುಮ್ಮನೆ ಮೂಗು ತೂರಿಸುತ್ತಿದೆ ಎಂದು ಆರೋಪಿಸಿ ಕುವೈತ್ ಮೇಲೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿಷೇಧ ಹೇರಿತ್ತು. ಹೀಗಾಗಿ ರಾಷ್ಟ್ರಧ್ವಜದ ಲಾಂಛನದಡಿ ಸ್ಪರ್ಧಿಸಲು ಅಬ್ದುಲ್ಲ ಅವರಿಗೆ ಸಾಧ್ಯವಾಗಲಿಲ್ಲ. ಇಂಗ್ಲಿಷ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುವ ಆರ್ಸೆನಲ್ ಫುಟ್‌ಬಾಲ್ ಕ್ಲಬ್ ತಂಡದ ಜೆರ್ಸಿ ತೊಟ್ಟುಕೊಂಡು ಗುರಿ ಇಟ್ಟಿದ್ದ ಅವರು ಅಂದು ಸಾಮಾಜಿಕ ಜಾಲತಾಣಗಳಲ್ಲಿ ತುಂಬಿನಿಂತಿದ್ದರು. ಅಂದಿನಿಂದ ಅವರ ಅಭಿಮಾನಿಗಳ ಸಂಖ್ಯೆ ಹೆಚ್ಚುತ್ತಾ ಹೋಗಿತ್ತು. ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆರ್ಸೆನಲ್ ತಂಡದ ಸಾಧನೆಯನ್ನು ಅಬ್ದುಲ್ಲ ಅವರ ಸಾಮರ್ಥ್ಯದೊಂದಿಗೆ ಹೋಲಿಸಿ ನೆಟ್ಟಿಗರು ಹರಿಯಬಿಟ್ಟ ಪೋಸ್ಟ್‌ಗಳು ವೈರಲ್ ಆಗಿದ್ದವು.

ಸಂಭ್ರಮ ಹೆಚ್ಚಿಸಿದ ರಾಷ್ಟ್ರಧ್ವಜ

ರಿಯೊದಲ್ಲಿ ಪದಕ ಗೆದ್ದರೂ ಅಬ್ದುಲ್ಲ ಅವರ ಒಳಗೆ ಬೇಗುದಿ ತುಂಬಿತ್ತು. ಪದಕ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಧ್ವಜದ ಬದಲು ಒಲಿಂಪಿಕ್ ಧ್ವಜ ಮೇಲೇರಿದಾಗ ಮತ್ತು ರಾಷ್ಟ್ರಗೀತೆ ಮೊಳಗದೇ ಇದ್ದಾಗ ಅನುಭವಿಸಿದ ನೋವು ಕಾಡುತ್ತಲೇ ಇತ್ತು. ಹೀಗಾಗಿ ದೇಶಕ್ಕಾಗಿಯೂ ಪದಕವೊಂದನ್ನು ಗೆಲ್ಲುವ ಛಲ ಹೆಚ್ಚಾಗಿತ್ತು. ಮಕ್ಕಳಿಗೂ ತರಬೇತಿ ಕೊಡಿಸಿ ಮನೆಯನ್ನೇ ಒಲಿಂಪಿಯನ್ನರ ನಿವಾಸವಾಗಿಸಿಕೊಂಡಿದ್ದರು.



ಅಬ್ದುಲ್ಲ ಅಲ್ ರಶೀದಿ... ಗುರಿಯತ್ತ ಚಿತ್ತ

ಮಗನೂ ಸ್ಪರ್ಧಿಸಿದ್ದ ವಿಭಾಗದಲ್ಲಿ ಗೆದ್ದ ಪದಕದೊಂದಿಗೆ ರಾಷ್ಟ್ರಧ್ವಜದ ಸೊಂಪೂ ರಾಷ್ಟ್ರಗೀತೆಯ ಇಂಪೂ ಸೇರಿದಾಗ ಮನದಲ್ಲಿ ಸಾವಿರ ಮೊಲ್ಲೆಗಳು ಅರಳಿದವು; ಸಾವಿರದ ನೆನಪಿನ ಬುತ್ತಿಗೆ ಕಂಪು ತುಂಬಿದವು.

ಶೂಟಿಂಗ್‌ನಲ್ಲಿ ಅಬ್ದುಲ್ಲ ಅವರದು ಗಮನಾರ್ಹ ಸಾಧನೆ. 1995ರ ವಿಶ್ವಕಪ್‌ನಿಂದಲೇ ಅವರು ಪದಕಗಳನ್ನು ಗೆಲ್ಲುತ್ತ ಬಂದಿದ್ದಾರೆ.

ಹೆಗಲಲ್ಲಿ ನಾಲ್ಕು ಬಣ್ಣಗಳ ಧ್ವಜವನ್ನು ಹಾಕಿಕೊಂಡು ಪದಕ ಮತ್ತು ಹೂಗುಚ್ಛ ಎತ್ತಿಹಿಡಿದು ಸಂಭ್ರಮಿಸುವ ಅಬ್ದುಲ್ಲ ಅವರ ನಗೆಯಲ್ಲಿ ಹಲವು ಭಾವಗಳಿವೆ. ಮುಂದಿನ ಒಲಿಂಪಿಕ್ಸ್ ವೇಳೆಗೆ ಅವರ ಹಣೆಯಲ್ಲಿ ಇನ್ನಷ್ಟು ನೆರಿಗೆಗಳು ಕಾಣಿಸಿಕೊಳ್ಳುವುದು ಸಹಜ. 60 ದಾಟುವ ಮುಖದಲ್ಲಿ ಮೂಡುವ ಆ ನಗುವಿನಲ್ಲಿ 18ರ ಹರೆಯದ ಮುಗ್ಧತನ ಮೇಳೈಸಿದರೆ ಅದುವೇ ಕ್ರೀಡೆಯ ಗೆಲುವು; ಒಲಿಂಪಿಕ್ಸ್ ಚೆಲುವು.

ಮುನ್ನೋಟ 01-08-2021 ರಿಂದ 07-08-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಇತರರ ನೆರವಿಗೆ ಹೋಗಲೇಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ಸಹಾಯ ಮಾಡಿದಲ್ಲಿ ನಿಮ್ಮ ಬಗ್ಗೆ ಸಮಾಜದಲ್ಲಿ ಗೌರವ ಮೂಡುತ್ತದೆ. ಆರ್ಥಿಕ ಪರಿಸ್ಥಿತಿಯು ಚೇತರಿಕೆ ಕಾಣಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣಬಹುದು. ಮುಂದಾಲೋಚನೆ ಮಾಡಿ ಕೈಗೊಂಡ ಕೆಲಸಗಳಲ್ಲಿ ಯಶಸ್ಸನ್ನು ಕಾಣುವಿರಿ. ಅಡೆತಡೆಗಳಿಂದ ನಿಂತಿದ್ದ ಕೆಲವು ಕೆಲಸಗಳು ಈಗ ನಿಧಾನವಾಗಿ ಮುಂದುವರೆಯುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಂಸಾರದ ಹೊಂದಾಣಿಕೆಯಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ. ಹೊಸ ರೀತಿಯ ಆದಾಯದ ಮೂಲವನ್ನು ಹುಡುಕುವಿರಿ. ಕಳೆದುಹೋಗಿದ್ದ ಕೆಲವು ವಸ್ತುಗಳು ಪುನಃ ದೊರೆಯುವ ಸಾಧ್ಯತೆ ಇದೆ. ಮಕ್ಕಳಿಗಾಗಿ ಹೆಚ್ಚು ಖರ್ಚು ಮಾಡಬೇಕಾದ ಪರಿಸ್ಥಿತಿ ಇರುತ್ತದೆ. ಯಾಂತ್ರಿಕ ವಿಷಯ ಪರಿಣತರಿಗೆ ಉತ್ತಮ ಆದಾಯ ಬರುತ್ತದೆ. ಆಸ್ತಿಯ ಬೆಲೆಯ ಬಗ್ಗೆ ವಾಗ್ವಾದ ಆರಂಭವಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವ್ಯವಹಾರದಲ್ಲಿ ಒಂದು ಪ್ರಮುಖವಾದ ಸಮಸ್ಯೆಯನ್ನು ಅತ್ಯಂತ ನಾಜೂಕಾಗಿ ಪರಿಹರಿಸುವಿರಿ. ರಾಜಕೀಯ ವ್ಯಕ್ತಿಗಳು ಹೆಚ್ಚು ವಿವಾದಾತ್ಮಕ ವಿಷಯಗಳ ಬಗ್ಗೆ ಮಾತನಾಡದಿರುವುದು ಒಳ್ಳೆಯದು. ತಾಯಿಯ ಆರೋಗ್ಯದ ಬಗ್ಗೆ ಗಮನಹರಿಸಿರಿ. ದ್ರವ ಪದಾರ್ಥಗಳ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ಕ್ರೀಡಾಪಟುಗಳಿಗೆ ಧನಸಹಾಯ ದೊರೆತು ಹೆಚ್ಚು ಅಭ್ಯಾಸಕ್ಕೆ ಅನುಕೂಲವಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಉನ್ನತಮಟ್ಟದ ನಿರ್ಧಾರಗಳನ್ನು ಕೈಗೊಳ್ಳುವಾಗ ಉದ್ವೇಗಕ್ಕೆ ಒಳಗಾಗದಿರಿ. ತಾಳ್ಮೆಯಿಂದ ನಡೆದುಕೊಂಡಲ್ಲಿ ನಿಮ್ಮ ನಿರ್ಣಯ ಫಲಿಸುತ್ತದೆ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆ ಅಗತ್ಯ. ಸಾಲ ಕೊಡುವ ವಿಚಾರ ಕೈಬಿಡಿರಿ. ಉದ್ಯೋಗಸ್ಥ ಮಹಿಳೆಯರಿಗೆ ಉದ್ಯೋಗದಲ್ಲಿ ಪ್ರಶಂಸೆ ಸಿಗುತ್ತದೆ. ಕುಟುಂಬದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕೃಷಿ ಕ್ಷೇತ್ರದಲ್ಲಿರುವವರು ಉಪಕರಣಗಳನ್ನು ಬಳಸುವಾಗ ಕಾಲುಗಳಿಗೆ ಪೆಟ್ಟಾಗುವ ಸಂದರ್ಭವಿದೆ, ಹೀಗಾಗಿ ಎಚ್ಚರವಾಗಿರಿ. ಮಕ್ಕಳ ಆರೋಗ್ಯದ ಬಗ್ಗೆ ಸೂಕ್ತ ಗಮನ ಕೊಡುವುದು ಮುಖ್ಯ. ರಾಜಕೀಯ ರಂಗದವರಿಗೆ ತುರುಸಿನ ಓಡಾಟಗಳು ಇರುತ್ತವೆ. ಸೇವಕ ವರ್ಗದವರಿಂದ ಸ್ವಲ್ಪ ಧನ ನಷ್ಟ ಆಗಬಹುದು. ಕೆಲವೊಂದು ಸಮಸ್ಯೆಗಳ ಪರಿಹಾರಕ್ಕಾಗಿ ದೈವ ಕಾರ್ಯಗಳಲ್ಲಿ ತೊಡಗುವಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕುಟುಂಬದಲ್ಲಿನ ಕೆಲವು ಸಮಸ್ಯೆಗಳಿಗೆ ಬಂಧುಗಳಿಂದ ಪರಿಹಾರ ದೊರೆಯುತ್ತದೆ. ಸರ್ಕಾರದಿಂದ ಕೆಲವೊಂದು ಸಹಾಯಧನ ಬರುವುದು ತಡವಾಗಬಹುದು. ಮಹಿಳೆಯರ ಮಾನಸಿಕ ಒತ್ತಡಗಳು ಕಡಿಮೆಯಾಗುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಸೋದರರ ಸಹಾಯದಿಂದಾಗಿ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆಯನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಉದ್ಯೋಗ ಬದಲಾವಣೆಯಾಗಿ ಮೇಲಾದಾಯ ದೊರೆಯುವ ಜಾಗ ಸಿಗುವ ಅವಕಾಶವಿದೆ. ಗೃಹ ನಿರ್ಮಾಣ ಕಾರ್ಯಗಳನ್ನು ಮುಂದೂಡಬೇಕಾದ ಪರಿಸ್ಥಿತಿ ಎದುರಾಗಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಉನ್ನತ ಅಧ್ಯಯನವನ್ನು ಮಾಡಬೇಕೆನ್ನುವವರು ಈಗ ಯತ್ನಿಸಬಹುದು. ಸ್ವಂತ ಆರೋಗ್ಯದ ಬಗ್ಗೆ ಗಮನಹರಿಸುವುದು ಅಗತ್ಯ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಹೂಡಿಕೆ ಮಾಡುವ ವಿಷಯಗಳಲ್ಲಿ ಬಹಳ ಎಚ್ಚರವಿರಲಿ. ಆದಾಯಕ್ಕಿಂತ ಖರ್ಚು ಹೆಚ್ಚಿಗೆ ಇರುತ್ತದೆ. ಕೆಲವೊಂದು ಕೃಷಿ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳುವ ವಿಷಯದ ಮಾತುಕತೆಯಲ್ಲಿ ಪ್ರಗತಿಯನ್ನು ಕಾಣಬಹುದು. ಕೆಲವರ ಆರೋಗ್ಯ ಸ್ವಲ್ಪ ವ್ಯತ್ಯಾಸವಾಗಿ ಚಿಕಿತ್ಸೆಗೆ ಹೆಚ್ಚು ಹಣ ಖರ್ಚಾಗಬಹುದು. ದಾಯಾದಿಗಳೊಂದಿಗೆ ಇದ್ದ ಆಸ್ತಿಯ ವ್ಯವಹಾರಗಳು ಇತ್ಯರ್ಥಕ್ಕೆ ಬರುತ್ತವೆ. ಸಣ್ಣಸಣ್ಣ ವಿಚಾರಗಳಿಗೆ ತಲೆಕೆಡಿಸಿಕೊಂಡು ಮಾನಸಿಕ ನೆಮ್ಮದಿ ಕಳೆದುಕೊಳ್ಳಬೇಡಿ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಅದೃಷ್ಟ ನಿಮ್ಮ ಪಾಲಿಗಿದ್ದು, ನಿಮ್ಮ ಕೆಲಸಗಳಲ್ಲಿ ಜಯ ದೊರೆಯುತ್ತದೆ. ಕೃಷಿ ಕೆಲಸಗಳು ಸುಗಮವಾಗಿ ಆಗುತ್ತವೆ. ಸ್ವಂತ ಉದ್ದಿಮೆಯನ್ನು ನಡೆಸುತ್ತಿರುವವರಿಗೆ ಏರಿಳಿತ ಕಂಡುಬಂದರೂ ನಷ್ಟ ಇರುವುದಿಲ್ಲ. ಕೆಲವೊಂದು ಋಣ ಪರಿಹಾರದಿಂದ ನಿರಾಳತೆಯನ್ನು ಕಾಣುವಿರಿ. ಮಾತನಾಡುವಾಗ ಒರಟುತನ ಸಲ್ಲದು. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆಯನ್ನು ಕಾಣಬಹುದು. ಹಣದ ವಿಷಯದಲ್ಲಿ ಎದ್ದಿದ್ದ ಅನುಮಾನಗಳು ಪರಿಹಾರವಾಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮೇಲಧಿಕಾರಿಗಳ ಅವಕೃಪೆಗೆ ತುತ್ತಾಗುವುದನ್ನು ತಪ್ಪಿಸಿಕೊಳ್ಳಲು ತಾಳ್ಮೆ ಮತ್ತು ಬುದ್ಧಿವಂತಿಕೆಯನ್ನು ಬಳಸಿರಿ. ಸಹೋದ್ಯೋಗಿಗಳು ಹೇಳುವ ಚಾಡಿಮಾತುಗಳನ್ನು ಅಳೆದು ತೂಗಿನೋಡಿ ಅನುಸರಿಸಿರಿ. ಗೃಹಿಣಿಯರು ಗೃಹ ಉಪಯೋಗಿ ವಸ್ತುಗಳನ್ನು ಖರೀದಿಸಲು ಬೇಗ ಮುಂದಾಗುವರು. ಆರ್ಥಿಕ ಸಮಸ್ಯೆ ಪರಿಹಾರವಾಗಿ ಋಣಮುಕ್ತರಾಗುವ ಲಕ್ಷಣಗಳಿವೆ. ವಿವಾಹ ಆಕಾಂಕ್ಷಿಗಳಿಗೆ ವಿವಾಹ ಸಂಬಂಧ ಕೂಡಿ ಬರಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹೊಸ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಅನುಭವಿಗಳ ಮಾತುಗಳನ್ನು ಕೇಳುವುದು ಉತ್ತಮ. ಯುವಕರು ತಾಳ್ಮೆ ಕೆಟ್ಟು ಮಿತಿಮೀರಿ ಮಾತನಾಡುವುದು ಬೇಡ. ನ್ಯಾಯಾಲಯದ ಕಟ್ಟಳೆಗಳಲ್ಲಿ ಯಶಸ್ಸಿನ ಹಾದಿ ಇರುತ್ತದೆ. ಮಹಿಳೆಯರು ಕೆಲದಿನಗಳ ಮಟ್ಟಿಗೆ ರಾಜಕೀಯ ವಿಷಯಗಳಲ್ಲಿ ತಮ್ಮ ನಿರ್ಧಾರವನ್ನು ಪ್ರಕಟಿಸುವುದು ಬೇಡ. ರೈತಾಪಿ ವರ್ಗದವರು ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಹಣಕಾಸಿನ ವ್ಯವಹಾರಗಳಲ್ಲಿ ಜಾಗರೂಕರಾಗಿರುವುದು ಬಹಳ ಉತ್ತಮ. ಗೃಹೋದ್ಯಮವನ್ನು ಮಾಡುತ್ತಿರುವವರ ವ್ಯವಹಾರದಲ್ಲಿ ವಿಸ್ತರಣೆ ಆಗಲಿದೆ. ನೂತನ ಗೃಹದ ಒಳಾಂಗಣ ಅಲಂಕಾರಗಳ ಬಗ್ಗೆ ಚಿಂತನೆ ಮಾಡುವಿರಿ. ಅಗತ್ಯಕ್ಕಿಂತ ಹೆಚ್ಚು ಹಿರಿಯರ ಓಲೈಕೆಯನ್ನು ಮಾಡಿ ನಿಮ್ಮ ಕಾರ್ಯಗಳನ್ನು ಮಾಡಿಕೊಳ್ಳುವಿರಿ. ಸ್ಥಿರಾಸ್ತಿಯನ್ನು ಖರೀದಿಸುವ ವಿಷಯದಲ್ಲಿ ಹೆಚ್ಚು ಮುತುವರ್ಜಿ ತೋರುವಿರಿ. ಸರ್ಕಾರಿ ಕೆಲಸಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸನ್ನು ಕಾಣಬಹುದು.

ಪದಬಂಧ 2698



ಮೇಲಿನಿಂದ ಕೆಳಕ್ಕೆ

1. ನಾರಾಯಣ ಪುಣ್ಯಕತೆಯ ಮಧು 6
2. ಬೇರೆಯ ಭಾಷೆಯಿಂದ ಬಂದ ಶಬ್ಧ 3
3. ಸಹನೆಯಿಂದ ಸಾಧನೆ ಮಾಡಿದವ 3
4. ಲಕ್ಷ್ಮಿಯನ್ನು ಒಲಿಸಿಕೊಂಡವ 4
5. ಒಲ್ಲದ ಮನದ ನಮಸ್ಕಾರ 3
6. ಯಾವ ನಿಬಂಧನೆ, ನಿರ್ಬಂಧಗಳಿಗೂ ಸಿಲುಕದವ 5
7. ಆಡುಭಾಷೆಯಲ್ಲಿ ಅನುಭವದಿಂದ ಬಂದ ನುಡಿ 2
10. ತಲೆ ಬಾಗಿಸಿದ ಸುಸಂಸ್ಕೃತ 5
12. ಹರ ಹರ ಮಹಾದೇವನಲ್ಲಿ ಒಮ್ಮೆ ಹರ ಹರಣನಾದಾಗ 6
14. ಸಮರ ಒಮ್ಮೊಮ್ಮೆ ಒಳಗೊಳಗೆ ತಣ್ಣಗೆ ನಡೆಯುತ್ತದೆ 3
15. ದುಂಬಿಯ ಮಿಲನ ಬಯಸುವ ಹೂವು 4
16. ಆತ್ಮಾಹುತಿಯಾದ ಶಿವ ಪತ್ನಿ 2
19. ಬೆಳಗುವ ಸೂರ್ಯ ಸರ್ವಸ್ವಾಮಿಯ ರೂಪ ಪಡೆದಾಗ 3
20. ಮತ್ತೆ ಮೂಡುವ ಅನುಕಂಪ 3

ಎಡದಿಂದ ಬಲಕ್ಕೆ

1. ನಗುವಿನಿಂದ ಹುಟ್ಟಿದವ 4
3. ಕೆಲಸಕ್ಕೆ ಬಳಸುವ ಸಲಕರಣೆಗಳ ಒಟ್ಟಿಲು ಹೀಗೆ 6
5. ಒಂಭತ್ತು ತಿಂಗಳ ಗರ್ಭಿಣಿ 5
7. ಕಾವ್ಯಮಯವಾಗಿ ಹಾಡನ್ನು 3
8. ಮಗನೆಂದು ತಿಳಿಯುತ ಕೃಷ್ಣನನ್ನು ಆಡಿಸಿದವಳು 3
9. ಜಿಂಕೆಯಂತಹ ಕಣ್ಣು 5
11. ತಪದಿಂದ ಹರಿದ ನದಿ 3
13. ಒತ್ತರಿಸಿಕೊಂಡು ಬರುವ ತಾಲ್ಲೂಕಿನ ಕಂದಾಯಾಧಿಕಾರಿ 5
16. ಎಲ್ಲವನ್ನೂ ಒಳಗೊಳ್ಳುವ 3
17. ಹತ್ತು ವರ್ಷಗಳಿಗೊಮ್ಮೆ ನಡೆಯುವ ತಲೆ ಎಣಿಕೆ 3
18. ಅಂಗೈಯಲ್ಲಿ ಅರಳಿದ ತಾವರೆ 5
21. ಆಗಸಕ್ಕೆ ಸಮನಾದವ 6
22. ಹಕ್ಕಿಗಳ ಚೇತೋಹಾರಿ ಚಿಲಿಪಿಲಿ 4

ಪದಬಂಧ ಉತ್ತರ -2697

ಮೇಲಿಂದ ಕೆಳಕ್ಕೆ

1. ಕುವೆಂಪು 2.ಸದಾ 3.ನಿಂಬೆಕಷಾಯ 4.ಕಲಾಭರಣ 7.ಸುಮಧುರಾ 9.ರಸಾಲ 11.ವಿಷಯ 13.ವಲಯ 14.ಕಾವ್ಯದೇವಿ 15.ಕವಿಕಲ್ಪನೆ 16.ಅಂಕಣಕಾರ 17.ತರಾಸು 20.ದ್ರವಣ 23.ಕಸಿ

ಎಡದಿಂದ ಬಲಕ್ಕೆ

1. ಕುಮಾರವ್ಯಾಸ 3.ನಿಂಬಕ 5.ದಾಳಿಂಬೆ 6.ಲಾಲಿಸು 8.ಪುರಂದರ 10.ಷಾಪುರ 11.ವಿಶಾಲಹೃದಯ 12.ಣವರಾ 14.ಕಾಯಕ 16.ಅಂಬಿಕಾತನಯ 18.ವಿವೇಕ 19.ಸುಮತೀಂದ್ರ 21.ವಿಕಲ್ಪ 22.ಕಾರಕ 24.ನೆವಾರ 25.ಸಿಹಿಹೂರಣ

ಜನರ ಮಧ್ಯೆ ಉದಯಿಸಿದ ಲೋಕಾನುಭವದ ಸಾಹಿತ್ಯ

ಕೃಷ್ಣ ಕೊಲ್ಹಾರ ಕುಲಕರ್ಣಿ/ಸುಭಾಸ ಕಾಖಂಡಕಿ

ಸಂತರು, ಶರಣರು, ಹರಿದಾಸರ ಬದುಕು ಎಂದರೆ ಬೆಟ್ಟದ ಮೇಲೆ ಅರಳಿದ ಸುಂದರವಾದ ಹೂವು ಇದ್ದಂತೆ. ತನ್ನ ಪಾಡಿಗೆ ತಾನು ಬೆಳೆದು ಮೊಗ್ಗಾಗಿ ಹೂವಾಗಿ ಅರಳಿ ಪರಿಸರದಲ್ಲೆಲ್ಲ ಪರಿಮಳವನ್ನು ಬೀರುವುದು. ಆ ಪರಿಮಳವನ್ನು ಆಘ್ರಾಣಿಸುವುದು, ಬಿಡುವುದು ಪರಿಸರದ ಜನರ ಮನಸ್ಸಿಗೆ ಬಿಟ್ಟದ್ದು. ಆದರೆ, ಅದರ ಆಕರ್ಷಣೆಗೆ ಒಳಗಾದರೆ ಸಾಕು, ನಿರಂತರ ಆ ಪರಿಸರದಲ್ಲೇ ಬದುಕುವ ಆಸೆ ಸಹಜವಾಗಿ ಬರುತ್ತದೆ. ಆ ಪರಿಮಳವನ್ನೇ ಬೇಕಿದ್ದರೆ ಮಾನವ ಬದುಕಿನ ಶಾಶ್ವತ ಮೌಲ್ಯಗಳು ಎನ್ನಬಹುದು. ಹರಿದಾಸರ ಕೀರ್ತನೆಗಳೆಂದರೆ ಅಂತಹ ಮೌಲ್ಯಗಳ ಕಟ್ಟು.

ಕರ್ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಸಾಮಾಜಿಕ ಆಂದೋಲನದ ದೃಷ್ಟಿಯಿಂದ ಹರಿದಾಸರು ಮತ್ತು ಅವರ ಸಾಹಿತ್ಯ ಪ್ರಮುಖವಾಗುತ್ತದೆ. ಅದುವೇ ಅದರ ವೈಶಿಷ್ಟ್ಯ ಕೂಡ. ಅವರ ನೆಲೆ ಆ ಮೊದಲಿನವರಂತೆ ಸಾರಾಸಗಟಾಗಿ ವೈದಿಕ ವಿರೋಧಿ ನೆಲೆಯಾಗಿರಲಿಲ್ಲ. ಬಹುಸಂಖ್ಯಾತರು ನಂಬಿದ, ಶ್ರದ್ಧೆ ಇಟ್ಟ ಧರ್ಮದೊಂದಿಗೆ ಸಾಗುತ್ತ ಅದರಲ್ಲಿ ಕಂಡುಬರುವ ಕುಂದುಕೊರತೆಗಳನ್ನು, ನ್ಯೂನತೆಗಳನ್ನು ಶ್ರದ್ಧೆಗೆ ಪೆಟ್ಟು ಬೀಳದಂತೆ ಎತ್ತಿ ತೋರಿಸಿ, ಅವರ ಮನ ಒಪ್ಪುವಂತೆ ಮಾಡಿದರು.

> ಬೆಂಗಳೂರಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಆಗಸ್ಟ್ 5ರಂದು ನಡೆಯಲಿರುವ ಸಮಾರಂಭದಲ್ಲಿ ನಾಲ್ಕೂ ಸಂಪುಟಗಳು ಲೋಕಾರ್ಪಣೆಗೊಳ್ಳಲಿವೆ

ಹಿರಿಯ ವಿದ್ವಾಂಸರಾಗಿದ್ದ ಎಂ.ಎಂ. ಕಲಬುರ್ಗಿ ಅವರು ಹೇಳುವಂತೆ, ‘ಮಾರ್ಗ ಸಾಹಿತ್ಯವನ್ನು ಹಂಪಿಯ ಹರಿಹರಾದಿಗಳು ದೇಶಿಗೆ ಹೊರಳಿಸಿದರೆ, ಅದನ್ನು ಪುರಂದರಾದಿಗಳು ಸಂಗೀತ ಪ್ರಧಾನವಾಗಿಸಿದರು. ಈಗ ವಾಚನ ಯೋಗ್ಯವಾಗಿದ್ದ ಮಾರ್ಗ ಸಾಹಿತ್ಯಕ್ಕೆ ಬದಲು ದೇಶಿ ಸಾಹಿತ್ಯ ಗಮಕಯೋಗ್ಯವಾಗಿ ಪುರಂದರಾದಿಗಳಿಂದ ಗಾನಯೋಗ್ಯವಾಗಿ ಹರಿಯಿತು. ಅರಮನೆಯಿಂದ ಮನೆಗೆ, ಮನೆಯಿಂದ ಮನೆ ಮನೆಗೆ ಮುನ್ನಡೆಯಿತು’.

ಬಹುತೇಕ ಸಾಹಿತ್ಯ, ಅರಮನೆ-ಗುರುಮನೆ ಮತ್ತು ಪಂಡಿತರ ಮನಮನೆಗಳಿಗಷ್ಟೇ ಸೀಮಿತವಾಗಿರುತ್ತದೆ. ಆದರೆ ಹರಿದಾಸ ಸಾಹಿತ್ಯವು ಈ ಮೂರೂ ಮನೆಗಳೊಂದಿಗೆ ಪಾಮರರ ಮನೆಯನ್ನೂ ಮುಟ್ಟಿತು. ಹರಿದಾಸ ಸಾಹಿತ್ಯ ಎಲ್ಲ ಯುಗದಲ್ಲೂ ಸಲ್ಲುವಂಥದ್ದು. ದಲಿತವರ್ಗದಿಂದ ಹಿಡಿದು ಸಮಾಜದ ಅತ್ಯಂತ ಪ್ರಬಲ ವರ್ಗದವರೆಗೆ ಎಲ್ಲರಲ್ಲೂ ಹರಿದಾಸ ಸಾಹಿತ್ಯ ಸ್ವೀಕಾರವಾಗಿದೆ. ದ್ಯಾಮವ್ವ, ದುರ್ಗವ್ವರ ಗುಡಿಗಳಲ್ಲಿ, ಎಲ್ಲ ವರ್ಗದ ಭಜನೆಗಳಲ್ಲಿ ಕೂಡ ದಾಸರ ಪದಗಳು ಅಂದಿನಿಂದಲೂ ಪ್ರವೇಶ ಪಡೆದಿವೆ. ಹೀಗೆ ಕನ್ನಡದ ಯಾವ ಸಾಹಿತ್ಯವೂ ಪ್ರವೇಶ ಪಡೆದಂತೆ ಕಾಣುವುದಿಲ್ಲ.

ಅವರವರ ಧರ್ಮದ ಅಸ್ತಿತ್ವವನ್ನು ಉಳಿಸಿ ಬೆಳೆಸಿ ಮುಂದುವರಿಯುವಂತೆ ಮಾಡಿದ ಬಹುಪಾಲು ಶ್ರೇಯಸ್ಸು ಹರಿದಾಸ ಸಾಹಿತ್ಯದ್ದಾದರೆ, ಅದರೊಂದಿಗೆ ಮೋಕ್ಷ ಅಥವಾ ಮುಕ್ತಿ ಸಾಧನೆಗೆ ಸ್ತ್ರೀಯರಿಗೂ ಶೂದ್ರರಿಗೂ ಒದಗಿಸಿ ಕೊಡುವಲ್ಲಿ ಮುಂದಾದದ್ದು ಅದರ ಇನ್ನೊಂದು ವೈಶಿಷ್ಟ್ಯ (ಮೋಕ್ಷ ಅಥವಾ ಮುಕ್ತಿಗೆ ಅರ್ಹತೆ ಇಲ್ಲಿ ಅಮುಖ್ಯ, ಸಾಧನೆ ಮುಖ್ಯ). ಅವರವರ ಧರ್ಮಗಳ ಅಸ್ತಿತ್ವವನ್ನು ಉಳಿಸಿ ಬೆಳೆಸಿದರೆಂದು ಹೇಳಿದಾಕ್ಷಣ ಆ ಧರ್ಮಗಳಲ್ಲಿರುವ ಹಿಂಸಾತ್ಮಕ ಆಚರಣೆಗಳನ್ನು, ಬಲಿ ಪದ್ಧತಿಗಳನ್ನು, ಡಂಬಾಚಾರಗಳನ್ನು ಅವರು ಪುರಸ್ಕರಿಸಲಿಲ್ಲ. ಅವುಗಳನ್ನು ತೀಕ್ಷ್ಣವಾಗಿ ಖಂಡಿಸುತ್ತ, ಸರಳವಾದ ವಿಧಾನಗಳ ಮೂಲಕ ಜೀವನವನ್ನು ಸಾಗಿಸುತ್ತ ಸಾಧನೆಯನ್ನು ಮಾಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

ದೇವರ ಆರಾಧನೆಗೆ ಜನಸಾಮಾನ್ಯರಿಗಿದ್ದ ಎಲ್ಲ ತೊಡಕುಗಳನ್ನು ನಿವಾರಣೆ ಮಾಡಿದ್ದು ದಾಸ ಸಾಹಿತ್ಯದ ಬಹುಮುಖ್ಯ ಲಕ್ಷಣವಾಗಿದೆ. ಕಳೆದ ಐದು ಶತಮಾನಗಳಿಂದ ಇಂದಿನವರೆಗೂ ನಮ್ಮ ನಾಡಿನ ಜನಜೀವನವನ್ನು ಉತ್ತಮಗೊಳಿಸಲು ದಾಸ ಸಾಹಿತ್ಯವು ಒಂದು ಮಹತ್ವಪೂರ್ಣ ಸೇವೆಯನ್ನು ಸಲ್ಲಿಸುತ್ತಿದೆ. ಯಾವುದೇ ಸಾಹಿತ್ಯದ ಉದ್ದೇಶವೂ ಅದುವೇ ಆಗಿರಬೇಕಷ್ಟೆ.

ದಾಸ ಸಾಹಿತ್ಯವು ಜನರ ಮಧ್ಯ ಜನರಿಂದ, ಜನರ ಮುಂದೆಯೇ ಹುಟ್ಟಿದ ಸಾಹಿತ್ಯ. ಯಾವುದೇ ಒಂದು ಕೇಂದ್ರೀಕೃತ ವ್ಯವಸ್ಥೆಯಲ್ಲಿ ಹುಟ್ಟಿದ್ದಲ್ಲ. ಮನೆ ಮನೆ, ಓಣಿ ಓಣಿಗಳಲ್ಲಿ ತಿರುಗಾಡುತ್ತ, ಹಾಡುತ್ತ, ಕುಣಿಯುತ್ತ ಸಾಗುವಾಗ ಕಂಡ ಲೋಕಾನುಭವ ಅದು. ಭಾವ ತನ್ಮಯತೆಯಲ್ಲಿ ಮೂಡಿಬಂದ ಈ ಕೃತಿಗಳು ಕವಿತೆಯ ಎಲ್ಲ ಕಾವ್ಯಾಂಶಗಳಿಂದ ತುಂಬಿ ನಿಂತುವು. ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯ ಪ್ರತೀಕವಾದ ಈ ರಚನೆಗಳು ಶುದ್ಧ ಭಾವಗೀತೆಗಳಾದುವು. ಜ್ಞಾನ, ಭಕ್ತಿಗಳ ಜೊತೆಗೆ ದಾಸರು ವೈರಾಗ್ಯವನ್ನೂ ಜನರಿಗೆ ಬೋಧಿಸಿದರು.

ದಾಸಕೂಟದ ನೋಟ ವಿಶಾಲವಾದುದು. ದಾಸ ಸಾಹಿತ್ಯದ ಪ್ರಾರಂಭ ಕಾಲದ ವ್ಯಾಸರಾಯರು, ಕುರುಬ ಜನಾಂಗದ ಕನಕದಾಸರ ಮೇಲೆ ಪ್ರೀತಿ ತೋರಿದುದನ್ನು ಎಲ್ಲರೂ ಬಲ್ಲರು. ಹಂಪಿಯಲ್ಲಿದ್ದ ರಾಮಾವಧೂತರಿಂದ ಮುಸ್ಲಿಮ ಧರ್ಮದ, ಪಿಂಜಾರ ಶೇಖ ಬಡೇಸಾಬ (ಕ್ರಿ.ಶ. 1882-1940) ರಾಮದಾಸರಾದರು. ಶ್ರೀರಾಮ ಅಂಕಿತದಲ್ಲಿ ಅವರ 800ಕ್ಕಿಂತ ಅಧಿಕ ಕೀರ್ತನೆಗಳು ಪ್ರಕಟವಾಗಿವೆ.

ರಾಯಚೂರು ಹತ್ತಿರದ ಚಂಡರಕಿಯ ಬೇಡ ದೊರೆಗಳು ಗೋಪಾಲದಾಸರ ಪ್ರಭಾವದಿಂದ ಭಾಗವತರಾದರು. ಕೋಸಗಿಯ ಗುರು ಜಗನ್ನಾಥದಾಸರ ಪ್ರಭಾವದಿಂದ ಹಲವಾರು ನೇಕಾರರು ಹರಿದಾಸರಾದರು. ಅಸ್ಕಿಹಾಳ ಗೋವಿಂದದಾಸರಿಂದ ಪ್ರಭಾವಿತರಾಗಿ ಅನೇಕ ಕ್ಷೌರಿಕರು, ದಲಿತರು ಹರಿದಾಸರಾದರು. ಮಾನವಿಯ ಶಾಮಸುಂದರ ವಿಠಲದಾಸರು ಹರಿಜನನಾದ ಮೂರ್ತೆಪ್ಪ ಅವರನ್ನು ತಮ್ಮ ಆಪ್ತ ವರ್ಗಕ್ಕೆ ಸೇರಿಸಿಕೊಂಡು ಹರಿದಾಸರನ್ನಾಗಿ ಮಾಡಿದ್ದರು. ಚಂಡರಕಿ ರಾಘವೇಂದ್ರದಾಸರ ಪ್ರಭಾವದಿಂದ ಹೂಗಾರ ಭೀಮಪ್ಪ, ಭೀಮದಾಸರೆನಿಸಿ ಅಥಣಿಯಲ್ಲಿ ಅಭಿನವ ಮಂತ್ರಾಲಯವನ್ನೇ ಸೃಷ್ಟಿಸಿದರು. ಹಲವಾರು ಕೀರ್ತನೆಗಳನ್ನೂ ರಚಿಸಿದರು. ವಿಶಿಷ್ಟಾದ್ವೈತ ಸಂಪ್ರದಾಯ ತುಳಸೀರಾಮದಾಸರ ಶಿಷ್ಯ ಪರಂಪರೆಯಲ್ಲಿ ಗಾಣಿಗರಾದ ಮಳಿಗೆ ರಂಗಸ್ವಾಮಿದಾಸರು, ಬಣಜಿಗರಾದ ಚನ್ನಪಟ್ಟಣದ ಅಹೋಬಲದಾಸರು, ದಲಿತರಾದ ಚೆಂಚುದಾಸರು ತಮ್ಮ ಕೃತಿಗಳ ಮೂಲಕ ಗಮನಸೆಳೆದವರು.

ಒಳನೋಟ

ಹರಿದಾಸರು ಸಂಸಾರವನ್ನು ತೊರೆದ ಸಂನ್ಯಾಸಿಗಳಲ್ಲ. ಬದುಕಿನುದ್ದಕ್ಕೂ ಹೆಂಡತಿ ಮಕ್ಕಳೊಡನೆ, ನೆರೆಹೊರೆಯವರೊಂದಿಗೆ, ಊರ ಮಂದಿಯ ನಡುವೆ ಬಾಳಿದವರು. ಸಾಮಾನ್ಯರಲ್ಲಿ ಸಾಮಾನ್ಯರಾಗಿ, ಭಕ್ತರಲ್ಲಿ ಭಕ್ತರಾಗಿ, ಭಾವುಕರಲ್ಲಿ ಭಾವುಕರಾಗಿ ಇದ್ದವರು. ಭಗವಂತ ಎಂದಾಕ್ಷಣ ಮೈಮೇಲೆ ದೇವರು ಬಂದಹಾಗೆ ಎಂದೂ ಹುಚ್ಚರಂತೆ, ಪಿಶಾಚಿಗಳಂತೆ ಕುಣಿದವರಲ್ಲ. ಕೈಯಿಂದ, ಬಾಯಿಯಿಂದ ಬೂದಿಯನ್ನೋ, ಇನ್ನೇನನ್ನೋ ಕೊಡುತ್ತಿರಲೂ ಇರಲಿಲ್ಲ. ನೆರೆಹೊರೆಯವರ ಪರಿಸ್ಥಿತಿಯನ್ನು ಅರಿತವರಾಗಿದ್ದರು. ಊರವರ ವ್ಯವಹಾರಗಳನ್ನು ಬಲ್ಲವರಾಗಿದ್ದರು. ಆಳುವವರ ಸರಿ ತಪ್ಪುಗಳನ್ನು ತಿಳಿದವರಾಗಿದ್ದರು. ಸಮಸ್ಯೆಗಳು ಎದುರಾದಾಗ ಅವುಗಳಿಗೆ ತಮ್ಮ ಸೀಮಿತ ಪರಿಧಿಯಲ್ಲಿ ಪರಿಹಾರವನ್ನು ಸೂಚಿಸುವಲ್ಲಿ ಸಮರ್ಥರಾಗಿದ್ದರು.

ದಾಸರು ಅನುಭಾವಿಗಳಾಗಿದ್ದರು. ಅವರಲ್ಲಿ ಕೆಲವರು ವಿದ್ವಾಂಸರಾಗಿದ್ದರು. ಶಾಸ್ತ್ರ ಪಾಂಡಿತ್ಯವನ್ನು ಪಡೆದವರಾಗಿದ್ದರು. ಆದ್ದರಿಂದ ಅವರ ಕೃತಿಗಳು ಕೇವಲ ಮನರಂಜನೆಯನ್ನು ಕೊಡುವಂಥವಾಗಲಿಲ್ಲ. ವಿಚಾರ ಪ್ರಚೋದಕವಾದುವು. ಚಿತ್ತ ಶುದ್ಧಿಯನ್ನು ಮಾಡುವಂಥವಾದುವು. ಅಂತರಂಗವನ್ನು ಪ್ರವೇಶಿಸಿ ರಸೋತ್ಪಾದನೆಯನ್ನು ಮಾಡುವ ಶಕ್ತಿಯುಳ್ಳವಂಥವಾದವು. ಆದ್ದರಿಂದ ಈ ಕೀರ್ತನೆಗಳಲ್ಲಿ ಉತ್ತಮ ಕಾವ್ಯಗಳಲ್ಲಿರುವ ಲಕ್ಷಣಗಳನ್ನೂ ಗುರುತಿಸಲಾಗಿದೆ. ಹಾಗೆಂದು ಎಲ್ಲ ದಾಸರ ಕೀರ್ತನೆಗಳು ಉತ್ತಮ ಕಾವ್ಯಮಟ್ಟದವು ಎಂದು ಹೇಳಲಾಗದು. ಅಲ್ಲಲ್ಲಿ ಜೊಳ್ಳೂ ಇದೆ. ಗಟ್ಟಿ ಅಧಿಕ.

ಸಂಸ್ಕೃತದಿಂದಲೇ ಮುಕ್ತಿ, ಶಾಸ್ತ್ರಪಾಂಡಿತ್ಯವಿಲ್ಲದವರು ಪಾಮರರು, ಪಾಪಿಗಳು ಎನ್ನುವ ಮನೋಧರ್ಮ ಪ್ರಚಲಿತದಲ್ಲಿದ್ದಾಗ ದಾಸರು ಕನ್ನಡದಲ್ಲಿ ವೇದಾಂತದ ಗಹನ ತತ್ವಗಳನ್ನು ಹೇಳಿದರು. ಕನ್ನಡದಲ್ಲಿಯೇ ಜನಸಾಮಾನ್ಯರು ಮುಕ್ತಿಗೆ ಪೂರ್ವವಾದ ಜ್ಞಾನವನ್ನು ಪಡೆಯಲು ದಾರಿ ಮಾಡಿಕೊಟ್ಟರು. ದಾಸರ ಕೀರ್ತನೆಗಳಲ್ಲಿ ಬರದೇ ಇದ್ದ ವಿಚಾರಗಳೇ ಇಲ್ಲ. ಧರ್ಮ, ನೀತಿ, ಸಂಸಾರ, ವೇದಾಂತ, ರಾಜಕಾರಣ, ಅರ್ಥನೀತಿ, ಸಾಮಾನ್ಯ ನೀತಿ, ವಿನೋದ ಎಲ್ಲವೂ ಇವೆ. ಮುಖ್ಯವಾಗಿ ಜೀವನಗಂಗೆಯ ಬೃಹದ್ದರ್ಶನವನ್ನು ಅವರು ತಮ್ಮ ಸಾಹಿತ್ಯದಲ್ಲಿ ಮಾಡಿಸಿದ್ದಾರೆ.

ಹರಿದಾಸರ ಸಮಾಜಮುಖಿ ಕೀರ್ತನೆಗಳ ನಾಲ್ಕು ಸಂಪುಟಗಳನ್ನು ನಾವು ಸಂಗ್ರಹಿಸಿದ್ದು ಈ ಹಿನ್ನೆಲೆಯಲ್ಲಿ. ಜಾತಿ ಭೇದವಿಲ್ಲದೆ ಸಮಾಜದಲ್ಲಿಯ ಮೂಢನಂಬಿಕೆ, ತಪ್ಪು ಆಚರಣೆಗಳನ್ನು ತಿದ್ದಲು ಪ್ರಯತ್ನಿಸುವುದು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪ್ರೇರೇಪಿಸುವ ನೀತಿ ಬೋಧಕ ಕೃತಿಗಳನ್ನು ನಾವು ಆಯ್ಕೆ ಮಾಡಿಕೊಂಡಿದ್ದೇವೆ. ಇವುಗಳನ್ನು ನಾಡಿನ ಹರಿದಾಸಸಾಹಿತ್ಯದ ಪ್ರಖ್ಯಾತ ವಿದ್ವಾಂಸರು ಸಂಗ್ರಹಿಸಿ ಕೊಟ್ಟಿದ್ದಾರೆ. ಪ್ರತಿಯೊಬ್ಬ ಹರಿದಾಸರ ಕೀರ್ತನೆಗಳ ಮೊದಲು ಆಯಾ ಹರಿದಾಸರ ಸಂಕ್ಷಿಪ್ತ ಪರಿಚಯ, ಅವರ ಸಾಹಿತ್ಯದ ವೈಶಿಷ್ಟ್ಯವನ್ನೂ ಕೊಡಲು ಪ್ರಯತ್ನಿಸಿದ್ದೇವೆ. ❖



ಹರಿದಾಸರ ಸಮಾಜಮುಖಿ ಚಿಂತನೆಗಳು ಭಾಗ-1
ಸಂ: ಕೃಷ್ಣ ಕೊಲ್ಹಾರ ಕುಲಕರ್ಣಿ, ಸುಭಾಸ ಕಾಖಂಡಕಿ
ಪುಟಗಳು: 252

ಭಾಗ-2: ಸಂ: ಕೆ.ಗೋಕುಲನಾಥ
ಪುಟಗಳು: 236

ಭಾಗ-3: ಸಂ: ಸ್ವಾಮಿರಾವ್ ಕುಲಕರ್ಣಿ
ಪುಟಗಳು: 238

ಭಾಗ-4: ಸಂ: ಜಿ.ಅಶ್ವತ್ಥನಾರಾಯಣ, ನಾ.ಗೀತಾಚಾರ್ಯ
ಪುಟಗಳು: 262

ಪು: 252

ಎಲ್ಲ ಸಂಪುಟಗಳ ಒಟ್ಟು ಬೆಲೆ: ₹ 800
(ಇನ್ಫೊಸಿಸ್ ಪ್ರತಿಷ್ಠಾನ ನೆರವು ನೀಡಿರುವ ಕಾರಣ ₹ 400ಕ್ಕೆ ನಾಲ್ಕೂ ಸಂಪುಟಗಳು ಸಿಗಲಿವೆ)
ಪ್ರ: ವಿಜಯ ಪ್ರಕಾಶನ, ವಿಜಯಪುರ
ಸಂ: 9342018470

ನೀರಿನ ಸಮಸ್ಯೆಯ ಮೂಲದ ಹುಡುಕಾಟ

ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಕೃಷಿ ಮಾಡುತ್ತಾ, ಓದುಗರಿಂದ ಸೈ ಎನಿಸಿಕೊಂಡಿರುವ ಲೇಖಕ ಜಾಣಗೆರೆ ವೆಂಕಟರಾಮಯ್ಯ. ಕಥೆ, ಕಾದಂಬರಿ, ಪ್ರವಾಸ ಕಥನ, ಜೀವನ ಸಂಕಥನ ಹೀಗೆ ಹಲವು ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡಿರುವ ಅವರು, ದೇಶ ಮೊದಲ ಲಾಕ್‌ಡೌನ್ ಕಂಡ ಸಮಯದಲ್ಲಿ ಧೇನಿಸಿ ಬರೆದ ಮಹಾ ಕಾದಂಬರಿ ‘ಜಲಯುದ್ಧ’. ಹೆಸರೇ ಸೂಚಿಸುವಂತೆ ಈ ಕೃತಿ ನಮ್ಮನ್ನು ಕಾಡುತ್ತಿರುವ, ಹಿಂಸಿಸುತ್ತಿರುವ ಜಲ ವಿವಾದದ ಕಥಾವಸ್ತುವನ್ನು ಒಳಗೊಂಡಿದೆ. ವಾಸ್ತವದಲ್ಲಿ ನಿಂತುಕೊಂಡು ಚರಿತ್ರೆಯನ್ನೂ ಅವಲೋಕಿಸುವ ಈ ಕಾದಂಬರಿ, ಭವಿಷ್ಯದ ಕುರಿತು ಒಳನೋಟವನ್ನು ಸಹ ಬೀರುತ್ತದೆ.

ಜಾಣಗೆರೆ ಅವರ ಹೋರಾಟದ ಬದುಕಿನ ಹಿನ್ನೆಲೆಯೂ ಕಾದಂಬರಿ ಪಾತ್ರಗಳ ಸೃಷ್ಟಿಯಲ್ಲಿ ಪ್ರಭಾವ ಬೀರಿರುವುದು ಎದ್ದುಕಾಣುತ್ತದೆ. ದೇವರಾಜ ಎಂಬ ಚಳವಳಿಗಾರ ಹಾಗೂ ಅಶೋಕ ಎಂಬ ಸಮಾಜ ಸೇವಕನ ಪಾತ್ರಗಳಲ್ಲಿ ಆ ಛಾಪು ಢಾಳಾಗಿದೆ. ಮುನ್ನುಡಿಯಲ್ಲಿ ಬಂಜಗೆರೆ ಜಯಪ್ರಕಾಶ್ ಅವರು ಹೇಳುವಂತೆ, ‘ಕಾದಂಬರಿಯಲ್ಲಿ ವರ್ತಮಾನ ಹಾಗೂ ಇತಿಹಾಸದ ಎರಡು ಕಥಾ ಖಂಡಗಳಿವೆ. ಅವೆರಡೂ ವರ್ತಮಾನದ ಬದುಕಿನಲ್ಲಿ ಬೆಸೆದುಕೊಳ್ಳುವುದಕ್ಕೆ ನೀರಿನ ಸಮಸ್ಯೆಯ ಕೊಂಡಿಯಿದೆ. ಕಾದಂಬರಿ ಕಥೆಯಾಗಿ ಎರಡು ಖಂಡಗಳಂತೆ ಇದ್ದರೂ ವರ್ತಮಾನದ ಸಮಸ್ಯೆ ಇತಿಹಾಸದ ಕಥಾಖಂಡದೊಳಗಿನಿಂದಲೇ ಬೆಳೆದುಕೊಂಡು ಬಂದಿದೆ’.

ಕಾದಂಬರಿಯ ಕಥಾವಸ್ತುವಿನ ಆಳಕ್ಕೆ ಹೊಕ್ಕು ಹೇಳುವುದಾದರೆ ಇಲ್ಲಿ ಕಾವೇರಿ ನದಿ ನೀರಿನ ಹಂಚಿಕೆ ಕುರಿತಾದ ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಕಲಹವಿದೆ. ಆದರೆ, ನದಿಗಳ ಹೆಸರುಗಳು ಸೂಚ್ಯವಾಗಿ ಪ್ರಸ್ತಾಪವಾಗಿವೆ. ಜಲ ವಿವಾದ ಜನರ ಬದುಕಿನ ಮೇಲೆ ಬೀರಿರುವ ಪ್ರಭಾವವನ್ನೂ ಈ ಕೃತಿ ಬಿಂಬಿಸುತ್ತದೆ. ಕಾದಂಬರಿ ಗಾತ್ರದಲ್ಲಿ ದೊಡ್ಡದಾಗಿದ್ದರೂ ಪಾತ್ರಗಳ ಸಂಖ್ಯೆ ಕಡಿಮೆಯೇ. ಲಾಕ್‌ಡೌನ್ ಸಂಕಷ್ಟದ ಚಿತ್ರಗಳೂ ಇಲ್ಲಿ ಮೆರವಣಿಗೆ ಹೊರಡುತ್ತವೆ. ಹೀಗಾಗಿ ‘ಜಲಯುದ್ಧ’ ಕೊರೊನಾ ಸಂಕಷ್ಟದೊಂದಿಗೂ ತಳಕು ಹಾಕಿಕೊಂಡಿದೆ. ಸಹಜವಾಗಿಯೇ ರಾಜಕೀಯವೂ ಸಮಾಜದ ಇತರ ಸಮಸ್ಯೆಗಳ ಚುಂಗು ಹಿಡಿದುಕೊಂಡು ಬಂದು ಎಲ್ಲೆಡೆ ತನ್ನ ರಾಡಿಯನ್ನು ಹರಡಿದೆ.

ಜಲಯುದ್ಧ
ಲೇ: ಜಾಣಗೆರೆ ವೆಂಕಟರಾಮಯ್ಯ
ಪ್ರ: ಶಶಿ ಪಬ್ಲಿಕೇಷನ್ಸ್
ಸಂ: 9448747281
ಪು: 468 ₹400

ಮೊದಲ ಓದು

ಶತಮಾನಗಳ ಹಿಂದೆ ದೇಶದಲ್ಲಿ ರಾಜಪ್ರಭುತ್ವವಲ್ಲದೆ ಬ್ರಿಟಿಷರ ಆಡಳಿತವಿದ್ದ ಕಾಲಘಟ್ಟದಲ್ಲೂ ನಮ್ಮ ನೆಲದಲ್ಲಿ ನಡೆಯುತ್ತಿದ್ದ ನೀರಿನ ಜಗಳದ ವಿವರಗಳು ಇಡುಕಿರಿದಿವೆ. ಆ ವಿವರಗಳು ಬೇರೆಯಾಗಿ ನಿಲ್ಲದೆ ಕಾದಂಬರಿಯ ಕಥಾವಸ್ತುವಿನೊಂದಿಗೆ ಸಾವಯವ ಸ್ವರೂಪದಲ್ಲಿ ಬೆರೆತುಹೋಗಿವೆ. ಯಾವುದೇ ಪ್ರದೇಶದಲ್ಲಿ ಉಗಮವಾಗುವ ನದಿಗಳು ಕೆಳಭಾಗದ ರಾಜ್ಯಗಳ ಗಡಿರೇಖೆಯನ್ನು ದಾಟಿ ಹರಿಯುತ್ತಾ ಸಮುದ್ರವನ್ನು ಸೇರುತ್ತವೆ. ಹಾಗೆ ಹರಿಯುವಾಗ ಮೂಲದವರಿಗೇ ನೀರಿಲ್ಲದಂತೆ ಮಾಡುವ ದಬ್ಬಾಳಿಕೆ, ತಮ್ಮ ಹಕ್ಕನ್ನು ಸ್ಥಾಪಿಸಿ ನೀರು ಪಡೆಯಲು ನಡೆಸುವ ಹುನ್ನಾರವನ್ನು ದಾಖಲಿಸುವ ಪ್ರಯತ್ನ ಇಲ್ಲಿದೆ. ಚುರುಕಾದ ನಿರೂಪಣೆ ಓದಿನ ವೇಗಕ್ಕೆ ಪೂರಕವಾಗಿ ಒದಗಿದೆ. ಕಥೆಗೆ ಪೂರಕವಲ್ಲದ ಹೆಚ್ಚುವರಿ ವಿವರಗಳಿಗೆ ಹೋಗದಿದ್ದರೆ ಗಾತ್ರವನ್ನು ಕುಗ್ಗಿಸಬಹುದಿತ್ತೆ ಎಂಬ ಪ್ರಶ್ನೆ ಕಾಡುತ್ತದೆ. ‘ಪ್ರತಿಯೊಬ್ಬ ಭಾರತೀಯನೂ ಓದಲೇಬೇಕಾದ ಅನನ್ಯ ಕೃತಿ’ ಎಂದು ಎಲ್.ಎನ್. ಮುಕುಂದರಾಜ್ ಅವರು ಕೃತಿಯ ಕುರಿತು ಹೇಳುವಾಗ ಅತ್ಯುತ್ಸಾಹ ತೋರಿದಂತೆ ಗೋಚರಿಸುತ್ತದೆ. ❖



ಕಥೆ
ಶಂಕರ್ ಸಿಹಿಮೊಗೆ ಬರೆದ ಕಥೆ
ಕೆಂಪು ಷರಾಬು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ
ವಿಕಾಸ್ ಆರ್. ಮೌರ್ಯ ಬರೆದ ಕವಿತೆ
ನಿರುದ್ಯೋಗಿ ಪ್ರಲಾಪ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

‘ಕಸ್ತೂರಿ ನಿವಾಸ’ದ ಕಲಾ ಸರಸ್ವತಿ

8ನೇ ಪುಟದಿಂದ....

‘ಇದು ಜೇಮ್ಸ್‌ಬಾಂಡ್ ಸಿನಿಮಾ, ಇದರಲ್ಲಿ ಗ್ಲ್ಯಾಮರ್ ಬೇಕು. ಇಲ್ಲಿ ಹೀರೋಯಿನ್ ಸ್ವಿಮ್‌ಸೂಟ್ ಹಾಕಿಕೊಂಡರೆ ತಪ್ಪೇನಿದೆ’ ಎಂದು ಕೇಳಿದೆ. ಶಿವರಾಂ ಈ ಜವಾಬ್ದಾರಿಯನ್ನು ಜಯಂತಿಗೆ ನೀಡಿದರು. ನಂತರ ‘ಪಾತ್ರಕ್ಕೆ ಅಗತ್ಯವಿದ್ದರೆ ಹಾಕಿಕೊಳ್ಳುತ್ತೇನೆ. ಆದರೆ ಟು ಪೀಸ್ ಬೇಡ. ಮೈಮುಚ್ಚಿಕೊಳ್ಳುವ ಸಿಂಗಲ್ ಪೀಸ್ ಇರಲಿ’ ಎಂದು ಜಯಂತಿ ಒಪ್ಪಿಕೊಂಡರು. ಅಂದಿನಿಂದ ಬಾಂಡ್ ಸಿನಿಮಾ ತೆಗೆದರೆ ಸ್ವಿಮ್‌ಸೂಟ್ ಧರಿಸುವುದು ಮೊದಲ ಅರ್ಹತೆಯಾಗಿತ್ತು. ಮುಂದಿನ ಚಿತ್ರದಲ್ಲಿ ಲಕ್ಷ್ಮಿ, ರೇಖಾ ನಾಯಕಿಯರಾಗಿ ಈ ರೀತಿಯೇ ನಟಿಸಿದರು.

ಇಂತಹ ಗ್ಲ್ಯಾಮರಸ್ ಪಾತ್ರದ ಬಳಿಕ ಕೌಟುಂಬಿಕ ಚಿತ್ರದಲ್ಲಿ ಭಾವನಾತ್ಮಕವಾದ ಪಾತ್ರವೊಂದನ್ನು ಆಕೆಗೆ ನೀಡಬೇಕು ಎಂದು ಅನಿಸಿದಾಗ ಕೈಗೆ ಸಿಕ್ಕ ಚಿತ್ರ ‘ಕಸ್ತೂರಿ ನಿವಾಸ’. ಈ ಚಿತ್ರವನ್ನು ನೋಡದೇ ಇರುವ ಕನ್ನಡಿಗನೇ ಇಲ್ಲ ಎನ್ನುವುದು ನನ್ನ ಭಾವನೆ. ಇದರಲ್ಲಿ ಆಕೆಯ ನಟನೆ ರಾಜ್‌ಕುಮಾರ್ ಅವರಿಗೇ ಸ್ಪರ್ಧೆ ನೀಡುವಂತಿತ್ತು. ನಮ್ಮ ಚಿತ್ರಗಳು ಮಾತ್ರವಲ್ಲ, ಎಲ್ಲ ಚಿತ್ರಗಳಲ್ಲೂ ಆಕೆ ಪಾತ್ರವನ್ನು ನಿಭಾಯಿಸುತ್ತಿದ್ದ ರೀತಿ ಶ್ಲಾಘನೀಯ. ಇವುಗಳಲ್ಲಿ ನನಗೆ ಬಹಳ ಇಷ್ಟವಾದ ಆಕೆಯ ಪಾತ್ರ ‘ಎಡಕಲ್ಲು ಗುಡ್ಡದ ಮೇಲೆ’ ಚಿತ್ರದ್ದು. ಅದೇ ರೀತಿ ‘ಮಸಣದ ಹೂವು’ ಚಿತ್ರದ ಪಾತ್ರವೂ ಅಮೋಘ. ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸಲು ಬಹಳ ಧೈರ್ಯ ಬೇಕು. ಇದರಲ್ಲಿನ ನಟನೆಗೆ ಆಕೆಗೆ ರಾಜ್ಯ ಪ್ರಶಸ್ತಿ ಬಂತು. ಇದು ಆಕೆಯ ನಟನೆಯ ಶಕ್ತಿ. She played such daring roles.

ಜಯಂತಿ ಜತೆ ಭಗವಾನ್ ಆತ್ಮೀಯ ಕ್ಷಣ

ಕಾಲ್‌ಶೀಟ್ ಸಿಗುತ್ತಿರಲಿಲ್ಲ

ಜಯಂತಿಯನ್ನು ಮತ್ತಷ್ಟು ಸಿನಿಮಾಗಳಲ್ಲಿ ನಾಯಕಿಯನ್ನಾಗಿ ಹಾಕಬೇಕು ಎನ್ನುವ ಆಸೆ ನನಗೆ ಇತ್ತು. ಆದರೆ ತೆಲುಗು, ತಮಿಳು ಹಾಗೂ ಕನ್ನಡದ ಸಿನಿಮಾಗಳಲ್ಲಿ ಆಕೆ ಎಷ್ಟು ತಲ್ಲೀನರಾಗಿದ್ದರು ಎಂದರೆ, ನನಗೆ ‘ಎರಡು ಕನಸು’ ಚಿತ್ರಕ್ಕೆ ಕಾಲ್‌ಶೀಟ್ ಸಿಗಲಿಲ್ಲ. ಕೊನೆಗೆ ಕಲ್ಪನಾ ಅವರನ್ನು ಆಯ್ಕೆ ಮಾಡಿದೆವು.

ರಾಜ್‌ಕುಮಾರ್ ಜೊತೆಗೆ ಸಲುಗೆ ಜಾಸ್ತಿ

ಜಯಂತಿಯು, ರಾಜ್‌ಕುಮಾರ್ ಅವರನ್ನು ತನ್ನದೇ ಧಾಟಿಯಲ್ಲಿ ವಿಶೇಷವಾಗಿ ‘ರಾಜ್’ ಎನ್ನುತ್ತಿದ್ದಳು. ಈ ರೀತಿ ಕರೆಯುವುದರಲ್ಲೇ ಪ್ರೀತಿ, ಆತ್ಮೀಯತೆ, ಗೌರವ, ವಿಶ್ವಾಸ ಇತ್ತು. ರಾಜ್‌ಕುಮಾರ್ ಅವರ ಜೊತೆಗಿನ 50 ವರ್ಷಗಳ ಸಂಬಂಧದಲ್ಲಿ ನನ್ನನ್ನು ಅವರೆಂದೂ ಏಕವಚನದಲ್ಲಿ ಕರೆದಿಲ್ಲ. ಆದರೆ ಸಲುಗೆಯಿಂದ ರಾಜ್‌ಕುಮಾರ್ ಅವರ ಎದುರಲ್ಲೇ ಜಯಂತಿ ನನ್ನನ್ನು, ‘ಏನೋ ಭಗವಾನ್ ಬಾರೋ ಇಲ್ಲಿ’ ಎನ್ನುತ್ತಿದ್ದಳು. ನಾನೂ ‘ಏನೇ’ ಎನ್ನುತ್ತಿದ್ದೆ. ಆಕೆ ಸ್ವಭಾವತಃ ಸ್ನೇಹಜೀವಿ. ಎಲ್ಲರನ್ನೂ ಸ್ನೇಹಿತರಂತೆ ಕಾಣುತ್ತಿದ್ದಳು. ಜಯಂತಿ ಹಾಗೂ ಸರೋಜಾದೇವಿ ಸಂಬಂಧ ಇಲ್ಲಿ ಉಲ್ಲೇಖಾರ್ಹ. ಸರೋಜಾದೇವಿಯವರೇ ಜಯಂತಿಯನ್ನು ಹೊಗಳುತ್ತಾರೆ ಎಂದರೆ ಜಯಂತಿ ಮಟ್ಟ ಎಲ್ಲಿತ್ತು ಎಂದು ಯೋಚಿಸಿ. ಇದೇ ರೀತಿ ಜಯಂತಿ ಹಾಗೂ ಭಾರತಿ ಸ್ನೇಹ. ಇವರಿಬ್ಬರೂ ಒಟ್ಟಿಗೇ ಚಿತ್ರರಂಗಕ್ಕೆ ಕಾಲಿಟ್ಟವರು. ಒಂದೇ ತರಗತಿಯಲ್ಲಿ ಓದಿದವರಂತೆ ಇವರ ನಡುವಿನ ಸ್ನೇಹವಿತ್ತು.

ಪ್ರತಿಯೊಂದು ನಾಣ್ಯಕ್ಕೂ ಎರಡು ಮುಖ

ಸಾಮಾನ್ಯವಾಗಿ ಕೆಲ ಕಲಾವಿದರ ಬದುಕಿನಲ್ಲಿ ಎರಡು ಮುಖಗಳಿರುತ್ತವೆ. ಸಂತೋಷದ ಸಮಯದಲ್ಲಿ ದುಃಖವೂ ಬರುತ್ತದೆ. ಇವರ ಕುಟುಂಬದ ಒಳಕಥೆ ನಮಗೆ ಗೊತ್ತಿಲ್ಲ. ಒಬ್ಬರಿಗೊಬ್ಬರು ಹೇಗಿದ್ದರೋ ತಿಳಿದಿಲ್ಲ. ಶಿವರಾಂ ಅವರಿಂದ ಬೇರೆಯಾಗಿದ್ದು ಜಯಂತಿಗೆ ಆದ ಮೊದಲ ಆಘಾತ. ಶಿವರಾಂ ಆರಂಭಿಕ ಕಾಲದಲ್ಲಿ ಜಯಂತಿ ಅವರ ಸಿನಿಮಾ ಬದುಕನ್ನು ರೂಪಿಸಿದ್ದರು. ತೆಲುಗು, ತಮಿಳು ಚಿತ್ರಗಳಲ್ಲಿ ನಟಿಸುವ ಅವಕಾಶ ಕಲ್ಪಿಸಿದರು. ಜಯಂತಿಗೆ ಎರಡನೇ ಆಘಾತ ಆಗಿದ್ದು, ಸೊಸೆಯಾಗಿದ್ದ, ಮಗಳಿಗಿಂತ ಹೆಚ್ಚಾಗಿ ಪ್ರೀತಿಸಿದ್ದ ಅನು ಪ್ರಭಾಕರ್ ಬೇರೆ ಹೋಗಿದ್ದು. ಈ ಘಟನೆಗಳು ಆಕೆಯ ಬದುಕನ್ನು ಛಿದ್ರಗೊಳಿಸಿದ್ದವು. ಅವು ಆಕೆಯ ಹಿನ್ನಡೆಗೂ ಕಾರಣವಾಗಿದ್ದವು. ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಷ್ಟೆ. ತಪ್ಪೂ ಆಗಿರಬಹುದು. ನನಗೆ ಈ ವಿಚಾರ ಹೇಳುವಾಗ ಬಹಳ ಉಮ್ಮಳವಾಗುತ್ತದೆ. ಆಕೆಯ ನಿಧನ, ಕನ್ನಡ ಚಿತ್ರರಂಗಕ್ಕೆ ಅಷ್ಟೇ ಅಲ್ಲ ಇಡೀ ಭಾರತೀಯ ಚಿತ್ರರಂಗಕ್ಕೆ ಆದ ನಷ್ಟ. ಕೊನೆ ಉಸಿರು ಇರುವವರೆಗೂ ಕ್ಯಾಮೆರಾ ಮುಂದೆಯೇ ಇರಬೇಕು ಎನ್ನುವುದು ಪ್ರತೀ ಕಲಾವಿದನ ಆಸೆ. ಇದು ಜಯಂತಿ ಜೀವನದಲ್ಲಿ ಸಾರ್ಥಕವಾಗಿದೆ. ಸೇನೆಯಲ್ಲಿ ಒಂದು ಮಾತಿದೆ. ‘He died with his boots on’. ಇದು ಯುದ್ಧ ಭೂಮಿಯಲ್ಲೇ ಮಡಿದವನಿಗೆ ಕೊಡುವ ಗೌರವ. ಇದೇ ರೀತಿ ಜಯಂತಿ. ‘She has expired with her colors on’.

ಲೇಖಕ: ಹಿರಿಯ ಚಿತ್ರ ನಿರ್ದೇಶಕ
ನಿರೂಪಣೆ: ಅಭಿಲಾಷ್ ಪಿ.ಎಸ್.



ರಾಜ್‌ಕುಮಾರ್ ಮೆಚ್ಚಿದ್ದ ಕಲಾವಿದೆ

‘ಕಸ್ತೂರಿ ನಿವಾಸ’ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ರಾಜ್‌ಕುಮಾರ್, ‘ಭಗವಾನ್, ನಿಮ್ಮ ನಿರ್ದೇಶನ ಏಕೆ ನನಗೆ ಇಷ್ಟ ಎಂದರೆ, ನೀವು ಆಯಾ ಪಾತ್ರಕ್ಕೆ ಒಳ್ಳೆಯ ಕಲಾವಿದರನ್ನು ಆರಿಸುತ್ತೀರಿ. ಹಾಗೆಯೇ ಜಯಂತಿ ಅವರದೂ ಭಿನ್ನವಾದ ಪಾತ್ರ. ಈ ಪಾತ್ರಕ್ಕೆ ಜಯಂತಿ ಅವರನ್ನು ಆಯ್ಕೆ ಮಾಡಿದ್ದು ಬಹಳ ಸಂತೋಷ ಆಗಿದೆ’ ಎಂದಿದ್ದರು. ತಮ್ಮ ಪಾತ್ರಕ್ಕೆ ಸರಿದೂಗುವ ಕಲಾವಿದೆ ಸಿಕ್ಕಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಹೀರೊ ಜೊತೆಗೆ ಹೀರೊಯಿನ್ ಚೆನ್ನಾಗಿ ನಟಿಸಿದರೆ ಹೀರೊ ಮೌಲ್ಯ ಹೆಚ್ಚುತ್ತದೆ. ‘ಕಸ್ತೂರಿ ನಿವಾಸ’ ಚಿತ್ರದಲ್ಲಿ ಆಗಿದ್ದೂ ಈ ರೀತಿಯೇ. ಕೆಲವೊಮ್ಮೆ ಜಯಂತಿ ಅವರ ನಟನೆ ಕ್ಷೀಣಿಸಿದಾಗ, ರಾಜ್‌ಕುಮಾರ್ ಅವರೇ ಹೇಳಿಕೊಡುತ್ತಿದ್ದರು. ತನ್ನಲ್ಲಿರುವ ಆಸೆ, ಪ್ರೀತಿಯನ್ನು ‘ಎಲ್ಲೇ ಇರು ಹೇಗೇ ಇರು’ ಹಾಡಿನಲ್ಲಿ ಜಯಂತಿ ತನ್ನ ಪಾತ್ರದ ಮುಖಾಂತರ ವ್ಯಕ್ತಪಡಿಸಿದ ಬಗೆ ಅದ್ಭುತ.

ತೆಲುಗು, ತಮಿಳು ಚಿತ್ರಗಳಲ್ಲೂ ಛಾಪು

ಆಂಗ್ಲ ಪ್ರಾಧ್ಯಾಪಕರಾಗಿದ್ದ ಬಾಲಸುಬ್ರಹ್ಮಣ್ಯಂ ಹಾಗೂ ಸಂತಾನಲಕ್ಷ್ಮಿ ಅವರ ಪುತ್ರಿಯಾದ ಕಮಲಾ ಕುಮಾರಿ (ಜಯಂತಿ) ಜನಿಸಿದ್ದು 1945ರ ಜನವರಿ 6ರಂದು ಬಳ್ಳಾರಿಯಲ್ಲಿ. ಸಿನಿ ಪಯಣದ ಆರಂಭದಲ್ಲಿ ವೈ.ಆರ್.ಸ್ವಾಮಿ ನಿರ್ದೇಶನದ ‘ಜೇನುಗೂಡು’(1963) ನಂತರದಲ್ಲಿ ರಾಜ್‌ಕುಮಾರ್ ಅವರ ಜೊತೆಗೆ ‘ಚಂದವಳ್ಳಿಯ ತೋಟ’ ಚಿತ್ರಗಳ ಯಶಸ್ಸಿನ ಬಳಿಕ ಜಯಂತಿ ಅವರು ನಟನೆಯ ಪಯಣದಲ್ಲಿ ಹಿಂತಿರುಗಿ ನೋಡಲೇ ಇಲ್ಲ. ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿಯಲ್ಲಿ ಅವರು ನಟಿಸಿದ 500 ಚಿತ್ರಗಳೇ ಇದಕ್ಕೆ ಸಾಕ್ಷಿ.

ತೆಲುಗು ಚಿತ್ರರಂಗದಲ್ಲೂ ತಮ್ಮದೇ ಛಾಪು ಮೂಡಿಸಿದ್ದ ಜಯಂತಿ, ಖ್ಯಾತ ತೆಲುಗು ನಟ ಎನ್.ಟಿ.ರಾಮರಾವ್ ಅವರ ಜೊತೆಗೂ ತೆರೆ ಹಂಚಿಕೊಂಡು, ‘ಜಗದೇಕ ವೀರುನಿ ಕಥಾ’, ‘ಕುಲ ಗೌರವಂ’, ‘ಕೊಂಡವೀಟಿ ಸಿಂಹಂ’, ‘ಜಸ್ಟಿಸ್ ಚೌಧರಿ’ ಸೇರಿದಂತೆ ಹಲವು ಹಿಟ್ ಚಿತ್ರಗಳನ್ನು ನೀಡಿದ್ದರು. ತಮಿಳು ಚಿತ್ರರಂಗದಲ್ಲಿ ಜೆಮಿನಿ ಗಣೇಶನ್, ಎಂ.ಜಿ.ರಾಮಚಂದ್ರನ್, ಮುತ್ತುರಾಮನ್, ಜೈಶಂಕರ್ ಸೇರಿದಂತೆ ದಕ್ಷಿಣ ಭಾರತದ ಹಲವು ಖ್ಯಾತ ನಟರಿಗೆ ಜೋಡಿಯಾಗಿ ಜಯಂತಿ ನಟಿಸಿದ್ದರು. ಈ ಪೈಕಿ ‘ಪಡಗೊಟಿ’, ‘ಮುಗರಾಸಿ’, ‘ಕಣ್ಣಾ ನಲಮ’, ‘ಪುನ್ನಗೈ’, ‘ವೆಲ್ಲಿ ವಿಳ’, ‘ಇರು ಕೊಡುಗಳ್’ ಹಿಟ್ ಚಿತ್ರಗಳು.

ಬಾಲಿವುಡ್‌ನಲ್ಲೂ ‘ಅಭಿನಯ ಶಾರದೆ’ಯ ಹೆಜ್ಜೆಗುರುತುಗಳಿದ್ದು, ‘ಲಾಲ್ ಲಾಲ್ ಬಂಗ್ಲಾ’, ‘ತೀನ್ ಬಹುರಾಣಿಯಾನ್’, ‘ಗುಂಡಾ’ ಹಾಗೂ ‘ತುಮ್ಸೆ ಅಚ್ಛಾ ಕೌನ್ ಹೇ’ ಚಿತ್ರಗಳಲ್ಲಿ ನಟಿಸಿದ್ದರು.

ವೀರ ರಮಣಿ ಹಾಡು ಹುಟ್ಟಿದ ಪರಿ

8ನೇ ಪುಟದಿಂದ...

ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್, ತಾವಾಗಿಯೇ ಸಂಘದವರನ್ನು ಮೈಸೂರಿಗೆ ಕರೆಸಿ ಆಡಿಸಿ ನೋಡಿದ ಪ್ರಸಿದ್ಧ ನಾಟಕ.

ಈ ಬಗ್ಗೆ ಕೇಳಿದ ಪ್ರಯೋಗಶೀಲ ಪುಟ್ಟಣ್ಣ ತಾವೂ ತಂಡದವರೊಡನೆ ನಾಟಕವನ್ನು ನೋಡಿದರು. ನಾಟಕದಲ್ಲಿ ಓಬವ್ವಳ ಪಾತ್ರವನ್ನು ಕಂಡು ಪ್ರಭಾವಿತರಾಗಿ, ಸಿನಿಮಾದಲ್ಲಿ ಹಾಡಿನ ಮೂಲಕ ಸನ್ನಿವೇಶವನ್ನು ತರಲು ನಿರ್ಧರಿಸಿದರು. ಓಬವ್ವಳ ಕತೆ ಅಷ್ಟರಲ್ಲಾಗಲೇ ಆರನೇ ತರಗತಿ ಪಠ್ಯದಲ್ಲಿ ನಮಗಿತ್ತು. ಅದನ್ನೇ ಆಧರಿಸಿ ಆರ್.ಎನ್.ಜಯಗೋಪಾಲರಿಂದ ಹಾಡು ಬರೆಸಿದರು. ವೀರೋಚಿತ ರಾಗ ಹಾಕಿದ್ದು ವಿಜಯ ಭಾಸ್ಕರ್. ಚಿತ್ರೀಕರಣದ ಬಗ್ಗೆ ನಮ್ಮ ನವಭಾರತ ತರುಣ ಕಲಾವಿದರ ಸಂಘದ ನಿರ್ದೇಶಕ ಸಿದ್ಧನಾಯಕರ ಬಳಿ ಮಾತುಕತೆಯಾಯಿತು. ಹಾಡಲ್ಲಿ ಕ್ಷಣಮಾತ್ರ ಬರುವ ‘ಮದಕರಿ’ ಪಾತ್ರಕ್ಕೆ ಅದಾಗಲೇ ಅಭಿನಯಿಸಿ ಖ್ಯಾತರಾದ ತಿಪ್ಪಾನಾಯಕರ ಬದಲು ಬೇರೆಯವರನ್ನು ಆಯ್ಕೆ ಮಾಡಲು ಫೋಟೊಜೆನಿಕ್ ಕಾರಣಗಳನ್ನು ಹೇಳಿ, ನಿಜಲಿಂಗಪ್ಪನೆಂಬ ಯುವ ಕಲಾವಿದನಿಗೆ ವೇಷ ತೊಡಿಸಿದಾಗ ನಮಗೆಲ್ಲ ಅಸಮಾಧಾನ (ನಾವೆಲ್ಲಾ ಆಗ ಪೋರ್ಕಿಗಳೆನ್ನಿ). ಗದ್ದಲವೆಬ್ಬಿಸಿದ್ದುಂಟು. ಆಗ ಸಿ.ಟಿ.ಎಸ್.ನಾಯಕರು ಹೈದರಾಲಿಯ ಪಾತ್ರಕ್ಕೆ ಈಗಾಗಲೇ ನಾಟಕದಲ್ಲಿ ಅಭಿನಯಿಸುತ್ತಿದ್ದ ಸಂಘದ ಕಲಾವಿದ ಮಹಾಲಿಂಗಪ್ಪ (ಅಜ್ಜಣ್ಣ) ಅವರನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿ ನಮ್ಮ ಮನ ತಣಿಸಿದರು.

ಪುಟ್ಟಣ್ಣ ತಮ್ಮ ನೆಚ್ಚಿನ ನಟಿ ಕಲ್ಪನಾರನ್ನೇ ಓಬವ್ವಳ ಪಾತ್ರಕ್ಕೆ ಆಯ್ಕೆ ಮಾಡಿದ್ದರಾದರೂ ತುಂಬ ಪ್ರಸಿದ್ಧಳಾಗಿದ್ದ ಆಕೆ ಒಂದು ಹಾಡಿನಲ್ಲಿ ಬಂದು ಹೋಗೋದು ಆಗೋಲ್ಲವೆಂದರೆಂದು ಸುದ್ದಿಯಾಯಿತು. ನಂತರ ಜಯಂತಿಯವರನ್ನು ಆರಿಸಿಕೊಂಡರು ಪುಟ್ಟಣ್ಣ. ನಮ್ಮೂರಿನ ಹುಡುಗರೇ ಓಬವ್ವಳ ಒನಕೆಗೆ ತಲೆ ಕೊಡುವ ಸೈನಿಕರಾದರು. ಅದರಲ್ಲಿ ನನ್ನ ಗೆಳೆಯರೂ ಇದ್ದರೆನ್ನಿ.

ನವಭಾರತ ತರುಣ ಕಲಾವಿದರ ಸಂಘದ ಕಲಾವಿದರ ಜೊತೆ ಪುಟ್ಟಣ್ಣ ಕಣಗಾಲ

ಈ ಹಾಡಿನ ಚಿತ್ರೀಕರಣವನ್ನು ನಟ ವಿಷ್ಣುವರ್ಧನ್ ಮತ್ತು ದುರ್ಗದ ಸೇಂಟ್ ಜೋಸೆಫ್ ಕಾನ್ವೆಂಟ್ ವಿದ್ಯಾರ್ಥಿಗಳೊಂದಿಗೆ ಕೋಟೆಯಲ್ಲಿ ಚಿತ್ರೀಕರಿಸಲಾಯಿತು. ನಟಿ ಜಯಂತಿ ಭಾಗವಹಿಸಿದರು. ‘ನಾಗರಹಾವು’ ಚಿತ್ರದಷ್ಟೇ ‘ಕನ್ನಡ ನಾಡಿನ ವೀರ ರಮಣಿಯ ಗಂಡು ಭೂಮಿಯ ವೀರ ನಾರಿಯ... ಚಿತ್ರದುರ್ಗದಾ ಕಲ್ಲಿನ ಕೋಟೆ... ಅಮರಳಾದಳು ಓಬವ್ವ’ ಗೀತೆಯೂ ಜನಮನ್ನಣೆ ಪಡೆಯಿತು. ನಾಡಿನ ಮನೆ ಮಾತಾಗಿದ್ದ ಜಯಂತಿ, ಓಬವ್ವೆಯಾಗಿ ಜನಮಾನಸದಲ್ಲಿ ಪ್ರತಿಷ್ಠಾಪಿತರಾದರು. ದುರ್ಗದವರ ಮನದಂಗಳದಲ್ಲೂ ಅಜರಾಮರರಾದರು.

ನಮ್ಮವರು ಅನೇಕ ಸಲ ದುರ್ಗೋತ್ಸವ ನಡೆದಾಗ ಆಕೆಯನ್ನು ಗೌರವಿಸಿದ್ದುಂಟು. ನಾಗರಹಾವಿನ ನಂಟಸ್ತನವೇ ಪುಟ್ಟಣ್ಣನವರ ಮುಂದಿನ ಯಶಸ್ವಿ ‘ಎಡಕಲ್ಲು ಗುಡ್ಡದ ಮೇಲೆ’ ಚಿತ್ರದ ಕಥಾನಾಯಕಿ ಸ್ಥಾನವನ್ನು ಜಯಂತಿ ಗಳಿಸಲು ಹಾಗೂ ರಾಜ್ಯಪ್ರಶಸ್ತಿ ಭಾಜನರಾಗಲೂ ನಾಂದಿ ಹಾಡಿದ್ದು ಸವಿನೆನಪು. ಹೆಸರಾಂತ ನಟಿಯಾದರೂ ಪುಟ್ಟಣ್ಣನವರ ಕರೆಯನ್ನು ಮನ್ನಿಸಿ ನಮ್ರಳಾಗಿ ಮಾಡಿದ ಪುಟ್ಟ ಪಾತ್ರದಿಂದಾಗಿ ಜಯಂತಿ ಪಡೆದ ಕೀರ್ತಿ ಎಣೆಯಿಲ್ಲದ್ದು.

ದುರ್ಗದಲ್ಲಿ ಕೋಟೆಯ ಮೇಲೆ, ರಂಗಯ್ಯನ ಬಾಗಿಲು, ಗಲ್ಲಿಗಲ್ಲಿಗಳಲ್ಲಿ ಚಿತ್ರೀಕರಣ ನಡೆವಾಗ ನಾನೂ ಎಲ್ಲರಂತೆ ನಿಂತು ನೋಡಿ ದಬ್ಬಿಸಿಕೊಂಡವನೆ. ನಾನಾಗ ಇನ್ನೂ ಬರಹಗಾರನಾಗಿ ಚಿಗುರೊಡೆದಿರಲಿಲ್ಲ. ನಂತರದ ದಿನಗಳಲ್ಲಿ ನಾನು ಪುಟ್ಟಣ್ಣನವರ ಚಿತ್ರಕ್ಕೆ ಸಂಭಾಷಣೆ ರಚಿಸಿದ್ದು, ಕಲಾವಿದರಾದ ವಿಷ್ಣು, ಅಂಬಿ, ಜಯಂತಿ, ಆರತಿ ಚಿತ್ರಗಳಿಗೆ ಕತೆ, ಸಂಭಾಷಣೆ ಒದಗಿಸಿದ್ದು ಸಹ ನನ್ನ ಪಾಲಿನ ಸವಿಸವಿ ನೆನಪು.

ಕನ್ನಡ ಚಿತ್ರರಂಗದ ಎಲ್ಲ ನಾಯಕ ನಟರೊಂದಿಗೆ, ಅದರಲ್ಲೂ ಡಾ.ರಾಜ್ ಜತೆಗೆ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಖ್ಯಾತಿಯೂ ಜಯಂತಿಯವರಿಗೆ ಸಲ್ಲುತ್ತದೆ. ಜಯಂತಿ ಅವರು ನಮ್ಮನ್ನೆಲ್ಲ ಅಗಲಿದರೂ ಅಭಿನಯ ಶಾರದೆಯ ಅಭಿನಯ ಮಾತ್ರ ಪ್ರೇಕ್ಷಕರ ಹೃದಯದಲ್ಲಿ ಚಿರಸ್ಥಾಯಿ. ಇವತ್ತಂತೂ ದುರ್ಗದ ಮನೆ ಮನೆಗಳಲ್ಲಿ ಜಯಂತಿಯವರ (ಓಬವ್ವೆಯ) ಸಾವಿನ ನೋವು ಮಡುಗಟ್ಟಿದೆ. ಹಳೆಯ ತಲೆಯವರಂತೂ ಕೂತಕಟ್ಟೆಯ ಮೇಲೆ, ಮರದ ನೆರಳಡಿ, ಕೋಟೆ ಸಾಲಲ್ಲಿ ಹೋಟೆಲ್ ಚಹಾದೊಡನೆ ಜಯಂತಿಯನ್ನೇ ಚಪ್ಪರಿಸುತ್ತಿದ್ದಾರೆ. ❖

ಕಡಲ ತಡಿಯ 'ಕನ್ನಡ ಮಿತ್ರರು'!

ಪ್ರೊ.ಎ.ವಿ. ನಾವಡ

ಧಾರವಾಡದ 'ಗೆಳೆಯರ ಗುಂಪು', ಹಲಸಂಗಿಯ 'ಹಲಸಂಗಿ ಗೆಳೆಯರು', ಮೈಸೂರು - ಬೆಂಗಳೂರಿನ 'ಶ್ರೀಯವರ ಬಳಗ', ಮಂಗಳೂರಿನ 'ಮಿತ್ರ ಮಂಡಳಿ' ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ (1920-40) ಕ್ರಿಯಾಶೀಲವಾಗಿದ್ದ ಕನ್ನಡ ಸಾಹಿತ್ಯಪರ ಸಂಘಟನೆಗಳು. ನವೋದಯ ಕಾಲದ ಕನ್ನಡ ಸಾಹಿತ್ಯದ ಹರಿವು ಹಾಗೂ ತಿರುವುಗಳಿಗೆ ಇಂತಹ ಸಂಘಟನೆಗಳ ಪಾತ್ರ ಮಹತ್ವದ್ದು. ಅನೇಕ ನೂತನ ಪ್ರಯೋಗಗಳಿಗೆ, ವಿಚಾರಪಲ್ಲಟಗಳಿಗೆ ಇವು ಕಾರಣವಾದವು.

ಧಾರವಾಡದಲ್ಲಿ 'ಗೆಳೆಯರ ಗುಂಪು'ವಿನ ಮುಂಚೂಣಿಯಲ್ಲಿದ್ದವರು ಬೇಂದ್ರೆ, ಶಂಬಾ, ಬೆಟಗೇರಿ ಕೃಷ್ಣಶರ್ಮ, ಶ್ರೀಧರ ಖಾನೋಳ್ಕರ್ ಮತ್ತಿತರರು. ಹಲಸಂಗಿಯ ಗೆಳೆಯರ ನಡುವೆ ಇದ್ದವರು ಮಧುರಚೆನ್ನ, ಸಿಂಪಿ ಲಿಂಗಣ್ಣ, ರೇವಪ್ಪ ಕಾಪಸೆ, ಧೂಲಾ ಸಾಹೇಬ್ ಇನ್ನಿತರರು. 'ಶ್ರೀ'ಯವರ ಬಳಗದಲ್ಲಿದ್ದವರಲ್ಲಿ ಮಾಸ್ತಿ, ಡಿ.ವಿ.ಜಿ., ರಾಜರತ್ನಂ ಪ್ರಮುಖರು.

> ಹೆಚ್ಚು–ಕಡಿಮೆ ಶತಮಾನದ ಹಿಂದೆ ಸ್ಥಾಪನೆಗೊಂಡ ಮಂಗಳೂರಿನ ಮಿತ್ರ ಮಂಡಳಿಯು ಕರಾವಳಿ ಭಾಗದಲ್ಲಿ ಕನ್ನಡ ಬೆಳೆಸಲು ನೀಡಿದ ಕೊಡುಗೆ ಅನನ್ಯವಾದುದು. ಬರಹಗಾರರನ್ನು ಪೋಷಿಸಿ ಬೆಳೆಸಿದ ಈ ಸಂಘ ನಾಡಿನ ಹೆಗ್ಗುರುತುಗಳಲ್ಲಿ ಒಂದು


ಮಂಗಳೂರಿನ ಕೆನರಾ ಹೈಸ್ಕೂಲಿನ ಈಗಿನ ಕಟ್ಟಡ. ಮೊದಲು ಈ ಜಾಗದಲ್ಲಿ ಶಾಲೆಯ ಹಳೆಯ ಕಟ್ಟಡವಿತ್ತು. ಅದರ ಮುಂಭಾಗದಲ್ಲಿದ್ದ ಮಾವಿನಮರದ ಅಡಿಯಲ್ಲಿ ಮಿತ್ರ ಮಂಡಳಿಯ ವಾರದ ಸಭೆಗಳು ನಡೆಯುತ್ತಿದ್ದವು
–ಚಿತ್ರ: ಇರ್ಷಾದ್ ಮಹಮ್ಮದ್

ಪರಂಪರೆ

ಮಂಗಳೂರಿನ ಮಿತ್ರಮಂಡಳಿ ಆರಂಭವಾದುದು 1928ರಲ್ಲಿ. ಕಾವ್ಯ ಕುತೂಹಲಿ ಪ್ರೌಢಶಾಲಾ ವಿದ್ಯಾರ್ಥಿಗಳಾಗಿದ್ದ ಕಣ್ಣಂದೂರು ರಾಘವಾಚಾರ್, ಕಣ್ಣಂದೂರು ತಿಮ್ಮಯ್ಯಾಚಾರ್, ಬಾಳ ರಾಘವೇಂದ್ರ ರಾವ್, ಪೇಜಾವರ ಸದಾಶಿವರಾವ್ ಅವರಿಂದ. ಇವರಲ್ಲಿ ಕೆಲವರು ಮಂಗಳೂರಿನ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳು, ಇನ್ನು ಕೆಲವರು ಮಂಗಳೂರಿನ ಸಂತ ಅಲೋಷಿಯಸ್ ಹೈಸ್ಕೂಲಿನ ವಿದ್ಯಾರ್ಥಿಗಳು. ಇವರ ಬಾಲಬರಹಗಳನ್ನು (ವಾಸ್ತವವಾಗಿ ಪ್ರೌಢ ಕವಿತೆಗಳು) ಓದಿ, ತಿದ್ದಿ ತೀಡಿ ಬೆಂಬಲ ಸೂಚಿಸಿ ಮಿತ್ರಮಂಡಳಿ 'ಅಳಿಲ ಸೇವಾ ಗ್ರಂಥಮಾಲೆ'ಯ ಮೂಲಕ ಪ್ರಕಟಿಸುವ ಸಾಹಸಕ್ಕಿಳಿದವರು ಸೇಡಿಯಾಪು ಕೃಷ್ಣ ಭಟ್ಟರು, ಕೆನರಾ ಹೈಸ್ಕೂಲಿನ ಎಂ.ಎನ್. ಕಾಮತ್ ಹಾಗೂ ಕನ್ನಡ ಪಂಡಿತರಾಗಿದ್ದ ಜೋಡುಮಠ ವಾಮನ ಭಟ್ಟರು.

ಸೇಡಿಯಾಪು ಕೃಷ್ಣಭಟ್ಟ, ಎಂ.ಎನ್. ಕಾಮತ್ -ಕಲೆ: ಗುರು ನಾವಳ್ಳಿ

ಅಳಿಲಸೇವೆ ಖಂಡ-1, ಅಳಿಲಸೇವೆ ಖಂಡ-2, ತಾಯ್ನಾಡು, ಅಲರು – ಈ ನಾಲ್ಕು ಕಾವ್ಯಸಂಚಯಗಳ (anthology) ಬರಹಗಾರರೆಲ್ಲರೂ ಅಂದಿನ ವಿದ್ಯಾರ್ಥಿಗಳು. ಆದರೆ ಕವಿತೆಗಳು ಸಮಕಾಲದ ಪ್ರೌಢಕವಿಗಳಿಗೆ ಕಡಿಮೆಯದೇನೂ ಆಗಿರಲಿಲ್ಲ. ನವೋದಯದ ಮುಂಗುರುಹುಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಸಂಕಲನಗಳಲ್ಲಿ ಸಂಪಾದಕರ ಹೆಸರಿಲ್ಲ. ತಿದ್ದಿ ಅಚ್ಚಿಗೆ ಅಣಿಮಾಡಿದ ಸೇಡಿಯಾಪು, ಕಾಮತ್, ವಾಮನ ಭಟ್ಟರ ಹೆಸರುಗಳು ಪುಸ್ತಕದ ಒಳಗೆ ದಾಖಲಾಗಿವೆ. ಹೀಗೆ ವಿದ್ಯಾರ್ಥಿಗಳಿಗೆ ಬೆಂಬಲ, ಪ್ರೋತ್ಸಾಹ ನೀಡುತ್ತಾ ಅವರನ್ನು ಮುಂದಿನ ದಿನಗಳಿಗೆ ಅಣಿಗೊಳಿಸಿದ ಹಿರಿಯರೆಂದರೆ ಪಂಜೆ, ಮುಳಿಯ, ಕಡೆಂಗೋಡ್ಲು, ಸೇಡಿಯಾಪು, ಕಾರಂತ, ಪಡುಕೋಣೆ, ವಾಮನಭಟ್ಟ, ಕಯ್ಯಾರ ಮತ್ತಿತರರು. ಈ ಸಂಘಟನೆಯ ಅಧ್ಯಕ್ಷ, ಉಪಾಧ್ಯಕ್ಷರು ಹಿರಿಯರು. ಕಾರ್ಯದರ್ಶಿಗಳಾಗಿ ದುಡಿದವರು ಮಂಗಳೂರಲ್ಲಿ ಅಂದಿನ ವಿದ್ಯಾರ್ಥಿಗಳಾಗಿದ್ದ ಕೆ.ಕೆ. ಪೈ, ಡಾ.ಎಸ್.ಪಿ. ಭಟ್, ಪೇಜಾವರ ಸದಾಶಿವ ರಾವ್, ಕಕ್ಕುಂಜೆ ಸೂರ್ಯನಾರಾಯಣ ಅಡಿಗ, ಪಾಂಗಾಳ ಸದಾನಂದ ನಾಯಕ್ ಮತ್ತಿತರರು.

ಮಿತ್ರಮಂಡಳಿಯ ಸಾಪ್ತಾಹಿಕ ಕಾರ್ಯಕ್ರಮಗಳು ಕೆನರಾ ಹೈಸ್ಕೂಲಿನ ಬಯಲಿನ ಮಾವಿನ ಮರದ ಬುಡದಲ್ಲಿ ಜರುಗುತ್ತಿದ್ದವಂತೆ. ಇದರಲ್ಲಿ ಭಾಗವಹಿಸುತ್ತಿದ್ದವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು. ತಿಂಗಳಿಗೊಮ್ಮೆ ನಡೆಯುತ್ತಿದ್ದ ಕಾರ್ಯಕ್ರಮಗಳು ಕೊಡಿಯಾಲಬೈಲ್‌ನ ಥಿಯೊಸಾಫಿಕಲ್ ಸಭಾಂಗಣದಲ್ಲಿ ನಡೆಯುತ್ತಿದ್ದವು.

'ಮಿತ್ರಮಂಡಳಿ'ಯ ಪ್ರಕಟಣೆಗಳು

ಆ್ಯಂಥಾಲಜಿಗಳು

1	ಅಳಿಲಸೇವೆ ಖಂಡ 1	ಕಾವ್ಯಸಂಚಯ	1928
2	ಅಳಿಲಸೇವೆ ಖಂಡ 2	ಕಾವ್ಯಸಂಚಯ	1929
3	ತಾಯ್ನಾಡು	ಕಾವ್ಯಸಂಚಯ	1930
4	ಅಲರು	ಕಾವ್ಯಸಂಚಯ	1931
5	ನಮ್ಮ ಕತೆಗಳು	ಸಣ್ಣಕತೆಗಳು	1932
6	ವಿನೋದ ಚಿತ್ರಗಳು	ಲಲಿತ ಪ್ರಬಂಧಗಳು	1933
7	ಸಂಸಾರ	ಏಕಾಂಕ ನಾಟಕಗಳು	1934
8	ಶಕುಂತಳೆ	ನೀಳ್ಗತೆ	1935
9	ತರಂಗ	ಪ್ರಬಂಧಗಳು	1936
10	ಹಿರಿಯಕ್ಕನ ಚಾಳಿ	ಏಕಾಂಕ ನಾಟಕ	1937
11	ನಮ್ಮ ಕವಿತೆಗಳು	ಕಾವ್ಯಸಂಚಯ	1939
12	ಅಂದಿನ ಆವೂರು	ಕಾಮತರ ಕತೆಗಳು	1941
13	ಮರದೆದುರಲ್ಲಿ	ವಾಮನ ಭಟ್ಟರ ಕವಿತೆಗಳು	1943
14	ವಿನೋದ ಚಿತ್ರಗಳು	ಲಘುಧಾಟಿಯ ಪ್ರಬಂಧಗಳು	1944

ವರ್ಷಕ್ಕೊಮ್ಮೆ ನಾಡಹಬ್ಬ ಅದ್ದೂರಿಯಾಗಿ ಜರುಗುತ್ತಿದ್ದುದಾಗಿ 1940ರ ಸುಮಾರಿನಲ್ಲಿ ಕಾರ್ಯದರ್ಶಿಯಾಗಿದ್ದ ಕೆ.ಕೆ. ಪೈ (ಸಿಂಡಿಕೇಟ್ ಬ್ಯಾಂಕ್‌ನ ಮಾಜಿ ಅಧ್ಯಕ್ಷರು) ಒಂದೆಡೆ ದಾಖಲಿಸಿದ್ದಾರೆ. ಈ ಸಮಾರಂಭದಲ್ಲಿ ಮಾಸ್ತಿ, ಡಿ.ವಿ. ಜಿ., ತಿರುಮಲೆ ತಾತಾಚಾರ್ಯ ಶರ್ಮ ಮುಂತಾದವರು ಭಾಗಿಯಾಗುತ್ತಿದ್ದರೆಂದು ಕೆ.ಕೆ. ಪೈ ತಮ್ಮ ಆತ್ಮಕಥನದಲ್ಲಿ (ಅಪ್ರಕಟಿತ) ಹೇಳಿಕೊಂಡಿದ್ದಾರೆ.

1920ರ ಹಿಂಚುಮುಂಚಿನಲ್ಲಿ ರಾಷ್ಟ್ರವು ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾಗಿ ತೊಡಗಿದ್ದ ಕಾಲ. ಕರಾವಳಿ ಕರ್ನಾಟಕವೂ ಇದಕ್ಕೆ ಹೊರತಾಗಿರಲಿಲ್ಲ. ಹೀಗಾಗಿ ರಾಷ್ಟ್ರೀಯತೆ ಸಾಹಿತ್ಯದ ಮುಖ್ಯ ತಿರುಳಾಗಿ ಹೊಮ್ಮಿತು. ಇಂಗ್ಲಿಷ್ ಓದು ಇಲ್ಲಿನ ಪಂಡಿತ ಕವಿಗಳನ್ನು ಪ್ರಭಾವಿಸಿತ್ತು. ಸಂಸ್ಕೃತ ಓದಿಕೊಂಡಿದ್ದ ಕರಾವಳಿಯ ಪಂಡಿತರು ವರ್ಡ್ಸ್‌ವರ್ತ್, ಶೆಲ್ಲಿ ಅವರಿಂದಲೂ ಪ್ರಭಾವಿತರಾಗಿದ್ದರು. ಕನ್ನಡವನ್ನು ಆ ಹಾದಿಯಲ್ಲಿ ಮುನ್ನಡೆಸಲು ಅವರು ತವಕಿಸುತ್ತಿದ್ದರು. ಮುಳಿಯ, ಸೇಡಿಯಾಪು, ಕಡೆಂಗೋಡ್ಲು ಸಂಸ್ಕೃತಾನುಸರಣ ದಾರಿಯನ್ನು ತ್ಯಜಿಸಿ ದೇಸಿ ಕಾವ್ಯಶೈಲಿಗೆ ಮಾರುಹೋಗಿದ್ದರು. ಪಂಡಿತ ಕಡೆಂಗೋಡ್ಲು ಅವರ 'ಪಂಡಿತನ ಪಯಣ' ಕವನ ಹೊಸತನದತ್ತ ಸಾಗುತ್ತಿದ್ದುದರ ರೂಪಕ. ಪೈಯವರು ಭಾಷೆಯಲ್ಲಿ, ಛಂದೋಬಂಧಗಳಲ್ಲಿ ಪ್ರಯೋಗ ನಡೆಸಲು ಮುಂದಾದರು. ಇಂತಹ ಪ್ರಯೋಗಗಳಿಗೆ 'ಮಿತ್ರಮಂಡಳಿ' ಗರಡಿಮನೆ, ಹೀಗೆ ಹಳೆಯ ಜಾಡನ್ನು ಮುರಿದು ಅಂದಿನ ಕವಿತೆ ಹೊಸ ಭಾಷೆಯನ್ನು, ಲಯಗಾರಿಕೆಯನ್ನು ರೂಪಿಸಿಕೊಂಡಿತು.

'ಮಿತ್ರಮಂಡಳಿ'ಯ ನಾಲ್ಕನೇ ಕಾವ್ಯಸಂಗ್ರಹ 'ಅಲರು'ವಿನ (1931) ಸಂಪಾದಕ ಪೇಜಾವರ ಸದಾಶಿವ ರಾವ್ ಅವರು ಆಗಿನ್ನೂ ಮಂಗಳೂರು ಸಂತ ಅಲೋಷಿಯಸ್ ಕಾಲೇಜು ವಿದ್ಯಾರ್ಥಿ. ಇದರೊಳಗೆ ಕಣ್ಣಂದೂರು ಸಹೋದರರ, ಎಸ್. ವೆಂಕಟರಾಜ, ಜೋಡುಮಠ ಕಕ್ಕಿಲ್ಲಾಯ, ಕೆಮ್ಮಿಂಜೆ ಮುಂತಾದವರ 26 ಕವನಗಳಿವೆ. ಈ ಕಾವ್ಯ ಸಂಚಯಕ್ಕೆ ಅವರು ಬರೆದ ಪ್ರಸ್ತಾವನೆಯಲ್ಲಿ 'ಕವಿ ಪ್ರಳಯಾತೀತ' ಎನ್ನಿಸಿಕೊಳ್ಳಲು ಸಾಧ್ಯವಿದೆಯೋ ಎನ್ನುವುದು ಕವಿಗಳು ತನ್ನೊಳಗನ್ನು ಶೋಧಿಸಿ ಕವಿತೆ ಬರೆಯಬೇಕು' ಎನ್ನುತ್ತಾರೆ. ತಾನು ಸಂಪಾದಿಸಿದ 'ಅಲರು' ಸಂಕಲನದ 200 (ಬೆಲೆ ನಾಲ್ಕಾಣೆ) ಪ್ರತಿಗಳನ್ನು ಮನೆಮನೆಗೆ ಕೊಂಡೊಯ್ದು ಮಾರಿ ಮೊತ್ತವನ್ನು ವಾಮನಭಟ್ಟರಿಗೆ ತಂದೊಪ್ಪಿಸಿದರು.

'ನಮ್ಮ ಕತೆಗಳು', 'ವಿನೋದ ಚಿತ್ರಗಳು', 'ಸಂಸಾರ', 'ತರಂಗ', 'ನಮ್ಮ ಕವಿತೆಗಳು', 'ಅಂದಿನ ಆವೂರು', 'ಮರದೆದುರಲ್ಲಿ'– ಇಂತಹ ಸಂಕಲನಗಳ (anthology) ಸಂಪಾದನೆಯ ಹಿಂದೆ ಇಂಗ್ಲಿಷ್ ಓದಿನಿಂದ ಕನ್ನಡದೊಳಗೆ ಬಂದ ಕವಿತೆ, ಸಣ್ಣಕತೆ, ಏಕಾಂಕ ನಾಟಕ, ಹರಟೆ, ಲಲಿತ ಪ್ರಬಂಧ ಮುಂತಾದ ಪ್ರಕಾರಗಳ ಸ್ವರೂಪ ನಿರ್ಣಯದ ಆಸ್ಥೆ ಇದ್ದಂತಿದೆ. ಈ ವಿಚಾರಗಳನ್ನು ಆಯಾ ಸಂಕಲನಗಳ ಸಂಕ್ಷಿಪ್ತ ಪ್ರಸ್ತಾವನೆಯಲ್ಲಿ ಸಂಪಾದಕರು ಬರೆಯುತ್ತಾರೆ. 'ಕನ್ನಡದೊಳಿನ್ನೇನು' ಎಂದು ಹೇಳದೆ 'ಕನ್ನಡದೊಳಿಲ್ಲದುದೇನು' ಎಂದು ಹೇಳುವ ಕಾಲ ಬರಬೇಕಾಗಿದೆ - ಇದು ಧ್ಯೇಯವಾಕ್ಯ, 'ಮಿತ್ರಮಂಡಳಿ' ಕರಾವಳಿಯ ನವೋದಯ ಸಾಹಿತ್ಯದ ಗತಿನಿರ್ಧಾರ ಮಾಡಿದ ಚುಕ್ಕಾಣಿ. 'ಮಿತ್ರಮಂಡಳಿ ಮಂಗಳೂರು' ಪ್ರಕಟಿಸಿದ ಎಲ್ಲಾ ಕೃತಿಗಳು ಮುದ್ರಣಕ್ಕೆ ಅಣಿಯಾಗಿವೆ.

ಮಿತ್ರಮಂಡಳಿ ಸ್ಥಾಪಕ ರಾಘವಾಚಾರ್

ಕಣ್ಣಂದೂರು ರಾಘವಾಚಾರ್

'ಮಿತ್ರಮಂಡಳಿ ಮಂಗಳೂರು' (1928-1944) ಸಾಹಿತ್ಯ ಸಂಘಟನೆಯ ಸ್ಥಾಪಕ ಕವಿ ಕಣ್ಣಂದೂರು ರಾಘವಾಚಾರ್. ಆಗ ಅವರು ಮಂಗಳೂರಿನ ಕೆನರಾ ಹೈಸ್ಕೂಲಿನ ವಿದ್ಯಾರ್ಥಿ. ಅವರ ಅಣ್ಣ ಕ. ತಿಮ್ಮಯ್ಯಾಚಾರ್. ಇಬ್ಬರು ಸಹೋದರರು 'ಮಿತ್ರಮಂಡಳಿ'ಯ ಅಶ್ವಿನಿ ದೇವತೆಗಳಂತಿದ್ದರು. ಇವರ ಸಾಹಿತ್ಯಾಸಕ್ತಿಯನ್ನು ಕಂಡು ಪೋಷಿಸಿದವರು ಪಂಡಿತ ಸೇಡಿಯಾಪು ಕೃಷ್ಣ ಭಟ್ಟರು. ಮಿತ್ರಮಂಡಳಿ ಅಳಿಲ ಸೇವಾ ಗ್ರಂಥಮಾಲೆಯ ಮೊದಲ ಮೂರು ಸಂಕಲನ - ಅಳಿಲ ಸೇವೆ ಖಂಡ 1 , ಖಂಡ 2 ಹಾಗೂ ತಾಯ್ನಾಡು - ಈ ಮೂರು ಸಂಕಲನಗಳಲ್ಲೂ ಈ ಸಹೋದರರ ಕವನಗಳು ಅಚ್ಚಾಗಿವೆ.

ರಾಘವಾಚಾರ್ ಹೈಸ್ಕೂಲ್ ಶಿಕ್ಷಣವನ್ನು ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಮುಗಿಸಿ ಮುಂದೆ ಮದರಾಸಿನ ಹಿಂದಿ ಮಹಾವಿದ್ಯಾಲಯದಲ್ಲಿ ಓದಲು ತೆರಳಿದರು. ಅಲ್ಲಿ ನಾಲ್ಕು ವರ್ಷಗಳ ಕಾಲ ಹಿಂದಿ ಭಾಷಾಭ್ಯಾಸ ನಡೆಸಿ 'ರಾಷ್ಟ್ರಭಾಷಾ ವಿಶಾರದ' ಪದವಿ ಪಡೆದು ಮಂಗಳೂರಿಗೆ ಮರಳಿದರು. ಮಂಗಳೂರಿನ 'ಹಿಂದಿ ಪ್ರಚಾರಸಭಾ'ದ ಕಾರ್ಯಕರ್ತನಾಗಿ ಹಿಂದಿ ಪ್ರಚಾರಕಾರ್ಯಗಳಲ್ಲಿ ನಿರತರಾದರು. ಜೊತೆಗೆ ಮಂಗಳೂರಿನಲ್ಲಿ ಕಾರ್ನಾಡ ಸದಾಶಿವರಾಯರ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಮಂಗಳೂರಿಗೆ ಬಂದ ರಾಷ್ಟ್ರೀಯ ನಾಯಕರ ಹಿಂದಿ ಭಾಷಣಗಳನ್ನು ಕನ್ನಡಕ್ಕೆ ಆಶುತರ್ಜುಮೆ ಮಾಡುತ್ತಿದ್ದವರು ಯುವಕ ಕಣ್ಣಂದೂರು ರಾಘವಾಚಾರ್ಯರು. ರಾಘವಾಚಾರ್ ತನ್ನ 32ನೆಯ ವಯಸ್ಸಿನಲ್ಲಿ ಅಕಾಲಿಕವಾಗಿ ತೀರಿಕೊಂಡರು. ಅವರ ಹುಟ್ಟೂರು ಮಂಗಳೂರಿಗೆ ಸಮೀಪದ ಕಣ್ಣಂದೂರು (ಬಂಟ್ವಾಳ ತಾಲ್ಲೂಕು) ಎನ್ನುವ ಚಿಕ್ಕ ಗ್ರಾಮ. ಅಲ್ಲಿನ ಪ್ರಸಿದ್ಧ ವೈದ್ಯನಾಥ ದೈವಾಲಯದ ಚಾಕರಿಯ ಕುಟುಂಬ ಇವರದು. ದೇವಾಲಯದ ಬೆಳ್ಳಿ, ಬಂಗಾರದ ಆಭರಣಗಳ ನಿರ್ಮಾಣ, ಶುಚೀಕರಣದ ಚಿನಿವಾರಿಕೆ ಈ ಕುಟುಂಬದ್ದಾಗಿದೆ. ಇಂದಿಗೂ ಅವರ ಕುಟುಂಬಸ್ಥರು ಆ ವೃತ್ತಿಯಲ್ಲೇ ತೊಡಗಿದ್ದಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಚಮತ್ಕಾರ ಗುಣಾಕಾರ

- ನಿಮಗೊಂದು ಗುಣಾಕಾರ ಲೆಕ್ಕ ಕೊಟ್ಟರೆ ನೀವು ಬಲಗಡೆಯಿಂದ ಅಂದರೆ ಬಿಡಿ ಸ್ಥಾನದಿಂದ ಗುಣಿಸಲು ಪ್ರಾರಂಭಿಸುತ್ತೀರಿ. ಆದರೆ ಎಡಗಡೆಯಿಂದ ಗುಣಿಸದೆ ನೇರವಾಗಿ ಉತ್ತರ ಬರೆದರೆ ಚಮತ್ಕಾರವಲ್ಲವೇ? ಹೌದು ಇದು ಸಾಧ್ಯ. ಹೇಗೆಂದರೆ ನಿಮ್ಮ ಗೆಳೆಯ ಗುಣ್ಯವನ್ನ ಬೇಕಾದ ಸಂಖ್ಯೆ ಹೇಳಿರಲಿ. ಗುಣಕ ಮಾತ್ರ 5 ಆಗಿರಲಿ. ಈಗ ನೀವು ಗುಣಕದ ಮುಂದೆ ಒಂದು ಸೊನ್ನೆ ಇದೆ ಎಂದು ಭಾವಿಸಿ ಅದನ್ನು ಎಡಗಡೆಯಿಂದ 2ರಿಂದ ಕಡಿತ ಹೊಡೆದರಾಯಿತು. ಉತ್ತರ ಸಿದ್ಧ!

ಉದಾ:- 7834 - ನಿಮ್ಮ ಗೆಳೆಯನ ಸಂಖ್ಯೆ
X 5- ನಿನ್ನ ಸಂಖ್ಯೆ
7834 X 5

78340 ಗುಣಕದ ಮುಂದೆ ಸೊನ್ನೆ ಇದೆ ಎಂದು ತಿಳಿದರೆ ಸಿಗುವ ಸಂಖ್ಯೆ

ಈ ಸಂಖ್ಯೆಯನ್ನು ಎಡಗಡೆಯಿಂದ 2ರಿಂದ ಕಡಿತ ಹೊಡೆದಾಗ ಸಿಗುವ ಉತ್ತರ
39170

ಗುಣಿಸಿ ನೋಡಿದಾಗ್ಯೂ ಅಷ್ಟೇ ಉತ್ತರ ಬರುತ್ತದೆ. ಆದರೆ ಇದೇ ಚಮತ್ಕಾರವನ್ನು 25ರಿಂದ ಗುಣಿಸಬೇಕೆಂದರೆ ಗುಣ್ಯದ ಮುಂದೆ ಎರಡು ಸೊನ್ನೆ ಸೇರಿಸಿ 4ರಿಂದ ಕಡಿತ ಹೊಡೆಯಬೇಕು.

125 ರಿಂದ ಗುಣಿಸಬೇಕೆಂದರೆ ಮೂರು ಸೊನ್ನೆ ಇವೆ ಎಂದು ಭಾವಿಸಿ 8ರಿಂದ ಕಡಿತ ಹೊಡೆಯಬೇಕು.

2) ಕರ್ನಾಟಕ ರಾಜ್ಯದ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹುಟ್ಟಿದ ದಿನಾಂಕ ತಿಳಿಯಬೇಕೆ? ಹಾಗಾದರೆ ಈ ಗುಣಾಕಾರ ಲೆಕ್ಕಮಾಡಿ ನೋಡು

312440
x9
28-1-1960

ಅದಲು ಬದಲು ಕಂಚೀ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅವೇ ಅಕ್ಷರಗಳ ಬೇರೊಂದು ಪದ ರಚಿಸಿ

1) ಹೊಸದಾಗಿ = ________
2) ನಾಗರಿಕ = ________
3) ನಂದೇವಾದ = ________
4) ನೀಳನಾರಿ = ________

ಪದ ಹಿಗ್ಗು

1. ಶನಿ 2. ಮುಡಿ 3. ಕೊರೆ 4. ದನ
5. ಗಾಡಿ 6. ಸಹ 7. ಗತಿ 8. ಮಾವ

1. [ ] ರ [ ]
2. [ ] ನ [ ]
3. [ ] ಕು [ ]
4. [ ] ರು [ ]
5. [ ] ಕ್ಕು [ ]
6. [ ] ನ್ನು [ ]
7. [ ] ನಿ [ ]
8. [ ] ಮ [ ]

ಟ್ವೆಂಟಿ – 20 ಮ್ಯಾಚ್

ಎಡಗಡೆ ಕೊಟ್ಟಿರುವ ಅಪೂರ್ಣ ಇಂಗ್ಲಿಷ್ ಪದಗಳಿಗೆ ಬಲಭಾಗದ ಎರಡು ಅಕ್ಷರಗಳನ್ನು ಸೂಕ್ತವಾದ ಸ್ಥಳದಲ್ಲಿ ತುಂಬಿ ಅರ್ಥಪೂರ್ಣ ಪದಗಳಾಗುವಂತೆ ಹೊಂದಿಸಿ.

1.	__ND__A	A)	GG
2.	__ERO__	B)	FF
3.	__IC__	C)	VV
4.	SU_ _ ER	D)	SS
5.	__TT__	E)	RR
6.	__EVE__	F)	AA
7.	__UL__	G)	TT
8.	__I__E	H)	MM
9.	__IVI__	I)	XX
10.	__IG__	J)	PP
11.	D____R	K)	II
12.	__ECI__E	L)	OO
13.	__EO__LE	M)	KK
14.	__V__R	N)	EE
15.	__I__TER	O)	LL
16.	__EN__	P)	BB
17.	CO____EE	Q)	HH
18.	__I__ID	R)	CC
19.	__AN__	S)	NN
20.	__IVE__	T)	DD

ಡಣ್ಣ ಚಿಕ್ಕ ಕಿಳಿಶಕಿದ ಕಥೆಯ

ಒನಕೆ ಓಬವ್ವ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಚಿತ್ರದುರ್ಗದಲ್ಲಿ ಪಾಳೆಯಗಾರರಲ್ಲಿ ಮದಕರಿ ನಾಯಕ ಕೂಡ ಒಬ್ಬ. ಸಮೃದ್ಧವಾಗಿದ್ದ ಆತನ ನಾಡನ್ನು ದೋಚುವುದಕ್ಕಾಗಿ ಕಲ್ಲಿನ ಕೋಟೆಯೊಳಗೆ ನುಸುಳಲು ಶತ್ರುಗಳು ಆಗಾಗ ಹವಣಿಸುತ್ತಿದ್ದರು


ಮೈಸೂರಿನ ದಂಡನಾಯಕನಾಗಿದ್ದ ಹೈದರ್ ಅಲಿಯು ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ಮುಂದಾಗಿದ್ದ. ದಾಳಿ ನಡೆಸಲು ಕೋಟೆಯ ಬಗ್ಗೆ ಸಂಪೂರ್ಣ ವಿವರವನ್ನು ಪಡೆದಿದ್ದ

ಕೋಟೆಯ ಪಾರ್ಶ್ವದಲ್ಲಿರುವ ಒಂದು ಪುಟ್ಟ ಕಿಂಡಿಯನ್ನು ಪತ್ತೆ ಹಚ್ಚಿದ ಹೈದರ್ ಅಲಿಯ ಶಸ್ತ್ರಸಜ್ಜಿತ ಸೈನಿಕರು ಅದರ ಮೂಲಕ ಒಬ್ಬೊಬ್ಬರಾಗಿ ನುಸುಳಿಕೊಂಡು ಕೋಟೆಯೊಳಗೆ ಹೊರಟಿದ್ದರು


ಈ ವೇಳೆ ಕೋಟೆಯ ಕಾವಲುಗಾರ ಕಹಳೆ ಮದ್ದಹನುಮಪ್ಪ ತನ್ನ ಗುಡಿಸಲಿನಲ್ಲಿ ಊಟಕ್ಕೆ ಕುಳಿತಿದ್ದ. ಅವನ ಹೆಂಡತಿ ಓಬವ್ವ ನೀರು ತರಲೆಂದು ಕೋಟೆಯ ಬಾವಿಯತ್ತ ಹೋಗಿದ್ದಳು


ಶತ್ರು ಸೈನಿಕರು ಕಿಂಡಿಯಲ್ಲಿ ನುಸುಳುತ್ತಿರುವುದನ್ನು ಕಂಡ ಓಬವ್ವ ತಕ್ಷಣವೇ ಮನೆಗೆ ಹೋಗಿ ಒನಕೆಯೊಂದನ್ನು ತಂದು ಕಿಂಡಿಯ ಬಾಗಿಲಲ್ಲಿ ನಿಂತಳು. ಸೈನಿಕರು ಒಬ್ಬೊಬ್ಬರೆ ಬರುತ್ತಿದ್ದಂತೆಯೇ ಒನಕೆಯಿಂದ ಬಡಿದು ಕೊಂದಳು


ಹೆಂಡತಿಯನ್ನು ಹುಡುಕಿಕೊಂಡು ಬಂದ ಮದ್ದಹನುಮಪ್ಪ ಅಲ್ಲಿನ ದೃಶ್ಯ ನೋಡಿ ಕೂಡಲೇ ಕಹಳೆ ಊದಿ ತನ್ನ ಸೈನಿಕರನ್ನು ಎಚ್ಚರಿಸಿದ. ಈ ವೇಳೆ ನಡೆದ ಕಾಳಗದಲ್ಲಿ ಓಬವ್ವ ಬಲಿಯಾದಳು. ಇತಿಹಾಸದಲ್ಲಿ ವೀರಮಹಿಳೆಯಾಗಿ ಉಳಿದಳು

ಪದ ಚೌಕ

ಇಲ್ಲಿರುವ ಪದಗಳನ್ನು ಎಡದಿಂದ ಬಲಕ್ಕೆ ಓದಿ ಇಲ್ಲವೇ ಮೇಲಿನಿಂದ ಕೆಳಕ್ಕೆ ಓದಿ ಅವೇ ಪದಗಳು

ರಾ	ಜ	ಮಾ	ತೆ	ಯ
ಜ	ನ	ರ	ಗ	ತಿ
ಮಾ	ರ	ನ	ಳಿ	ಯ
ತೆ	ಗ	ಳಿ	ದ	ವ
ಯ	ತಿ	ಯ	ವ	ಸ್ತ್ರ

ಇಂಗ್ಲಿಷ್‌ನಲ್ಲೂ ಕನ್ನಡ ಪದಗಳು

ಇಲ್ಲಿರುವ ಅಕ್ಷರಗಳನ್ನೂ ಪದಗಳನ್ನೂ ಓದಿದರೆ ಕನ್ನಡದ ಶಬ್ದಗಳಂತೆ ಉಚ್ಚಾರವಾಗುತ್ತವೆ

1. EK ROP EKA AK SSV IK?
(ಈಕೆ ಆರೋಪಿ ಈಕೆಯೇ ಏಕೆ ಯಶಸ್ವಿ ಆಯ್ಕೆ)
2. E L AD RC BDBDC EDCBD
(ಈ ಎಲ್ಲಾ ಏಡಿ ಆರ್ಸಿ ಬಿಡಿಬಿಡಿಸಿ ಇಡಿಸಿಬಿಡಿ)
3. Dharwad pay day yak thin bakery
(ಧಾರವಾಡ ಪೇಡೆ ಯಾಕ್ ತಿನ್ನ ಬೇಕರಿ)
4. go day may lay who no day see law
(ಗೋಡೆ ಮೇಲೆ ಹೂವು ನೋಡೆ ಶೀಲಾ)
5. she he come thin bakery
(ಸಿಹಿ ಕಮ್ ತಿನ್ನ ಬೇಕರಿ)

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಜುಲೈ 25ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದ ಹಿಗ್ಗು
1) ಕನ್ನಡಿ 2) ಸೇತುವೆ 3) ಹೊರಗೆ 4) ಶಹರ
5) ಕುಮಾರಿ 6) ಕಿಚಡಿ 7) ಕಹಳೆ 8) ಸಮಿತಿ

ಶಬ್ದಗಳೊಡನೆ ಸರಸ
1) ಗುಂಜನ 2) ಭಾಜನ 3) ಭೋಜನ 4) ಸೃಜನ
5) ವ್ಯಂಜನ 6) ಅಂಜನ 7) ಮಂಜನ 8) ವಜನ
9) ನಿರಂಜನ 10) ಅಭ್ಯಂಜನ 11) ಕಟಂಜನ
12) ಉತ್ತೇಜನ 13) ಪ್ರಯೋಜನ 14) ನೀಲಾಂಜನ
15) ನಿಯೋಜನ 16) ನೀರಾಂಜನ

ಅದಲುಬದಲು - ಕಂಚಿಕದಲು
1) ದುಬಾರಿನಗರ 2) ರುದ್ರಾಕ್ಷಿಮಾಲೆ
3) ಕಾರಿನಓಟ 4) ತೊಗರಿಬೇಳೆ

ಟ್ವೆಂಟಿ – 20 ಮ್ಯಾಚ್
1-D 2-K 3-S 4-C 5-Q 6-O 7-M 8-E 9-B
10-A 11-L 12-F 13-R 14-G 15-N 16-J
17- H 18-P 19-I 20-T

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು


ಸಹಜ ಕೆ.ಕೆ. ಮಳವಳ್ಳಿ (ಮಂಡ್ಯ)

ಸಾತ್ವಿಕ್ ಸುರೇಶ ಮಾದಿನೂರ್, ಕುಕನೂರು (ಕೊಪ್ಪಳ)

ಸಮೃದ್ಧಿ ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಸೀಮಾ ಪೂನಿಯಾಗೆ 16ನೇ ಸ್ಥಾನ; ಸಾಂಡ್ರಾ ಪರ್ಕೊವಿಚ್, ಯಯಿಮ್ ಪೆರೆಜ್ ಫೈನಲ್‌ಗೆ

ಕಮಲ್‌ಪ್ರೀತ್ ‘ಕಮಾಲ್’

ಟೋಕಿಯೊ (ಪಿಟಿಐ): ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಭಾರತ ಅಪರೂಪದ ಪದಕ ಗೆಲ್ಲುವ ಸುವರ್ಣ ಅವಕಾಶ ಶನಿವಾರ ಸೃಷ್ಟಿಯಾಗಿದೆ. ಡಿಸ್ಕಸ್ ಥ್ರೋ ಅರ್ಹತಾ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಮತ್ತು ವಿಶ್ವ ಚಾಂಪಿಯನ್ನರನ್ನು ಹಿಂದಿಕ್ಕಿ 64 ಮೀಟರ್ಸ್ ಸಾಧನೆ ಮಾಡಿದ ಪಂಜಾಬ್‌ನ ಕಮಲ್‌ಪ್ರೀತ್ ಕೌರ್ ಫೈನಲ್ ಪ್ರವೇಶಿಸಿದ್ದಾರೆ.

ಸೋಮವಾರ ನಡೆಯಲಿರುವ ಪದಕ ಸುತ್ತಿನ ಹಣಾಹಣಿಯಲ್ಲಿ ಅವರು ಅಮೆರಿಕದ ಅಲ್ಮನ್ ವಲರಿ ಅವರ ಸವಾಲನ್ನು ಮೀರಬೇಕಾಗಿದೆ. ವಲರಿ 66.42 ಮೀಟರ್ಸ್ ದೂರ ಎಸೆದು ಅರ್ಹತಾ ಸುತ್ತಿನ ‘ಬಿ’ ವಿಭಾಗದಲ್ಲಿ ಮೊದಲಿಗರಾಗಿದ್ದಾರೆ. ಅನುಭವಿ ಸೀಮಾ ಪೂನಿಯಾ ಒಟ್ಟಾರೆ 16ನೇ ಸ್ಥಾನಕ್ಕೆ ಕುಸಿದು ಹೊರಬಿದ್ದರು.

ಮೊದಲ ಪ್ರಯತ್ನದಲ್ಲಿ ತಪ್ಪೆಸಗಿದ ಅವರು ಮುಂದಿನ ಎರಡು ಪ್ರಯತ್ನಗಳಲ್ಲಿ ಕ್ರಮವಾಗಿ 60.57ಮೀ ಮತ್ತು 58.93 ಮೀ ದೂರ ಎಸೆದರು. ಕಳೆದ ಬಾರಿ ಚಿನ್ನ ಗೆದ್ದಿದ್ದ ಸಾಂಡ್ರಾ ಪರ್ಕೊವಿಚ್ (63.75 ಮೀ) ಮತ್ತು ವಿಶ್ವ ಚಾಂಪಿಯನ್ ಕ್ರೊವೇಷ್ಯಾದ ಯಯಿಮ್ ಪೆರೆಜ್ (63.18 ಮೀ) ಅವರನ್ನು ಹಿಂದಿಕ್ಕಿರುವ ಕಮಲ್‌ಪ್ರೀತ್ ಅರ್ಹತೆ ಗಳಿಸಿದವರ ಒಟ್ಟಾರೆ ಪಟ್ಟಿಯಲ್ಲೂ ಎರಡನೇ ಸ್ಥಾನ ಗಳಿಸಿದ್ದಾರೆ. ಈ ವರ್ಷ ಅಮೋಘ ಲಯದಲ್ಲಿರುವ ಕಮಲ್‌ಪ್ರೀತ್ ಮಾರ್ಚ್‌ನಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ 65.06 ಮೀಟರ್ಸ್ ದೂರ ಎಸೆದು ರಾಷ್ಟ್ರೀಯ ದಾಖಲೆ ಮುರಿದಿದ್ದರು. 65 ಮೀಟರ್ಸ್ ದೂರ ಡಿಸ್ಕ್ ಎಸೆದ ಭಾರತದ ಮೊದಲ ಕ್ರೀಡಾಪಟು ಎಂಬ ಖ್ಯಾತಿಯನ್ನೂ ಗಳಿಸಿದ್ದರು. ಜೂನ್ ತಿಂಗಳಲ್ಲಿ ಇಂಡಿಯನ್ ಗ್ರ್ಯಾನ್‌ಪ್ರಿಯಲ್ಲಿ 66.59 ಮೀಟರ್ಸ್ ಸಾಧನೆ ಮಾಡಿದ್ದರು.

ಲಾಂಗ್‌ಜಂಪ್‌ನಲ್ಲಿ ಭರವಸೆ ಮೂಡಿಸಿದ್ದ ಶ್ರೀಶಂಕರ್ 25ನೇ ಸ್ಥಾನ ಗಳಿಸಿ ಹೊರಬಿದ್ದರು.

ತಂದೆಗೆ ಪದಕದ ಭರವಸೆ

ಚಂಡೀಗಢ: ಅರ್ಹತಾ ಸುತ್ತಿನ ಸ್ಪರ್ಧೆಯ ನಂತರ ತಂದೆ ಕುಲದೀಪ್ ಸಿಂಗ್ ಜೊತೆ ಮಾತನಾಡಿದ ಕಮಲ್‌ಪ್ರೀತ್ ಕೌರ್ ಪದಕ ಕೊರಳಿಗೆ ಹಾಕಿಕೊಂಡೇ ತವರಿಗೆ ಮರಳುವೆ ಎಂದು ಭರವಸೆ ನೀಡಿದ್ದಾರೆ. ‘ಮಗಳು ಫೈನಲ್‌ನಲ್ಲಿ ಶ್ರೇಷ್ಠ ಸಾಮರ್ಥ್ಯ ತೋರಿ ಪದಕ ಗೆಲ್ಲುವುದಾಗಿ ಮಾತು ಕೊಟ್ಟಿದ್ದಾಳೆ’ ಎಂದು ಕುಲದೀಪ್ ತಿಳಿಸಿದ್ದಾರೆ.

ಕ್ರಿಕೆಟ್ ಆಡುವಾಸೆ: ವೀರೇಂದ್ರ ಸೆಹ್ವಾಗ್ ಅವರ ಅಭಿಮಾನಿಯಾಗಿರುವ ಕಮಲ್‌ಪ್ರೀತ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಆಸೆಯನ್ನೂ ಹೊಂದಿದ್ದಾರೆ. ಆದರೆ ಅಥ್ಲೆಟಿಕ್ಸ್ ತಮ್ಮ ಮೊದಲ ಆದ್ಯತೆ ಎಂದಿದ್ದಾರೆ.

ಅರ್ಹತಾ ಸುತ್ತಿನಲ್ಲಿ ಕಮಲ್‌ಪ್ರೀತ್

ಮೊದಲ ಯತ್ನ 60.29 ಮೀ
ಎರಡನೇ ಯತ್ನ 63.97 ಮೀ
ಮೂರನೇ ಯತ್ನ 64 ಮೀ

ಸಿಕ್ಕಿಬಿದ್ದ ಕೆನ್ಯಾ ಅಥ್ಲೀಟ್

ಪುರುಷರ 100 ಮೀಟರ್ಸ್ ಓಟಗಾರ ಕೆನ್ಯಾದ ಮಾರ್ಕ್ ಒಟಿನೊ ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದಿದ್ದು ಶನಿವಾರ ನಡೆದ ಅರ್ಹತಾ ಸುತ್ತಿನ ಹೀಟ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಪಡೆಯಲಿಲ್ಲ. ಜುಲೈನಲ್ಲಿ ನೀಡಿದ ಮಾದರಿಯ ಪರೀಕ್ಷಾ ವರದಿ ಬಂದಿರುವುದಾಗಿಯೂ ಒಟಿನೊ ಮದ್ದು ಸೇವಿಸಿದ್ದು ಸಾಬೀತಾಗಿರುವುದಾಗಿಯೂ ಅಂತರರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಶನಿವಾರ ತಿಳಿಸಿದೆ. ಅವರನ್ನು ಅರ್ಹತಾ ಸುತ್ತಿನ ಸ್ಪರ್ಧೆಯಿಂದ ಅಮಾನತು ಮಾಡಲಾಗಿದೆ ಎಂದು ತಂಡ ತಿಳಿಸಿದೆ.

ಫೈನಲ್‌ಗೆ ಅರ್ಹತೆ ಗಳಿಸಿದವರು

ಕ್ರೀಡಾಪಟು	ದೇಶ	ಅಂತರ (ಮೀ)
ಅಲ್ಮನ್ ವಲರಿ	ಅಮೆರಿಕ	66.42
ಕಮಲ್‌ಪ್ರೀತ್ ಕೌರ್	ಭಾರತ	64
ಸ್ಯಾಂಡ್ರ ಪರ್ಕೊವಿಚ್	ಕ್ರೊವೇಷ್ಯಾ	63.75
ಪುಂಡೆಜ್ ಕ್ರಿಸ್ಟಿನ್	ಜರ್ಮನಿ	63.73
ಒಸಾಕ್ವೆ ಡೇಸಿ	ಇಟಲಿ	63.66
ಸ್ಟೆನಾಕರ್ ಮರಿಕೆ	ಜರ್ಮನಿ	63.22
ಯಯಿಮ್ ಪೆರೆಜ್	ಕ್ಯೂಬಾ	63.18
ಲಿಲಿಯಾನ	ಪೋರ್ಚುಗಲ್	62.85
ಚಿನ್‌ಚೆನ್ ಯಾಂಗ್	ಚೀನಾ	62.72
ವಿಟಾ ಕ್ಲಾಡಿನ್	ಜರ್ಮನಿ	62.46
ಲಾರೆನ್ಸ್ ಶಾಂಡೆ	ಜಮೈಕಾ	62.27
ಇಸಬೆಲ್ಲಾ	ಬ್ರೆಜಿಲ್	61.52

ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ (ಎಡ ತುದಿ) ಎಲೈನ್ ಥಾಮ್ಸನ್ ಹೆರಾ (ಮಧ್ಯ) ಮತ್ತು ಶೆರಿಕಾ ಜಾಕ್ಸನ್ –ರಾಯಿಟರ್ಸ್ ಚಿತ್ರ

100ರಲ್ಲಿ ಮೂರೂ ಜಮೈಕಾಗೆ

ಟೋಕಿಯೊ: ಟ್ರ್ಯಾಕ್‌ನಲ್ಲಿ ತನ್ನ ಶಕ್ತಿ ಏನೆಂದು ಜಮೈಕಾ ಮತ್ತೊಮ್ಮೆ ಸಾಬೀತು ಮಾಡಿತು. ಮಹಿಳೆಯರ 100 ಮೀಟರ್ಸ್ ಓಟದ ಸ್ಪರ್ಧೆಯಲ್ಲಿ ಆ ದೇಶದ ಅಥ್ಲೀಟ್‌ಗಳು ಪದಕಗಳನ್ನು ಕ್ಲೀನ್ ಸ್ವೀಪ್ ಮಾಡಿದರು.

ಹಾಲಿ ಚಾಂಪಿಯನ್ ಎಲೈನ್ ಥಾಮ್ಸನ್ ಹೆರಾ ಚಿನ್ನದ ಪದಕ ಕೊರಳಿಗೆ ಹಾಕಿಕೊಂಡರು. ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಬೆಳ್ಳಿ ಗೆದ್ದರೆ ಶೆರಿಕಾ ಜಾಕ್ಸನ್ ಕಂಚಿನ ಪದಕ ಗೆದ್ದುಕೊಂಡರು. ಎಲೈನ್ ಥಾಮ್ಸನ್ 10.61 ಸೆಕೆಂಡುಗಳಲ್ಲಿ ಗುರಿ ತಲುಪಿ ಒಲಿಂಪಿಕ್ ದಾಖಲೆ ಬರೆದರು. 10.76 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಶೆರಿಕಾ ವೈಯಕ್ತಿಕ ಸಾಮರ್ಥ್ಯವನ್ನು ಉತ್ತಮಪಡಿಸಿಕೊಂಡರು. ಶೆಲ್ಲಿ 10.74 ಸೆಕೆಂಡುಗಳ ಸಾಧನೆ ಮಾಡಿದರು.

ಎಲೈನ್ ಥಾಮ್ಸನ್ ವಿಶ್ವ ಕಂಡ ಎರಡನೇ ಅತಿ ವೇಗದ ಮಹಿಳೆ ಎಂಬ ದಾಖಲೆಯನ್ನೂ ತಮ್ಮದಾಗಿಸಿಕೊಂಡರು. ಅಮೆರಿಕದ ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್ ಅತಿವೇಗದ ಮಹಿಳೆ ಎಂಬ ದಾಖಲೆಯನ್ನು ಹೊಂದಿದ್ದರು. ಇಂಡಿಯಾನಪೊಲಿಸ್‌ನಲ್ಲಿ 1988ರಲ್ಲಿ ನಡೆದ ಕ್ರೀಡಾಕೂಟದಲ್ಲಿ 10.49 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಅವರು ವಿಶ್ವ ದಾಖಲೆ ಬರೆದಿದ್ದರು.

4x400 ಮೀಟರ್ಸ್ ಮಿಶ್ರ ರಿಲೆಯ ಚಿನ್ನದ ಪದಕ ಪೋಲೆಂಡ್ ಪಾಲಾಯಿತು.

ಡಿಸ್ಕಸ್ ಥ್ರೋ: ಸ್ಟಾಹ್ಲ್‌ಗೆ ಚಿನ್ನ

ಸ್ವೀಡನ್‌ನ ಡ್ಯಾನಿಯಲ್ ಸ್ಟಾಹ್ಲ್ ಪುರುಷರ ಡಿಸ್ಕಸ್ ಥ್ರೋದಲ್ಲಿ ಚಿನ್ನದ ಪದಕ ಗಳಿಸಿದರು. 68.90 ಮೀಟರ್‌ಗಳ ಸಾಧನೆ ಮಾಡಿದ ಅವರು ತಮ್ಮದೇ ದೇಶದ ಸೈಮನ್ ಪೆಟರ್ಸನ್ (67.39 ಮೀ) ಅವರನ್ನು ಹಿಂದಿಕ್ಕಿದರು. ಆಸ್ಟ್ರಿಯಾದ ಲೂಕಾಸ್ ವೈಶಾನಿಗರ್ (67.07 ಮೀ) ಕಂಚು ಗೆದ್ದರು.

100 ಮೀ: ಒಲಿಂಪಿಕ್ ದಾಖಲೆ
ಎಲೈನ್ ಥಾಮ್ಸನ್ ಹೆರಾ (ಜಮೈಕ)
10.61 ಸೆಕೆಂಡು
(2020ರ ಒಲಿಂಪಿಕ್ಸ್, ಟೋಕಿಯೊ)

ಹಿಂದಿನ ದಾಖಲೆ
ಫ್ಲಾರೆನ್ಸ್ ಗ್ರಿಫಿತ್ (ಅಮೆರಿಕ)
10.62 ಸೆಕೆಂಡು
(1988ರ ಒಲಿಂಪಿಕ್ಸ್, ಸೋಲ್)

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	21	13	12	46
ಜಪಾನ್	17	5	8	30
ಅಮೆರಿಕ	16	17	13	46
ಆರ್‌ಒಸಿ *	11	15	11	37
ಆಸ್ಟ್ರೇಲಿಯಾ	10	3	14	27
ಭಾರತ (60ನೇ ಸ್ಥಾನ)	0	1	0	1

* ರಷ್ಯಾ ಒಲಿಂಪಿಕ್ ಸಮಿತಿ

ಏಳು ಪದಕ ಗಳಿಸಿದ ಬ್ರಿಟನ್‌ಗೆ ಇಂದು ಶ್ರೇಷ್ಠ ಸಾಧನೆಯ ಗುರಿ; ಡ್ರೆಸೆಲ್‌ಗೆ ಮತ್ತೆ ಚಿನ್ನ

ಮಿಶ್ರ ರಿಲೆಯಲ್ಲಿ ವಿಶ್ವ ದಾಖಲೆ

ಟೋಕಿಯೊ (ಎಎಫ್‌ಪಿ): ವಿಶ್ವ ದಾಖಲೆ ಮುರಿದು ಮುನ್ನುಗ್ಗಿದ ಬ್ರಿಟನ್ ಈಜುಪಟುಗಳು ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಯಾಗಿರುವ 4x100 ಮೀಟರ್ಸ್ ಮಿಶ್ರ ಮೆಡ್ಲೆ ರಿಲೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಕ್ಯಾಥ್ಲೀನ್ ಡಾಸನ್, ಪೀಟಿ, ಜೇಮ್ಸ್ ಗೈ ಮತ್ತು ಅನಾ ಹಾಪ್ಕಿನ್ ಅವರನ್ನು ಒಳಗೊಂಡ ತಂಡ 3 ನಿಮಿಷ 37.58 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಈ ಮೂಲಕ ವಿಶ್ವ ದಾಖಲೆಯನ್ನು ಹಿಂದಿಕ್ಕಿತು. ಕ್ವಿಂಗ್ಡಾವೊದಲ್ಲಿ ಕಳೆದ ವರ್ಷ ನಡೆದ ಟೂರ್ನಿಯಲ್ಲಿ ಚೀನಾ 3 ನಿಮಿಷ 38.41 ಸೆಕೆಂಡುಗಳಲ್ಲಿ ಗುರಿ ತಲುಪಿ ದಾಖಲೆ ಸೃಷ್ಟಿಸಿತ್ತು.

ಶನಿವಾರ 3 ನಿಮಿಷ 38.86 ಸೆಕೆಂಡುಗಳಲ್ಲಿ ಈಜು ಪೂರ್ತಿಗೊಳಿಸಿದ ಚೀನಾ ಬೆಳ್ಳಿ ಪದಕ ಗೆದ್ದುಕೊಂಡರೆ ಆಸ್ಟ್ರೇಲಿಯಾ (3 ನಿಮಿಷ 38.95 ಸೆಕೆಂಡು) ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಂಡಿತು. ಅಮೆರಿಕ ಐದನೇ ಸ್ಥಾನಕ್ಕೆ ಕುಸಿಯಿತು.

ಡ್ರೆಸೆಲ್ ಪಾರಮ್ಯ

ಸ್ಪ್ರಿಂಟ್ ತಾರೆ ಕಾಲೆಬ್ ಡ್ರೆಸೆಲ್ 100 ಮೀಟರ್ಸ್ ಬಟರ್‌ಫ್ಲೈನಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಮೂರನೇ ಪದಕ ಗಳಿಸಿಸಿದರು. 49.45 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ತಮ್ಮದೇ ಹೆಸರಿನಲ್ಲಿದ್ದ ದಾಖಲೆ ಮುರಿದರು. 2019ರ ಈಜು ಕೂಟದಲ್ಲಿ ಅವರು 49.50 ಸೆಕೆಂಡುಗಳ ಸಾಧನೆ ಮಾಡಿದರು. ಹಂಗರಿಯ ಕ್ರಿಸ್ಟೋಫ್ ಮಿಲಕ್ ಬೆಳ್ಳಿ ಗಳಿಸಿದರೆ ಸ್ವಿಟ್ಜರ್ಲೆಂಡ್‌ನ ನೊಯೊ ಪೊಂಟಿ ಮೂರನೆಯವರಾದರು. 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಗಮನ ಸೆಳೆದಿರುವ ತಾರೆ ಆಸ್ಟ್ರೇಲಿಯಾದ ಕೈಲಿ ಮೆಕ್ಯಾನ್ 200 ಮೀಟರ್ಸ್‌ನಲ್ಲೂ ಮೊದಲಿಗರಾದರು. ಅಂತಿಮ 50 ಮೀಟರ್ಸ್‌ನಲ್ಲಿ ಮಿಂಚಿನ ವೇಗದಲ್ಲಿ ಈಜಿದ ಅವರು 2 ನಿಮಿಷ 04.68 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ಕೆನಡಾದ ಕೈಲೀ ಮಸ್ಸಿ (2 ನಿಮಿಷ 05.42 ಸೆಕೆಂಡು) ಅವರನ್ನು ಹಿಂದಿಕ್ಕಿದರು. ಕಂಚಿನ ಪದಕ ಆಸ್ಟ್ರೇಲಿಯಾದ ಎಮಿಲಿ ಸೀಬಾಮ್ ಅವರ ಪಾಲಾಯಿತು,

100 ಮೀಟರ್ಸ್ ಬಟರ್‌ಫ್ಲೈನಲ್ಲಿ ಚಿನ್ನ ಗೆದ್ದ ಕ್ಯಾಲೆಬ್ ಡ್ರೆಸೆಲ್ (ಎಡ) ಮತ್ತು ಬೆಳ್ಳಿ ಗಳಿಸಿದ ಹಂಗರಿಯ ಕ್ರಿಸ್ಟೋಫ್ ಮಿಲಕ್ ಜೊತೆಯಾಗಿ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಫಲಿತಾಂಶಗಳು: ಪುರುಷರು: 100 ಮೀಟರ್ಸ್ ಬಟರ್‌ಫ್ಲೈ: ಕ್ಯಾಲೆಬ್ ಡ್ರೆಸೆಲ್ (ಅಮೆರಿಕ)–1. ಕಾಲ:49.45 (ವಿಶ್ವ ದಾಖಲೆ), ಕ್ರಿಸ್ಟೋಫ್ ಮಿಲಕ್ (ಹಂಗರಿ)–2, ನೊಯಿ ಪೊಂಟಿ (ಸ್ವಿಟ್ಜರ್ಲೆಂಡ್)–3. ಮಹಿಳೆಯರು: 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್: ಕೈಲಿ ಮೆಕ್ಯಾನ್ (ಆಸ್ಟ್ರೇಲಿಯಾ)–1. ಕಾಲ: 2:04.68) ಕೈಲಿ ಮಸ್ಸಿ (ಕೆನಡ)–2, ಎಮಿಲಿ ಸೀಬಾಮ್ (ಆಸ್ಟ್ರೇಲಿಯಾ)–3. 800 ಮೀಟರ್ಸ್ ಫ್ರೀಸ್ಟೈಲ್: ಕ್ಯಾತಿ ಲೆಡೆಕಿ (ಅಮೆರಿಕ)–1. ಕಾಲ: 8:12.57, ಅರಿಯಾರ್ನೆ ತಿಮುಸ್ (ಆಸ್ಟ್ರೇಲಿಯಾ)–2, ಸಿಮೋನಾ ಕ್ವಾಡರೆಲ (ಇಟಲಿ)–3.

4x100 ಮೀಟರ್ಸ್ ಮಿಶ್ರ ರಿಲೆ: ಬ್ರಿಟನ್ (ಡಾವ್ಸನ್, ಪೀಟಿ, ಗೈ, ಹಾಪ್ಕಿನ್)–1. ಕಾಲ: 3 ನಿಮಿಷ 37.58 ಸೆಕೆಂಡು (ವಿಶ್ವ ದಾಖಲೆ), ಚೀನಾ (ಜಿಯಾಯು, ಜಿಬೆ, ಯೂಫೀ, ಜುಂಕ್ಸುವಾನ್)–2, ಆಸ್ಟ್ರೇಲಿಯಾ (ಮೆಕ್ಯಾನ್, ಕುಕ್, ಟೆಂಪಲ್, ಮೆಕ್‌ಯಾನ್)–3.

ಮಿಶ್ರ ರಿಲೆಯಲ್ಲಿ ವಿಶ್ವ ದಾಖಲೆ ಬರೆದ ಬ್ರಿಟನ್ ತಂಡದ ಆ್ಯಡಂ ಪೀಟಿ, ಜೇಮ್ಸ್ ಗೈ (ಎಡ), ಮತ್ತು ಕ್ಯಾಥ್ಲೀನ್ ಸಂಭ್ರಮ –ರಾಯಿಟರ್ಸ್ ಚಿತ್ರ

ಶ್ರೇಷ್ಠ ಸಾಧನೆಗೆ ಇನ್ನೊಂದು ಹೆಜ್ಜೆ

ಮಿಶ್ರ ರಿಲೆಯಲ್ಲಿ ಪದಕ ಗೆಲ್ಲುವುದರೊಂದಿಗೆ ಬ್ರಿಟನ್ ಒಟ್ಟು ಏಳು ಪದಕಗಳನ್ನು ತನ್ನದಾಗಿಸಿಕೊಂಡಿತು. ನಾಲ್ಕು ಚಿನ್ನ, ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕದೊಂದಿಗೆ ಒಲಿಂಪಿಕ್ಸ್ ಈಜಿನಲ್ಲಿ ದೇಶದ ಶ್ರೇಷ್ಠ ಸಾಧನೆಯನ್ನು ಸಮಗಟ್ಟಿತು. 1908ರಲ್ಲಿ ಬ್ರಿಟನ್ ಇಷ್ಟೇ ಪದಕಗಳನ್ನು ಗಳಿಸಿತ್ತು. ಭಾನುವಾರ 4x100 ರಿಲೆಯಲ್ಲಿ ಪದಕ ಗೆದ್ದರೆ ಈ ವರೆಗಿನ ಗರಿಷ್ಠ ಸಾಧನೆಯ ಶ್ರೇಯ ಸಿಗಲಿದೆ.

ಜೆಸ್ಸಿಕಾ ಫಾಕ್ಸ್– ಎಎಫ್‌ಪಿ ಚಿತ್ರ

ಬೋಟ್ ದುರಸ್ತಿಗೆ ಕಾಂಡೋಮ್!

ಟೋಕಿಯೊ (ಎಪಿ): ಕಾಂಡೋಮ್ ಬಳಸಿ ಬೋಟ್ ದುರಸ್ತಿ ಮಾಡಿದ್ದ ಸ್ಪರ್ಧಿಯೊಬ್ಬರು ಕೆನೊಯ್ ಸ್ಲಾಲೊಮ್ ಕ್ರೀಡೆಯಲ್ಲಿ ಚಿನ್ನ ಸೇರಿದಂತೆ ಎರಡು ಪದಕಗಳನ್ನು ಗೆದ್ದಿರುವ ಸ್ವಾರಸ್ಯಕರ ಸುದ್ದಿ ಕ್ರೀಡಾಕೂಟದಲ್ಲಿ ವರದಿಯಾಗಿದೆ.

ಆಸ್ಟ್ರೇಲಿಯಾದ ಕೆನೊಯಿಂಗ್ ಸ್ಪರ್ಧಿ ಜೆಸ್ಸಿಕಾ ಫಾಕ್ಸ್, ಬೋಟ್ ದುರಸ್ತಿಗಾಗಿ ಕಾಂಡೋಮ್ ಬಳಕೆ ಮಾಡಿದವರು.

ಜೆಸ್ಸಿಕಾ ಫಾಕ್ಸ್ ಮಹಿಳೆಯರ 'ಕೆನೊಯಿಂಗ್ ಸ್ಲಾಲೊಮ್' ಮತ್ತು 'ಕಯಾಕ್ ಸ್ಲಾಲೊಮ್' ವಿಭಾಗದಲ್ಲಿ ಕ್ರಮವಾಗಿ ಚಿನ್ನ ಹಾಗೂ ಕಂಚಿನ ಪದಕ ಗೆದ್ದ ಸಾಧನೆ ಮಾಡಿದ್ದಾರೆ.

ಈ ವಿಷಯವನ್ನು ಸ್ವತಃ ಜೆಸ್ಸಿಕಾ ಅವರೇ ಬಹಿರಂಗಪಡಿಸಿದ್ದಾರೆ. ಬೋಟ್‌ನ ಮುಂಭಾಗದಲ್ಲಿ ಕಾಣಿಸಿಕೊಂಡ ದೋಷವನ್ನು ಸರಿಪಡಿಸಲು ಕಾರ್ಬನ್ ಮಿಶ್ರಣವನ್ನು ಮೆತ್ತಿದ ಬಳಿಕ ಕಾಂಡೋಮ್ ಅಂಟಿಸಿರುವುದಾಗಿ ಹೇಳಿದ್ದಾರೆ. ಕೆನೊಯಿಂಗ್ ಹಾಗೂ ಕಯಾಕ್‌ನಲ್ಲಿ ವಿಶ್ವದ ಅಗ್ರ ಶ್ರೇಯಾಂಕದ ಅಥ್ಲೀಟ್ ಆಗಿರುವ 27 ವರ್ಷದ ಜೆಸ್ಸಿಕಾ, ಒಲಿಂಪಿಕ್ಸ್‌ನಲ್ಲಿ ಸ್ಲಾಲೊಮ್ ರೇಸ್ ಗೆದ್ದ ಮೊದಲ ಮಹಿಳಾ ಸ್ಪರ್ಧಿ ಎನಿಸಿದ್ದಾರೆ.

ಸ್ಪರ್ಧಾ ಸಮಯ

ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್

ಮಧ್ಯಾಹ್ನ 1.30	ಪುರುಷರ ಫ್ಲೋರ್ ಎಕ್ಸರ್‌ಸೈಜ್ ಫೈನಲ್
ಮಧ್ಯಾಹ್ನ 2.22	ಮಹಿಳಾ ವಾಲ್ಟ್ ಫೈನಲ್
ಮಧ್ಯಾಹ್ನ 3.11	ಪುರುಷರ ಪೊಮೆಲ್ ಹಾರ್ಸ್ ವಿಭಾಗದ ಫೈನಲ್
ಮಧ್ಯಾಹ್ನ 3.54	ಮಹಿಳೆಯರ ಅನ್‌ಇವನ್ ಬಾರ್ಸ್ ಫೈನಲ್

ಅಥ್ಲೆಟಿಕ್ಸ್

ಬೆಳಿಗ್ಗೆ 7.05	ಮಹಿಳಾ ಶಾಟ್‌ಪಟ್ ಫೈನಲ್
ಮಧ್ಯಾಹ್ನ 3.40	ಪುರುಷರ ಹೈ ಜಂಪ್ ಫೈನಲ್
ಸಂಜೆ 4.45	ಮಹಿಳೆಯರ ಟ್ರಿಪಲ್ ಜಂಪ್ ಫೈನಲ್
ಸಂಜೆ 5.35	ಪುರುಷರ 400 ಮೀ. ಹರ್ಡಲ್ಸ್ ಸೆಮಿಫೈನಲ್
ಸಂಜೆ 6.20	ಪುರುಷರ 100 ಮೀ. ಫೈನಲ್

ಬ್ಯಾಡ್ಮಿಂಟನ್

ಬೆಳಿಗ್ಗೆ 9.30	ಪುರುಷರ ಸಿಂಗಲ್ಸ್ ಸೆಮಿಫೈನಲ್ಸ್
ಸಂಜೆ 5	ಮಹಿಳಾ ಸಿಂಗಲ್ಸ್ ಕಂಚಿನ ಪದಕದ ಪಂದ್ಯ (ಪಿ.ವಿ.ಸಿಂಧು)
ಸಂಜೆ 5.50	ಮಹಿಳಾ ಸಿಂಗಲ್ಸ್ ಫೈನಲ್

ಬಾಕ್ಸಿಂಗ್

ಬೆಳಿಗ್ಗೆ 9.36	ಪುರುಷರ ಸೂಪರ್ ಹೆವಿವೇಟ್ ಕ್ವಾರ್ಟರ್‌ಫೈನಲ್ (ಸತೀಶ್ ಕುಮಾರ್)

ಡೈವಿಂಗ್

ಬೆಳಿಗ್ಗೆ 11.30	ಮಹಿಳೆಯರ ಸ್ಪ್ರಿಂಗ್‌ಬೋರ್ಡ್ ಫೈನಲ್

ಈಕ್ವೆಸ್ಟ್ರಿಯನ್

ಸಂಜೆ 4.15	ತಂಡ ಹಾಗೂ ವೈಯಕ್ತಿಕ ವಿಭಾಗದ ಇವೆಂಟಿಂಗ್ ಕ್ರಾಸ್‌ಕಂಟ್ರಿ (ಫವಾದ್ ಮಿರ್ಜಾ)

ಗಾಲ್ಫ್

ಬೆಳಿಗ್ಗೆ 4	ಪುರುಷರ ವೈಕ್ತಿಕ ವಿಭಾಗದ ಸ್ಟ್ರೋಕ್ ಪ್ಲೇ ನಾಲ್ಕನೇ ಸುತ್ತು (ಅನಿರ್ಬನ್ ಲಾಹಿರಿ, ಉದಯನ್ ಮಾನೆ)

ಈಜು

ಬೆಳಿಗ್ಗೆ 7 ಗಂಟೆ	ಪುರುಷರ 50 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 7.07	ಮಹಿಳೆಯರ 50 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 7.14	ಪುರುಷರ 1500 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 7.45	ಮಹಿಳೆಯರ 4X100 ಮೀ. ಮೆಡ್ಲೆ ರಿಲೇ ಫೈನಲ್
ಬೆಳಿಗ್ಗೆ 8.06	ಪುರುಷರ 4X100 ಮೀ. ಮೆಡ್ಲೆ ರಿಲೇ ಫೈನಲ್

ಕುಸ್ತಿ

ಮಧ್ಯಾಹ್ನ 2.45	ಪುರುಷರ ಗ್ರೀಕೊ ರೋಮನ್ (60 ಕೆಜಿ, 130 ಕೆಜಿ ವಿಭಾಗ) ಮತ್ತು ಮಹಿಳೆಯರ ಫ್ರೀಸ್ಟೈಲ್ (76 ಕೆಜಿ ವಿಭಾಗದ) ಸೆಮಿಫೈನಲ್ಸ್

ಟೆನಿಸ್

ಬೆಳಿಗ್ಗೆ 11.30	ಮಹಿಳಾ ಡಬಲ್ಸ್, ಪುರುಷರ ಸಿಂಗಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗದ ಫೈನಲ್ ಪಂದ್ಯಗಳು

ಹಾಕಿ (ಪುರುಷರ ತಂಡ)

ಸಂಜೆ 5.30	ಭಾರತ–ಗ್ರೇಟ್ ಬ್ರಿಟನ್ ಕ್ವಾರ್ಟರ್‌ಫೈನಲ್

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ಆರ್ಚರಿ: ಆಸೆ ಈಡೇರದೇ ಅಭಿಯಾನ ಅಂತ್ಯ

ಟೋಕಿಯೊ (ಪಿಟಿಐ): ಆರ್ಚರಿಯಲ್ಲಿ ಭಾರತಕ್ಕೆ ಈ ಬಾರಿಯೂ ಪದಕದ ನಿರೀಕ್ಷೆ ಈಡೇರಲಿಲ್ಲ. ಪುರುಷರ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಅತನು ದಾಸ್ ಸೋಲುವುದರೊಂದಿಗೆ ದೇಶದ ಬಿಲ್ಗಾರರ ಅಭಿಯಾನ ಶನಿವಾರ ಅಂತ್ಯವಾಯಿತು.

16ರ ಘಟ್ಟದ ಸ್ಪರ್ಧೆಯಲ್ಲಿ ಅತನು 4–6ರಿಂದ ಜಪಾನ್‌ನ ತಕಹರು ಫುರುಕಾವ ಎದುರು ಗುರಿ ತಪ್ಪಿದರು. ಕಳೆದ ಪಂದ್ಯದಲ್ಲಿ ಲಂಡನ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಒಹ್ ಜಿನ್ ಹಯೆಕ್ ಎದುರು ಜಯಭೇರಿ ಮೊಳಗಿಸಿದ್ದ ಅತನು, ಅದೇ ಸಾಮರ್ಥ್ಯ ಮುಂದುವರಿಸುವಲ್ಲಿ ವಿಫಲರಾದರು.

ಅತನು ಅವರು ನಾಲ್ಕು ಬಾರಿ ‘ಫರ್ಫೆಕ್ಟ್ 10’ಕ್ಕೆ ಗುರಿಯಿಟ್ಟರೂ ಅಷ್ಟೇ ಬಾರಿ ವಿಫಲರಾದರು.

ಅವರಿಗೆ ಇದು ಸತತ ಎರಡನೇ ಒಲಿಂಪಿಕ್ಸ್ ಪ್ರೀಕ್ವಾರ್ಟರ್‌ಫೈನಲ್ ಸೋಲಾಗಿದೆ.

ಶುಕ್ರವಾರ ನಡೆದ ಮಹಿಳೆಯರ ವೈಯಕ್ತಿಕ ವಿಭಾಗದ ಎಂಟರ ಘಟ್ಟದಲ್ಲಿ ದೀಪಿಕಾ, ದಕ್ಷಿಣ ಕೊರಿಯಾದ ಎನ್ ಸ್ಯಾನ್ ವಿರುದ್ಧ 0-6ರ ಅಂತರದಲ್ಲಿ ಪರಾಭವಗೊಂಡಿದ್ದರು. ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ತರುಣದೀಪ್ ರಾಯ್ ಮತ್ತು ಪ್ರವೀಣ್ ಜಾಧವ್ ಕ್ರೀಡಾಕೂಟದಿಂದ ಈಗಾಗಲೇ ಹೊರಬಿದ್ದಿದ್ದಾರೆ.

ಅತನು ದಾಸ್– ಎಎಫ್‌ಪಿ ಚಿತ್ರ

ಮೆಟೆ ಗ್ಯಾಜೊಜ್– ಎಎಫ್‌ಪಿ ಚಿತ್ರ

ಚಿನ್ನ ಗೆದ್ದ ಟರ್ಕಿಯ ಮೆಟೆ ಗ್ಯಾಜೊಜ್

ಟೋಕಿಯೊ (ರಾಯಿಟರ್ಸ್): ಪುರುಷರ ಸಿಂಗಲ್ಸ್ ವಿಭಾಗದ ಚಿನ್ನದ ಪದಕವನ್ನು ಟರ್ಕಿಯ ಮೆಟೆ ಗ್ಯಾಜೊಜ್ ತಮ್ಮದಾಗಿಸಿಕೊಂಡರು. ಫೈನಲ್‌ನಲ್ಲಿ ಅವರು ಇಟಲಿಯ ಮೌರೊ ನೆಸ್ಪೊಲಿ ಎದುರು 6–4ರಿಂದ ಜಯ ಸಾಧಿಸಿದರು. ಇದರೊಂದಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಟರ್ಕಿಗೆ ಮೊದಲ ಚಿನ್ನ ತಂದುಕೊಟ್ಟರು. ಕಂಚಿನ ಪದಕವನ್ನು ಜಪಾನ್‌ನ ಫುರುಕಾವ ತಕಹರು ಗಳಿಸಿದರು. ಈ ಪದಕದ ಸುತ್ತಿನಲ್ಲಿ ಅವರು ಚೀನಾ ತೈಪೆಯ ಚಿನ್ ಚುನ್ ಸವಾಲು ಮೀರಿದರು.

ವಿಶ್ವ ಚಾಂಪಿಯನ್‌ಗೆ ಸೋಲು: ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿದ್ದ ಅಮೆರಿಕದ ಬ್ರಾಡಿ ಎಲಿಸನ್ ಕ್ವಾರ್ಟರ್‌ಫೈನಲ್‌ನಲ್ಲೇ ಮುಗ್ಗರಿಸಿದರು. ಚಿನ್ನದ ಪದಕ ಗೆದ್ದ ಮೆಟೆ ಎದುರು 3–7ರಿಂದ ಅವರು ಗುರಿ ತಪ್ಪಿದರು.

ಗಾಲ್ಫ್: ಅನಿರ್ಬನ್ ಹಾದಿ ದುರ್ಗಮ

ಟೋಕಿಯೊ (ಪಿಟಿಐ): ಅಂತಿಮ ಹಂತದಲ್ಲಿ ಪುಟಿದೆದ್ದ ಭಾರತದ ಅನಿರ್ಬನ್ ಲಾಹಿರಿ ಒಲಿಂಪಿಕ್ಸ್ ಗಾಲ್ಫ್‌ನ ಮೂರನೇ ಸುತ್ತಿನಲ್ಲಿ ಗಮನಾರ್ಹ ಸಾಧನೆ ಮಾಡಿದರು. ಆದರೆ ಪದಕ ಗಳಿಕೆಯ ಕನಸು ಸಾಕಾರಗೊಳ್ಳಬೇಕಾದರೆ ಮುಂದಿನ ಸುತ್ತುಗಳಲ್ಲಿ ಕಠಿಣ ಶ್ರಮ ಹಾಕಬೇಕಾಗಿದೆ.

ಶನಿವಾರ ಬೆಳಿಗ್ಗೆ ಎರಡನೇ ಸುತ್ತನ್ನು ಪೂರ್ಣಗೊಳಿಸಿದ ಅವರು 24ನೇ ಸ್ಥಾನ ಹಂಚಿಕೊಂಡರು. ನಂತರ ಮೂರನೇ ಸುತ್ತಿನಲ್ಲಿ 28ನೇ ಸ್ಥಾನದಲ್ಲಿ ಉಳಿದರು. ಉದಯನ್ ಮಾನೆ 55ನೇ ಸ್ಥಾನ ಹಂಚಿಕೊಂಡರು.

ಆತಿಥೇಯ ಜಪಾನ್ ಪದಕದತ್ತ ಹೆಜ್ಜೆ ಹಾಕಿದೆ. ಆ ದೇಶದ ಹಿಡೆಕಿ ಮತ್ಸುಯಾಮ ಎರಡನೇ ಸ್ಥಾನದಲ್ಲಿದ್ದು ಅಮರಿಕದ ಶಫೆಲಿ ಜಾಂಡರ್ ಅಗ್ರಸ್ಥಾನದಲ್ಲಿದ್ದಾರೆ. ಬ್ರಿಟನ್‌ನ ಕ್ಯಾಸಿ ಪೌಲ್ ಮತ್ತು ಮೆಕ್ಸಿಕೊದ ಒರ್ಟಿಸ್ ಕಾರ್ಲೋಸ್ ಮೂರನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಡಾಂಗ್ ಡಾಂಗ್ ಐತಿಹಾಸಿಕ ಸಾಧನೆ

ಟೋಕಿಯೊ (ಎಎಫ್‌ಪಿ): ಚೀನಾದ ಟ್ರ್ಯಾಂಪೊಲಿನ್ ಜಿಮ್ನಾಸ್ಟಿಕ್ಸ್ ಪಟು ಡಾಂಗ್ ಡಾಂಗ್ ಟೋಕಿಯೊ ಕ್ರೀಡಾಕೂಟದಲ್ಲಿ ಐತಿಹಾಸಿಕ ಸಾಧನೆ ಮಾಡಿದರು. ಚಿನ್ನ ಗೆಲ್ಲಲಾಗದಿದ್ದರೂ, ಈ ಕ್ರೀಡೆಯಲ್ಲಿ ಸತತ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಪದಕ ಜಯಿಸಿದ ಮೊದಲ ಅಥ್ಲೀಟ್ ಎನಿಸಿಕೊಂಡರು.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ 32 ವರ್ಷದ ಡಾಂಗ್ ಡಾಂಗ್, ಇಲ್ಲಿನ ಅರಿಯೇಕ್ ಅಂಗಣದಲ್ಲಿ 61.235 ಸ್ಕೋರ್ ಕಲೆಹಾಕುವ ಮೂಲಕ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಬೆಲಾರಸ್‌ನ ಇವಾನ್ ಲಿಟ್ವಿನೊವಿಚ್ (61.715) ಚಿನ್ನದ ಪದಕ ಗೆದ್ದುಕೊಂಡರೆ, ನ್ಯೂಜಿಲೆಂಡ್‌ನ ಡೈಲನ್ ಸ್ಮಿಟ್ ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಟ್ರ್ಯಾಂಪೊಲಿನ್ ವಿಭಾಗದಲ್ಲಿ ಹೆಸರು ಮಾಡಿರುವ ಡಾಂಗ್ ಡಾಂಗ್, 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಮತ್ತು 2016ರ ರಿಯೊ ಕೂಟದಲ್ಲಿ ಬೆಳ್ಳಿಪದಕ ಗೆದ್ದುಕೊಂಡಿದ್ದಾರೆ. 12 ಬಾರಿ ವಿಶ್ವ ಚಾಂಪಿಯನ್ ಪಟ್ಟವನ್ನೂ ಧರಿಸಿದ್ದಾರೆ.

‘ಈ ಪದಕ ನನಗೆ ಎಲ್ಲಕ್ಕಿಂತ ಶ್ರೇಷ್ಠವಾದದ್ದು. ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಭಾಗವಹಿಸಿದ್ದೇನೆ. ಪದಕದ ಕನಸು ನನಸಾಗಿದೆ. ಚಿನ್ನ ಗೆಲ್ಲದಿದ್ದರೂ ಫಲಿತಾಂಶ ತೃಪ್ತಿ ತಂದಿದೆ’ ಎಂದು ಡಾಂಗ್ ಡಾಂಗ್ ಹೇಳಿದ್ದಾರೆ.

ಚಿನ್ನದ ಪದಕ ಗೆದ್ದ ಬೆಲಾರಸ್‌ನ ಇವಾನ್ ಲಿಟ್ವಿನೊವಿಚ್– ರಾಯಿಟರ್ಸ್ ಚಿತ್ರ

ಪದಕ ವಿಜೇತರ ಸ್ಕೋರ್

ಇವಾನ್ ಲಿಟ್ವಿನೊವಿಚ್	61.715
ಡಾಂಗ್ ಡಾಂಗ್	61.235
ಸ್ಮಿಟ್ ಡೈಲನ್	60.675

ಚೀನಾದ ಡಾಂಗ್ ಡಾಂಗ್ – ಎಎಫ್‌ಪಿ ಚಿತ್ರ

ವಂದನಾ ಹ್ಯಾಟ್ರಿಕ್; ಒಲಿದ ಜಯ

ಕ್ವಾರ್ಟರ್ ಫೈನಲ್‌ಗೆ ಲಗ್ಗೆ

ಟೋಕಿಯೊ(ಪಿಟಿಐ): ನಾಲ್ಕು ದಶಕಗಳ ಕಾಯುವಿಕೆಗೆ ಫಲ ಸಿಕ್ಕಿತು. ಭಾರತದ ಮಹಿಳಾ ಹಾಕಿ ತಂಡ ಒಲಿಂಪಿಕ್ಸ್‌ನಲ್ಲಿ 41 ವರ್ಷಗಳ ನಂತರ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಶನಿವಾರ ನಡೆದ ನಿರ್ಣಾಯಕ ಪಂದ್ಯದಲ್ಲಿ ಭಾರತ ದಕ್ಷಿಣ ಆಫ್ರಿಕಾವನ್ನು 4–3ರಲ್ಲಿ ಮಣಿಸಿತು. ಆದರೂ ತಂಡದ ಎಂಟರ ಘಟ್ಟದ ಹಾದಿ ಸುಗಮವಾಗಬೇಕಾದರೆ ದಿನವಿಡೀ ಕಾಯಬೇಕಾಯಿತು. ಸಂಜೆ ಐರ್ಲೆಂಡ್ ವಿರುದ್ಧ ಬ್ರಿಟನ್ ಗೆಲ್ಲುತ್ತಿದ್ದಂತೆ ಭಾರತದ ಆಟಗಾರ್ತಿಯರು ನಿಟ್ಟುಸಿರು ಬಿಟ್ಟರು.

ಉತ್ತಮ ಆರಂಭ ಕಾಣಲು ಆಗದೇ ಇದ್ದರೂ ಕೊನೆಯ ಎರಡು ಪಂದ್ಯಗಳಲ್ಲಿ ಸತತ ಜಯ ಸಾಧಿಸಿದ ಭಾರತ ‘ಎ’ ಗುಂಪಿನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದು ‘ಬಿ’ ಗುಂಪಿನ ಅಗ್ರ ಸ್ಥಾನದಲ್ಲಿರುವ ಆಸ್ಟ್ರೇಲಿಯಾವನ್ನು ಸೋಮವಾರ ಎದುರಿಸಲಿದೆ. ಭಾರತ ತಂಡ ಕೊನೆಯದಾಗಿ 1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ನಾಕೌಟ್ ಹಂತ ಪ್ರವೇಶಿಸಿತ್ತು. ಆ ವರ್ಷ ಸೆಮಿಫೈನಲ್‌ನಲ್ಲಿ ಸೋತು ನಾಲ್ಕನೇ ಸ್ಥಾನ ಗಳಿಸಿತ್ತು.

ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ವಂದನಾ ಕಟಾರಿಯಾ ಹ್ಯಾಟ್ರಿಕ್ ಗೋಲು ಗಳಿಸಿ ಭಾರತ ತಂಡದ ಕೈಹಿಡಿದರು. ನಾಲ್ಕು, 17 ಮತ್ತು 49ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ಅವರು ಒಲಿಂಪಿಕ್ಸ್‌ನಲ್ಲಿ ಹ್ಯಾಟ್ರಿಕ್ ಗೋಲು ಗಳಿಸಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು. 32ನೇ ನಿಮಿಷದಲ್ಲಿ ಯುವ ಆಟಗಾರ್ತಿ ನೇಹಾ ಗೋಯಲ್ ತಂಡದ ಮತ್ತೊಂದು ಗೋಲು ಗಳಿಸಿದರು.

ಟರಿನ್ ಗ್ಲಾಸ್ಬಿ (15ನೇ ನಿಮಿಷ), ನಾಯಕಿ ಎರಿನ್ ಹಂಟರ್ (30ನೇ ನಿ) ಮತ್ತು ಮರಿಜೆನ್ ಮರಾಯಸ್ (39ನೇ ನಿ) ದಕ್ಷಿಣ ಆಫ್ರಿಕಾ ತಂಡಕ್ಕಾಗಿ ಗೋಲು ಗಳಿಸಿದರು.

ಸ್ಪರ್ಧೆಯಲ್ಲಿ ಉಳಿಯಲು ಜಯ ಅನಿವಾರ್ಯವಾಗಿದ್ದ ಭಾರತ ಆರಂಭದಲ್ಲೇ ಎದುರಾಳಿ ತಂಡದ ರಕ್ಷಣಾ ವಿಭಾಗವನ್ನು ಕಾಡಿತು. ಇದರ ಫಲವಾಗಿ ಆರಂಭದ ಎರಡು ನಿಮಿಷಗಳಲ್ಲಿ ಎರಡು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. ಆದರೆ ಡ್ರ್ಯಾಗ್ ಫ್ಲಿಕ್ಕರ್ ಗುರ್ಜೀತ್ ಕೌರ್ ಅವರಿಗೆ ಗುರಿ ಕಾಣಲು ಆಗಲಿಲ್ಲ. ಬಲಭಾಗದಿಂದ ನವನೀತ್ ಕೌರ್ ಚುರುಕಿನ ಆಟದ ಮೂಲಕ ನೀಡಿದ ಚೆಂಡನ್ನು ನಿಯಂತ್ರಿಸಿದ ವಂದನಾ ನಾಲ್ಕನೇ ನಿಮಿಷದಲ್ಲಿ ಮುನ್ನಡೆ ಗಳಿಸಿಕೊಟ್ಟರು.

ನಂತರ ಉಭಯ ತಂಡಗಳೂ ಜಿದ್ದಾಜಿದ್ದಿಯ ಆಟಕ್ಕೆ ಮುಂದಾದವು. ನಾಲ್ಕನೇ ಪೆನಾಲ್ಟಿ ಕಾರ್ನರ್‌ನಲ್ಲಿ ದೀಪ್ ಗ್ರೇಸ್ ಎಕ್ಕಾ ಅವರ ಫ್ಲಿಕ್‌ನಲ್ಲಿ ವಂದನಾ ಮತ್ತೊಂದು ಗೋಲು ಗಳಿಸಿದರು. ಎರಡನೇ ಕ್ವಾರ್ಟರ್‌ನಲ್ಲಿ ಮೂರು ಅವಕಾಶಗಳನ್ನು ಭಾರತ ಕೈಚೆಲ್ಲಿತು. ದ್ವಿತೀಯಾರ್ಧದ ಎರಡನೇ ನಿಮಿಷದಲ್ಲಿ ರಾಣಿ ರಾಂಪಾಲ್ ಹೊಡೆದ ಚೆಂಡಿನಲ್ಲಿ ಗೋಯಲ್ ಗೋಲು ಗಳಿಸಿದರು. ಪೆನಾಲ್ಟಿ ಕಾರ್ನರ್‌ನಲ್ಲಿ ಗುರ್ಜೀತ್ ಅವರ ಫ್ಲಿಕ್ 49ನೇ ನಿಮಿಷದಲ್ಲಿ ವಂದನಾಗೆ ಗೋಲು ಗಳಿಸಲು ನೆರವಾಯಿತು.

ಗೋಲು ವಿವರ

ಭಾರತ	4
ದಕ್ಷಿಣ ಆಫ್ರಿಕಾ	3
ಬ್ರಿಟನ್	2
ಐರ್ಲೆಂಡ್	0

ಕ್ವಾರ್ಟರ್ ಫೈನಲ್ ಹಣಾಹಣಿ (ಆಗಸ್ಟ್ 2)

ನೆದರ್ಲೆಂಡ್ಸ್	ನ್ಯೂಜಿಲೆಂಡ್
ಸ್ಪೇನ್	ಬ್ರಿಟನ್
ಜರ್ಮನಿ	ಅರ್ಜೆಂಟೀನಾ
ಭಾರತ	ಆಸ್ಟ್ರೇಲಿಯಾ

ಪುರುಷರ ಕ್ವಾರ್ಟರ್ ಫೈನಲ್ ಇಂದು

ಭಾರತ	ಬ್ರಿಟನ್

ಸಮಯ ಸಂಜೆ 5.30

ವಂದನಾ ಕಟಾರಿಯ (ಮಧ್ಯದಲ್ಲಿರುವವರು) ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು –ಪಿಟಿಐ ಚಿತ್ರ

41 ವರ್ಷಗಳ ಬರ ನೀಗಿಸುವ ಹಾದಿಯಲ್ಲಿ

ಟೋಕಿಯೊ (ಪಿಟಿಐ): ಭಾರತದ ಪುರುಷರ ಹಾಕಿ ತಂಡವು 41 ವರ್ಷಗಳ ನಂತರ ಒಲಿಂಪಿಕ್ ಪದಕವನ್ನು ಜಯಿಸುವ ಕನಸಿಗೆ ಈಗ ರೆಕ್ಕೆ ಮೂಡಿದೆ. ಆದರೆ, ಮುಂದಿನ ಹಾದಿ ಸುಲಭವಲ್ಲ.

1980ರಲ್ಲಿ ಮಾಸ್ಕೋದಲ್ಲಿ ಚಿನ್ನದ ಪದಕ ಗಳಿಸಿದ ನಂತರ ಭಾರತಕ್ಕೆ ಇದುವರೆಗೆ ಒಂದೂ ಪದಕ ಒಲಿದಿಲ್ಲ. ಇದೀಗ ಟೋಕಿಯೊದಲ್ಲಿ ಕ್ವಾರ್ಟರ್‌ಫೈನಲ್ ತಲುಪಿರುವ ಮನಪ್ರೀತ್ ಸಿಂಗ್ ನಾಯಕತ್ವದ ಬಳಗಕ್ಕೆ ಪದಕ ಜಯಿಸುವ ಅವಕಾಶದ ಬಾಗಿಲು ತೆರೆದಿದೆ. ಭಾನುವಾರ ನಡೆಯಲಿರುವ ಎಂಟರ ಘಟ್ಟದ ಪಂದ್ಯದಲ್ಲಿ ಭಾರತ ತಂಡವು ಬ್ರಿಟನ್ ಎದುರು ಕಣಕ್ಕಿಳಿಯಲಿದೆ. ಒಲಿಂಪಿಕ್ಸ್‌ನಲ್ಲಿ ಭಾರತ ಎಂಟು ಚಿನ್ನದ ಪದಕಗಳನ್ನು ಗೆದ್ದ ದಾಖಲೆಯನ್ನು ಹೊಂದಿದೆ.

ಭಾರತ ಹಾಕಿ ತಂಡದ ಆಟಗಾರರು

ಬಾಕ್ಸಿಂಗ್ ರಿಂಗ್‌ನಲ್ಲಿ ನಿರಾಶೆ

ಕ್ವಾರ್ಟರ್‌ಫೈನಲ್‌ನಲ್ಲಿ ಪೂಜಾಗೆ ಸೋಲು; ಅಗ್ರಶ್ರೇಯಾಂಕದ ಅಮಿತ್‌ಗೆ ಆಘಾತ

ಚೀನಾದ ಲಿ ಕಿಯಾನ್ ಮತ್ತು ಭಾರತದ ಪೂಜಾ ರಾಣಿ –ಪಿಟಿಐ ಚಿತ್ರ

ಟೋಕಿಯೊ (ಪಿಟಿಐ): ಬಾಕ್ಸಿಂಗ್ ಅಂಕಣದಲ್ಲಿ ಭಾರತಕ್ಕೆ ಶನಿವಾರ ನಿರಾಶೆಯ ದಿನವಾಯಿತು.

ವಿಶ್ವದ ಅಗ್ರಶ್ರೇಯಾಂಕದ ಬಾಕ್ಸರ್ ಅಮಿತ್ ಪಂಘಾಲ್ (52ಕೆಜಿ) ಮತ್ತು ಪೂಜಾ ರಾಣಿ (75ಕೆಜಿ) ಕ್ರಮವಾಗಿ ಪುರುಷರ ಪ್ರೀಕ್ವಾರ್ಟರ್ ಮತ್ತು ಮಹಿಳೆಯರ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದರು.

ಮಹಿಳೆಯರ ಎಂಟರ ಘಟ್ಟದಲ್ಲಿ ರಾಣಿ 0–5ರಿಂದ ಚೀನಾದ ಲೀ ಕಿಯಾನ್ ವಿರುದ್ಧ ಪರಾಭವಗೊಂಡರು.

ಮಾಜಿ ವಿಶ್ವ ಚಾಂಪಿಯನ್ ಲೀ ಕಿಯಾನ್, ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. ಅವರು ಪೂಜಾ ರಾಣಿಗೆ ಯಾವುದೇ ಹಂತದಲ್ಲಿಯೂ ಮೇಲುಗೈ ಸಾಧಿಸುವ ಅವಕಾಶವನ್ನೇ ಕೊಡಲಿಲ್ಲ. ಲೀ ಪ್ರಯೋಗಿಸಿದ ಮಿಂಚಿನ ವೇಗದ ಪಂಚ್‌ಗಳ ಪ್ರಹಾರಕ್ಕೆ ಪೂಜಾ ತಡಬಡಾಯಿಸಿದರು. ರಕ್ಷಣಾತ್ಮಕ ತಂತ್ರಗಳತ್ತ ಹೆಚ್ಚು ವಾಲಿದರು. ಈ ಪ್ರಯತ್ನದಲ್ಲಿ ಪಾದಚಲನೆಯ ಲಯವನ್ನೂ ಕಳೆದುಕೊಂಡರು.

ಪುರುಷರ ವಿಭಾಗದಲ್ಲಿ ಬಹಳಷ್ಟು ನಿರೀಕ್ಷೆ ಮೂಡಿಸಿದ್ದ ಅಮಿತ್ ಪಂಘಾಲ್ ತಾವು ಕಣಕ್ಕಿಳಿದ ಮೊದಲ ಪಂದ್ಯದಲ್ಲಿಯೇ ಆಘಾತ ಅನುಭವಿಸಿದರು. ಅಮಿತ್ 1–4ರಿಂದ ಕೊಲಂಬಿಯಾದ ಯೂಬರ್ಜೆನ್ ಮಾರ್ಟಿನೇಜ್ ವಿರುದ್ಧ ಸೋತರು.

ಅಮಿತ್ ಪಂಘಾಲ್ –ಪಿಟಿಐ ಚಿತ್ರ

‘ಅಮಿತ್ ಪಂಘಾಲ್ ಅವರ ಮೇಲೆ ಪದಕ ಜಯದ ನಿರೀಕ್ಷೆ ಇದ್ದಿದ್ದು ನಿಜ. ಆದರೆ ಇವತ್ತಿನ ಬೌಟ್‌ನಲ್ಲಿ ಅವರು ಬಹಳ ಬಳಲಿದಂತೆ ಕಂಡರು. ಹಿಂದಿನ ಯಾವುದೇ ಪಂದ್ಯಗಳಲ್ಲಿಯೂ ಅವರು ಇಷ್ಟೊಂದು ನಿಸ್ತೇಜರಾಗಿದ್ದನ್ನು ನಾನು ನೋಡಿಲ್ಲ. ಅವರ ಕಾಲುಗಳಲ್ಲಿ ಶಕ್ತಿ ಇರಲಿಲ್ಲ. ಚಲನೆ ಚುರುಕಾಗಿರಲಿಲ್ಲ. ನಮ್ಮ ಎಲ್ಲ ಬಾಕ್ಸರ್‌ಗಳಿಗೂ ಬಲಿಷ್ಠ ಎದುರಾಳಿಗಳೇ ಇದ್ದಾರೆ’ ಎಂದು ಭಾರತ ಬಾಕ್ಸಿಂಗ್‌ನ ಹೈಪರ್ಫಾರ್ಮೆನ್ಸ್ ನಿರ್ದೇಶಕ ಸ್ಯಾಂಟಿಯಾಗೊ ನೀವಾ ಹೇಳಿದರು.

ಶುಕ್ರವಾರ ಮಹಿಳೆಯರ 69 ಕೆ.ಜಿ. ವಿಭಾಗದಲ್ಲಿ ಲವ್ಲಿನಾ ಬೋರ್ಗೊಹೈನ್ ಸೆಮಿಫೈನಲ್ ಪ್ರವೇಶಿಸಿದ್ದರು.

ಮಹಿಳಾ ಬ್ಯಾಡ್ಮಿಂಟನ್ ಸಿಂಗಲ್ಸ್ ಸೆಮಿಯಲ್ಲಿ ಸಿಂಧುಗೆ ಸೋಲು; ತೈಜು ಯಿಂಗ್ ಫೈನಲ್‌ಗೆ

ಕಮರಿತು ಚಿನ್ನದಾಸೆ, ಉಳಿಯಿತು ಕಂಚಿನಾಸೆ

ಟೋಕಿಯೊ (ಪಿಟಿಐ): ಹೈದರಾಬಾದಿನ ಪಿ.ವಿ. ಸಿಂಧು ಶನಿವಾರ ಚೀನಾ ತೈಪೆಯ ತೈ ಜು ಯಿಂಗ್ ಎದುರು ಸೋಲುವುದರೊಂದಿಗೆ ಚಿನ್ನದ ಪದಕದ ಆಸೆ ಕಮರಿತು. ಕಂಚು ಗೆಲ್ಲುವ ನಿರೀಕ್ಷೆಯೊಂದು ಉಳಿಯಿತು.

ಇಲ್ಲಿ ನಡೆದ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ತೈ ಜು ಯಿಂಗ್ 18–21, 12–21ರಿಂದ ಸಿಂಧು ಎದುರು ಗೆದ್ದರು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿರುವ ಸಿಂಧು, ಟೋಕಿಯೊದಲ್ಲಿ ಚಿನ್ನ ಗೆಲ್ಲುವ ನಿರೀಕ್ಷೆ ಮೂಡಿಸಿದ್ದರು. ಅವರು ಜೆ ಗುಂಪಿನ ಪಂದ್ಯಗಳು ಮತ್ತು ಕ್ವಾರ್ಟರ್‌ಫೈನಲ್‌ನಲ್ಲಿ ಅಮೋಘ ಜಯ ಸಾಧಿಸಿದ್ದರು.

ಆದರೆ, ನಾಲ್ಕರ ಘಟ್ಟದ ಪಂದ್ಯದಲ್ಲಿ ತೈ ಜು ಯಿಂಗ್ ಅವರ ಚಾಣಾಕ್ಷ ಆಟಕ್ಕೆ ತಲೆಬಾಗಿದರು. ಇದರಿಂದಾಗಿ ಸತತ ಎರಡನೇ ಒಲಿಂಪಿಕ್ ಕೂಟದ ಫೈನಲ್ ಪ್ರವೇಶಿಸುವ ಅವಕಾಶ ಸಿಂಧು ಕೈತಪ್ಪಿತು.

ಕಂಚಿನ ಪದಕಕ್ಕಾಗಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಸಿಂಧು ಚೀನಾದ ಹಿ ಬಿಂಗ್‌ಜಿಯಾವೊ ವಿರುದ್ಧ ಕಣಕ್ಕಿಳಿಯಲಿದ್ದಾರೆ.

40 ನಿಮಿಷಗಳ ಹೋರಾಟ: ಸಿಂಧು ಮತ್ತು ತೈಜು 19ನೇ ಬಾರಿ ಮುಖಾಮುಖಿಯಾದ ಈ ಪಂದ್ಯವು 40 ನಿಮಿಷ ನಡೆಯಿತು. ಮೊದಲ ಗೇಮ್‌ನಲ್ಲಿಯೇ ಎಲ್ಲ ನಾಟಕೀಯ ತಿರುವುಗಳೂ ಕಂಡು ಬಂದವು. ಆರಂಭದಲ್ಲಿ ತೈಜು ಮೇಲುಗೈ ಸಾಧಿಸಿದರೆ, ಅರ್ಧವಿರಾಮಕ್ಕೆ ಸಿಂಧು ಉತ್ತಮ ಮುನ್ನಡೆಯಲ್ಲಿದ್ದರು.

ಆದರೆ ವಿರಾಮದ ನಂತರ ಪುಟಿದೆದ್ದ ತೈಪೆಯ 27ವರ್ಷದ ಆಟಗಾರ್ತಿ ಸಿಂಧು ಸಾಮರ್ಥ್ಯಕ್ಕೆ ಸವಾಲೊಡ್ಡಿದರು. ಲಾಂಗ್ ರ‍್ಯಾಲಿ, ನೆಟ್ ಬಳಿ ಡ್ರಾಪ್, ಕ್ರಾಸ್‌ಕೋರ್ಟ್ ಸ್ಮ್ಯಾಷ್‌ಗಳಿಗೆ ಸಿಂಧು ಕೂಡ ತಕ್ಕ ಉತ್ತ ಕೊಟ್ಟರು. ಆದರೆ, ತೈಜು ಪ್ರಯೋಗಿಸಿದ ನೇರ ಸ್ಮ್ಯಾಷ್‌ಗಳಿಗೆ ಸಿಂಧು ಬಳಿ ಉತ್ತರವಿರಲಿಲ್ಲ.

11–11ರಿಂದ ಸಮಬಲ ಸಾಧಿಸಿದ ತೈಜು ಮತ್ತು ಸಿಂಧು ನಡುವೆ 18–18 ಪಾಯಿಂಟ್ಸ್‌ವರೆಗೂ ನಡೆದ ಜಿದ್ದಾಜಿದ್ದಿ ಮೈನವಿರೇಳಿಸುವಂತಿತ್ತು.
ಈ ಹಂತದಲ್ಲಿ ತೈಜು ತಡ ಮಾಡಲಿಲ್ಲ. ಫೋರ್‌ಹ್ಯಾಂಡ್ ಸ್ಮ್ಯಾಷ್ ಪ್ರಯೋಗಿಸಿ ಗೇಮ್ ಗೆದ್ದರು.

ಎರಡನೇ ಗೇಮ್‌ನಲ್ಲಿ ಸಿಂಧು ಆಕ್ರಮಣಕಾರಿ ಶೈಲಿಯ ಆಟ ಆರಂಭಿಸಿದರು. ಕ್ರಾಸ್‌ಕೋರ್ಟ್ ಸ್ಮ್ಯಾಷ್, ಟಾಸ್ ಮತ್ತು ಚುರುಕಾದ ರಿಟರ್ನ್‌ಗಳನ್ನು ಕೊಟ್ಟರು. ಆದರೆ ಅವರ ಲಾಂಗ್ ರ‍್ಯಾಲಿಗಳು ಗೆರೆ ದಾಟಿದ್ದು ತುಟ್ಟಿಯಾದವು. ವಿರಾಮಕ್ಕೆ ತೈಜು 11–7ರ ಮುನ್ನಡೆ ಸಾಧಿಸಿಬಿಟ್ಟರು. ನಂತರದ ಆಟದಲ್ಲಿ ತೈಜು 10 ಪಾಯಿಂಟ್ಸ್ ಕೊಳ್ಳೆಹೊಡೆದರೆ, ಸಿಂಧುಗೆ ಕೇವಲ ಐದು ಅಂಕಗಳನ್ನು ಗಳಿಸಲು ಮಾತ್ರ ಸಾಧ್ಯವಾಯಿತು. ಸಿಂಧು ಎದುರು ತೈಜು 14ನೇ ಜಯ ದಾಖಲಿಸಿ, ಒಲಿಂಪಿಕ್ ಫೈನಲ್‌ಗೆ ಸಾಗಿದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ತೈಜು ಮತ್ತು ಚೀನಾದ ಚೆನ್ ಯೂಫಿ ವಿರುದ್ಧ ಆಡಲಿದ್ದಾರೆ.

ಪಿ. ವಿ. ಸಿಂಧು

ಪಂದ್ಯ ಗೆದ್ದ ನಂತರ ಚೀನಾ ತೈಪೆಯ ತೈ ಜು ಯಿಂಗ್ ಸಂಭ್ರಮಿಸಿದರು –ಎಪಿ/ಪಿಟಿಐ ಚಿತ್ರ

ಕಂಚಿನ ಹೋರಾಟದಲ್ಲೂ ಮಂಕಾದ ಜೊಕೊವಿಚ್

ಟೋಕಿಯೊ (ಪಿಟಿಐ): ವಿಶ್ವದ ಅಗ್ರ ಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್, ನಿರಾಸೆಯೊಂದಿಗೆ ಒಲಿಂಪಿಕ್ಸ್ ಅಭಿಯಾನ ಕೊನೆಗೊಳಿಸಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಜಯಿಸುವ ಅವಕಾಶ ಕೈಚೆಲ್ಲಿದ ಜೊಕೊವಿಚ್, ಮಿಶ್ರ ಡಬಲ್ಸ್‌ನ ಕಂಚಿನ ಪದಕದ ಪೈಪೋಟಿಯಿಂದ ಹಿಂದೆ ಸರಿದರು. ಶನಿವಾರ ನಡೆದ ಹಣಾಹಣಿಯಲ್ಲಿ ಸರ್ಬಿಯಾದ ಆಟಗಾರ ನೊವಾಕ್ 4–6, 7–6, 3–6ರಿಂದ ಸ್ಪೇನ್‌ನ ಪ್ಯಾಬ್ಲೊ ಕರೆನೊ ಬುಸ್ಟಾ ವಿರುದ್ಧ ಸೋತರು. ಪ್ರಸಕ್ತ ಋತುವಿನಲ್ಲಿ ಒಟ್ಟು ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದ ಸಾಧನೆ ಮಾಡಿದ್ದ ಜೊಕೊವಿಚ್ ಮೊದಲ ಸೆಟ್‌ನಲ್ಲೇ ಆಘಾತ ಅನುಭವಿಸಿದರು.63 ನಿಮಿಷ ನಡೆದ ಎರಡನೇ ಸೆಟ್‌ನಲ್ಲಿ ಎದುರಾಳಿಗೆ ತಿರುಗೇಟು ನೀಡಿದ ಅವರು ಮೂರನೇ ಸೆಟ್‌ನಲ್ಲಿ ಮತ್ತೆ ನಿರಾಸೆ ಕಂಡರು. ಅನೇಕ ತಪ್ಪುಗಳನ್ನು ಮಾಡಿದ್ದು ಅವರಿಗೆ ಮುಳುವಾಯಿತು.

ರ‍್ಯಾಕೆಟ್ ಮುರಿದ ನೊವಾಕ್: ಪಂದ್ಯ ಸೋತಿದ್ದರಿಂದ ಬೇಸತ್ತ ಅವರು ಸಿಟ್ಟಿನಿಂದ ತಮ್ಮ ರ‍್ಯಾಕೆಟ್ ಅನ್ನು ಗ್ಯಾಲರಿಯತ್ತ ಎಸೆದರು. ಮತ್ತೊಂದು ರ‍್ಯಾಕೆಟ್ ಅನ್ನು ನೆಲಕ್ಕೆ ಬಡಿದು ಮುರಿದು ಹಾಕಿದರು.

ಪಂದ್ಯದ ಅವಧಿ: 2 ಗಂಟೆ 47 ನಿಮಿಷ

ಶ್ರೇಯಾಂಕ

ನೊವಾಕ್	ಬುಸ್ಟಾ
1	6

ನೊವಾಕ್ ಜೊಕೊವಿಚ್ ನಿರಾಸೆಯ ಕ್ಷಣ –ರಾಯಿಟರ್ಸ್ ಚಿತ್ರ

ಟೆನಿಸ್: ಬೆಲಿಂಡಾಗೆ ಸಿಂಗಲ್ಸ್ ಚಿನ್ನ

ಟೋಕಿಯೊ (ಪಿಟಿಐ): ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್‌ಸಿಚ್, ಟೋಕಿಯೊ ಕೂಟದಲ್ಲಿ ಶನಿವಾರ ಮಹಿಳಾ ಟೆನಿಸ್‌ನ ಸಿಂಗಲ್ಸ್ ವಿಭಾಗದ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿರುವ ಬೆನ್‌ಸಿಚ್ ಫೈನಲ್ ಹಣಾಹಣಿಯಲ್ಲಿ 7–5, 2–6, 6–3 ರಿಂದ ಜೆಕ್ ಗಣರಾಜ್ಯದ ಮಾರ್ಕೆಟಾ ವೊಂಡ್ರೌಸೊವಾ ಅವರನ್ನು ಸೋಲಿಸಿದರು.

ಮೊದಲ ಸೆಟ್‌ನಲ್ಲಿ ಉಭಯ ಆಟಗಾರ್ತಿಯರು ಜಿದ್ದಾಜಿದ್ದಿನಿಂದ ಸೆಣಸಿದರು. ಕೊನೆಯ ಎರಡು ಗೇಮ್‌ಗಳಲ್ಲಿ ಮಿಂಚಿದ ಬೆನ್‌ಸಿಚ್ ಸೆಟ್ ಕೈವಶಪಡಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಮಾರ್ಕೆಟಾ ತಿರುಗೇಟು ನೀಡಿದರು. ಹೀಗಾಗಿ ಮೂರನೇ ಸೆಟ್‌ನ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿದ್ದವು. ನಿರ್ಣಾಯಕ ಸೆಟ್‌ನಲ್ಲಿ ಹಲವು ತಪ್ಪುಗಳನ್ನು ಮಾಡಿದ ಮಾರ್ಕೆಟಾ ಕೈಸುಟ್ಟುಕೊಂಡರು.

ಬೆನ್‌ಸಿಚ್ ಭಾನುವಾರ ನಡೆಯುವ ಮಹಿಳಾ ಡಬಲ್ಸ್ ವಿಭಾಗದ ಚಿನ್ನದ ಪದಕದ ಪೈಪೋಟಿಯಲ್ಲಿ ವಿಕ್ಟೋರಿಜಾ ಗೊಲುಬಿಚ್ ಜೊತೆಗೂಡಿ ಕಣಕ್ಕಿಳಿಯಲಿದ್ದಾರೆ. ಈ ಜೋಡಿ, ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಜ್ಸಿಕೊವಾ ಮತ್ತು ಕ್ಯಾತರಿನಾ ಸಿನಿಯಾಕೊವಾ ಸವಾಲು ಎದುರಿಸಲಿದೆ.

ಚಿನ್ನದ ಪದಕದೊಂದಿಗೆ ಬೆಲಿಂಡಾ ಸಂಭ್ರಮ –ರಾಯಿಟರ್ಸ್ ಚಿತ್ರ

ತಡೆಯುವ ಪ್ರಯತ್ನ...

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಶನಿವಾರ ನಡೆದ ಮಹಿಳೆಯರ ಬೀಚ್ ವಾಲಿಬಾಲ್ ಸ್ಪರ್ಧೆಯ ‘ಡಿ’ ಗುಂಪಿನ ಪ್ರಾಥಮಿಕ ಸುತ್ತಿನ ಪಂದ್ಯದಲ್ಲಿ ಕೆನ್ಯಾದ ಆಟಗಾರ್ತಿ ಬ್ರ್ಯಾಕಿಡ್ಸ್ ಖಾಡಂಬಿ ಬಾರಿಸಿದ ಚೆಂಡನ್ನು ಲಾಟ್ವಿಯಾದ ಟೀನಾ ಗ್ರಾಡಿನಾ (ಎಡ) ಬ್ಲಾಕ್ ಮಾಡಲು ಪ್ರಯತ್ನಿಸಿದರು. ಶಿವೊಕೆಜ್ ಪಾರ್ಕ್‌ನಲ್ಲಿ ನಡೆದ ಈ ಪೈಪೋಟಿಯಲ್ಲಿ ಲಾಟ್ವಿಯಾ 21–6, 21–14 ಪಾಯಿಂಟ್ಸ್‌ಗಳಿಂದ ಗೆಲುವು ಗಳಿಸಿತು.

–ಎಎಫ್‌ಪಿ ಚಿತ್ರ

ಸಿಂಧುಗೆ ಅಪ್ಪನ ಸಲಹೆ

ಪಿ.ವಿ. ರಮಣ

ಹೈದರಾಬಾದ್ (ಪಿಟಿಐ): ಸೆಮಿಫೈನಲ್ ಸೋಲನ್ನು ಮರೆತು ಭಾನುವಾರ ಕಂಚಿನ ಪದಕಕ್ಕಾಗಿ ನಡೆಯುವ ಪಂದ್ಯದಲ್ಲಿ ಉತ್ತಮವಾಗಿ ಆಡುವಂತೆ ಸಿಂಧು ಅವರಿಗೆ ತಂದೆ ಪಿ.ವಿ. ರಮಣ ಸಲಹೆ ನೀಡಿದ್ದಾರೆ.

‘ಮೂರನೇ ಸ್ಥಾನಕ್ಕಾಗಿ ನಡೆಯುವ ಪಂದ್ಯದಲ್ಲಿ ಸಿಂಧು ಹೆಚ್ಚು ಎಚ್ಚರಿಕೆಯಿಂದ ಆಡಬೇಕು. ತನ್ನ ಅತ್ಯುತ್ತಮ ಸಾಮರ್ಥ್ಯವನ್ನು ಪಣಕ್ಕೊಡ್ಡಿ ದೇಶಕ್ಕಾಗಿ ಪದಕ ಗೆದ್ದು ಬರಲಿ‘ ಎಂದು ರಮಣ ಹೇಳಿದರು. ಅವರು ಭಾರತ ವಾಲಿಬಾಲ್ ತಂಡದ ಆಟಗಾರರಾಗಿದ್ದರು.

ಇಂಗ್ಲೆಂಡ್ ಎದುರು ಟೆಸ್ಟ್ ಆಡಲು ಸಜ್ಜಾದ ರಿಷಭ್ ಪಂತ್

‘ತಪ್ಪುಗಳೇ ಪಾಠವಾದವು’

ನಾಟಿಂಗ್‌ಹ್ಯಾಂ (ಪಿಟಿಐ): ‘ವೃತ್ತಿಜೀವನದಲ್ಲಿ ಅನೇಕ ಬಾರಿ ಏರಿಳಿತಗಳನ್ನು ಕಂಡಿದ್ದೇನೆ. ಆದರೆ ಪ್ರತಿ ಬಾರಿಯೂ ತಪ್ಪುಗಳಿಂದ ಸಾಕಷ್ಟು ಪಾಠ ಕಲಿತಿದ್ದೇನೆ’ ಎಂದು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಹೇಳಿದ್ದಾರೆ.

ಕೋವಿಡ್ ಸೋಂಕಿಗೆ ಒಳಗಾಗಿದ್ದ ಪಂತ್ ಈಗ ಚೇತರಿಸಿಕೊಂಡಿದ್ದು ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ. ಟ್ರೆಂಟ್‌ಬ್ರಿಜ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಅವರು ಆಡುವ 11ರಲ್ಲಿ ಅವಕಾಶ ಪಡೆದುಕೊಂಡರೆ ಅದು ಅವರ 22ನೇ ಪಂದ್ಯ ಆಗಲಿದೆ. 2018ರಲ್ಲಿ ಇದೇ ಅಂಗಣದಲ್ಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ರಿಷಭ್ ಪಂತ್ –ರಾಯಿಟರ್ಸ್ ಚಿತ್ರ

’ವೃತ್ತಿಜೀವನ ಆರಂಭಿಸಿ ಹೆಚ್ಚು ಕಾಲವೇನೂ ಆಗಲಿಲ್ಲ. ಆದರೆ ಇಷ್ಟರಲ್ಲೇ ಅನೇಕ ಏಳು–ಬೀಳುಗಳನ್ನು ಕಂಡಿದ್ದೇನೆ. ಒಬ್ಬ ಕ್ರಿಕೆಟಿಗನಾಗಿ ಕಲಿತ ಪಾಠಗಳನ್ನೆಲ್ಲ ಆಟದ ಮೇಲೆ ಪ್ರಯೋಗಿಸಿದ್ದೇನೆ. ಸವಾಲುಗಳನ್ನೆಲ್ಲ ಅವಕಾಶಗಳೆಂದು ತಿಳಿದುಕೊಂಡು ಮುನ್ನುಗ್ಗಲು ಸಾಧ್ಯವಾದದ್ದು ಖುಷಿ ನೀಡಿದೆ’ ಎಂದು ಬಿಸಿಸಿಐ ಡಾಟ್ ಟಿವಿಗೆ ನೀಡಿರುವ ಸಂದರ್ಶನದಲ್ಲಿ ಪಂತ್ ಅಭಿಪ್ರಾಯಪಟ್ಟಿದ್ದಾರೆ.

‘ಮುನ್ನೆಲೆಯಲ್ಲಿರುವ ಆಟಗಾರರನ್ನು ಸದಾ ಗಮನಿಸುತ್ತಿರುತ್ತೇನೆ. ಅವರನ್ನು ನೋಡಿ ಕಲಿಯುತ್ತಿರುತ್ತೇನೆ. ರೋಹಿತ್ ಶರ್ಮಾ ಅವರೊಂದಿಗೆ ಹಿಂದಿನ ಪಂದ್ಯಗಳ ಬಗ್ಗೆ ಚರ್ಚಿಸಿದ್ದೇನೆ. ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶ ಸಿಗಲು ಏನೇನು ಮಾಡಬಹುದು ಎಂಬುದರ ಬಗ್ಗೆಯೂ ಮಾತನಾಡಿದ್ದೇನೆ. ಇಂಗ್ಲೆಂಡ್ ನೆಲದಲ್ಲಿ ಅಳವಡಿಸಿಕೊಳ್ಳಬೇಕಾದ ತಂತ್ರಗಳ ಬಗ್ಗೆ ವಿರಾಟ್ ಕೊಹ್ಲಿ ಜೊತೆ ಮಾತನಾಡಿದ್ದೇನೆ’ ಎಂದು ಅವರು ಹೇಳಿದರು.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಎಂಇಜಿ

ಬೆಂಗಳೂರು: ಸನಿಲ್ ಸಾಸಿ ಗಳಿಸಿದ 80 ಪಾಯಿಂಟ್ಸ್ ಬಲದಿಂದ ಎಂಇಜಿ ತಂಡವು ಎಂ.ಸಿ.ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಬಿ’ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಫೈನಲ್ ತಲುಪಿದೆ. ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಆ ತಂಡವು 80–39ರಿಂದ ಕೆಎಸ್‌ಪಿ ತಂಡವನ್ನು ಪರಾಭವಗೊಳಿಸಿತು.

ವಿಜೇತ ತಂಡದ ಪರ ನಿತಿನ್ ಬಿಜು 13 ಪಾಯಿಂಟ್ಸ್ ಕಲೆಹಾಕಿದರು. ಕೆಎಸ್‌ಪಿ ತಂಡದ ಮನೋಜ್ 16 ಪಾಯಿಂಟ್ಸ್ ಕಲೆಹಾಕಿದರು.

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಎಂ.ಎನ್.ಕೆ.ರಾವ್ ಪಾರ್ಕ್ ಬಿಸಿ ತಂಡವು 76–60ರಿಂದ ಪ್ರೊಟೆಕ್ ಅಸೋಸಿಯೇಷನ್ ಮೈಸೂರು ತಂಡವನ್ನು ಪರಾಭವಗೊಳಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಮಂಗಳೂರು ಜಯಭೇರಿ: ಪ್ರೊ. ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮಂಗಳೂರು ಬಿಬಿಸಿ ತಂಡವು 64–48ರಿಂದ ಬೀಗಲ್ಸ್ ಬಿಬಿಸಿ ಎದುರು ಗೆದ್ದಿತು. ವಿಜೇತ ತಂಡದ ಶಶಾಂಕ್ ರೈ 21, ರಜತ್ 12 ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಡಿವೈಇಎಸ್ ಬೆಂಗಳೂರು ತಂಡವು 79–47ರಿಂದ ರೈಸಿಂಗ್ ಸ್ಟಾರ್ ಮೈಸೂರು ತಂಡವನ್ನು ಸೋಲಿಸಿತು.

ಬೀಗಲ್ಸ್ ಬಿಬಿಸಿ ಹಾಗೂ ಮಂಗಳೂರು ಬಿಬಿಸಿ ಆಟಗಾರರ ಪೈಪೋಟಿ

ಪ್ರಿಯಾಗೆ ಚಿನ್ನ

ಬೆಂಗಳೂರು: ಕರ್ನಾಟಕದ ಪ್ರಿಯಾ ಮೋಹನ್ ಅವರು ಫೆಡರೇಷನ್ ಕಪ್ 20 ವರ್ಷದೊಳಗಿನವರ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಪಂಜಾಬ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 400 ಮೀ. ಓಟದಲ್ಲಿ ಶನಿವಾರ ಅವರು 53.32 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಶತಾಯುಷಿ ಅಥ್ಲೀಟ್ ಮಾನ್ ಕೌರ್ ಇನ್ನಿಲ್ಲ

ಮಾನ್ ಕೌರ್

ಚಂಡೀಗಡ (ಪಿಟಿಐ): ‘ಚಂಡೀಗಡದ ಅಚ್ಚರಿಯ ಮಹಿಳೆ’ ಎಂದು ಕರೆಯಲಾಗುತ್ತಿದ್ದ ಶತಾಯುಷಿ ಅಥ್ಲೀಟ್ ಮಾನ್ ಕೌರ್ (105) ಹೃದಯಾಘಾತದಿಂದ ಶನಿವಾರ ನಿಧನರಾದರು.

ಅಥ್ಲೀಟ್ ಗುರುದೇವ್ ಸೇರಿದಂತೆ ಕೌರ್ ಅವರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಕೌರ್ ತಮ್ಮ 93ನೇ ವಯಸ್ಸಿನಲ್ಲಿ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಲಾರಂಭಿಸಿದರು.

2017ರಲ್ಲಿ ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ನಡೆದಿದ್ದ ವಿಶ್ವ ಹಿರಿಯರ ಕೂಟದ 100 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದು ಕ್ರೀಡಾ ಪ್ರಪಂಚದ ಗಮನ ಸೆಳೆದಿದ್ದರು.

ಶುಶ್ರೂತ್ ಹ್ಯಾಟ್ರಿಕ್ ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಶ್ರೂತ್ ಕೆ. ರಾಜ್‌ಕುಮಾರ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ರೂಟ್ಸ್ ಅಕಾಡೆಮಿ ತಂಡವು ಕೆಎಸ್‌ಎಫ್‌ಎ–ಬಿಡಿಎಫ್‌ಎ ‘ಸಿ’ ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಇಲ್ಲಿಯ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಹಣಾಹಣಿಯಲ್ಲಿ ಆ ತಂಡಕ್ಕೆ 4–0ಯಿಂದ ವಿಲಿಯಮ್ ಎಫ್‌ಸಿ ಎದುರು ಜಯ ಒಲಿಯಿತು. ಶುಶ್ರೂತ್ ಅವರು 23, 29 ಮತ್ತು 48ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಇನ್ನೊಂದು ಗೋಲನ್ನು ಇರ್ವಿನ್ ನಿಲುಸ್ ಕಾರ್ಡೋಜಾ (40ನೇ ನಿಮಿಷ) ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ರಿಚಮಂಡ್ ಪ್ಯಾಂಥರ್ಸ್ ಎಫ್‌ಸಿ ತಂಡವು 2–1ರಿಂದ ತಮರಾಯಿಕಣ್ಣನ್ ಎಫ್‌ಸಿ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಸಿದ್ಧಾರ್ಥ ಭಾರ್ಗವ 17ನೇ ನಿಮಿಷ ಮತ್ತು ರೋಹನ್ ಜಾಕೋಬ್ 26ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ತಮರಾಯಿಕಣ್ಣನ್ ಪರ ಶ್ರೀಹರಿ (45ನೇ ನಿಮಿಷ) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಅಲ್ ಫತೇಹ್ ಎಫ್‌ಸಿ ತಂಡವು 1–0ಯಿಂದ ಶಮಂತ್ ಎಫ್‌ಸಿ ಎದುರು ಜಯ ಸಾಧಿಸಿತು. ಅಲ್ ಪತೇಹ್ ತಂಡದ ಶಾರಿಕ್ 10ನೇ ನಿಮಿಷದಲ್ಲಿ ಗೋಲು ಹೊಡೆದರು.

ಆನ್‌ಲೈನ್ ಚೆಸ್: ಆನಂದ್ ನಾಯಕ

ನವದೆಹಲಿ(ಪಿಟಿಐ): ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರು ಸೆಪ್ಟೆಂಬರ್ 8 ರಿಂದ 15ರವರೆಗೆ ನಡೆಯಲಿರುವ ಎರಡನೇ ಆನ್‌ಲೈನ್ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಕಳೆದ ವರ್ಷ ಭಾರತ ಮತ್ತು ರಷ್ಯಾ ತಂಡಗಳನ್ನು ಚಾಂಪಿಯನ್‌ಷಿಪ್‌ನ ಜಂಟಿ ವಿಜೇತರೆಂದು ಘೋಷಿಸಲಾಗಿತ್ತು. ಫೈನಲ್ ಅಂತಿಮ ಹಂತದಲ್ಲಿ ತಾಂತ್ರಿಕ ಸಮಸ್ಯೆ ಎದುರಾಗಿತ್ತು.

ಆನಂದ್

ಆನಂದ್ ಜೊತೆಗೆ ವಿದಿತ್ ಗುಜರಾತಿ, ಪಿ.ಹರಿಕೃಷ್ಣ, ನಿಹಾಲ್ ಸರೀನ್, ಆರ್.ಪ್ರಗ್ನಾನಂದ, ಕೊನೆರು ಹಂಪಿ, ದ್ರೋಣವಲ್ಲಿ ಹಾರಿಕಾ, ತಾನಿಯಾ ಸಚ್‌ದೇವ್, ಭಕ್ತಿ ಕುಲಕರ್ಣಿ, ಆರ್. ವೈಶಾಲಿ ಮತ್ತು ಬಿ.ಸವಿತಾ ಶ್ರೀ ಅವರು ತಂಡದಲ್ಲಿದ್ದಾರೆ. ತಂಡದ ಎಲ್ಲ ಆಟಗಾರರು ಚೆನ್ನೈನಲ್ಲಿ ಇರಲಿದ್ದು, ಅಲ್ಲಿಂದಲೇ ಆಡಲಿದ್ದಾರೆ.